UNIVERSAL
LIBRARY

OU_200381
UNIVERSAL
LIBRARY

ಮನೋಹರ ಗ್ರಂಥಮಾಲೆಯ ಏಳನೆಯ ಕುಸುಮ

# ವಿಶ್ವಾಮಿತ್ರನ ಸೃಷ್ಟಿ

ಸಾಮಾಜಿಕ ಕಾದಂಬರಿ

## (ಎರಡನೆಯ ಭಾಗ)

ಶ್ರೀರಂಗ

[illegible] ಭಂಡಾರ

[illegible]

ಆಗಸ್ಟ, ೧೯೩೪]                [ಬೆಲೆ ೧ ರೂಪಾಯಿ

ಮುದ್ರಕರು
**ಬಳವಂತ ನಾರಾಯಣ ಬಾಗಲವಾಡೆ**
ಮೋಹನ ಮುದ್ರಣಾಲಯ
ಧಾರವಾಡ

Checked 1965
CHECKED 1958

ಸಂಚಾಲಕರು:
**ಚುಳಕಿ ಗೋವಿಂದರಾಯರು**
**ಬೇಟಗೇರಿ ಕೃಷ್ಣಶರ್ಮರು**
**ಜೋಶಿ ಗೋವಿಂದಾಚಾರ್ಯರು**

Checked 1969

ಪ್ರಕಾಶಕರು:
**ಗೋವಿಂದ ವೆಂಕಟೇಶ ಚುಳಕಿ**
ಮನೋಹರ ಗ್ರಂಥಮಾಲಾ ಕಾರ್ಯಾಲಯ
ಸಾಧನಕೇರಿ—ಧಾರವಾಡ

# ನಮ್ಮ ಯೋಗಕ್ಷೇಮ

ನಮ್ಮ ಮಾಲೆಯೀಗ ಎರಡನೆಯ ವರ್ಷದಲ್ಲಿ ಅಡಿಯಿಟ್ಟುದರ ಫಲವೇ ಈ ಗ್ರಂಥವು. ಹೊಸ ಮಾದರಿಯ ಸರಸವಾಙ್ಮಯದ ನಿರ್ಮಾಣ ವನ್ನು ಮಾಡಲು ಮುಂದುವರಿದಿರುವ ಈ ಗ್ರಂಥಮಾಲೆಯ ಮೊದಲನೆಯ ವರ್ಷದ ಕಾರ್ಯವು ಎಲ್ಲರನ್ನೂ ತೃಪ್ತಿಗೊಳಿಸದಿದ್ದರೂ ಅನೇಕರಿಗೆ ತೃಪ್ತಿಕರವಾಗಿದೆಯೆಂಬುದನ್ನು ಅರಿತಿದ್ದೇವೆ. ಸುಮಾರು ನೂರಿಪ್ಪತ್ತು ಪುಟಗಳನ್ನೊಳಗೊಂಡ ಆರುಗ್ರಂಥಗಳನ್ನು ಕೊಡಬೇಕೆಂದು ನಮ್ಮ ಲೆಕ್ಕ ವಿತ್ತು. ಆ ನಮ್ಮ ಲೆಕ್ಕವೆಲ್ಲಿ ಉಳಿಯಿತೋ! ಎಲ್ಲ ಗ್ರಂಥಗಳೂ ನೂರೈ ವತ್ತರಷ್ಟು ಪುಟಗಳನ್ನು ಒಳಗೊಂಡು ಹೊರಕ್ಕೆ ಬಂದುವು. ಆದರೂ – ಇದೊಂದು ಪ್ರಯೋಗಮಾಡಿ ನೋಡಿಬಿಡೋಣ – ಎಂದು ಮೊದಲಿಟ್ಟಿದ್ದ ಚಂದಾ ಹಣವನ್ನು ಹೆಚ್ಚಿಸದೆ ಹಾಗೆಯೆಬಿಟ್ಟೆವು.

ಒಂದೊಂದು ಪುಸ್ತಕವನ್ನು ಹೊರಕ್ಕೆ ಕಳಿಸಬೇಕಾದರೆ ಮೊದಲು ಒಂದುವರೆ ಆಣೆಯ ಅಂಚೆವೆಚ್ಚವಾಗುತ್ತಿದ್ದಿತು. ಈಗ ಅಂಚೆಯ ದರಗಳು ಏರಿದುದರಿಂದ ಒಂದೂ ಮುಕ್ಕಾಲಾಣೆಯಾಗುವುದು. ಎಂದರೆ ನಮಗೆ ಚಂದಾದಾರರು ಸಲ್ಲಿಸುವ ೩-೮-೦ ಚಂದಾಹಣದಲ್ಲಿ ೦-೧೦-೬ ಗಳು ಬರೀ ಅಂಚೆಗೇ ಹೋಗುವುವು ೨-೧೩-೬ ರೂ. ಗಳು ಮಾತ್ರ ನಮಗೆ ದೊರೆಯುವುವು. ಇಷ್ಟೊಂದು ಒಳ್ಳೆಯ ಹಾಳೆಯ ಮೇಲೆ ಅಚ್ಚುಕಟ್ಟಾಗಿ ಮುದ್ರಿಸಿದ ಸುಮಾರು ೧೫೦ ಪುಟಗಳ ಪುಸ್ತಕವೊಂದನ್ನು ಬರೀ ೦-೭-೭ ಗಳಿಗೆ ನಮ್ಮ ಚಂದಾದಾರರಿಗೆ ನಾವು ಕೊಟ್ಟಂತಾಗುವುದು. ಈಗ ನಮ್ಮ ಕೈಯಲ್ಲಿರುವ ಈ ಪುಸ್ತಕವಂತೂ ಇನ್ನೂರು ಪುಟಸಂಖ್ಯೆ ಯನ್ನು ಸಮೀಪಿಸಲು ಬಂದಿದೆ. ಮುಂದೆ ಬರಲಿರುವ ಗ್ರಂಥಗಳೂ ನೂರೈ ವತ್ತು ಪುಟಗಳಿಗೆ ಮಿಕ್ಕಿಯೇ ಬರಬಹುದೇನೋ ಎನಿಸುತ್ತಲಿದೆ. ಆದರೂ ಕನ್ನಡಿಗರ ಔದಾರ್ಯವನ್ನು ನಂಬಿಕೊಂಡು ಚಂದಾಹಣವನ್ನು ಇದ್ದಂತೆಯೆ ಇರಿಸಿದ್ದೇವೆ.

ಮಾಲೆಯು ಕನ್ನಡಿಗರಿಗೆ ಸಲ್ಲಿಸಿದ ಮೊದಲನೆಯ ವರ್ಷದ ಸೇವೆಯೆಂದರೆ: '**ಸುದರ್ಶನ**' '**ಬಾಳುರಿ**' '**ವಿಶ್ವಾಮಿತ್ರನ ಸೃಷ್ಟಿ**' ಇವು ಮೂರು ಸ್ವತಂತ್ರ ಕಾದಂಬರಿಗಳು; '**ಬ್ರಾಹ್ಮಣರ ಹುಡುಗಿ**' ಎಂಬುದೊಂದು ಅನುವಾದಿತ ಕಾದಂಬರಿ; '**ತ್ರಿಪುರದಹನ**' ಎಂಬ ಕಾದಂಬರಿ-ನಾಟಕ-ಪ್ರಬಂಧ ಇವುಗಳ ನಡುವಣ ಯಾವುದೋ ಒಂದು ಸ್ಥಾನವನ್ನು ಪಡೆಯಬಹುದಾದ — ವೈಚಾರಿಕ ಸರಸಗ್ರಂಥ; '**ನವಿಲುಗರಿ**' ಎಂಬುದೊಂದು ಸಣ್ಣಕತೆಗಳ ಸಂಗ್ರಹ. ಎಲ್ಲವೂ ತಮ್ಮ ತಮ್ಮ ಜಾತಿಯಲ್ಲಿ ಒಳ್ಳೆಯ ಗ್ರಂಥಗಳೆಂದು ರಸಿಕವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಒಂದು ವರ್ಷದೊಳಗಾಗಿಯೆ '**ಸುದರ್ಶನ**' ದ ಮೊದಲನೆಯ ಆವೃತ್ತಿಯು ತೀರಿ ಎರಡನೆಯ ಸಲ ಅಚ್ಚಿನ ಮುಖವನ್ನು ಕಾಣುತ್ತಿರುವುದೆಂಬ ಮೇಲೆ ಕನ್ನಡ ವಾಚಕವರ್ಗಕ್ಕೂ ನಮ್ಮ ಕೆಲಸವು ಮೆಚ್ಚುಗೆಯಾಗಿದೆಯೆಂದು ನಮ್ಮ ಭರವಸೆ. ಈ ವರುಷ ಇನ್ನೂ ಬೇರೆ ಬೇರೆ ಒಳ್ಳೆಯ ಲೇಖಕರಿಂದ ಗ್ರಂಥಗಳನ್ನು ಬರೆಯಿಸಿಕೊಡಬೇಕೆಂದಿದ್ದೇವೆ. ಅದಕ್ಕಾಗಿ ಕನ್ನಡಿಗರ ಕೊಡುಗೈಯ ನೆರವನ್ನು ಹಾರೈಯಿಸುತ್ತಲಿದ್ದೇವೆ.

ನಮ್ಮ ಹಿತಾಕಾಂಕ್ಷಿಗಳು ನಮ್ಮ ಆರ್ಥಿಕಪರಿಸ್ಥಿತಿಯು ಹೇಗಿದೆಯೆಂದು ಕೇಳಬಹುದು. ಮೊದಲನೆಯ ವರುಷ ಸಹಾಯಧನ, ಚಂದಾ ಹಣ,ಬಿಡಿ ಮಾರಾಟದ ಹಣ ಎಲ್ಲವೂ ಸೇರಿ ಸಮಾರು ಒಂದುವರೆ ಸಾವಿರ ರೂಪಾಯಿಗಳಷ್ಟು ನಗದಾಗಿ ಬಂದಿತು. ಆರೂ ಪುಸ್ತಕಗಳ ಮುದ್ರಣ, ಕಾಗದ, ಅಂಚೆಯ ವೆಚ್ಚ, ಇನ್ನಿತರ ವೆಚ್ಚ ಇವುಗಳಿಗೆ ಅದು ಸರಿ ಹೋಯಿತು. **ಮೋಹನ ಮುದ್ರಣಾಲಯದ** ಒಡೆಯರಾದ **ಶ್ರೀ. ಕೆ. ಜಿ. ರಾಯದುರ್ಗ** ಅವರು ಮುದ್ರಣದ ದರದಲ್ಲಿ ರಿಯಾಯಿತಿ ತೋರಿಸದಿದ್ದಲ್ಲಿ ಕೆಲವೊಂದು ಹಾನಿಯನ್ನೂ ಸಹಿಸಬೇಕಾದ ಪ್ರಸಂಗವು ಬರಬಹುದಾಗಿದ್ದಿತು. ಅಂತಹ ಸಂದರ್ಭ ಬಾರದಂತೆ ನೆರವ ನಿತ್ತುದಕ್ಕಾಗಿ **ಶ್ರೀ. ರಾಯದುರ್ಗ** ಅವರಿಗೆ ಮಾಲೆಯ ಸಂಚಾಲಕರು ಕೃತಜ್ಞರಾಗಿರುವರು.

ಮೊದಲನೆಯ ವರ್ಷದಲ್ಲಿ ನಾವು ಬಿಡಿಮುತ್ತಾಗಿ ಪ್ರಕಟಿಸಿದ '**ಕಣ್ಮರೆಯಾದ ಕನ್ನಡ**' ಎಂಬ ಗ್ರಂಥವು ಹಲವು ವಿದ್ವಾಂಸರ ಆದರಕ್ಕೆ ಪಾತ್ರವಾಗಿದೆ. ಅಂತಹ ಪ್ರೌಢ ಗ್ರಂಥಗಳು ಹೆಚ್ಚುಹೆಚ್ಚಾಗಿ ನಮ್ಮ ಪ್ರಕಾಶನ ಸಮಿತಿಯಿಂದ ಹೊರಬೀಳಬೇಕೆಂದು ಆಶೆ. ನಮ್ಮ ಆಶೆಯು ಇನ್ನೂ ಏನೇನೋ ಮುಗಿಲುಮನೆಗಳನ್ನು ಕಟ್ಟುತ್ತಲಿದೆ. ಭರತಖಂಡದ ಬೇರೆಬೇರೆ ಭಾಷೆಗಳಲ್ಲಿಯ ಉಪಯುಕ್ತ ಗ್ರಂಥಗಳನ್ನೂ ಲಲಿತ ವಾಙ್ಮಯವನ್ನೂ ನಮ್ಮ ಭಾಷೆಯಲ್ಲಿಳಿಸಬೇಕು; ವಿದೇಶೀಯ ಭಾಷೆಗಳಲ್ಲಿರುವ, ವಿಶ್ವಸಾಹಿತ್ಯಕ್ಕೆ ಸೇರಬಹುದಾದ ಭಾಗವನ್ನು ಕನ್ನಡಿಗರಿಗೂ ಕೊಡಬೇಕು ; ದಿನದಿನದ ಜೀವನಕ್ಕೆ ಆವಶ್ಯಕವಾಗುವಂತಹ ಆಹಾರ, ಔಷಧಿ, ವಿಜ್ಞಾನ, ಕೈಗೆಲಸ, ಕುಟುಂಬಧರ್ಮ, ಸಮಾಜಧರ್ಮ ಮೊದಲಾದ ವಿಷಯಗಳ ಮೇಲೆ ಸುಲಭ ಗ್ರಂಥಗಳನ್ನು —ಬಲ್ಲವರಿಂದ ಬರೆಯಿಸಿ— ಪ್ರಕಟಿಸಬೇಕು; ವರುಷ ವರುಷವೂ ನಾಡಹಬ್ಬದಲ್ಲಿ, ಕರ್ನಾಟಕದ ಯಾವುದೇ ಒಂದು ದೊಡ್ಡ ಪಟ್ಟಣದಲ್ಲಿ, ಆಧುನಿಕ ಗ್ರಂಥಗಳ ಪ್ರದರ್ಶನವನ್ನು ಏರ್ಪಡಿಸಬೇಕು; ಶ್ರೀರಾಮಕೃಷ್ಣಪರಮಹಂಸ, ಶ್ರೀವಿವೇಕಾನಂದ, ಶ್ರೀರಾಮತೀರ್ಥ, ಶ್ರೀಅರವಿಂದರು ಇವರೆಲ್ಲರ ಆಧ್ಯಾತ್ಮಿಕ ನೂತನ ವಿಚಾರಗಳ ಗ್ರಂಥಗಳನ್ನೆಲ್ಲ ಕನ್ನಡಿಸಿಕೊಡಬೇಕು........ಇವೆಲ್ಲ ನಮ್ಮ ಆಶೆಯ ಆಶೆಗಳು. "ಸರ್ವಾರಂಭಾಸ್ತಂಡುಲಾಃ ಪ್ರಸ್ಥಮೂಲಾಃ" ಯಾವುದಕ್ಕೂ ಸಿರಿಯಮ್ಮನ ಒಲುಮೆಯಾಗಬೇಕು. ಆದುದರಿಂದಲೇ ಕನ್ನಡಿಗರನ್ನು ನಾವೀಗ ಕೇಳಿಕೊಳ್ಳುತ್ತಿರುವುದು—**ಪೋಷಕರಾಗಿ, ಸಹಾಯಕರಾಗಿ, ಕೊನೆಗೆ ಚಂದಾದಾರರಾಗಿ, ಅದೂ ಇಲ್ಲದೆ ಹೋದರೆ ಒಂದೆರಡು ಬಿಡಿ ಪುಸ್ತಕಗಳನ್ನಾದರೂ ತೆಗೆದುಕೊಳ್ಳಿ**—ಎಂದು.

"**ವಿಶ್ವಾಮಿತ್ರನ ಸೃಷ್ಟಿ**"ಯು ನಮ್ಮ ಕಾದಂಬರೀಸಾಹಿತ್ಯದಲ್ಲಿ ತೀರ ಹೊಸಜಾತಿಯದು. ಪರಿಚಯವಿಲ್ಲದ ವಾಚಕರು ಇದನ್ನು ನೋಡಿ ಬೆದರಬಹುದು; ತಿಳಿಯದಂತಾಗಿ ಮುಂಗಾಣದವರಾಗಬಹುದು. ಆದರೂ ಅವರು ಒಂದುಸಲ ಪೂರ್ಣವಾಗಿ ಓದಿನೋಡಬೇಕೆಂಬ ಮನಸ್ಸು ಮಾಡಿ ಓದಿದರೆ, ಮತ್ತೊಂದು ಸಲ ಓದುತ್ತಿರುವಾಗ ಇದರ ಸೊಗಸೇ

ನೆಂಬುದು ಗೊತ್ತಾಗದಿರದು. ಇಂತಹ ಹೊಸಮಾದರಿಯ ಗ್ರಂಥವನ್ನು ಪ್ರಕಟಿಸುವ ಸುಸಂದರ್ಭವನ್ನು ಒದಗಿಸಿಕೊಟ್ಟು **ಪ್ರೊ. ಆರ್. ವ್ಹಿ. ಜಹಗೀರ್‌ದಾರ್** ಅವರು ನಮಗೆ ತುಂಬ ಉಪಕಾರವನ್ನು ಮಾಡಿದ್ದಾರೆ; ಅದಕ್ಕಾಗಿ ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಮಾಲೆಗೆ ಮೊದಲನೆಯ ವರ್ಷದಲ್ಲಿ ಆರ್ಥಿಕಸಹಾಯವನ್ನು ಒದಗಿಸಿಕೊಟ್ಟ ಪೋಷಕ -ಸಹಾಯಕ ಮಹನೀಯರಿಗೂ ಚಂದಾದಾರ ಬಾಂಧವರಿಗೂ ನಮ್ಮ ಕೃತಜ್ಞತೆಯ ವಂದನೆಗಳು. ಕನ್ನಡ ಗ್ರಂಥ ಭಾಂಡಾರಕ್ಕೆ ಹೊಸತಾಗಿ ಆರು ಗ್ರಂಥಗಳನ್ನು ಒದಗಿಸಿದ ಕಾರ್ಯದಲ್ಲಿ, ತಮ್ಮ ಸರಸಕೃತಿಗಳನ್ನು ಕೊಟ್ಟು ಮಾಲೆಗೆ ಪುರುಪುಕೊಟ್ಟ ಗ್ರಂಥಕರ್ತೃಗಳಿಗೆ ನಾವು ಋಣಿಗಳು. ಕೇವಲ ಅಭಿನಂದನದ ಮಾತಿನಿಂದಲೆ ಅವರ ಋಣದ ಭಾರವನ್ನು ಕಡಿಮೆ ಮಾಡಿಕೊಳ್ಳಬೇಕಾಗಿದೆ. ನಮ್ಮ ಕನ್ನಡ ಗ್ರಂಥಕರ್ತೃಗಳು ತಮ್ಮ ಕೃತಿಗಳಿಗೆ ಯೋಗ್ಯವಾದ ಪ್ರತಿಫಲವನ್ನು ಪಡೆಯುವ ದಿನಗಳನ್ನೆಂದು ಕಾಣುವರೊ !

ಸಾಧನಕೇರಿ<br>ತಾ| ೧ ಆಗಸ್ಟ ೧೯೩೪ — ಸಂಚಾಲಕರು<br>**ಮನೋಹರ ಗ್ರಂಥಮಾಲಾ**

# ಅರಿಕೆ

ಇದೊಂದು ಕಾದಂಬರಿ ಎನ್ನುವುದಕ್ಕಿಂತ ಇನ್ನೂ ಒಂದು ಕಾದಂಬರಿ ಎಂಬ ಖ್ಯಾತಿನಿಂದಲೆ ಈ ಗ್ರಂಥವನ್ನು ವಾಚಕರ ಮುಂದಿಡ ಬೇಕಾಗಿದೆ. ಹಾಗೆ ಹೇಳಿದುದರ ಕಾರಣವು ಇದನ್ನು ಓದಿದ ಮೇಲೆ ತಾನಾಗಿಯೆ ತಿಳಿದು ಬರುವುದು. ಸದ್ಯದ ಸಮಾಜವೆ ಈ ಕಾದಂಬರಿಯ ವಿಷಯ. ಆ ಸಮಾಜದ ಚಿತ್ರವನ್ನು ವಿಧವಿಧವಾದ ಬಣ್ಣ–ಗೆರೆಗಳಿಂದ ತೋರಿಸುವಾಗಲೂ ಅದರ ಏಕರೂಪತೆಯು ಒಡೆದು ಕಾಣುವುದಕ್ಕಾಗಿ ಒಂದು ಪಟವನ್ನು ಪಯೋಗಿಸಿದೆ. ಆ ಪಟವೆಂದರೆ ನಾರಾಯಣನೆಂಬೊಬ್ಬ ಈಗಿನ ಮಾದರಿಯ ಸುಶಿಕ್ಷಿತ ಯುವಕ. ಕಾಲೇಜಿನಿಂದ ಪದವಿ ಪಡೆದು ಜೀವನದಲ್ಲಿ ಕಾಲಿಟ್ಟಾಗ ನಾರಾಯಣನಿಗೆ ಸಮಾಜದ, ವ್ಯವಹಾರದ, ಜಗತ್ತಿನ ಜ್ಞಾನವೆಷ್ಟಿತ್ತೆಂಬುದನ್ನು ತೋರಿಸುವುದೊಂದು; ಅನುಭವ ವಿಲ್ಲದ ನಾರಾಯಣನ ವಿವೇಕ–ವಿಚಾರಗಳ ಸ್ವರೂಪವೆಂತಹದಿತ್ತೆಂಬು ದೊಂದು; ಅನುಭವವನ್ನುಂಡು ಅದನ್ನರೆದುಕೊಂಡು ಅರಿತುಕೊಂಡು ಒರೆಗಲ್ಲಿಗೆ ಹಚ್ಚುವ ಶಕ್ತಿ ಅವನಲ್ಲಿ ಎಷ್ಟರಮಟ್ಟಿಗಿದ್ದಿತೆಂಬುದೊಂದು; ಪಡೆದ ಶಿಕ್ಷಣಕ್ಕೂ ನಡೆದ ವ್ಯವಹಾರಕ್ಕೂ ಸಂಬಂಧವಿದೆಯೆ ? ಇದ್ದರೆ ಎಂತಹದು ಎಂಬುದೊಂದು; ಪ್ರಗತಿಯ ಪಾಠವನ್ನು ಕಲಿತ ನಾರಾಯಣ ನಂತಹ 'ಸುಶಿಕ್ಷಿತ'ನಿಗೆ ಸಮಾಜದಲ್ಲಿ ಯಾವ ತೆರದ ಜಬಾಬ್ದಾರಿ ಇದೆ. ಅದನ್ನು ನಾರಾಯಣನು ಹೇಗೆ ನಿರ್ವಹಿಸುವನು ? ಎಂಬುದೂ ಒಂದು. ಹೀಗೆ ಅನೇಕ ಆಧುನಿಕ ಸಾಮಾಜಿಕ ಸಮಸ್ಯೆ ಸಂಬಂಧಗಳು—ನಾರಾ ಯಣನ ಕತೆಯ ನಿಮಿತ್ತವಾಗಿ–ಇಲ್ಲಿ ವಿವೇಚಿಸಲ್ಪಟ್ಟಿವೆ. ಇಂತಹ ಕಾದಂ ಬರಿಯು ಸದ್ಯಕ್ಕೆ ನಮ್ಮಲಿಲ್ಲವೆಂದು ಹೇಳಿಕೊಂಡರೆ ಓದುವವರಾರೂ ನಮ್ಮ ಮೇಲೆ ಆತ್ಮ ಪ್ರಶಂಸೆಯ ಆರೋಪವನ್ನು ಹೊರಿಸಲಿಕ್ಕಿಲ್ಲವೆಂದು ನಂಬಿದ್ದೇವೆ. ಒಳ್ಳೆಯದಿರಲಿ, ಕೆಟ್ಟದಿರಲಿ—ಇಲ್ಲಿ ಒಂದು ಹೊಸ ಶೈಲಿ ಯನ್ನು, ಹೊಸ ಮಾದರಿಯನ್ನು ವಾಚಕರ ಕೈಸೇರಿಸಿದೆ.

ನೂತನ ಸಾಹಸದ ಎಡರುಗಳನ್ನು ಅರಿತವರಾದರೂ ಮನೋಹರ ಗ್ರಂಥಮಾಲೆಯ ಸಂಚಾಲಕರು ನಮ್ಮ ಈ (ಇದುವರೆಗೆ), 'ಅದ್ವಿತೀಯ' ವಾದ ಕೃತಿಗೆ ಪ್ರೋತ್ಸಾಹನ ಕೊಟ್ಟುದಕ್ಕಾಗಿಯೂ, ನಮ್ಮಿಂದು ದ್ಭವಿಸಿದ ತೊಂದರೆಗಳನ್ನು ತಡೆದುಕೊಂಡು ಸಾಹಿತ್ಯ ಪ್ರೇಮದಿಂದ ಪರಿಶ್ರಮ ಪಟ್ಟುದಕ್ಕಾಗಿಯೂ ಅವರಿಗೆ ನಾವು ಅತ್ಯಂತ ಋಣಿಯಾಗಿದ್ದೇವೆ.

—ಶ್ರೀರಂಗ

## ಓದುಗರಿಗೆ ಸೂಚನೆ

ಕಾದಂಬರಿಯ ಮೊದಲೂ ಮುಂದೆ ಕೆಲವೆಡೆಯಲ್ಲೂ ಅನುಸರಿಸಿದ ಶೈಲಿಯು ಕನ್ನಡಕ್ಕೆ ಹೊಸತಾದುದರಿಂದ ಓದುಗರು ಒಂದೆರಡು ಸಂಗತಿಗಳನ್ನು ಸ್ಮರಣೆಯಲ್ಲಿಟ್ಟುಕೊಂಡೇ ಓದಬೇಕಾಗುವುದು. ಮೊದಲಿನಿಂದ ಕೊನೆಯವರೆಗೆ (ಸಾಮಾನ್ಯವಾಗಿ) ವಿಚಾರಾತ್ಮಕವಾದ ನಿರೂಪಣೆ ಇದೆ. ನಾರಾಯಣನೆಂಬ ವ್ಯಕ್ತಿಗೆ ಕಂಡು ಬಂದಂತೆ ಸನ್ನಿವೇಶಗಳನ್ನು ಚಿತ್ರಿಸಿರುವುದರಿಂದ ನಾರಾಯಣನ ಪರವಾಗಿಯೆ—ಎಂದರೆ ನಾರಾಯಣನದೊಂದು ಆತ್ಮಗತ ಭಾಷಣ ಎಂಬ ದೃಷ್ಟಿಯಿಂದಲೆ—ಓದಬೇಕು. ನಾರಾಯಣನು ವಿಚಾರ ನಡೆಸಿರುವಾಗ ಅವನಿಗೆ ಸಂಬಂಧವಿಲ್ಲದ ವಸ್ತುವಿನ ಇಲ್ಲವೆ ವ್ಯಕ್ತಿಯ ನಿರೂಪಣೆ ಬಂದಲ್ಲಿ ಆ ನಿರೂಪಣೆಯನ್ನು ಸಣ್ಣಕ್ಕರಗಳಲ್ಲಿ ಮುದ್ರಿಸಿದೆ (ಅನುಕೂಲತೆಗಾಗಿ). ಒಂದು ಮಾತಿನಲ್ಲಿ ಹೇಳುವುದಾದರೆ ಪ್ರತಿಯೊಬ್ಬ ಓದುಗನು ತಾನೇ ನಾರಾಯಣ ಎಂದು (ತಾತ್ಪೂರ್ತಿಕವಾಗಿ) ತಿಳಿದುಕೊಂಡು ಓದಿದರೆ ತಡೆ ಇಲ್ಲ, ತೊಂದರೆಯೂ ಇಲ್ಲ.

———

# ವಿಶ್ವಾಮಿತ್ರನ ಸೃಷ್ಟಿ

ವರ್ಷದಲ್ಲಿ ೧೫೦ ಪುಟಗಳುಳ್ಳ ಆರು ಸರಸ ಗ್ರಂಥಗಳು

ವಾರ್ಷಿಕ ಚಂದಾ ಅಂಚೆಯವೆಚ್ಚ ಸೇರಿ ೩-೮-೦

**ಎರಡನೆಯ ವರುಷದ ಎರಡನೆಯ ಕುಸುಮ**

ಮನೋಹರ ಗ್ರಂಥಮಾಲೆಯ ೮ನೆಯ ಕುಸುಮ

# ಜೀವನ

ಸರಸ ಸಣ್ಣಕತೆಗಳಸಂಗ್ರಹ

ಕತೆಗಾರರು:-

**ಕೃಷ್ಣಕುಮಾರ**

# ವಿಶ್ವಾಮಿತ್ರನ ಸೃಷ್ಟಿ

( ಎರಡನೆಯ ಭಾಗ )

## ಸಂಕಲ್ಪ ಇಲ್ಲವೆ ಆತ್ಮಸಂಶೋಧನೆ

೧

ಸಾರಿಸುವುದಕ್ಕೆ ಸೆಗಣಿ ಬೇಕು— ಎಂದರೆ ಇಪ್ಪನೆಯ ಶತಮಾನದ ಯಾವ ಭಾರತೀಯ ಗಂಡನು ಹೇಸಿಕೆಯಿಂದ ಅಸಹನೆಯಿಂದ, ತಿರಸ್ಕಾರ ದಿಂದ ಹೆಂಡತಿಗಾಗಿ ಮೂಗು ಏರಿಸಲಿಕ್ಕಿಲ್ಲ? ಶಾಸ್ತ್ರಗಳಿಂದ ನಡೆದು ಬಂದ ಸಂಸ್ಕೃತಿಯು ಬೆಳೆದಿದೆ, ಶಾಸ್ತ್ರೀಯ ಸಂಶೋಧನೆ ಬೆಳೆದಿದೆ— ಇಂತಹ ಆಧುನಿಕ ಕಾಲದಲ್ಲಿ ಸೆಗಣಿಯಿಂದ ಮನೆ ಸಾರಿಸುವುದೆ? ಹೊಲಸು! ದಡ್ಡತನ! ಹೀಗೆಂದು ಭರತಖಂಡದ ಪ್ರತಿಯೊಂದು ಹಿಂದುಗೃಹದಲ್ಲಿ ಗಂಡನು ಹೆಂಡತಿಯನ್ನು ಹೊಡೆಯುತ್ತಿರಬಹುದು, ಮಗನು ತಾಯಿಯನ್ನು ಬೇಡುತ್ತಿರಬಹುದು, ಅಣ್ಣ-ತಮ್ಮಂದಿರು ಅಕ್ಕ-ತಂಗಿಯರನ್ನು ಕಾಡುತ್ತಿರಬಹುದು? ಅಥವಾ — ಇಷ್ಟೊಂದು ಸುತ್ತಿಸುತ್ತಿ ಮುಂದಿಯ ಮಾತು ಹೇಳುವುದೇಕೆ? ಸದ್ಯಕ್ಕೆ ನಮ್ಮ ವಾಚಕರೆ ನಮ್ಮ ಮೇಲೆ ಮೂಗು ಮುರಿಯುತ್ತಿರಬಹುದು. 'ಶ್ರೀ' ಎಂಬ ಪದದಿಂದಾಗಲಿ, ಸರಸವಾದ ವರ್ಣನೆಯಿಂದಾಗಲಿ ಗ್ರಂಥವನ್ನು ಪ್ರಾರಂಭಿಸುವುದನ್ನು ಬಿಟ್ಟುಕೊಟ್ಟು 'ಸೆಗಣಿ' ಎಂಬ ಬೀಭತ್ಸ ಪದವನ್ನು ಪ್ರಯೋಗಿಸಬಹುದೆ? ನಿಜ. ಸೆಗಣಿಯು ಸಾಹಿತ್ಯದಲ್ಲಿ ಬೀಭತ್ಸವೆನ್ನಿಸಬಹುದು. ಆದರೆ ಸದ್ಯಕ್ಕೆ ಆ ಪದವನ್ನು ನಾವು ಉಪಯೋಗಿಸಿದ್ದು ಸಾಹಿತ್ಯದ ಸಂಬಂಧವಾಗಿ ಅಲ್ಲ, ಸಾರಿಸು

ವುದರ ವಿಷಯವಾಗಿ. ಸಾರಿಸುವುದೆಂದರೆ ಸ್ವಚ್ಛಮಾಡುವುದು. ಪಂಚಗವ್ಯದ ರೂಪದಿಂದ ಮಾನವನ ಅಂತಃಕರಣಗಳನ್ನೆ ಶುದ್ಧಿಗೊಳಿಸುವ ಯೋಗ್ಯತೆ ಇದ್ದ ಪದಾರ್ಥಕ್ಕೆ ಮನೆಯಂತಹ ಭೌತಿಕವಸ್ತುವನ್ನು ಸ್ವಚ್ಛಮಾಡುವ ಶಕ್ತಿ ಇಲ್ಲವೆ? ಇದಲ್ಲದೆ ಗೋಮಾತೆಯು ದಾನವದು. ಸಮಸ್ತಹಿಂದುಗಳಿಗೂ ಸಕಲದೇವತಾಸ್ವರೂಪಿಯಾದ ಗೋಮಾತೆಯು ದಾನ! ಮಕ್ಕಳಿಗೆ ಮೊಲೆಯಾಲನ್ನುಣ್ಣಿಸುವ, ಬೆಳೆದವರಿಗೆ ಹೊಲದ ಬೆಳೆಯನ್ನೊದಗಿಸುವ ಗೋಮಾತೆಯ ದಾನ! ಅಂತೂ ಸಾರಿಸುವುದಕ್ಕೆ ಸಗಣಿ ಬೇಕೇ ಬೇಕು. ಕಮತೂರಿನ ಕೆರೆಯು ಕೊಳೆಯೊಳಗೆ ಕುಳಿತರೇನು — ಕಲ್ಪವೃಕ್ಷದ ಕೆಳಗಿನ ಕಾಮಧೇನುವಾದರೇನು? ಗೋಮಾತೆಯು ಗೋಮಾತೆಯೆ. ಸ್ವಚ್ಛತೆಯು ಸ್ವಚ್ಛತೆಯೆ. ಇದಲ್ಲದೆ ಸಿಬ್ಬರದ ಬೆಳೆಗೆ ಗೊಬ್ಬರದ ಕೊಳೆ ಬೇಕೆಂಬುದು ಸರ್ವಸಾಮಾನ್ಯರಿಗೂ ಗೊತ್ತಿದ್ದ ಮಾತು. ಕಸದಿಂದ ಹೊಸತೊಂದು ಬೆಳೆಯುವುದು ನಿಸರ್ಗದ ನಿಯಮವಿದ್ದಂತಿದೆ. ಸಗಣಿಯಿಂದ ಸ್ವಚ್ಛತೆ, ಹೊಲಸಿನಿಂದ ಹಸನ. ತಿಳಿಯುವಂತಹ ಮಾತು, ಹುಣಸೆಯಿಂದ ತಿಕ್ಕಿದ ಹಂಡೆಯಂತೆ ಕಣ್ಣು ತುಂಬಿ ತಿಳಿಯುವಂತೆ ತಿಳಿಯಾದ ಮಾತು. ಒಪ್ಪಲೇಬೇಕು. ಹಾಗೆ ಒಪ್ಪಿದ ಮೇಲೆ ಅದೇ ತರ್ಕಕ್ಕನುಸರಿಸಿ ಸತ್ಯವು ಹೊರಡುವುದು ಅಸತ್ಯದಿಂದ, ಸ್ವಚ್ಛತೆ ಹೊಳೆಯುವುದು ಮಾಲಿನ್ಯದಿಂದ, ಪುಣ್ಯ ಹುಟ್ಟುವುದು ಪಾಪದಿಂದ ಮುಂತಾದ ತಾತ್ವಿಕ ಸಿದ್ಧಾಂತಗಳನ್ನೂ ಒಪ್ಪಬೇಕಾಗುವುದು. ಪರಮಾತ್ಮನಲ್ಲಿ ನಂಬಿಗೆಯನ್ನಿಡುವ ಪಕ್ಷದಲ್ಲಂತೂ ಒಪ್ಪಲೇ ಬೇಕು. ಪರಮಾತ್ಮನು ಜಗತ್ತನ್ನು ಉದ್ಧರಿಸುವುದು ಹೇಗೆ? ರಸ—ಪಾಯಸಗಳನ್ನು ಸವಿ—ಸವಿಯಾಗಿ ಸೇವಿಸುವ ಸ್ವಾಮಿಯ ರೂಪದಿಂದಲೆ, ಇಲ್ಲವೆ ನೀರಸ ನೀರನ್ನು ಗುಟಕರಿಸುವ ಮತ್ಸ್ಯದ ರೂಪದಿಂದಲೆ? ಮಿದುವಾದ ತಿಳುವಾದ ರೇಷ್ಮೆಯನ್ನುಡುವ ಸಾಧುವಿನ ರೂಪದಿಂದಲೆ, ಇಲ್ಲವೆ ಹೊಲಸಾದ ಬಿರುಸಾದ ಬೆನ್ನು-ತೊಗಲಿನ ಕೂರ್ಮನ ರೂಪದಿಂದಲೆ? ಒನಪು—ಒಯ್ಯಾರಗಳಿಂದಲೆ, ಇಲ್ಲವೆ ವರಾಹದ ರೂಪದಿಂದಲೆ? ಮೋಟಾರು—ಗಾಡಿಗಳಲ್ಲಿ ಮೆರೆದಾಡುವ ಮುಂದಾಳುವಿನ ರೂಪದಿಂದಲೆ, ಇಲ್ಲವೆ ತಗಣಿಯಂತೆ ಸೀಳಿದ ಕಂಬದಲ್ಲಿ ನಿಡಿಮಿಡಿಗೊಳ್ಳುತ್ತಲೆ? ಸಾಕು.

ಪರಮಾತ್ಮನ ವಿಷಯ, ಎಲ್ಲರಿಗೂ ಗೊತ್ತಿದ್ದ ವಿಷಯ. ಹೆಚ್ಚಿಗೆ ಹೇಳುವುದೇನು? ಸತ್ಕಾರ್ಯವನ್ನು ಸಾಧಿಸುವವನು ಸುಡುಗಾಡು-ಸಿದ್ಧನಂತೆ ಇರಲೇಬೇಕಾಗುವುದು ಎಂಬುದನ್ನು ಇನ್ನು ಹೆಚ್ಚಿಗೆ ವಿವರಿಸಿ ಹೇಳುವ ಆವಶ್ಯಕತೆ ಇಲ್ಲ. ಉಚ್ಚಕಾರ್ಯಸಿದ್ಧಿಗಾಗಿ ನೀಚವೃತ್ತಿಯನ್ನೆ ಕೈಕೊಳ್ಳಬೇಕಾಗುವುದು. ಆಶೆ–ಆಕಾಂಕ್ಷೆಗಳು ಉತ್ತಮೋತ್ತಮವಾದಂತೆ ವೇಷ-ಭಾಷಾದಿಗಳು ಅಧಮಾಧಮವಾಗಲೇಬೇಕು. (ಉದಾ: ಧರ್ಮಗುರುಗಳ ಭಾಷೆ, ಸಾಧು-ಸಂನ್ಯಾಸಿಗಳ ವೇಷ). ಈ ಗೂಢ ತತ್ವವನ್ನು, ಈ ರೂಢ ರಹಸ್ಯವನ್ನು ತಿಳಿಯದವರಿಗೆ ನಾರಾಯಣನ ಜೀವನಕ್ರಮವೆ ತಿಳಿಯದು. ನಾರಾಯಣನು ಇದೀಗ ಹೊರಟದ್ದು ಸತ್ಕಾರ್ಯಕ್ಕಾಗಿ, ಸಮಾಜ–ಸುಧಾರಣೆಗಾಗಿ, ಅಜ್ಞರ ಉದ್ಧಾರಕ್ಕಾಗಿ, ಜನರ ಭಾಗ್ಯೋದಯಕ್ಕಾಗಿ. ಉಪ್ಪಿಟ್ಟು ತಿನ್ನುವುದರಿಂದ ಅಂತಹ ಸತ್ಕಾರ್ಯವಾದೀತೆ— ಎಂದು ಅನೇಕರಿಗೆ ಸಂಶಯ ಬರಬಹುದು. ಶಿವನು ವಿಷ ನುಂಗಿದುದಕ್ಕೆ ಸಮಸ್ತಲೋಕಗಳಿಗೆ ಸುರಕ್ಷಿತತೆ ಲಭಿಸಿತಲ್ಲ, ಹಾಗೆಯೆ ನಾರಾಯಣನು ಉಪ್ಪಿಟ್ಟು ನುಂಗಿದುದಕ್ಕಾಗಿ. ಉಪ್ಪಿಟ್ಟು ನುಂಗಿದುದು ಅದು ಬಿಸಿ ಇದ್ದುದಕ್ಕಾಗಿ. ಉಪ್ಪಿಟ್ಟು ತಿನ್ನುವುದೇನು ಅಂತಹ ಅಧಮಾಧಮ ಕೆಲಸವಲ್ಲ. आत्मानं सततं रक्षेत् दारैरपि धनैरपि, "ದಾರಿಂದ (ಯಾರಿಂದ) ಧನಲಾಭವಿದೆಯೋ— ಅಂದರೆ–ದಾರು ದಾನ–ಧರ್ಮ–ದಕ್ಷಿಣಾದಿಗಳನ್ನು ಮುಕ್ತಹಸ್ತರಾಗಿ ಕೊಡುವಂಥಾತ್ತರಾಗುವರೋ, ಅವರಿಂದ ಸತತಂ–ಎಂದರೆ ಸತ್ತರೂ–ರಕ್ಷಣೆಯನ್ನು ಎಂದರೆ ಉದರನಿರ್ವಾಹವನ್ನು ಸಾಗಿಸಬೇಕು, ಅದೇ ಭವಬಂಧ ವಿಮೋಚನೆ" ಎಂದು ಶಾಸ್ತ್ರ ಹೇಳಿ ಆಚಾರ್ಯರು ಕೂಡ ಅಂಗಡಿಯ ಉಪ್ಪಿಟ್ಟು ತಿನ್ನುವಾಗ ನಾರಾಯಣನು ಅಧಮಾಧಮ ಕೆಲಸ ಮಾಡಿದನೆನ್ನಬಹುದೇ–ಎಂದು ಆಕ್ಷೇಪಿಸಬಹುದು. ಅಲ್ಲ, ಅಲ್ಲ, ಉಪ್ಪಿಟ್ಟು ತಿನ್ನುವುದು ಅಧಮಾಧಮ ಕೆಲಸ ಅಲ್ಲ ಎಂದು ನಾವೂ ಹೇಳುವೆವು. ಉಪ್ಪಿಟ್ಟು ತಿಂದನು, ಉಪ್ಪು ನೀರು ಕುಡಿದನು (ಅದಕ್ಕೆ ಇಂಗ್ಲಿಶದಲ್ಲಿ ಸೋಡಾ Soda ಎಂಬ ಹೆಸರು). ಅದರ ರುಚಿಯನ್ನು ಕಂಡನು ನಾರಾಯಣನು. ಅದರ ರಹಸ್ಯವನ್ನೂ ತಿಳಿದುಕೊಂಡನು

ನಾರಾಯಣನು. ಹಸಿವೆಯಿಂದ ಕಂಗಾಲಾದವನಿಗೆ ಉಪ್ಪಿಟ್ಟು ಅಮೃತ, ಉಂಡು ತೇಗುವವನಿಗೆ ಅಮೃತಾಂಜನ (ಕಣ್ಣಿಗೆ ನೀರು ತರಿಸುವುದರಿಂದ). ಪಾಪ! ಬಡ-ಬಗ್ಗರು, ರೊಕ್ಕವಿಲ್ಲದ ರೈತರು, ಹೊಟ್ಟೆಗಿಲ್ಲದ ಹಳ್ಳಿಗರು-ಇವರಿಗೆ ಉಪ್ಪಿಟ್ಟನ್ನು ಒದಗಿಸಿದರೆ ಎಂತಹ ಪುಣ್ಯದ ಕೆಲಸ? ತಾನೂ ಅದನ್ನೆ ಕೈಕೊಳ್ಳಬೇಕು ಎನ್ನಿಸಿತು ನಾರಾಯಣನಿಗೆ. ಉಪ್ಪಿಟ್ಟನ್ನು ಮಾಡುವ ಕೌಶಲವಿಲ್ಲದಿದ್ದರೂ, ಅದನ್ನು ಮಾರುವ ಕೆಲಸ ಹಿಡಿಯಲು ಯಾವ ಅಡ್ಡಿ? ತಾನು, ನಾರಾಯಣನು, B. A.! – ಗ್ರ್ಯಾಜುಯೇಟ್! ಉಪ್ಪಿಟ್ಟನ್ನು ಮಾರಬಹುದೆ— ಎಂದು ಕ್ಷಣಮಾತ್ರ ಎದೆ ಝುಲ್ಲೆಂದಿತು. ಆದರೆ ಒಂದೇ ಕ್ಷಣ ಮಾತ್ರ. 'ಜಗದೋದ್ಧಾರ'ನಾದ ಪರಮಾತ್ಮನ ಅವತಾರಗಳ ರಹಸ್ಯವು, ತತ್ವವು ನಾರಾಯಣನಿಗೆ ಗೊತ್ತಿದ್ದಿತು. ಅದಕ್ಕೆಂದೇ ಆ ಕೆಲಸ ಮಾಡಲು ಅವನು ಸಿದ್ಧನಾದನು. ಪರಮಾತ್ಮನ ಅವತಾರಗಳಲ್ಲಿ ವಿಶ್ವಾಸವನ್ನಿಟ್ಟು ನೀಚ ಕೆಲಸಮಾಡುವಾಗ ತಾನೂ ಹಳೆಯ ಆಚಾರದವನೆ ಎಂದು ಹೊಸಬರು-ತರುಣರು ತಿರಸ್ಕಾರದಿಂದ ಮೂಗು ಏರಿಸಬಹುದು. ಅದಕ್ಕೂ ಉತ್ತರವಿದ್ದಿತು ನಾರಾಯಣನ ಬುದ್ಧಿಯಲ್ಲಿ. 'ಕಾರ್ಯಗೌರವ' ಎಂಬ ಕಲ್ಪನೆ ಇದೆಯೆ ನಮ್ಮ ಜನರಿಗೆ? ಶಕ್ಯವೇ ಇಲ್ಲ. ಪಾಶ್ಚಿಮಾತ್ಯರಿಂದ-ವಿಶೇಷವಾಗಿ ಇಂಗ್ಲಿಶರಿಂದ-ಕಲಿತುಕೊಂಡ ಕಲ್ಪನೆಯದು. ಅವರಲ್ಲಿ dignity of labour– (ಡಿಗ್ನಿಟಿ ಆಫ್ ಲೇಬರ)—ಎನ್ನುವರು ಅದಕ್ಕೆ. ದೊಡ್ಡ ದೊಡ್ಡ ಮನೆತನದವರು ಕೂಡ ಅವರಲ್ಲಿ ಬೇಕಾದಂತಹ ಕೂಲಿಕೆಲಸವನ್ನು ಮಾಡುವರಂತೆ! ಒಮ್ಮೊಮ್ಮೆ ನಾರಾಯಣನಿಗೆ ಸೋಜಿಗವೆನ್ನಿಸುತ್ತಿತ್ತು ತನ್ನ ಸರಿಕರ ಹಟವನ್ನು ನೋಡಿ. ಪಾಶ್ಚಿಮಾತ್ಯರು ಮಾಡಿದ್ದನ್ನು ಮಾಡಿದರೆ ಮಾತ್ರ ಅದು ಸುಧಾರಣೆ, ಸಂಸ್ಕೃತಿ ಎಂಬ ಹಟವೇಕೆ? ನಮ್ಮಲ್ಲೂ, ಪ್ರಾಚೀನಕಾಲದಲ್ಲೂ dignity of labourದ ಉದಾಹರಣೆಗಳಿವೆ, ಎಷ್ಟೋ ಇವೆ. ನಳಮಹಾರಾಜನು ಟಾಂಗಾ ಹೊಡೆಯುತ್ತಿದ್ದನು (ಬೇಕಾದರೆ 'ರಥವಾಹಕ' ಎನ್ನಿರಿ); ಹರಿಶ್ಚಂದ್ರನು ಸ್ಮಶಾನವನ್ನು ಕಾಯುತ್ತಿದ್ದನು, ಬಲಾಢ್ಯ ಭೀಮಸೇನನು ವಿರಾಟನ ಖಾನಾವಳಿಯಲ್ಲಿ ಅಡಿಗೆಯವನಿದ್ದನು. ಅಂತೂ ನಾರಾಯಣನು ಸುತ್ತಿಸುತ್ತಿ ಅದೇ ಸಿದ್ಧಾಂ

ತಕ್ಕೆ ಬಂದು ಹುಟ್ಟುತ್ತಿದ್ದನು. ಹೆಚ್ಚೆಚ್ಚು ನೀಚಕೆಲಸವನ್ನು ಕೈಕೊಂಡಂತೆ ಹೆಚ್ಚೆಚ್ಚು ಉಚ್ಚಪದವಿಯನ್ನು ಪಡೆದಂತೆ. ಹೀಗಿರಲು ಚಹಾದ ಅಂಗಡಿಯಲ್ಲಿ ತಾನು 'ಮಾಣಿ' ಯಾದರೆ ಕೆಟ್ಟಿತೇನು ? ಪರದೇಶಗಳಲ್ಲಿ ಶಿಕ್ಷಣಪಡೆಯುವಾಗ ಎಷ್ಟೋ ಈಗಿನ ಭಾರತೀಯ ಮುಂದಾಳುಗಳಿಗೂ 'ಕಪ್ಪು-ಬಸಿ' ಗಳನ್ನು ತೊಳೆಯುವ ಕೆಲಸ ಹಿಡಿಯಬೇಕಾಗಿತ್ತಂತೆ. ಮಂದಿಯ ಮನೆಯಲ್ಲಿ ಮಾಡಿದ ಕೆಲಸವನ್ನು ಮನೆಯಲ್ಲಿಯೇ ಮಾಡಲು ನಾಚಿಕೆ ಯಾಕೆ? ಅಂತೂ ನಾರಾಯಣನು ನಿಶ್ಚಯ ಮಾಡಿದನು, ಕಮತೂರಿನ ಬಸ್-ಸ್ಟೇಶನದ ಚಹದ ಅಂಗಡಿಯಲ್ಲಿ ಕೆಲಸವನ್ನು ದೊರಕಿಸಿಕೊಳ್ಳಬೇಕು, ಎಂದು. ತನ್ನಲ್ಲಿ ಆ ಯೋಗ್ಯತೆ ಇದೆಯೆ-ಎಂಬ ಸಂಶಯಕ್ಕೆ ಆಸ್ಪದವನ್ನೆ ಕೊಡಲಿಲ್ಲ. ಮಹತ್ಕಾರ್ಯಗಳನ್ನು ಮಾಡುವ ಮನದ ಆವೇಶದಲ್ಲಿ ತಾನು ಬೇಕಾದುದನ್ನು ನೀಗಿಸಬಲ್ಲನು ಎಂಬ ವಿಶ್ವಾಸ ಅವನಿಗೆ. ಆದುದರಿಂದ ಭೀಮನಂತೆ ಎದೆಯನ್ನು ನೆಟ್ಟನುತ್ತ ನಡೆದನು ನಾರಾಯಣನು ವಿರಾಟದೊರೆಯ ಆಸ್ಥಾನಕ್ಕೆ— ಅರ್ಥಾತ್ ಉಪ್ಪಿಟ್ಟಿನಂಗಡಿಯ ಮಾಲಕನೆಡೆಗೆ.... ಅಂಗಡಿಯ ಮುಂದಣ ಚಪ್ಪರದಲ್ಲಿ ಕುಳಿತವನೆ ಮಾಲಕನು ಎಂದು ಹೇಳುವ ಕಾರಣವೆ ಇರಲಿಲ್ಲ. ಚಕ್ರವರ್ತಿಗೆ ಚಿಹ್ನಗಳಿರುವವಂತೆ— ಅಹುದೊ ಅಲ್ಲವೊ? – ಚಹದಂಗಡಿಯ ಮಾಲಕನಿಗೆ ಮಾತ್ರ ಚಿಹ್ನಗಳಿರುವುದು ನಿಜ. (ಕ್ಷೀರಸಾಗರದಲ್ಲಿ ಒರಗಿದ ವಿಷ್ಣುವಿಗೆ ಒಲಿದ ಲಕ್ಷ್ಮಿಯು ಚಹದಂಗಡಿಯವನಿಗೆ ಒಲಿಯುವುದು ಆಶ್ಚರ್ಯವೆ ? ಇದ್ದಷ್ಟು ಕ್ಷೀರವನ್ನೆ ಸಾಗರವನ್ನಾಗಿ ಮಾಡುವ ಮಹಾಮಾಯಿಯವನು.) ಲಕ್ಷ್ಮಿಯು ಅವನ ದಾಸಿಯಾಗಿದ್ದಾಳೆ; ಎರಡೂ ಕಿವಿಗಳಿಂದ ಜೋತುಬಿದ್ದಿದ್ದಾಳೆ, ಎರಡೂ ಕೈಗಳಲ್ಲಿ ಕುಣಿಯುತ್ತಲಿದ್ದಾಳೆ, ಬೆರಳುಗಳಲ್ಲಿ ಬಳುಕುತ್ತಲಿದ್ದಾಳೆ ಮಾಲಕನ ಲಕ್ಷ್ಮಿ. ಅಷ್ಟೇಕೆ ಹೊಲಸಾದ ಹರಕಾದ ಬಟ್ಟೆಗಳನ್ನು ತೊಟ್ಟುದರಿಂದ ಸಾಕ್ಷಾತ್ ವಿಷ್ಣುವೆ ದಸರಾಯುವವನ ( ಬೇಕಾದರೆ 'ಗೋಪಾಲ' ಎನ್ನಿರಿ ) ವೇಷದಿಂದ ಅವತರಿಸಿದಂತೆ ಕಾಣುತ್ತಿದೆ ಮಾಲಕನ ಮೂರ್ತಿ. ಅದಕ್ಕೆಂದೇ ನಾರಾಯಣನಿಗೆ ತಟ್ಟನೆ ಹೊಳೆಯಿತು ಇದೇ ವ್ಯಕ್ತಿಯು ಚಹ-ಸಾಗರದೊಡೆಯ ಶ್ರೀ 'ಉಪ್ಪಿಟ್ಟಿನ ನಾಥ' ಎಂದು.... ಅವನೆಡೆಗೆ

ನಡೆಯುವಾಗ ಭಯ ಉಂಟಾಯಿತು ನಾರಾಯಣನಿಗೆ, ತಾನೀಗ ತಿಂದ ಉಪ್ಪಿಟ್ಟಿನ ಹಣ ಕೇಳಿದರೆ ಗತಿ ಏನು, ಎಂದು; ಭಕ್ತಿ ಉಂಟಾಯಿತು ನಾರಾಯಣನಿಗೆ ಅವನ ಎಣ್ಣೆ ಸುರಿಯುವಂತಹ ಬಟ್ಟೆಗಳನ್ನು ನೋಡಿ, "ನೀನು ಉಪ್ಪಿಟ್ಟಿನೊಳಗೋ ಉಪ್ಪಿಟ್ಟು ನಿನ್ನೊಳಗೋ?" ಎಂಬ ಭಾವನಾ-ನಾದದಿಂದ; ಆದರ ಉಂಟಾಯಿತು ನಾರಾಯಣನಿಗೆ, ತನ್ನನ್ನು ಎದುರಿಸಲು ಎದ್ದು ನಿಲ್ಲಲು ಹವಣಿಸುವವನಲ್ಲ, ಎಂದು.

"ಬನ್ನಿ ಸ್ವಾಮಿ" ಎಂದು ನಕ್ಕಿತು ಚಿನ್ನದ ಹಲ್ಲಿನ ಬಾಯಿ, ತೂಗಿದುವು ಚಿನ್ನದ ಹರಳುಗಳ ಕಿವಿ, ಮುಗಿದುವು ಚಿನ್ನದ ಕಡಗಗಳ ಕೈ.

ನಾರಾಯಣನು ಸುತ್ತಲೂ ನೋಡಿದನು– ಸೃಷ್ಟಿಯನ್ನು ಪರೀಕ್ಷಿಸುವವನಂತೆ. ನಿಜವಾಗಿ ನೋಡಿದ್ದು ಮತ್ಯಾರಾದರೂ ತನ್ನ ಹಿಂದಿನಿಂದ ಬರುತ್ತಿರುವರೋ ಇಲ್ಲವೆ "ಸ್ವಾಮಿ" ಎಂಬ ಬಹುಮಾನಾರ್ಥಕಪದ-ಪ್ರಯೋಗವು ತನಗಾಗಿಯೋ ಎಂದು ತಿಳಿದುಕೊಳ್ಳಲು. ಸಂಕಟಸಮಯದಲ್ಲಿ ಹೆದರಿ ಓಡಿಹೋಗುವ ಸಂಬಿಗೆ–ಗೇಡಿ ಗೆಳೆಯನಂತೆ ಮುಳುಗುತ್ತಲಿರುವ ಸೂರ್ಯನ ಹೊರತಾಗಿ ಮತ್ತ್ಯಾರು ಇರಲಿಲ್ಲ ನಾರಾಯಣನ ಹಿಂದೆ.

"ಬನ್ನಿ ಸ್ವಾಮಿ" ಎಂದನು ಮೂಲೋಕಗಳ ಶೇಷ ( ಧನ ) ಶಾಯಿ. ರುಚಿಯಿಂದಲೊ ಹೆದರಿಕೆಯಿಂದಲೊ ತಿಂದ ಉಪ್ಪಿಟ್ಟು ಮತ್ತೆ ಬಾಯಿಗೆ ಬಂದಂತಾಯಿತು ನಾರಾಯಣನಿಗೆ.

"ಎಷ್ಟು?"

ಟಣ್ಣನೆ ಜಿಗಿದನು ನಾರಾಯಣನು—ನಿಂತಲ್ಲಿಯೆ. ಹೆದರಿಕೆಯ ಮೊದಲನೆಯ ಕ್ಷಣದಲ್ಲಿ ಓಡಬೇಕೆಂದಿದ್ದ. ಅಷ್ಟರೊಳಗೆ ಚಪ್ಪರದಲ್ಲಿ ಇನ್ನೊಂದು ವ್ಯಕ್ತಿ ಕಾಣಿಸಿತ್ತು. ಆ ಸದೃಢಕಾಯವನ್ನು ನೋಡಿ——

"ಎಷ್ಟೋ?" ಗದ್ದರಿಸಿದನು ಮಾಲಕನು.

"ನಾಳೆ ಗೊಳ್ಳೂರ ಸಂತಿಗೆ ಹೋಗಿ ಬರ್ತೀನ್ರಿ ಛೆಂಜಿ ಬಸ್ಸಿಗೆ—" ಎಂದು ಹಲ್ಲು ಕಿರಿಯಿತು ಆ ವ್ಯಕ್ತಿ.

"ನಾಳೆಗೀಳೆ ಕೇಳೋದಿಲ್ಲ ನಾವಿನ್ನು——"

ನಾರಾಯಣನಿಗೆ ತಿಳಿಯಿತು ' ಇದು ಹಳ್ಳಿಯ ಆರ್ಥಿಕ ಪರಿಸ್ಥಿತಿಯ ಪ್ರಶ್ನೆ ಎಂದು. ಹೆದರಿಕೆಯೂ ಹೋಗಿತ್ತು ಇಷ್ಟರಲ್ಲಿ, ಅದಕಾಗಿ ನಾಚಿಕೆ ಬಂದಿತು ಹುಚ್ಚನಂತೆ ತಾನು ಚಿಗಿದುದಕ್ಕೆ.

" ಕಲ್ಲು ತಾಕಿತೇನೊ? " ಎಂದನು ಚಹಚಕ್ರವರ್ತಿ— ನಾರಾಯಣನು ಚಿಗಿದುದನ್ನು ನೋಡಿ.

" ಇಲ್ಲ— ಕಾಲೊಳಗ–ಆಂ– ಕಪ್ಪೆ ಬಂದಿತು– ಹಂ– " ಎಂದು ಹುಚ್ಚು ನಗೆ ನಕ್ಕ ನಾರಾಯಣನು. ತನಗೆಯೆ ಆಶ್ಚರ್ಯವಾಯಿತು. ಬೇಸಗೆಯಲ್ಲಿ ಕಪ್ಪೆ! ಇಷ್ಟೊಂದು ಕಲ್ಪನಾಶಕ್ತಿ ಇದ್ದ ತಾನು ಇಂದಿಲ್ಲ ನಾಳೆ ಕವಿಯಾಗಬಹುದು ಎನ್ನಿಸಿತು. ಮುಳುಗುವ ಸೂರ್ಯನನ್ನು ಮತ್ತೊಮ್ಮೆ ನೋಡಿದನು.

" ನಾಳೆ ಕೊಡ್ತೇನ್ರಿ ಧೆಂಜೀಗ ಸಂತೀಯಿಂದ ತಿರುಗಿ ಬರೋವಾಗ " ಎಂದಿತು ಸದೃಢಕಾಯದ ವ್ಯಕ್ತಿ.

" ನಾಳೆ–ನಾಳೆ! ನೀನು ತೀವ್ರ ಕೊಟ್ಬಿಡೊ ಇನ್ನು........ ನಿಮಗ ದಿನಾಲು ತಿಂಡಿ ಕೊಡ್ಬೇಕು, ಮತ್ತೆ ಕೊಟ್ಟದರ ಲೆಕ್ಕ ಇಡ್ಬೇಕು.. ಈಗಿನದೆಷ್ಟು? "

" ಎಷ್ಟ–ಅನ್ನಾಕ ನಾಯೇನ ಲಗ್ನ ಮಾಡಿಸೀನೇನ್ರಿ....ಛಾ (ಚಹ) ದ್ದೊಂದು ದುಡ್ಡು. "

" ಒಂದು ದುಡ್ಡಿನ ಚಹ ನಿಮ್ಮ ಮುತ್ತಜ್ಜನ ಕಾಲದೊಳಗ ಇದ್ದಿರಬೇಕು—ಈಗಿನ ದಿವಸ್ದೊಳಗ ದುಡ್ಡಿಗೆ ಚಹ— "

" ಆಗಿನ ಧಿನ ಈಗಿನ ಧಿನ ಬ್ಯಾರೀನೆ (ಬೇರೆ) "

" ಅದಕ್ಕೇ ದುಡ್ಡಿಗೆ ಚಹ **ಈಗ** ಸಿಗೋದಿಲ್ಲ ಅಂದದ್ದು "

" ನಾನೂ ಅದ್ನೆ ಅಂತೀನ್ರಿ. ಹಿಂದ್ನಿನ್ನಾಂಗ ಈಗ ಸಿಕ್ಕೀಧ್ಯಾಂಗ್ರಿ? ಹಿಂದ್ಕ ಶಕ್ರಿ ಶಿಗ್ತಿತ್ತು.... ಈಗ ಶಕ್ರಿ—"

" ಏನಂತೀಯೋ? " ಗದರಿಸಿದನು ಶ್ರೀ ಚಹಾಪತಿ. " ಸಕ್ರಿ ಅಂತ! ಕುಡಿದ ಚಹಾದ ಎರಡು ದುಡ್ಡು ಕೊಡೋದಾಗೋದಿಲ್ಲ— ಮತ್ತೆ ಮಾತಾಡ್ತಾನ! "

" ಬೇಡಿದ್ರಟ ಶಕ್ರಿ ಹಾಕ್ತಾರ್ನ? ಮೂರ್ದುಡ್ಡು ಕೊಡ್ತೀನಿ. "

“ಈಗ ನೀನು ಕೊಡುವವನೋ ಇಲ್ಲೋ? ನಿನ್ನ ಸಕ್ರೀನೂ ಬೇಡ, ನೀನು ಚಹ ಕುಡಿಯೋದೂ—”

“ಎಲ! ಮಾಥೇಳ್ಬೆ ಸುಮ್ಮಾಕ — ಮುನಸೀಗ ಹಚ್ಕೊಂತಾರಲ್ಲ ಅಂತೀನಿ! — ಕೊಡ್ತೀನ್ರಿ.... ಬೇಡಿದ್ರಟ ಶಕ್ರಿ—”

“ಬೇಡಿದಷ್ಟು ರೊಕ್ಕ—”

“ಥೆಂಜಿ ಬಸ್ಸಿಗೆ ಬರ್ತೀನ್ರಿ, ಕೊಟ್ಟೀನ್ರಿ.... ಅಲ್ಲ, ಮಾತ್ಹೇಳ್ದೆ” ಎನ್ನುತ್ತ ನಡೆಯಿತು ವ್ಯಕ್ತಿ.... ನಾರಾಯಣನೂ ತನ್ನನ್ನು ನೋಡು ತ್ತಿರಲು ಆ ವ್ಯಕ್ತಿಗೆ ಒಂದು ತರದ ಏನೋಪದ ಕೆಣಕು-ನಗೆ ಬಂದಿತು. “ನೋಡ್ರಿ, ಯಣ್ಣಾ—” ನಾರಾಯಣನು ನೋಡಿದನು. ಮುಳುಗುವ ಸೂರ್ಯನ ಹೊರತಾಗಿ ಸುತ್ತುಮುತ್ತಲಿನ ಕ್ಷಿತಿಜದಲ್ಲಿ ಯಾರೂ ಕಾಣಿ ಸಲಿಲ್ಲ. ಮತ್ತೆ ವ್ಯಕ್ತಿಯನ್ನು ನೋಡಿದನು. “ನೋಡ್ರಿ, ಯಣ್ಣಾ’ ಎಂದು ಮಾತು ಮುಂದೆ ಸಾಗಿಸಿತು ವ್ಯಕ್ತಿ, “ಅಲ್ಲ ಮಾತ್ಹೇಳಿದ್ರ ಸಿಟ್ಮಾಡ್ತಾರ. ರೊಕ್ಕ ಕೊಡೋದಿಲ್ಲಂದ್ನೆ ನಾ? ಕೊಡ್ತೀನಿ. ಛಾಜ್ಜೋಡಿ (ಚಹದ ಕೂಡ) ಒಂದೀಟ ಸಕ್ರಿ ಹಾಕಿದ್ರ ಥೆಂಜೀ ಯಾಳಿಗೆ (ವೇಳೆಗೆ) ಬಾಯಿ ಶೆಂವಿ (ಸವಿ) ಆಗ್ತದ ಅಂಬೋ ಮಾತು—ಅಲ್ಲ ಮಾತ್ಹೇಳ್ದೆ—ಇದ್ದೂರ ಮುವಾರ (ವ್ಯವಹಾರ), ಕೊಡ್ದೇ ನಡೆದೀತ್ರಿ? ಏನೋ ಮಾತ್ಹೇಳ್ದೆ— ಹಹಹ!” ನಗುತ್ತ ಸಾಗಿತು ವ್ಯಕ್ತಿ ತಲೆತೂಗುತ್ತ. ತಾನು ಹುಚ್ಚನೊ ಆ ವ್ಯಕ್ತಿ ಹುಚ್ಚೊ ಎಂದು ದಿಗಿಲು ನಾರಾಯಣನಿಗೆ ಈ ಉಪನ್ಯಾಸ ವನ್ನು ಕೇಳಿ. ಇದೂ ಒಂದು ಮಾದರಿ, ಇದನ್ನು ಸುಧಾರಿಸಬೇಕಾದರೆ ಔಷಧಾಲಯ ಬೇಕು, ಉಪ್ಪಿಟ್ಟಿನಾಲಯ ನಡೆಯುವದಿಲ್ಲ, ಎಂದು ಕೊಂಡನು. “ಮೂರ್ಖರು! ಕೊಡುವ ಯೋಗ್ಯತೆ ಇಲ್ಲದೆ ಕೊಳ್ಳು ವದು ಯಾಕೊ? ಹಣವಿಲ್ಲದ ಹೆಣಗಳು! ಯಾಕೆ ತಿಂದು ಸಾಯು ವರೊ?” ಎಂದು ಕ್ಷಣಮಾತ್ರ ಶಹರ – ಸಂಸ್ಕೃತಿಯ ಆವೇಶದಿಂದ ನಡೆದನು ಕಿಸೆಯಲ್ಲಿ ಕೈ ಸಿಕ್ಕಿಸಿ————ತಡೆದನು ಒಮ್ಮೆಲೆ ಕಿಸೆಯಲ್ಲಿ ಕೈ ಸಿಕ್ಕಿಸಿಕೊಂಡೇ. ತನಗೂ ಹಣವಿಲ್ಲ!

“ತುಡುಗರ ಜಾತಿ!”

ತಟ್ಟನೆ ತಿರುಗಿದನು ನಾರಾಯಣನು ಕವಾಯಿತಿನ ಶಿಸ್ತಿನಿಂದ.

ಚಹ–ಪತಿಯ ಮುಖವನ್ನು ನೋಡಿ ಬೆದರಿದನು. ಆ ಮುಖದಲ್ಲಿ ತಿರಸ್ಕಾರವಿದೆ, ಕೋಪವಿದೆ, ದರ್ಪವಿದೆ.

" ತುಡುಗರ ಜಾತಿ " ಎಂದು ಉಸಿರೆಳೆದು ಶ್ರೀಚಹಾಕಾಂತ. " ಜೇಬಿನಲ್ಲಿ ಕಾಸು ಇಲ್ಲಾ ಅನ್ನೋದು ಗೊತ್ತು, ಆದರೂ ಬಂದು ಚಹ ಕುಡಿದ ಹೋಗ್ತಾರೆ ! ಕಳ್ಳರು ! "

ನಾರಾಯಣನಿಗೆ ಪೇಚು ಬಿದ್ದಿತು, ಸದ್ಯದ ತನ್ನ ಪರಿಸ್ಥಿತಿಯ ಮೂಲಕ ಆ ಮಾಲಕನ ಮಾತಿಗೆ ಒಪ್ಪಬೇಕೆ, ತಾನೂ ಕಳ್ಳರಜಾತಿಗೆ ಸೇರಬೇಕಾಗುವುದು. ಒಪ್ಪದಿದ್ದರೆ ಆ ಮಹಾಶಯನು ಪರಿಸ್ಥಿತಿ ಗೊತ್ತಾದ ಮೇಲೆ ಅದೇ ಮಾತನ್ನು ತನಗೂ ಆಡಬಹುದು. ಮಾ–ಡ–ಬೇ–ಕ್— ಮಾಡುವದೇನು ? ಉಭಯಪಕ್ಷದಲ್ಲೂ ಕಳ್ಳರ ಕುಲ ತನಗೆ ತಪ್ಪಿದ್ದಲ್ಲ, ಕಳ್ಳರ ಕೈಫಿಯತ್ತನ್ನೆ ವಹಿಸಬೇಕು, ಬಡವರಾದ ಅವರು ಕಳ್ಳರಲ್ಲ – ಆ ಬಡವರ ರಕ್ತ ಬಸಿದು ಕಪ್ಪಿನಲ್ಲಿಟ್ಟು ಕುಡಿಸಿ ಕಾಸನ್ನೆತ್ತಿ ಹಾಕುವ ನೀನೇ ಕಳ್ಳ– ಎಂದು ಹೇಳಿಬಿಡಬೇಕು ಎನ್ನಿಸಿತು. ಅಷ್ಟರಲ್ಲಿ ನಾಲಗೆ ಕಚ್ಚಿಕೊಂಡನು.

" ಬನ್ನಿ, ಸ್ವಾಮಿ "

ನಾರಾಯಣನ ಪೇಚು ದೊಡ್ಡದಾಯಿತು. ಈ ' ಸ್ವಾಮಿ ' ಪದಪ್ರಯೋಗವು ಇನ್ನೆಷ್ಟೊತ್ತು ಉಳಿಯುವುದೊ– ಎಂದು ಮೈ ಜುಮ್ಮೆಂದಿತು. ಹಣ ಕೊಡದೆ ಹೋದ ಆ ವ್ಯಕ್ತಿಯನ್ನು ನೋಡಿದರೆ ಸ್ಫೂರ್ತಿಯಾಗಲಿ ಉತ್ಸಾಹವಾಗಲಿ ಬರಬಹುದೇನೊ ಎಂಬ ಆಶೆಯಿಂದ ಮತ್ತೊಮ್ಮೆ ಆ ಕಡೆ ನೋಡಿದನು.

" ಬನ್ನಿ, ಬನ್ನಿ, ಸ್ವಾಮಿ "

ನಿರುಪಾಯನಾಗಿ ನಡೆದನು ನಾರಾಯಣನು ಸಾವಕಾಶವಾಗಿ ಹೆಜ್ಜೆಗಳನ್ನಿಡುತ್ತ, ಸಾವಿನ ಎದುರು ನೋಡುತ್ತ.

" ಅದೆಲ್ಲ ಜನ ಹೀಗೇ, ಸ್ವಾಮೀ. " ನಾರಾಯಣನು ಹುಚ್ಚು ನಗೆಯೊಂದನ್ನು ನಕ್ಕನು. (ಇನ್ನೂ ಇದೆ ಸ್ವಾಮಿಪದಪ್ರಯೋಗ ಎಂದುಕೊಂಡನು) " ಈ ಜನ ಎಲ್ಲ ಹೀಗೇ....ಬನ್ನಿ, ತಮಗೇನು ಬೇಕು?.... ಹಳ್ಳಿಯ ಜನ ಅಂದ್ರೆ ಹೀಗೇ. ವಿಶ್ವಾಸ ಇಟ್ಟರೆ ಕೊಡೋದೇ ಇಲ್ಲ,

ವಿಶ್ವಾಸ ಇಡದಿದ್ರೆ ವ್ಯವಹಾರ ನಡೆಯೋದಿಲ್ಲ, ಒಟ್ಟು ಈ ಹಳ್ಳಿಯವರ ಕೂಡ ನಡೆಯೋದೇ-ಬನ್ನಿ, ಬನ್ನಿ, ಸ್ವಾಮಿ—ಅವರಿಗೂ ನಮಗೂ ಬಿಟ್ಟಿದ್ದಲ್ಲ—ತಮಗ—?-ಆಂ-ಬನ್ನಿ, ಬನ್ನಿ.''

''ಬನ್ನಿ''ಯ ಬಡಿತಕ್ಕೆ ಬೆನ್ನೆಲುಬು ಮುರಿದಂತಾಯಿತು ನಾರಾಯಣನಿಗೆ. ತಾನು ಈಗಾಗಲೆ ಉಪ್ಪಿಟ್ಟು ತಿಂದ ವರ್ತಮಾನ ಈ ಹೆಡ್ ಆಫೀಸಿಗೆ ಮುಟ್ಟಿಲ್ಲೇನೊ — ಎಂದು ಸಮಾಧಾನ ತಂದುಕೊಂಡು ಚಪ್ಪರದೊಳಗೆ ನಡೆದನು. ಚಪ್ಪರವು ಕೆಳಗಿದ್ದುದರಿಂದ ತಲೆವಾಗಿ, ವಿನಯದಿಂದ ಬರಬೇಕಾಯಿತು. ತಲೆಬಾಗಿದುದರಿಂದ ಮೂಗು ನೆಲವನ್ನು ಮುಟ್ಟಿದಂತೆನಿಸಿತು. ಏನೊ, ಎಲ್ಲಿಂದಲೊ ತಡೆಯದ ವಾಸ ಬಡಿಯಿತು ಮೂಗಿಗೆ. ಮೂಗು ಮುಚ್ಚಿಕೊಳ್ಳಲು ಕೈ ಎತ್ತಿದನು ಅಷ್ಟರಲ್ಲಿ ಪಾಲಕನು ಎದ್ದು ಕೈಮುಗಿದನು. ಎಚ್ಚರವಾದಂತಾಯಿತು ನಾರಾಯಣನಿಗೆ. ಮೂಗು ಮುಚ್ಚಿಕೊಂಡಿದ್ದರೆ ತನಗಾದ ಅಸಹ್ಯವನ್ನು ಈ ಪರಲಕ್ಷ್ಮೀಪತಿಗೆ ತೋರಿಸಿದಂತಾಗಿ ಎಷ್ಟು ಅನರ್ಥವಾಗುತ್ತಿತ್ತು! ತಾನು ಮೂಗು ಮುಚ್ಚಲು ಎತ್ತಿದ ಕೈ ನಮಸ್ಕಾರಕ್ಕಾಗಿ ಮುಗಿದನೆಂದು ತಿಳಿದನಲ್ಲವೆ? ಒಳಿತೇ ಆಯಿತು. ''ಬನ್ನಿ, ಬನ್ನಿ, ಸ್ವಾಮಿ. ತಮಗ—''

''ಆ ಮನುಷ್ಯ ದಿನಾಲು ಬರುವನೇನು ತಮ್ಮ ಉಪಹಾರ ಗೃಹಕ್ಕೆ?'' ಎಂದು ತಿದ್ದಿ ತೀಡಿ ವ್ಯಾಕರಣ ಶುದ್ಧವಾಗಿ ಕೇಳಿದನು ನಾರಾಯಣನು. ಹಾಗೆ ಕೇಳುವುದರಲ್ಲಿ ಅವನಿಗೆ ಎರಡು ಉದ್ದೇಶಗಳು. ಒಂದು ವಿಷಯಾಂತರವನ್ನು ಮಾಡಿದಂತಾಗುವುದು; ಇನ್ನೊಂದು, ಎಂತಹ ಪ್ರಸಂಗ ಬಂದೀತು ಹೇಳಲು ಬರುವುದಿಲ್ಲ – ಅಷ್ಟರೊಳಗೆಯೆ ತಾನು ಸುಶಿಕ್ಷಿತ, ಸುಸಂಸ್ಕೃತ ಎಂಬುದು ತಿಳಿಯಲಿ ಇವನಿಗೆ, ಎಂದು.

''ದಿನಾಲು?'' ಮೂಗು ಏರಿಸಿದನು ಉಡುಪಿನಾಥನು. ''ಎಷ್ಟು ದಿವಸ ಬಂದರೂ, ಕೊಡುವುದು ಅಷ್ಟೆ. ನಮಗೂ ಗೊತ್ತು. ಆಯ್ತು. ಬಡವನಿಗೆ ಅನ್ನದಾನ ಮಾಡಿದ್ದಾಗೆ ಅಂತ ತಿಳಿದುಕೊಂಡು ಬಿಡ್ತೀವಿ.''

"ಬಡವರ ಸ್ಥಿತಿಗತಿಗಳನ್ನು ನೋಡಿಕೊಳ್ಳಲಿಕ್ಕೆ ಅಂತ ಬಂದವನು ನಾನು—"

"ಮಾಮಲೇದಾರರ ಕೋರ್ಟಿನಿಂದ ಬಂದವರೇನು ತಾವು?"

"ಮಾಮಲೇದಾರ್ರ —!" ನಾರಾಯಣನಿಗೆ ಏನೂ ತೋಚ ದಂತಾಗಿ ತಡೆದನು.

ಉಪಹಾರಗೃಹದ ಉಪೇಂದ್ರನಿಗೆ ಮುಗುಳ್ನಗೆ. "ತಾವು ಮಾಮಲೇದಾರ್ರ ಕೋರ್ಟಿನವರು ಅಂತ ನಾನು ಯಾರಿಗೂ ಹೇಳೋದಿಲ್ಲ ಬಿಡಿ, ಸ್ವಾಮಿ....ಏನೊ, ತಮ್ಮನ್ನ ನೋಡಿದ ಕ್ಷಣ ನನಗೆ ಹಾಗೇ ತೋರಿತು, ಬಾಯಿಂದಾಡಿ ಬಿಟ್ಟೆ."

ನಾರಾಯಣನಿಗೆ ತೊಡಕು ಬಿಟ್ಟಂತಾಯಿತು. ಪ್ರತಿವರ್ಷ ಇದೇ ಸಮಯಕ್ಕೆ ಕೋರ್ಟಿನವರು ಯಾರಾದರೂ ಬರುತ್ತಿರಬೇಕು, ತಾನೂ ಅಂತಹರಲ್ಲೊಬ್ಬ ಎಂದು ಇವನಿಗೆ ಕಲ್ಪನೆಯಾಗಿದೆ—ಎಂದು ಊಹಿಸಿದನು. ಒಳಿತೇ ಆಯಿತಲ್ಲ—ಎಂದುಕೊಂಡನು. ಯಾರ ಹೆಸರಿನಿಂದಲೆ ಆಗಲಿ, ಕಿಸೆ ಯೊಳಗೆ ಕಾಸು ಇಲ್ಲದೆ ಕಾಕಪಿಂಡ ದೊರೆತರೆ ಕೆಟ್ಟಿತೇನು? ಆದರೂ ತಾನೊಬ್ಬ ಅಮಲ್ದಾರ ಎಂದು ಬಾಯಿಬಿಚ್ಚಿ ಹೇಳುವ ಹುಚ್ಚು ಹುರುಪು ಮಾತ್ರ ನಾರಾಯಣನಿಗೆ ಬರಲಿಲ್ಲ. ಯಾರಿಗೆ ಗೊತ್ತು? ತಾನು ಹಾಗೆ ಹೇಳಿದ ಮರುಗಳಿಗೆಗೆ ನಿಜವಾದ ಅಮಲ್ದಾರನು ಬಂದರೆ—ಇತ್ತ,ತಾನು ಅಮಲ್ದಾರನಲ್ಲವೆ ಅಲ್ಲ—ಎಂದೂ ಹೇಳುವಂತಿಲ್ಲ, ತಿಂದುದಕ್ಕೆ ಹಣ ಕೇಳಿ ದರೆ? ಅಂತೂ ಹೊಟ್ಟೆಹೊರೆದುಕೊಳ್ಳುವ ಜ್ಯೋತಿಷಿಯಂತೆ ಮೈಮೇಲೆ ಪ್ರಸಂಗ ಬಾರದ ಹಾಗೆ ಮಾತನಾಡುವದನ್ನು ನಿಶ್ಚಯಿಸಿದನು.

"ನೀವು ಹೇಗೆ ತಿಳಿದುಕೊಂಡಿರಿ?" ಎಂದು ತಾನೂ ಮುಗುಳ್ನಗೆ ಯಿಂದಲೆ ಕೇಳಿದನು.

"ಮುಖಲಕ್ಷಣ ಮುಚ್ಚೋದಿಲ್ಲ, ಮಹಾಸ್ವಾಮಿ!"

(ಮಾಮಲೇದಾರಿಕೀ ಜಯ! ನಾನೀಗ ಸ್ವಾಮಿಯಲ್ಲ ಮಹಾ ಸ್ವಾಮಿ—ಎಂದು ಒಳಗಿಂದೊಳಗೆಯೆ ಉಬ್ಬಿದನು ನಾರಾಯಣನು.)

"ನಾನು ಅಮಲ್ದಾರನಲ್ಲ – ನಿಜವಾಗಿ" ಇದನ್ನು ಹೇಳುವಾಗ ನಾರಾಯಣನಿಗೆ ಧೈರ್ಯ, ತಾನೆಷ್ಟು ಹೇಳಿದರೂ ಈ ಮುಟ್ಠಾಳನು

ನಂಬುವದಿಲ್ಲ ಎಂದು. ಬಿಡವಲ್ಲನೇಕೆ? ತಾನಂತೂ ಸತ್ಯವನ್ನೆ ಹೇಳಿದಂ ತಾಯಿತೊ ಇಲ್ಲವೊ? ದೇವಾ, ನೀನೇ ಸಾಕ್ಷಿ—ಎನ್ನುವವನಂತೆ ಮೇಲೆ ನೋಡಿದನು.

ಮಾಲಕನಿಗೆ ವಿಶ್ವಾಸವಾದೀತೆ ಆ ಮಾತಿನಲ್ಲಿ? ಇಂದಿಗೆ ೫-೬ ವರ್ಷಗಳಾದುವು ಅಲ್ಲಿ ತಾನು 'ಕಾಫಿ—ಕುಟೀರ'ವನ್ನು ಕಟ್ಟಿಸಿ. ಕಣ್ಣಾರೆ ನೋಡಿದ್ದಾನೆ ಪ್ರತಿಯೊಂದು ಬೇಸಗೆಗೆ ಅಮುಲ್ದಾರರು ಬರುವುದನ್ನು. ಅಮುಲ್ದಾರರು ಬರುವರು, ತನ್ನಲ್ಲಿ ಬಂದು ಹೋಗುವರು, ಬಡವರ ವಿಚಾರಣೆ ಮಾಡುವರು, ಮಳೆ—ಬೆಳೆಗಳ ಸ್ಥಿತಿಗತಿಗಳನ್ನು ನೋಡಿಕೊಳ್ಳು ವರು, ರೈತರ ವಿಷಯವಾಗಿ ತನ್ನನ್ನು ಕೇಳುವರು. ಇದೆಲ್ಲ ಆ ಮಾಲಕ ನಿಗೆ ಪ್ರತಿವರ್ಷದ ಅನುಭವ. ಹೀಗಿದ್ದು ನಾರಾಯಣನು ಅಮುಲ್ದಾರ ನಲ್ಲವೆಂದರೆ ನಂಬುಗೆಯಾದೀತೆ?

"ಏ ಮಾಣಿ, ಒಂದು ಸ್ಪೆಶಲ್ ಕಾಫಿ, ಉಪ್ಪಿಟ್ಟು, ದೋಸೆ— ತಾಜಾ—" ಎಂದು ಹುಕುಂ ಕೊಟ್ಟನು.

"ಪುರೀಭಾಜಿ ಇದೆ, ಬೇಕೇನು? ಮುಂಜಾನೆ ದೋಸೆ, ಈಗಿಲ್ಲ" ಎಂದು ಒಳಗಿನಿಂದ ನಿರ್ಣಯ.

ಮಾಲಕನು ಕೆರಳಿದನು. "ಈಗಿಲ್ಲ ಅಂತೇ ತಾಜಾ ಅಂತ ಹೇಳಿದ್ದು. ಸ್ಪೆಶಲ್ ಅಂತ ಕೂಗಿದ್ದು, **ನನ್ನ** ಆರ್ಡರು" ಎಂದವನೆ ನಾರಾಯಣನನ್ನು ನೋಡುತ್ತ "ಯಾರಿಗೆ ಅಂತ ತಿಳಿದಿದ್ದನೊ ಏನೊ! ಹಹ!" ಎಂದು ಹಲ್ಲು ಕಿರಿದನು.

ನಾರಾಯಣನಿಗೆ ಹೊಸತೊಂದು ತೊಡಕು. ಅಲ್ಲ, ತಾನು ಬಂದದ್ದು ಯಾಕೆ? ಇದೀಗ ಹಸಿವೆಯ ಬಾಧೆ ಕಡಿಮೆಯಾಗಿ ತಾನು ಬಂದದ್ದು ಸಮಾಜಸುಧಾರಣೆಗೆ ಎಂಬುದು ಹೊಳೆಯಿತು ಅವನಿಗೆ. ಈ ಮಾಲಕನಿಗಂತೂ ತಾನೊಬ್ಬ ಸರಕಾರೀ ಅಮುಲ್ದಾರ ಎಂದು ತಿಳಿದು ಕೊಳ್ಳುವ ಹಟವೇ ಹೊಕ್ಕಿದೆ. ಮುಂದೆ ಗತಿ! ತನ್ನ ಸತ್ಕಾರ್ಯ ಸಾಧಿಸುವ ಬಗೆ ಹೇಗೆ? ಹಳ್ಳಿಗರಲ್ಲಿ ಬೆರೆತು ಹಳ್ಳಿಗನಾಗಿ ಮೆರೆಯದ ಹೊರತು ಅವರ ಸುಖದುಃಖಗಳು ತಿಳಿಯುವಂತಿಲ್ಲ. ಅಮುಲ್ದಾರನೆಂದು ತಿಳಿದ ತನ್ನೊಡನೆ ಹಳ್ಳಿಗರು ಬೆರೆತು ನಡೆಯುವರೆಂತು? 'ಛೆ—ಇದೇನೂ

ಉಪಯೋಗವಿಲ್ಲ–ವಸ್ತುಸ್ಥಿತಿಯನ್ನು. ಹೇಳಿಯೆ ಬಿಡಬೇಕು' ಎಂದು ನಿಶ್ಚಯಿಸಿ ಹುಡುಗಿಸಿಟ್ಟ ಸತ್ಯವನ್ನು ಹೊರಗೆಳೆಯುವವನಂತೆ ಕೆಮ್ಮುವ ತಯಾರಿ ನಡಿಸಿದನು. "ಯಾರೊ ಇಲ್ಲಿಯ ಹುಂಬ ಜನಾನೆ ಬಂದವ್ರದ ಅಂತ ತಿಳಿದಿದ್ದನೊ ಏನೊ ? ಹಹ ! ಅದಕೇ ಹೇಳ್ತಾನ ದೋಸೆ ಈಗಿಲ್ಲ ಅಂತ. ಹಹ !" ಎಂದು ನಗೆ ನಗುತ್ತ, ಸುಳ್ಳು ನಗೆ ಇದ್ದು ಅದು ಅಲ್ಲಲ್ಲಿ ತಡೆಯುತ್ತಿದ್ದುದರಿಂದ ಮಾತುಗಳಿಂದ ಅದನ್ನು ತುಂಬಿಕೊಳ್ಳುತ್ತ, ಹುಬ್ಬು ಕಳೆ ಹೆಚ್ಚೆಚ್ಚು ಏರುತ್ತ, ಹೊಟ್ಟೆಯ ಮೇಲೆ ಕಯ್ಯಾಡಿಸುತ್ತ, ಸಣ್ಣದಾದ ಪೈರಣವನ್ನು ಕೆಳಗೆ ಜಗ್ಗಿಕೊಳ್ಳುತ್ತ, ಕೆಳಗಿಳಿದ ದೋತರವನ್ನು ಮೇಲೆಳೆಯುತ್ತಾ, 'ಅಮಲ್ದಾರ'ನ ಆರೈಕೆಗಾಗಿ ಚಡಪಡಿಸುತ್ತಲಿದ್ದಿತು ಮಾಲಕನ ಮೂರ್ತಿ. "ಹಹ ! ಈಗ್ಹ್ಯಾಂದ ನೋಡಿ, ಅವನಿಗೇ ಅಂತ ತಿಳಿದಿದ್ದನೊ ಏನೊ! ಹಹ! ನೋಡಿದಿರಾ ಮಹಾಸ್ವಾಮಿ. ಇಂತಹ ಜನದ ಕೂಡ ವ್ಯವಹಾರ !ದೇವರೇ ಕಾಪಾಡ್ಬೇಕು ನಮ್ಮನ್ನ . . ಹಹ...."

"ಪಾಪ ! ಬಡತನ !" ಎಂದು ತಾನಾಗಿಯೆ ಬಂದು ಬಿಟ್ಟಿತು ನಾರಾಯಣನ ಬಾಯಿಂದ.

"ಹಾಂ, ಹಾಗೆನ್ನಬೇಡಿ. ಹಾಗೆನ್ನಬೇಡಿ, ಹೆಂಹೆಂ ಸ್ವಾಮಿ !" ಎಂದು ಹಲ್ಲುಕಿರಿಯುತ್ತಲೆ ಮುಂದರಿಸಿದನು ಮಾಲಕನು ಮಾತನ್ನು.

"ಕಾಸು ಇದೆ, ಇದೆ ತುಡುಗರ ಕಡೆ. ಕೊಡೋ ಹಾಗಿಲ್ಲ-ಹೆಂ-ಕೊಡೋ ಹಾಗಿಲ್ಲ–ಲುಚ್ಚೇರು ಹಳ್ಳಿಯ ಜನ–ಲುಚ್ಚೇರು– ಲುಚ್ಚೇರು– ಹೆಂಹೆಂ ಸ್ವಾಮಿ–ಘಟಿಂಗರು–ಕೇವಲ ಘಟಿಂಗರು ಹೆಂಹೆಂ ಸ್ವಾಮಿ ! ಹೆಹೆ !"

ನಾರಾಯಣನ ತೊಡಕಿನ ಮಾಲೆ ಇನ್ನೂ ದೊಡ್ಡದಾಯಿತು. ಒಂದು, 'ಹೆಂಹೆಂಸ್ವಾಮಿ' ಎನ್ನುವುದು 'ಮಹಾಸ್ವಾಮಿ'ಗಿಂತ ಮೇಲ್ತರಗತಿಯ ಬಿರುದೊ ಕೀಳ್ತರಗತಿಯದೊ, ಎಂದು; ಇನ್ನೊಂದು, ಒಂದು ನಿಮಿಷ ಮುಂಚೆ 'ಹಳ್ಳಿಗರಿಗೆ ಹಣ ಇಲ್ಲವೆ ಇಲ್ಲ' ಎಂದು ಹೇಳಿದವನು ಈಗ ಅದಕ್ಕೆ ವಿರುದ್ಧವಾಗಿ ಮಾತನಾಡುವನಲ್ಲ, ಎಂದು....ಕೊನೆಗೆ ಬಿಟ್ಟಿತು, ಎರಡನೆಯ ತೊಡಕು ಮೊದಲು ಬಿಟ್ಟಿತು ನಾರಾಯಣನಿಗೆ. ತಾನು 'ಅಮಲ್ದಾರ' ಎಂಬುದನ್ನು ಮರೆತೇ ಬಿಟ್ಟಿದ್ದನು ಇಷ್ಟುವಲ್ಲಿ.

ನಿಜ. ತಾನು 'ಅಮಲ್ದಾರ'. ಅದಕ್ಕೆಂದೇ ಸುಳ್ಳು ರಿಪೋರ್ಟನ್ನು ಕೊಡುತ್ತಿರುವ ಈ ತುಡುಗ. ಮಳೆ ಹೋಗಲಿ, ಹುಳ ಬೀಳಲಿ, ಭೂಮಿ ನಡುಗಲಿ, ಆಕಾಶ ಕಳಚಲಿ–ಏನಿಲ್ಲೆಂದರೂ ೧೨ ಆಣೆ ಬೆಳೆ ಎಂದು ಅಮಲ್ದಾರರಿಗೆ ರಿಪೋರ್ಟು ಮಾಡುವ ರೂಢಿ ಇದೆ ಎಂದು ನಾರಾಯಣನು ರಾಷ್ಟ್ರೀಯ ಪತ್ರಗಳಲ್ಲಿ ಓದಿದ್ದನ್ನು ಸ್ಮರಿಸಿಕೊಂಡನು. ಓಹೋ! ಈ ಕಳ್ಳನಿಗೆ ಅಮಲ್ದಾರರ ಮರ್ಜಿ ಸಂಪಾದಿಸಬೇಕಾಗಿದೆ! ಅದಕ್ಕೆಂದೇ ೧೨ ಆಣೆ ಬೆಳೆ ಎಂಬ ಸೂಚನೆಯ ವರದಿಯನ್ನು ಒಪ್ಪಿಸುತ್ತಿರುವನಲ್ಲವೆ? ನೀಚ! ಹೇಸಿ! ತನ್ನ ವ್ಯವಹಾರವಿದೆ, ಲಾಭವಿದೆ, ದುಡ್ಡು ದೊರಕುತ್ತಲಿದೆ,ಆದರೂ...ಮನಸಿನಲ್ಲಿಯೆ ನಕ್ಕುಬಿಟ್ಟ ನಾರಾಯಣ ತನ್ನ ವಿಚಾರಕ್ಕಾಗಿ. ಪ್ರತಿವರ್ಷ ಸರೆಯ ಅಂಗಡಿಯ ಮಾಲಕರೂ ಚಹದಂಗಡಿಯ ಮಾಲಕರೂ 'ಖಾನಸಾಹೇಬ–ರಾವಸಾಹೇಬ' ಆಗುತ್ತಿರುವುದು ಅವನ ಲಕ್ಷ್ಯಕ್ಕೆ ಬಂದಿತು. ಹುಂ! ಅಂತೂ–'ರಾವಸಾಹೇಬ ಕಾಫಿಕ್ಲಬ್‌ಕರ' ಆಗುವ ಆಕಾಂಕ್ಷೆ ಇವನಿಗೆ! "ತುಡುಗರು, ಕಳ್ಳರು, ಲುಚ್ಚೇರು, ಘಟಿಂಗರು!" ಮಾಮಲೇದಾರನ ಗೋತ್ರ–ಗೌರವಕ್ಕೆ ಸೇರಿಸಿದ್ದಿಲ್ಲವಾದರೆ ಇವೇ ಬಿರುದು ತನಗೂ ದೊರಕುತ್ತಿದ್ದುವು!

"ಮಹಾ ಘಟಿಂಗರು–ಯಂ–ಯಾಂ ಸಾಮಿ–ಮಹಾ! ಕಾಸಿದೆ, ಕೈ ಬಿಚ್ಚೋದಿಲ್ಲ–ಯಾಂ ಸಾಮಿ–ಯಂಹ!" ಎಂದವನೆ ಸುಳ್ಳುನಗೆಯ ಸ್ಟಾಕು (stock) ತೀರದಂತಾಗಲು ಒಳಗೆ ನೋಡುತ್ತ ಗದ್ದರಿಸಿದನು. "ಏ–ಸ್ಪೆಶಲ್ ತಯ್ಯಾರ ಆಯ್ತೊ?–ಏನೂ?" ಎಂದು ಮತ್ತೆ ನಾರಾಯಣನ ಕಡೆ ನೋಡಿ ಹಲ್ಲು ಕಿರಿದು, "ನಾನೇ ತಂದ್ಬಿಡ್ತೀನಿ–ಯಾಂ ಸಾಮಿ" ಎನ್ನುತ್ತ ಲಗಬಗೆಯಿಂದ ಎದ್ದು ಒಳಗೆ ಹೋದನು.

ನಾರಾಯಣನಿಗೆ ಸಮಾಧಾನವೇ ಆಯಿತು. ಈ ಹರಟೆ ಹೀಗೆಯೆ ನಡೆದಿದ್ದರೆ ಮೊದಲಿನ 'ಮಹಾಸ್ವಾಮಿ' ಕಡೆಗೆ 'ಅಸಾಮಿ'ಗೆ ಬಂದು ಮುಟ್ಟುವ ಹೆದರಿಕೆ ಇದ್ದಿತು ಅವನಿಗೆ. ತಾನೊಬ್ಬನೇ ಉಳಿಯಲು ನಾರಾಯಣನು ಚಪ್ಪರವನ್ನು ಸುತ್ತಲೂ ನೋಡಿದನು. ಕುತ್ತಿಗೆ (ಕತ್ತು) ಹಿಚುಕಿಸಂತಾಯ್ತು. ಹೊರಗೆ ನೋಡಿದನು. ಬಯಲು! ಸೂರ್ಯನು ಅದೇ ಮುಳುಗಿದ್ದಾನೆ. ಬೇಸಗೆಯ ಸಂಜೆಯಾದುದರಿಂದ

ಇನ್ನೂ ಕಾಣಿಸುತ್ತಲಿದೆ ಸುತ್ತಲಿನ ಸೃಷ್ಟಿ. ಸದ್ಯಕ್ಕೆ ಸಾಯಂಕಾಲದ ಸೊಬಗಿಗಿಂತಲೂ ಮುಂದಿನ ಹಂಚಿಕೆಯ ವಿಷಯವಾಗಿಯೆ ನಾರಾಯಣನ ತಲೆ ತುಂಬಿದೆ. ಸಾಯಂಕಾಲವೇನೊ ರಮಣೀಯವಾದಂತೆ ಕಾಣುವುದು; ಇಂದಿಲ್ಲ ನಾಳೆ ತಾನು ಕವಿಯಾಗಲಿ ಲೇಖಕನಾಗಲಿ ಆದಾಗ ಬರೆದಿಟ್ಟರಾಯಿತು, ಸದ್ಯಕ್ಕೆ ಸಂಜೆಯ ಊಟವೆಲ್ಲಿ, ಮಲಗುವುದೆಲ್ಲಿ – ಎಂಬು ಯೋಚಿಸತೊಡಗಿದನು. 'ಅಮಲ್ದಾರ' ನೆಂದು ಇದುವರೆಗೆ ತನಗೆ ಮಾನ-ಮರ್ಯಾದೆ ತೋರಿಸಿದ್ದೇನೊ ಸರಿಹೋಯಿತು. ಆದರೆ ಮುಂದಿನ ಗತಿ ಏನು ? 'ಅಮಲ್ದಾರ' ನನ್ನು ಆದಷ್ಟು ಬೇಗ ಹೊತ್ತು ಹಾಕುವ ( ಬಲುವೆಯಿಂದ ಕಳುಹಿಸುವ ) ಹವಣಿಕೆ ಜನರದು ಎಂದು ನಾರಾಯಣನಿಗೆ ಗೊತ್ತು. ಅಮಲ್ದಾರರು ಬಂದರೆ ಪ್ಲೇಗು ಬಂದಂತೆ, ಕೂಡಲೇ ಎಲ್ಲರೂ ಊರ ಬಿಟ್ಟು ಗುಡಿಸಲ ಕಟ್ಟುವರು ಎಂಬುದೂ ಗೊತ್ತು. ಅದಕ್ಕಾಗಿಯೆ ಮುಂದಿನ ಗತಿ ಏನು ಎಂದು ಯೋಚನೆ ಅವನಿಗೆ. ಒಮ್ಮೆ ವಸ್ತುಸ್ಥಿತಿಯನ್ನು ಹೇಳಿಬಿಡೋಣ ಎನ್ನಿಸುವುದು, ಒಮ್ಮೆ ಹೇಳಿದ ಮೇಲೆ ತನ್ನ ಸ್ಥಿತಿ ಏನು ಎನ್ನಿಸುವುದು. ವಸ್ತುಸ್ಥಿತಿಯನ್ನು ಮುಚ್ಚಿಟ್ಟರೆ ಮೋಸವಾದಂತಾಗುವುದು, ಮುಂದಿಯನ್ನು ಮೋಸ ಮಾಡುವ ತಪ್ಪಿಂದ ಮಹಪಾತ್ಕಾರ್ಯಗಳಾಗುವುದು ಹೇಗೆ ಎಂದು ಸಂಶಯ ಬರುವದೊಮ್ಮೆ. ಹುಚ್ಚು ಜನರು ತಾವಾಗಿಯೆ ಮೋಸಹೋದರೆ ನಾನೇನು ಮಾಡಲಿ – ಎಂದು ಸಮಾಧಾನ ತಂದುಕೊಳ್ಳುವನೊಮ್ಮೆ. ಕೊನೆಗೆ ಲೋಕಸಂಗ್ರಹದ ಕಾರ್ಯಕ್ಕಾಗಿ ಮೂಲೋಕಗಳನ್ನು ಮೋಸಗೊಳಿಸುವುದು ಕರ್ಮಯೋಗ, ಶಾಸ್ತ್ರ ಎಂದು ಸಿದ್ಧಾಂತವನ್ನು ಕಲ್ಪಿಸಿಕೊಂಡನು ಅಶ್ವತ್ಥಾಮಾ ಹತಃ ಆದರೆ ಗಜಃ ತಿಳೀತಿಲ್ಲೊ – ಎಂಬಂತೆ ವರ್ತಿಸುವುದನ್ನು ನಿಶ್ಚಯಿಸಿದನು. ತಾನು ಅಮಲ್ದಾರನೆಂದು ಉಳಿದವರು ತಿಳಿಯಲಿ, ತನ್ನಷ್ಟಕ್ಕೆ ತಾನು ಕಾಫಿ ಕ್ಲಬ್ಬಿನಲ್ಲಿ ಕೆಲಸಮಾಡಿದರಾಯಿತು – ಎಂದುಕೊಂಡನು. ಹುಡುಗನಂತೆ 'ಎಂತಹ ಯುಕ್ತಿ ನಿನ್ನದು, ನಾರಾಯಣಾ !' ಎಂದುಕೊಂಡ; ಮರುಗಳಿಗೆ 'ಎಂತಹ ಎಬಡ ನೀನೊ, ನಾರಾಯಣಾ !' ಎಂದುಕೊಂಡ. ಅಮಲ್ದಾರನಾದರೆ ಸಂಬಳದ ಗತಿ ಏನು ? ಸಂಬಳ ಬೇಡುವುದೆಂತು ?

'ಅಮಲ್ದಾರಿಕೆ'ಯ ವೈಭವದ ಅನುಭವಕ್ಕಾಗಿ ಪುಕ್ಕಟೆ ದುಡಿಯುವುದು ! ಮಾತಬೇಕೇನು ಮಣ್ಣು ! ಕುಚ್ ಪರವಾ ನಹಿ—ಎಂದನು. (ಎಲ್ಲಿಂದ ಬಂದಿದೆಯೋ ಆವನಿಗೆ ಹುಡುಗಾಟಿಕೆಯ ಹರುಪು?) ಬಿ. ಎ. ಆಗಿ ಬಾಯ್ಬಿಟ್ಟು ಬೇಡಿಕೊಂಡು ಬರಿಯ ಉಮೇದವಾರ (candidate) ನಾಗಿ ವಾರಕ್ಕೊಂದು (ಎಂದರೆ ರವಿವಾರ) ದಿನ ಮಾತ್ರ 'ಉಮೇದ'ದಿಂದ ತಿರುಗುವ ತರುಣರ ತಂಡಗಳಿಗಿಂತ ತನ್ನ ಸ್ಥಿತಿ ಮೇಲು ! ಜನರ ಹಿತಕ್ಕಾಗಿ ಸಂಬಳವಿಲ್ಲದೆ ದುಡಿಯಲು ತಾನಾಗಿಯೆ ತಯ್ಯಾರಾಗಿದ್ದಾನೆ ! 'ಭಾಪು ! ನಾರಾಯಣಾ, ಭಾಪು !' ಎಂದವನೆ ನಾಲಗೆ ಕಚ್ಚಿಕೊಂಡು ಉಸಿರನ್ನೆಳೆದುಕೊಂಡನು; ನಾಚಿಕೆಯಿಂದಲ್ಲ, ಮುಂದೆ ಬಂದ ಅಮಲ್ದಾರಿಕೆಯ ಮಾಮೂಲನ್ನು ನೋಡಿ. ಒಂದು ಕಯ್ಯಲ್ಲಿ ಉಪ್ಪಿಟ್ಟು, ದೋಸೆ, ಚಟ್ನಿ, ಪಲ್ಲೆ; ಇನ್ನೊಂದು ಕಯ್ಯಲ್ಲಿ ಕಾಫಿ, ನೀರಿನ ಪಾತ್ರೆ, ಹಣ್ಣು, ವೀಳ್ಯದ 'ಪಟ್ಟಿ' (ವಿಡಾ, ಪೇಡಾ). ಎರಡು ಕೈಗಳಿದ್ದಾಗೂ ಚತುರ್ಭುಜ ಬ್ರಹ್ಮನಂತೆ ನಿಂತಿದ್ದಾನೆ ಮಾಲಕನು. ನಾರಾಯಣನಿಗೆ ಬಾಯಿಗೆ ನೀರು ಬಿಟ್ಟಲ್ಲಿ ಆಶ್ಚರ್ಯವಿಲ್ಲ. ಆದರೂ ಆಶ್ಚರ್ಯದಿಂದ ನಾರಾಯಣನಿಗೆ ಮತ್ತೆ ಬಾಯಿಯನ್ನು ತೆರೆಯಲೇಬೇಕಾಯಿತು. ಹಳ್ಳಿಯಲ್ಲಿ ಬ್ರಾಹ್ಮಣ ಹೆಂಗಸರು ನೀರಿನ ಪಾತ್ರೆಗಳನ್ನು ತುಂಬಿಕೊಂಡು ಬರುವುದು, ಹೊಟೆಲಿನಲ್ಲಿ 'ಮಾಣಿ'ಗಳು ತಿನಿಸಿನ ಪಾತ್ರೆಗಳನ್ನು ತರುವುದು, ಅಗಸರು ಬೇರೆ ಬೇರೆ ಜನರ ಬಟ್ಟೆಗಳನ್ನು ಹೊತ್ತುಕೊಂಡೊಯ್ಯುವುದು, ಓದುಬರೆ ಬಾರದ ಹೆಂಗಸರು ಹಬ್ಬ–ಹುಣ್ಣಿಮೆ ಹುಟ್ಟಿದ ದಿನ–ಶ್ರಾದ್ಧ ತಿಥಿಗಳನ್ನು ಸರಿಯಾಗಿ ಸ್ಮರಣೆಯಲ್ಲಿಡುವುದು–ಇವುಗಳನ್ನು ನೋಡಿದಾಗೆಲ್ಲ ನಾರಾಯಣನಿಗೆ ಆಶ್ಚರ್ಯವೆ ಆಗುತ್ತಿತ್ತು. ಈ ಸಲವೂ ಆಶ್ಚರ್ಯವಾಯಿತು. ಆಶ್ಚರ್ಯದ ಜೊತೆಗೆ ಎಚ್ಚರವೂ ಬಂದಿತು. ಇಷ್ಟೊಂದು ಸಿದ್ಧತೆ ನಡೆದಿದೆ ಎಂದ ಮೇಲೆ 'ಅಮಲ್ದಾರಿಕೆ'ಯ ಬಿದಿಗೆಯ ಚಂದ್ರ ಮೂಡಿದನು ಎಂದುಕೊಂಡನು. ಬಿದಿಗೆಯ ಚಂದ್ರನ ಬೆಳವಣಿಗೆಯ ಕಲ್ಪನೆ ನಾರಾಯಣನಿಗಿದ್ದಿತು. ಅರ್ಧಚಂದ್ರನಾಗುವುದಕ್ಕೆ ಇನ್ನೇನು ಬಹಳ ವಿಲಂಬವಿಲ್ಲ ಎಂದುಕೊಂಡನು. ಮುಂದಿನ ಗತಿ ?.... ಮುಂದಿನ ಹಾದಿ ?....ಮುಂದಿನ— ನಾರಾಯಣನ ಮನಸ್ಸಿನೊಳಗಿನ

ಕತ್ತಲೆಯನ್ನು ಹೊಡೆದೋಡಿಸುವಂತೆ ಮೂಡಿತು ಮಾಲಕನ ಮುಗುಳ್ನಗೆಯ ಬೆಳ್ದಿಂಗಳು. ನಾರಾಯಣನು ನಕ್ಕನು; ಸಂತೋಷದಿಂದಲ್ಲ, ಸಮಾಧಾನದಿಂದಲ್ಲ, ಸಹಾನುಭೂತಿಯಿಂದಲ್ಲ; ಮಾಲಕನ ನಗುವ ಬಾಯಿಯ ಬಿಳಿ ಹಲ್ಲುಗಳ ನಡುವೆ ಬಂಗಾರದ್ದೊಂದು ಹಲ್ಲು ಇದ್ದು ಆ ಬಾಯಿಯು ಹಿತ್ತಾಳೆಯ ಹಿಡಿಕೆಯ ಬಿಳಿಸುಣ್ಣನ ಕಪ್ಪಿ (cup) ನಂತೆ ಕಾಣುವುದೆಂದು—ಅವನು ನಕ್ಕದ್ದು. ಅಷ್ಟರಲ್ಲಿ ಅಮಲ್ದಾರನು ಹಲ್ಲು ಕಿರಿಯುವುದು ಸರ್ವಿಸ್ ರೆಗ್ಯುಲೇಶನ (ಸರಕಾರೀ ನೌಕರರಿಯ ನಿಯಮಾವಳಿ) ದಲ್ಲಿ ಬರುವುದಿಲ್ಲೆಂದು ತಿಳಿದು ಬಾಯಿ ಮುಚ್ಚಿದನು. ಮಾಲಕನ ಮೂಗಿನ ಕೆಳಗಿನ cup ಉ ಇನ್ನೂ ಕಾಣುತ್ತಲಿದ್ದಿತು; ಒಂದೊಂದಾಗಿ ಎಲ್ಲ ಪದಾರ್ಥಗಳನ್ನು ಕೆಳಗಿರಿಸಿದನು. ನಾರಾಯಣನಿಗೆ ಇದನ್ನು ನೋಡಿಯೂ ಆಶ್ಚರ್ಯ! ಒಂದೂ ಬೀಳದಂತೆ ಎಲ್ಲವನ್ನೂ ಕೆಳಗಿಟ್ಟನಲ್ಲ! ನಾರಾಯಣನು ಅತ್ಯಂತ ಆದರದಿಂದ ನೋಡಿದನು ಆ ಮಹಾನುಭಾವನನ್ನು....ಹಿತ್ತಾಳೆಯ ಹಿಡಿಕೆ ಇನ್ನೂ ಕಾಣುತ್ತಲಿದೆ....ಕೈತುರಿಸುತ್ತಲಿದ್ದಾನೆ ಮಹಾನುಭಾವ.

"ಉಪಹಾರ ಮುಗಿದ್ಮೇಲೆ ಗಾಡಿ ಹೇಳಿಕಳಿಸ್ಬೇಕೇನು ?"

ನಾರಾಯಣನು ಒಮ್ಮೆಲೆ ಚಕಿತನಾದ, ಹಿತ್ತಾಳೆ ಹಿಡಿಕೆಯ ಕಪ್ಪು ಒಡೆಯಿತೆಂದು; ಕೂಡಲೆ ತಿಳಿಯಿತು ಮಾಲಕನು ಮಾತಾಡಿದನೆಂದು.... ಓಹೊ! ಅಮಲ್ದಾರಿಕೆಯ ಪ್ಲೇಗು! ಇಷ್ಟರಲ್ಲಿ ಇಲಿಗಳು ಬೀಳಹತ್ತಿದುವು....ಒಳ್ಳೇದು, ಇವನ ಪರೀಕ್ಷೆ ಮಾಡುವಾ ಎಂದು "ಗಾಡಿ ಯಾಕೆ" ಎಂದು ದಪ್ಪದನಿಯಲ್ಲಿ ಕೇಳಿದನು.

ಹಿತ್ತಾಳೆಹಿಡಿಕೆಯ ಕಪ್ಪು ನೀರಿನಲ್ಲಿ ಮುಳುಗಿತು, ಮೇಲೆದ್ದಿತು; ಮಾಲಕನು ಉಗುಳುನುಂಗುತ್ತ "ಗಾಡಿ ಅಂದ್ರ —·—— ಅಂ —— ಅಲ್ಲ, ಗಾಡಿ ಹೇಳಿಕಳಿಸ್ಬೇಕೊ ಕುದುರೆ ಹೇಳ್ಬೇಕೊ — ಅಂತ." ಕಪ್ಪು ಮತ್ತೆ ಮೇಲೆ ನಿಂತಿತು. ಎಲೈ, ಮಾನವಾ, ಮೋಹಪಾಶದಲ್ಲಿ ಸಿಲುಕಿದೆಯಾ! ಎನ್ನುವ ಕರುಣಾಳುವಿನ ಹಿರಿತನದ ದನಿಯಲ್ಲಿ ನಾರಾಯಣನು "ನಾನು ಕೆಲವು ದಿವಸ ಇಲ್ಲಿಯೆ ಇದ್ಬಿಡಬೇಕಂತೀನಿ" ಎಂದನು. 'ಸುಳ್ಳು ಹೇಳಲಿಲ್ಲ, ಸತ್ಯ ಹೊರಗೆಡುಹಲಿಲ್ಲ , ಏನು ನನ್ನ ಜಾಣತನ!' ಎಂದು

ತನ್ನಷ್ಟಕ್ಕೆ ತಲೆದೂಗಿಕೊಂಡ. ಉತ್ಸಾಹದ ಭರದಲ್ಲಿ ತೂಗುವ ತನ್ನ ತಲೆ ತನಗೆಯೇ ಕಾಣಿಸಿದಂತಾಯಿತು. ಕಣ್ಣು ಅರಳಿಸಿದ. ಅಲ್ಲ ತೂಗುವ ತಲೆ ತನ್ನದಲ್ಲ, ಮಾಲಕನದು. ಅವನೂ ತಲೆದೂಗುತ್ತಲಿದ್ದಾನೆ. ಬಿತ್ತಾಳೆಪಿಡಿಕೆಯ ಕಪ್ಪಿನಿಂದ ಹೊರಬೀಳುವ ಹೊಗೆಯಂತೆ ಮಾಲಕನ ಉದ್ದ ಕೂದಲುಗಳು ಹೊಯ್ದಾಡುತ್ತಲಿವೆ.

"ಒಹೊ – ಬೇಕಾದವನ್ನುವಿನ ನಿಂತ್ಕೋಬಹುದು" ಎಂದಿತು ಬಿತ್ತಾಳೆಪಿಡಿಕೆಯ ಕಪ್ಪು.

"ನಿಮ್ಮಲ್ಲೇ ನಿಂತ್ಕೋಬೇಕಂತೀನಿ." ಎಲ್ಲಿಂದ ಬಂದಿತೊ ತನಗೆ ಈ ಧೈರ್ಯ, ಎನ್ನಿಸಿತು ನಾರಾಯಣನಿಗೆ.

"ಅಗತ್ಯವಾಗಿ" ಹೊಗೆಯು ರಭಸದಿಂದ ಹೊಯ್ದಾಡಿತು.

"ನಿಮ್ಮಲ್ಲೇ ಕೆಲಸ ಮಾಡ್ಬೇಕಂತೀನಿ"

"ಆಗ್ಬಹುದು. ಜನರನ್ನ ಇಲ್ಲೇ ಕರೆಸಿಕೊಳ್ಳಿನ್ತೇನೆ."

"ಅಲ್ಲ, ನಿಮ್ಮಲ್ಲಿ – ನಿಮ್ಮ ಅಂಗಡಿಯಲ್ಲಿ ಯಾವ್ದಾದರೊಂದು ಕೆಲಸ ಕೊಡಿರಿ ನನಗೆ ಅಂತ ನಾನು ಹೇಳೋದು."

ಸರ್ರೆಂದು ಬಿತ್ತಾಳೆಪಿಡಿಕೆ ಮೇಲೆ ಮಾಯವಾಯಿತು, ಸರ್ರೆಂದು ಕಪ್ಪು ಕೆಳಗೆ ಮಾಯವಾಯಿತು, 'ಲಂಕಾದಹನ' ದ ಟ್ರಾನ್ಸ್ಫರ ಸೀನದ ಸಮುದ್ರದಂತೆ ಒಬ್ಬೆಯ ಚಹಸಾಗರವೆ ಕಂಡುಬಂದಿತು ನಾರಾಯಣನಿಗೆ ತೆರೆಗಳೂ ಅಪ್ಪಳಿಸುತ್ತಲಿವೆ! ಸಾರಾಂಶ, ಮಾಲಕನು ಗಹಗಹಿಸಿ ನಗುತ್ತಲಿದ್ದಾನೆ ಬಾಯ್ದೆರೆದು. ಎದ್ದುನಿಂತನು ನಾರಾಯಣನು ಸಮುದ್ರವನ್ನು ಹಾರುವ ಹನುಮಂತನಂತೆ. 'ಢಬ್'....ಮತ್ತೆ ಢಬ್ ಎಂದಿತು ಹೊರಗೆ. ಟ್ರಾನ್ಸ್ಫರ್ ಸೀನು–? ಅಲ್ಲ, ಬಸ್ಸು ಬಂದಿದೆ ಹೊರಗೆ. ಮಾಲಕನಿಗೆ ಅವಸರವಸರ, ನಾರಾಯಣನಿಗೂ ಅವಸರವಸರ. ಇದೇ ಗಡಿಬಿಡಿಯಲ್ಲಿ ಸತ್ಯವನ್ನು ಹೇಳೋಣ, ಕೊನೆಯ ಸಲ ಒಮ್ಮೆ ಹೇಳಿಬಿಡೋಣ, ನಮ್ಮ ಜವಾಬ್ದಾರಿಯನ್ನು ತೀರಿಸಿಬಿಡೋಣ ಎನ್ನುತ್ತ ಪ್ರಾರಂಭಿಸಿದನು ನಾರಾಯಣ. "ಈಗಿಂದೀಗ ಕರೆದಾರ್ರಿ ನಿಮ್ಮನ್ನನೇ ಒಳಗ" ಎಂಬುದನ್ನು ಕೇಳಿ ಅವಸರವಸರವಾಗಿ ಓಡುವಾಗ 'ನನ್ಗ ಮಧ್ಯಾಹ್ನಕ ಸಾಲೆಗೆ ಬರೋದಾಗೋದಿಲ್ರಿ' ಎಂದು ಮಾಷ್ಟರ್ರಿಗೆ

ಹೇಳುವ ವಿದ್ಯಾರ್ಥಿಯಂತೆ ಪ್ರಾರಂಭಿಸಿದನು ನಾರಾಯಣ. "ಇದ್ನೋಡ್ರಿ, ನಾನು ಅಮಲ್ದಾರ ಅಲ್ಲ, ಬಿ. ಎ. ಇದ್ದೀನಿ, ಸಂಭಾರಿಸ್ಬೇಕಂತ ಹಳ್ಳಿಯ ಸ್ಥಿತಿ ನೋಡ್ಲಿಕ್ಕೆ ಬಂದೀನಿ, ನಿಮ್ಮಲ್ಲಿ ಕೆಲಸ- ಅಲ್ಲ, ಪಗಾರ ಕೊಡ ಬ್ಯಾಡ್ರಿ, ಇದ್ನೋಡ್ರಿ————————"

* * * *

ಹಿಂದುಸ್ಥಾನದ ವ್ಯಾಪಾರವು ಬೆಳೆದಿಲ್ಲ, ದಿನೇದಿನೇ ಅಳಿಯುತ್ತಲಿದೆ ಎಂದು ತಜ್ಞರು ತಿಳುಹಿಸಿ ಹೇಳುತ್ತಲಿರುವರು ನಮಗೆ. ಆ ವಿಷಯವೆ ನಮಗೆ ತಿಳಿಯುವದಿಲ್ಲ ಎಂದು ತಜ್ಞರ ಹಟ—ವೇದಗಳನ್ನೋದುವ ಅಧಿಕಾರವು ಶೂದ್ರರಿಗಿಲ್ಲವೆಂದು ನಮ್ಮ ಪ್ರಾಚೀನರು ಹೇಳುತ್ತಿದ್ದಿಲ್ಲವೆ ?— ಅದೆ ಹಣೆಬರಹ ಇದೂ. ತಿಳಿದುಕೊಳ್ಳುವಷ್ಟು ಮಹತ್ವದ ವಿಷಯ ವಿದ್ದಿಲ್ಲವೆಂದರೆ, ತಮಗೆ ತಿಳುಹಿಸಲು ಬರುತ್ತಿದ್ದಿಲ್ಲವೆಂದರೆ ಮುಂದಿಗೆ ತಿಳಿಯುವದಿಲ್ಲ ಎಂದು ಹೇಳುವುದು ! ತಜ್ಞರು ಹೇಳುವುದು ಮಾತ್ರ ನಮಗೆ ತಿಳಿಯುವದಿಲ್ಲವೆಂಬುದು ನಿಜ. ಹಿಂದುಸ್ಥಾನದ ವ್ಯಾಪಾರವು ಬೆಳೆಯಬಾರದೇಕೆ ? ಯಾಕೇನು ? ಹಿಂದುಸ್ಥಾನದವರಿಗೆ ವ್ಯಾಪಾರ ಮಾಡಲಿಕ್ಕೇ ಬರುವದಿಲ್ಲೆಂದು. ಇದಿಷ್ಟು ಮಾತ್ರ ತಜ್ಞರಿಗೆ ತಿಳಿದಂತೆ ತೋರುವುದಿಲ್ಲ. ಅಲ್ಲ, ದಿನಾಲು ಬೆಳಗಿನಲ್ಲಿ ಎದ್ದಾಕ್ಷಣದಿಂದ ಕಣ್ಣಾರೆ ನೋಡುತ್ತೇವೆ—— ಉಡಿಪಿಯವರ ವ್ಯಾಪಾರ, ಉಪಹಾರಗೃಹಗಳ ವ್ಯವಹಾರ ಹೇಗೆ ಸವಿಯಾಗಿ ಸೊಗಸಾಗಿ ಸಹಜವಾಗಿ ಕುಣಿದು ಕುಣಿಸುತ್ತ ತಣಿಸಿ ಝಣಿಸುತ್ತ ಎಣಿಕೆ ಮೀರುತ್ತ ಬೆಳೆಯುತ್ತಲಿದೆ, ಅದೂ ನಮ್ಮ ದೇಶದಲ್ಲಿಯೆ ! ನಮ್ಮವರಿಗೆ ತಿಂಡಿತಿನಿಸುಗಳ ಸವಿ ಹೆಚ್ಚು, ಅದಕಾಗಿ ಆ ವ್ಯವಹಾರ ಬೆಳೆಯುತ್ತಲಿದೆ ಎನ್ನುವಂತಿಲ್ಲ. ಮನೆಯಲ್ಲೂ ಸಿಕ್ಕಬಹುದು, ಮಠಗಳಲ್ಲೂ ಸಿಕ್ಕುವುದು ಸೊಗಸಾದ ತಿಂಡಿ–ತಿನಿಸು ! ಹೆಚ್ಚಿಗೆ ಹೇಳುವುದೇನು ? ವ್ಯವಹಾರದ ಗುಟ್ಟು ಗೊತ್ತಿದೆ ಉಪಹಾರಗೃಹದವರಿಗೆ. ಆ ಗುಟ್ಟು ಮಿಕ್ಕ ಭಾರತೀಯರಿಗೆ ಗೊತ್ತಿಲ್ಲ. ಬುದ್ಧಿ ಎಲ್ಲಿದೆ ಅಷ್ಟೊಂದು ಸಾಮಾನ್ಯ ಭಾರತೀಯನಿಗೆ ? ಬುದ್ಧಿ ಇದ್ದ ಎಷ್ಟೋ ಜನ ಆ ಗುಟ್ಟನ್ನ ರಿತುಕೊಂಡು ತಮ್ಮ ವ್ಯವಹಾರವನ್ನು ಬೆಳೆಸಿಕೊಂಡಿದ್ದಾರೆ. ಉದಾಹರಣವೆಂದು ಕವಿಗಳನ್ನು ತೋರಿಸಬಹುದು. ಕವಿ ಎಂದರೆ ಯಾರು–

ಎಂಬುದು ಎಲ್ಲರಿಗೂ ಅಷ್ಟು ಸುಲಭವಾಗಿ ತಿಳಿಯಲಿಕ್ಕಿಲ್ಲ. ಆದರೂ ಸ್ಥೂಲದೃಷ್ಟಿಯಿಂದ ತಲೆಯ ಕೂದಲು ಬೆಳೆಸಬೇಕೆನ್ನುವ ಇಲ್ಲವೆ ಬೆಳೆಸಿದ ಗಂಡಸು ಕವಿ ಎಂದು ಹೇಳಬಹುದು. ಹಾಗೆ ಹೇಳುವುದರಲ್ಲಿ ಕವಿಗಳಿಗಾಗಿ ನಮಗೆ ತಿರಸ್ಕಾರ ಎಂದು ಯಾರೂ ತಿಳಿಯಲಾಗದು. ಯಾಕೆಂದರೆ ಕವಿಗಳಿಗಾಗಿ ನಮಗೆ ಬಹಳೇ ಆದರವಿದೆ. ಅವರು ತಲೆಯ ಕೂದಲು ಬೆಳೆಸುವುದರ ತತ್ವ ನಮಗೆ ತಿಳಿದಿದೆ. ಕವಿಗಳ ವ್ಯವಹಾರ ಬೆಳೆಯುವುದು ಸ್ತ್ರೀನಿಮಿತ್ತವಾಗಿ, ಆದಕ್ಕೆಂದೇ ಸ್ತ್ರೀತ್ವದ ಸಂಕೇತವೆಂದು ಅವರು ತಲೆಯ ಕೂದಲು ಬೆಳೆಸುವುದು. ಸ್ತ್ರೀಯರ ವರ್ಣನೆ, ಸ್ತ್ರೀಯರ ಶೃಂಗಾರ, ಸ್ತ್ರೀಯರ ವ್ಯವಹಾರ, ಸ್ತ್ರೀಯರ——— ಕ್ಷಮಿಸಬೇಕು. ನಾವು ಕವಿಗಳಲ್ಲವಾದುದರಿಂದ ನಮಗಿನ್ನೂ ನಾಚಿಕೆಯಾಗುತ್ತದೆ ಅದನ್ನೆಲ್ಲಾ ಹೇಳಲು. ಇದೇನೊ ಕವಿಗಳ ಮೇಲೆ ನೀತಿಯ ದೃಷ್ಟಿಯಿಂದ ಹೊರಿಸುವ ಆರೋಪ ಎಂದೂ ದಯಪಟ್ಟು ತಿಳಿಯಬೇಡಿರಿ. ಕವಿಗಳ ವ್ಯವಸಾಯ ಬಂಧುವಾದ ಬ್ರಹ್ಮನು ಕೂಡ ಸ್ತ್ರೀಯ ನಿಮಿತ್ತದಿಂದಲೆ ತನ್ನ ವ್ಯವಹಾರವನ್ನು ಬೆಳೆಸಿದ್ದಾನೆ. ಅದೊಂದು ವ್ಯಾಪಾರದ ಗುಟ್ಟು (trade secret), ಅದರಲ್ಲಿ ಒಳಿತು-ಕೆಡಕುಗಳ ಪ್ರಶ್ನೆಯೇ ಇಲ್ಲ. ಇಪ್ಪತ್ತನೆಯ ಶತಮಾನದಲ್ಲಿ ವ್ಯಾಪಾರದ ಪ್ರಗತಿಯು ಪ್ರಚಾರ (propaganda) ದ ಮೇಲೆ, ಪ್ರಕಟನಾಕಾರ್ಯ ( advertisement ) ದ ಮೇಲೆ ಅವಲಂಬಿಸಿದೆ. ಮಾನವಜಾತಿಯ ಪ್ರಗತಿಗೆ ಪ್ರಚಾರಕ್ಕೆ ಕಾರಣೀಭೂತಳಾದ ಸ್ತ್ರೀಯು ಮಾನವನ ಮಿಕ್ಕ ಎಲ್ಲ ವ್ಯವಹಾರದ ಪ್ರಚಾರಕ್ಕೆ ಕಾರಣಳಲ್ಲವೆ? ಅಲ್ಲವೆ? ಎಂತಹ ಮಾತು! ಎಂದು ಈಗ ಹೇಳುವಿರಿ ನೀವು. ಕರ್ನಾಟಕದ ನಾಟಕ ಕಂಪನಿಗಳ ವ್ಯವಹಾರ ಯಾಕೆ ಬೆಳೆಯುತ್ತಲಿದೆ ಎಂಬುದು ಈಗ ನಿಮಗೆ ತಿಳಿಯಿತೆಂದು ಹೇಳುವಿರಾ? 'ಯತ್ರ ನಾರ್ಯಸ್ತು ವರ್ಣ್ಯಂತೇ' ಎಲ್ಲಿ ಹೆಂಗಸರು ಬಣ್ಣ ಬಡೆದುಕೊಳ್ಳುವರೊ 'ಝುಣಂತೇ ತತ್ರ ರೂಪ್ಯಕಾಃ' ಅಲ್ಲಿ ರುಪಾಯಿ ಝುಣಝುಣಿಸುವುದು. ಇದಕ್ಕೆನ್ನಬೇಕು ವ್ಯವಹಾರ ಚಾತುರ್ಯ! ಈ ಚಾತುರ್ಯವಿದೆ ನೋಡಿರಿ ಉಪಹಾರಗೃಹಗಳಲ್ಲಿ. ಲಂಡನದಂತಹ ಪಟ್ಟಣದಲ್ಲಾಗಲಿ, ಕಮತೂರಿನಂತಹ ಬಟ್ಟ-ಬಯಲಿನಲ್ಲಾಗಲಿ ಸತ್ಯದಂತೆ ಸೂರ್ಯನಂತೆ

ಉಪಹಾರಗೃಹಗಳ ವ್ಯವಹಾರವು ಏಕರೂಪವಾಗಿದೆ, ಪ್ರಗತಿಯು ಅನೇಕರೂಪವಾಗಿದೆ. ಲಂಡನವರಿಗೆ ಸ್ವರ್ಗದ ತೋಟಗಳೇ ಬೇಕಾದರೆ, ಕಮತೂರಿನವರಿಗೆ ತುಳಜಿಯ 'ಗತ್ತಿ' ನಲ್ಲಿಯೇ ಸಮಾಧಾನ. ಲಂಡನ ದಲ್ಲಿ ತೋಟಗಳು ತಾಳ–ಮೇಳ ಬದ್ಧವಾಗಿ ಸುಳಿಯುವಾಗ ಸಮಾ ಧಾನವಿದ್ದರೆ, ಕಮತೂರಿನಲ್ಲಿ ತುಳಜಿಯು ಅಣಕಿ ಕೆಣಕಿ ತೋಳೆಯುವಾಗ- ತಪ್ಪು ಬಗೆಗಳನ್ನು ತೋಳೆಯುವಾಗ–ಸಮಾಧಾನ. ಚಪ್ಪರನನ್ನು ಬಳಿ ಯುವಾಗಿನ ಅವಳ ಹೆಜ್ಜೆಗಳ ತುಳಿತ, ಅವಳು ವೈಯ್ಯಾರಿಸುವ ಬಳುಕು, ಅವಳು ಸೆರಗು ಓಸರಿಸುವ 'ಸೆಳಕು', ಅವಳ ಮುಗುಳ್ನಗೆಯ ಮುಂಬೆ ಳಕು, ಅವಳ ಕೈಬಳೆಗಳ 'ಜುಳುಜುಳುಕು' –– ಇದನ್ನು ಕಣ್ಣಾರೆ ಕಂಡು ಅನುಭವಿಸುವ ಧನ್ಯರಾಗಬೇಕೆಂಬ ಆದೊಂದೆ ಇಚ್ಛೆಯಿಂ ದಲೆ ಎಷ್ಟೋ ಜನರು ಬರುತ್ತಿದ್ದರು. "ಏನೊ ! ದಿನಾಲು ತಿಂದು ಹೋಗುವಿ, ಕಾಸು ಕೊಡ್ಬಾರದೆ ?" ಎಂದು ಮಾಲಕನು ಹಂಗಿಸುವಾಗ "ಎಲ ನಿನ್ನ ಧಿನಾಲ! ತಿನ್ನೋ ರುಚಿಗಾಗಿ ಬಾಯ್ಬಿಟ್ಟು ಬರ್ತೀವಿ ಅಂತೇನೂ ಏನೊ ನಿಮ್ಮಂಬೋಣ ? ಹಾಂಗ ನೋಡಿದ್ರ, ದನಕ್ಕು ಮುಸುರೀನೀರೂ ಅಂತ ನಡಿಲಾಕಿಲ್ಲ ನಿಮ್ ಫಾ. ಮುಳ್ಳುಗಿಡದಾಗ ಮಲ್ಲಿಗೆ ಹೂವು ಐತಿ ಅಂತ ನಾವು ಬರೋದು. ಯಾಕರೆಪ !" ಎಂದು ಗಹಗಹಿಸುತ್ತ ತಲೆ ತೂಗುತ್ತ ಕೈಬೀಸುತ್ತ ಎಷ್ಟುಜನ ಹೋಗುತ್ತಿರಲಿಲ್ಲ ! ಎಷ್ಟು ಸಲ ಅವರು ಹಾಗೇ ಹಣಕೊಡದೆ ಹೋದರೂ ಮತ್ತೆ ಬಂದೇ ಬರುವರೆಂದು ಮಾಲಕನು ವಿಶ್ವಾಸವನ್ನಿಟ್ಟಿರಲಿಲ್ಲ ? ಯಾಕೆ ? ತುಳಜಿ ಇದ್ದಳೆಂದು. ಸಂಭಾಜಿಯು ರಾಜ್ಯವನ್ನು ಮಣ್ಣುಗೂಡಿಸಿದ ತುಳಜಿಯು ಮಹಾ ರಾಷ್ಟ್ರದಲ್ಲಿ, ಕಮತೂರಿನ ಕಾಫಿ–ಕ್ಲಬ್ಬಿಗೆ ರಾಜೈಶ್ವರ್ಯದ ಹೊನ್ನು ಕೊಡಿಸುವ ತುಳಜಿ ಕರ್ನಾಟಕದಲ್ಲಿ. ದಿನಾಲು ನೆರೆಯುವುದು ಓಲಗವು— ಮುಂಜಾವಿನಲ್ಲಿ. ಅದಕ್ಕೆಂದೇ ಈ ಎರಡು ದಿವಸಗಳಲ್ಲಿ ನಾರಾಯಣನಿಗೆ ಅದರ ಸುಳುವಿದ್ದಿರಲಿಲ್ಲ. ವಿಶ್ವದ ರಾಜಾಧಿರಾಜರುಗಳನ್ನೆಲ್ಲ ತನಗಾಗಿ ಬಾಯ್ಬಿಡುವಂತಹ ಮಾಂಡಲಿಕರನ್ನಾಗಿ ಮಾಡಿದ ಕಾಫೀ—ಸಾರ್ವ ಭೌಮನ ಅರಮನೆಯ ಪರಿವಾರದಲ್ಲಿ ಪರಿಚಾರಕನಾದುದರ ಮರುದಿನ ಮುಂಜಾವಿನಲ್ಲಿ ಮೊದಲನೆಯ ಅನುಭವ ಬಂದಿತು ನಾರಾಯಣನಿಗೆ—

ಈ ತರುಣರಿಯ ಒಲಗದ ವಿಷಯವಾಗಿ. ನಾರಾಯಣನಿಗೆ ಕೆಲಹೊತ್ತು ತಿಳಿಯಲೇ ಇಲ್ಲ— ತರುಣರ ತಂಡಗಳು ಇಷ್ಟೇಕೆ ನೆರೆದಿವೆ ಎಂದು. ಆ ತರುಣರೂ ಬಂದ ಸಡಗರವೆಂತಹುದು ? ದೋತರವನ್ನು ತೀಡಿ ತೀಡಿ ಉಟ್ಟಿದ್ದಾರೆ ಕೆಲರು; ತಿಳುವಾದ ಪೈರಣಗಳನ್ನು ತೊಟ್ಟಿದ್ದಾರೆ ಕೆಲರು; ಬೇರೆ ಕೆಲರು ಆ ಪೈರಣದ ತಿಳಿಯಲ್ಲಿ ಒಡೆದು ಕಾಣುವಂತೆ ದಪ್ಪವಾದ ಬಿಗಿಯಾದ ಒಳಬಟ್ಟೆಯೊಂದನ್ನು ಧರಿಸಿದ್ದಾರೆ; ಇನ್ನೂ ಕೆಲರು ಆ ಬಿಳಿ ಬಟ್ಟೆಯ ಮೇಲೆ ತೊಳೆದು ಕಾಣುವಂತೆ 'ತಾಯಿತ' ಗಳನ್ನು ತೂಗಬಿಟ್ಟಿದ್ದಾರೆ; ಕಸರತ್ತುಗಳಿಂದ ಕಸುವುಳ್ಳದಾದ ಕುತ್ತಿಗೆ (ಕತ್ತು) ಕಾಣುವಂತೆ ಕೆಲರು ಪೈರಣದ ಮೇಲಿನ ಗುಂಡಿ (ಬಿರಡಿ, ಬಟನ್) ಯನ್ನು ಬಿಚ್ಚಿದ್ದಾರೆ; ತಾಲೀಮು (ವ್ಯಾಯಾಮ) ದಿಂದ ತುಂಬಿಕಾಣುವ ತೋಳ್ಗಳು ಮೋಹಕವಾಗಿ ಕಾಣಲೆಂದು ಪೈರಣದ ಕೈಗಳನ್ನು ಕೆಲರು ಭುಜಕ್ಕೆಸುತ್ತಿದ್ದಾರೆ;ತೊಡೆಗಳು ಒಂದನ್ನೊಂದು ಹೊಸೆಯುತ್ತಿರುವುದು ತೋರಿಬರುವಂತೆ ನಡೆಯುತ್ತಿದ್ದಾರೆ ಕೆಲರು; ತಾಂಬೂಲದ ಕೆಂದುಟಿ ಕೆಲರದು; ಬೀಡಿಯಿಂದ ಬೆಳಗುವ ಬಾಯಿ ಕೆಲರದು; ಸಡ್ಡು ಹೊಡೆದರೆ ಹೊಡೆದರೇ ಕೆಲರು; ಸಿಳ್ಳುಹಾಕುವರೆಷ್ಟೋ ಜನರು ! ಬೆಳಗಿನ ಒಂದು ತಾಸು ಹೊತ್ತೇರುವುದರೊಳಗಾಗಿ ನೆರೆದ ಈ ತರುಣರನ್ನು ನೋಡಿ ನಾರಾಯಣನಿಗೆ ಸಮಾಧಾನವಾಗಿತ್ತು. ಇವರೇನೊ ತಾವಾಗಿಯೆ ವ್ಯಾಯಾಮಕ್ಕಾಗಿ ನೆರೆದವರೆಂದು ಊಹಿಸಿದನು. ಅಷ್ಟರಲ್ಲಿ ತಿಳಿದು ಬಂದಿತು, ತಾನು ಇವರಿಗೆ ಸೇವೆ ಸಲ್ಲಿಸುವ ಪ್ರಸಂಗ ಬಂದಾಗ ಸಂಶಯ ಬಂದಿತು ನಾರಾಯಣನಿಗೆ. ವ್ಯಾಯಾಮ ಮಾಡುವವರು ಬೆಳಗಿನಲ್ಲಿ ಉಪ್ಪಿಟ್ಟು—ದೋಸೆ—ಚಹಗಳ ಸೇವೆ ಯಾಕೆ ಮಾಡಬೇಕು? ಆದರೂ ಕೇಳುವುದೆಂತು ? ಕಾರ್ಯಗೌರವ— dignity of labour ದೊಂದು ಪ್ರಶ್ನೆ ಇದೆಯಲ್ಲ. ತಾನೀಗ ಗ್ರಾಜುಏಟ ನಾರಾಯಣನಲ್ಲ, ಉಪ್ಪಿಟ್ಟಿನಂಗಡಿಯ 'ಮಾಣಿ' ಯು. ಮೊದಲು ಕೆಲಸ ಮುಗಿಯಲಿ, ಆ ಮೇಲೆ— ನಾರಾಯಣನಿಗೆ ಏನೊ ಹೊಳೆದಂತಾಯಿತು. ಬಹಳ ಮಾಡಿ ಹಿಂದು ಮಹಾಸಭೆಯ ವತಿಯಿಂದ ತಯ್ಯಾರಾಗುತ್ತಲಿರುವ ತರುಣರ ತಂಡು ಇದ್ದರೂ ಇರಬಹುದು ! ಅದೇನೊ ಆ ಸಂಸ್ಥೆಯ ಮುಖಂಡರು ಹಿಂದು

ಗಳೆಲ್ಲ ದ್ಯಾಮವ್ವನಿಗಾಗಿ ಕಡಿಯುವ ಕುರಿಕೋಣಗಳನ್ನು ತಾವೇ ತಿನ್ನಬೇಕು, ತಾಲೀಮು ಮಾಡಬೇಕು ಮುಂತಾಗಿ ಸುಧಾರಿಸಿದ ವಿಚಾರಗಳ ಪ್ರಚಾರವನ್ನು ನಡೆಸಿರುವರಂತೆ! ಈ ಹುಂಬರು ಆ ಹುಚ್ಚರ ಮೋಸಕ್ಕೆ ಸಿಲುಕಿದವರಿದ್ದರೂ ಇರಬಹುದು. ಇಷ್ಟರಲ್ಲಿ ಕಯ್ಯೊಳಗಿನ ಕಪ್ಪಿನಲ್ಲಿಯ ಬಿಸಿ ಚಹವು ತನ್ನಮೇಲೆ ಚೆಲ್ಲಿ ನಾರಾಯಣನಿಗೆ ಎಚ್ಚರವಾಯಿತು.—ತಾನು ಸದ್ಯಕ್ಕೆ ಮಾಣಿ, ಸಮಾಜಸುಧಾರಕನಲ್ಲ, ಎಂದು. "ಏನಪಾ, ದ್ಯಾವ್ರು ಕೊಟ್ರೂ ಪೂಜಾರಿ ಕೊಡಾಕಿಲ್ಲಾ ಅಂತ, ಇದ್ದ ಶಿಂಗಳ್ 'ಛಾ'ದಾಗ ಕೈ ಬ್ಯಾರಿ ತೊಳ್ಕೋತಾನಲ್ಲಪ!" ಎಂದ ಒಬ್ಬ. "ಎಲ! ಅವನ ಶಿಸ್ತ ನೋಡ್ಯಾರ್ಲ? ಮುಟ್ಟಿದ್ರ ಮಾಸೀತನ್ನೊ ಹಾಂಗ 'ಛಾ'ದ ಕಪ್ಪ ಹಿಡದಾನ" ಎಂದು ಅಣಕಿಸಿದ ಇನ್ನೊಬ್ಬ. "ಎಲ್ಲೆಲ್ಲೀದ ಕುಳಾ ತರ್ತಾನೊ ಬರಾಮುಣಾ" ಎಂದು ಒಬ್ಬನಿಗೆ ಆಶ್ಚರ್ಯ. "ಬರಾಮುಣಾ ಆದ್ರೂ ಹೌದೊ ಅಲ್ಲೊ?" ಎಂದು ಸಂಶಯ ತೆಗೆದ ಮತ್ತೊಬ್ಬ. ಯಾವನೊ ಒಬ್ಬ ಇಷ್ಟರಲ್ಲಿ "ಶಶ್" ಎಂದ. ನಾರಾಯಣನ ಮನಸಿನಲ್ಲಿಯ ಹಿಂದು-ಮುಸಲ್ಮಾನರ ಐಕ್ಯದ ಹಂಚಿಕೆ ಎಲ್ಲೊ ಅಡಗಿತ್ತು. ಈ ಹುಂಬರು ಒಮ್ಮೆ ಚಹ ಕುಡಿದು ಹಾಳಾಗಿ ಹೋಗಲಿ ಎನ್ನಿಸಿತು. ಬಯಲಿನಲ್ಲಿ ನಿಂತರೆ ಇವರ ಟೀಕೆಗಳನ್ನು ಸಹಿಸುವುದು, ಒಳಗೆ ಕುಳಿತರೆ ಬೆಂಕಿಯ ಮುಂದೆ ಬೆವರು ಸುರಿಸುವುದು. ಆಗಾಗ ಮೈಯಿಂದ ಬೆವರು ಸುರಿದುಹೋಗುವುದು ಆರೋಗ್ಯಕ್ಕೆ ಹಿತಕರ ಎಂದು ಎಲ್ಲೊ ಓದಿದ್ದು ಸ್ಮರಣೆಗೆ ಬಂದಿತು; ಒಳಗೆಯೆ ಹೋಗಿ ಬಿಟ್ಟನು........ ಆ ಹಳ್ಳಿಯ ತರುಣರಿಗೆ ಅತ್ಯಾಶ್ಚರ್ಯ. ಇದುವರೆಗೆ ಉದ್ಧಟ 'ಮಾಣಿ' ಗಳನ್ನೆ ನೋಡಿದ ಅವರಿಗೆ ನಾರಾಯಣನಿಂದ ಅಸಮಾಧಾನವಾಯಿತು. 'ಮಾತೇ ಆಡ್ಲಾರದ ಮುಗ್ಗಲಗೇಡಿ' ಎಂದು ತಿರಸ್ಕಾರದಿಂದ ಉಸಿರೆಳೆದನೊಬ್ಬನು. 'ಮಾಣಿ' ಯು ಉದ್ಧಟನಿರಬೇಕು, ಕಾಲು ಕೆದರಿ ಅವನ ಕೂಡ ಜಗಳ ಹೂಡಬೇಕು, ಅವನನ್ನು ಆವ್ಹಾನಿಸಬೇಕು ಇಲ್ಲವೆ ನೆಲಕ್ಕೆ ಅಪ್ಪಳಿಸಬೇಕು,————-ಇದನ್ನೆಲ್ಲ ತುಳಜೆಯು ನೋಡುತ್ತಿರಬೇಕು. ಇಂತಹ ಮಹತ್ವಾಕಾಂಕ್ಷೆಯ 'ಮರ್ದ' ರಿಗೆ ನಾರಾಯಣನು 'ಮುಗ್ಗಲಗೇಡಿ' ಯಾದಲ್ಲಿ ಆಶ್ಚರ್ಯ

ವೇನು? "ಠಶ್"—. ಮೊದಲು ಹಾಗೆ ಅಂದವನೇ ಹೆಚ್ಚಾಗಿ ಎಚ್ಚರಿಕೆ ಕೊಡುವವನಂತೆ ಮತ್ತೊಮ್ಮೆ ಉಸಿರ್ಗರೆದನು.

"ಛಾ ಖಾರಹತ್ತ್ಯೃತಿ ಏನೋ? ಹೀಂಗ್ಯಾಕ ಮಾಡ್ತಿ?" ಎಂದು ತಿರಸ್ಕಾರದಿಂದ ಅವನನ್ನು ಹಂಗಿಸಿದನೊಬ್ಬನು.

"ಸಿಳ್ಳೆ ಹಾಕೋದು ಕಲೀತೇನೊ,ಶಿಶ್ಯಂಕರಾ?" ಎಂದು ಮತ್ತೊಬ್ಬ ನಕ್ಕನು.

ಶಿವಶಂಕರನು ಗಂಭೀರ ಮುದ್ರೆಯಿಂದ ಅತ್ತಿತ್ತ ನೋಡಿ ಕಳ್ಳ ದನಿಯಲ್ಲಿ "ಅಂವ ಯಾರಿದ್ದಾನ, ಗೊತ್ತ್ಯೃತೇನು?" ಎಂದ.

"ಇನ್ನೊಂದ ಕಪ್ಪ ಛಾ ತರಿಸು ಕುಂತವ್ರಿಗೆಲ್ಲಾ. ಅಂದರ ತಿಳೀ ತ್ಯೃತಿ ಅಂವ ಯಾರು—."

ಶಿವಶಂಕರನಿಗೆ ಇನ್ನೂ ಸಮಾಧಾನವಿಲ್ಲ, ಹೆದರಿದವನಂತೆ ಮತ್ತೊಮ್ಮೆ ಅತ್ತಿತ್ತ ನೋಡಿದನು. ಮತ್ತೂ ಕಳ್ಳದನಿಯಿಂದಲೆ "ಅಂವ ತಪಾಸಣೀ ಪೋಲೀಸದ್ದಾನ, ತಪಾಸ್ಣೀ ಪ್ಲೀಸ."

"ಅಲ್ಲೇಳೊ, ಹುಚ್ಚುಗೊಟ್ಟೇ! ಮೊಗಲಾಯೀ ರಾಜಾ ಇದ್ದಾನ"

ಶಿವಶಂಕರನನ್ನುಳಿದು ಎಲ್ಲರೂ ನಕ್ಕರು. ಶಿವಶಂಕರನಿಗೆ ಅಪ ಮಾನ, ಅಸಹನೆ, ಕೋಪ. "ಏ ಜಗಿದಾತ್ಯ್ಯಾಬಡ್ರಿ" ಎಂದ ಅಪಮಾ ನಿತನಾಗಿ; "ಪಲ್ಲೇನ ಕಿರೀತೀರಿ?" ಎಂದ ಅಸಹನೆಯಿಂದ; "ಗೊತ್ತಾ ದೀತು ಇಂದ್ನಾಳೆ" ಎಂದ ಕೋಪದಿಂದ. ಆದರೂ ನಗೆ ತಡೆಯಲಿಲ್ಲ ಮಿಕ್ಕವರದು.

"ನನಗೊತ್ತ್ಯೃತಿ ಅಂವ ತಪಾಸ್ಣೀ ಪ್ಲೀಸ ಅಂತ"

ನಗೆ ಮಿತಿಮೀರಿತು (ನಗೆಯನ್ನು ಕೇಳಿ ಎಷ್ಟೋಸಲ ತುಳಜಿಯು ಹೊರಗೆ ಬರುತ್ತಿದ್ದುದರಿಂದ ಪ್ರಸಂಗ ದೊರಕಿದಾಗೊಮ್ಮೆ ಗದ್ದರಿಸಿ ನಗುತ್ತಿತ್ತು ಈ ತರುಣರ ತಂಡ.)

"ನಿಷ್ಟಂಜಿಗೆ ಹೇಳ್ತಿದ್ದ ನಮ್ಮಪ್ಪ"

ತುಳಜಿಯು ಇನ್ನೂ ಬಂದಿಲ್ಲವಾದುದರಿಂದ ನಗೆಯು ಇನ್ನಷ್ಟು ಜೋರಾಯಿತು.

"ಇಂಪಗ ಅಂಗ್ಡೀ ಒರಾಪುಣಾ ತನ್ಕ್ರಿಯಿಂದ ಘಸಕಾಪಿ ಕೈಕೊಟ್ರಂತೆ————————"

ಹೊಟ್ಟೆಹೊಟ್ಟೆ ಬಡೆದುಕೊಂಡು ನಗುತ್ತಿದ್ದ ತಂಡ.

"—————— ದುಡ್ಡು ಕೊಡಲಿಕ್ಕೋದ್ರು ಥೋ–ಗೋ–ಳಿ–ಲ್ಲಾ— ಅಂ–ತೆ"

ದೀಪ ಆರಿಸಿ ಮಲಗಬೇಕೆನ್ನುವಷ್ಟರಲ್ಲಿ ಮಗ್ಗುಲ ಕೋಣೆಯಲ್ಲಿ ಕಳ್ಳರ ಕೆಮ್ಮು ಕೇಳಿಸಿದರೆ ಮಲಗಿದವನ ಸ್ಥಿತಿ ಏನಾಗುವುದು ಗೊತ್ತೇನೆ? ಅಂತಲ್ಲಿಯೆ ತಟಸ್ಥನಾಗುವನು, ಉಸಿರಾಡಿಸಿದರೆ ಶಬ್ದವಾದೀತಲ್ಲ ಎಂದು ನಡುಗುವನು. ಯಾಕೆ? ಸಂಗತಿಯು ಒಮ್ಮೆಲೆ ಸಂಭವಿಸಿತೆಂದು, ಅಕಲ್ಪಿತವಾಗಿ ಸಂಭವಿಸಿತೆಂದು. ಯಾವುದರ ಸುಳಿವೂ ಈ ಕೋಣೆಯಲ್ಲಿ ಇಲ್ಲವೆಂದು ಹೊರಬರುವಷ್ಟರಲ್ಲಿ ಅದೇ ಕೋಣೆಯೊಳಗಿಂದ ಕೆಮ್ಮು ಕೇಳಿಸಬೇಕೆ? ಅಕಲ್ಪನೀಯ! ಅಸಂಭವನೀಯ! ಅಷ್ಟು ಅಸಂಭವನೀಯವಾದ ಮಾತು, ಕಮತರ ಕಾಫೀ ಕ್ಲಬ್ಬಿನ ಮಾಲಕನು ತಾನಾಗಿಯೆ ಚಹ ತಂದುಕೊಡುವುದೆಂದರೆ; ಅದಕ್ಕೂ ಹೆಚ್ಚು ಅಕಲ್ಪನೀಯ, ಹೆಚ್ಚು ಅಸಂಭವನೀಯ ಅಘಟನೀಯ ಘಟನೆ ದುಡ್ಡು ತೆಗೆದುಕೊಳ್ಳಲಿಲ್ಲ— ಕೊಡಲು ಹೋದಾಗೂ ತೆಗೆದುಕೊಳ್ಳಲಿಲ್ಲ— ಎಂಬುದು. ಅದಕಾಗಿ ಕೂಗುವ ಬಾಯ್ಗಳು ತೆರೆದಲ್ಲಿಯೆ, ತೆರೆದಂತೆಯೆ ನಿಃಶಬ್ದವಾದುದು! ಆದರೆ ಕೂಗಿನ ನಗೆಯನ್ನು ಕೇಳಿ ಓಟ ಹೊರಗೆ ಬಂದ ನಾರಾಯಣನಿಗೆ ಇದೊಂದೂ ತಿಳಿದಿರಲಿಲ್ಲ. ತನ್ನನ್ನು ನೋಡಿದಾಕ್ಷಣ ಸಾಲಾಗಿ ಜೋಲಿಸ ಕೋಣೆಗಳ ಬಾಗಿಲುಗಳಂತೆ ಪಟಪಟನೆ ಬಾಯ್ಗಳು ಮುಚ್ಚುವುದನ್ನು ನೋಡಿ ಅವನು ಬೆರಗಾದನು. ದಿಟ್ಟಿಸಿ ನೋಡಿದರೆ ಮತ್ತೆ ತನಗೆಲ್ಲಿ ಅಪಹಾಸ್ಯವಾಗುವುದೊ ಎಂಬ ಹೆದರಿಕೆ ನಾರಾಯಣನಿಗೆ; ನಾರಾಯಣನು ತಮ್ಮನ್ನು ಎಲ್ಲಿ ದಿಟ್ಟಿಸಿ ನೋಡುವನೊ ಎಂಬ ಹೆದರಿಕೆ ಆ ತರುಣರಿಗೆ. ಅವನು ದಿಟ್ಟಿಸುವುದರೊಳಗಾಗಿಯೆ ಒಬ್ಬೊಬ್ಬರಾಗಿ ಜಾರಿ ಹೋಗುವ ಹವಣಿಕೆಯಲ್ಲಿದ್ದರು. ಆದರೆ—

ಕನ್ನೆಯನ್ನು ನೋಡಲು ಹೋದಾಗ, ಎದುರು (ತಾನಾಗಲೆ ಕನ್ನೆ

ಯಾಗಲಿ) ಸಿಂಗರಿಸಿಕೊಂಡು ಕುಳಿತಾಗ ಭಟ್ಟಿಸ್ನಿಸುವಂತೆ ಸೀನು—ಬರುವು ದಿಲ್ಲ—ಬಂದಂತಾಗುವ ಅನುಭವವಿದೆಯೆ ಯಾರಿಗಾದರೂ ? ಇಲ್ಲವೆ ಪಾರ್ಶ್ವಬರನ್ನು ಕಾಣಲು ಕೋಣೆಯಲ್ಲಿ ಕಾಲಿಡುವಾಗ'ಮಡವ್'ರನ್ನು ನೋಡಿ ಹೆದರಿ ಹೊಸ್ತಿಲ ಎಡವಿದ ಅನುಭವವಿದೆಯೆ ಯಾರಿಗಾದರೂ ? ಇಲ್ಲವೆ ಹೆಂಡತಿಯೊಡನೆ ರೇಲ್ವೆ ಪ್ರವಾಸ ಮಾಡುವಾಗ 'ಟೋಪಾಪ'ನೊಬ್ಬನು (ಹೆಂಡತಿಯು ಸಮಕ್ಷಮ ಎಂದು ಬೇರೆ ಹೇಳಬೇಕಾಗಿಲ್ಲ) ಕುತ್ತಿಗೆಗೆ ಕೈಕೊಟ್ಟು ದಬ್ಬಿದ ಅನುಭವ?—ಯಾರಿಗಾದರೂ ? ತಮ್ಮಲ್ಲಿ ಯಾರಿಗಾದರೂ ? ಇಲ್ಲವೆ—ಅಥವಾ, ಅಂತಹ ಯಾವ ಅನುಭವವೂ ಎಲ್ಲರಿಗಿದ್ದಿರಲಿಕ್ಕಿಲ್ಲ; ಹೋಗಲಿ. ಕೊನೆಗೆ ಅಂತಹ ಪ್ರಸಂಗದ ಕಲ್ಪನೆಯಾದರೂ ಬಹುಜನರಿಗೆ ಶಕ್ಯವಿರಲು ಸಾಕು. ಕಯ್ಚೀಳಗಿನ ಬಡಿಗೆ ಎಲ್ಲಿದೆ ಎಂದು ಮನೆಯ ಮೂಲೆಗಳನ್ನೆಲ್ಲ ಕಿತ್ತು ಹಾಕಿ ಕನಲಿ ಕೆದರಿ ಒದರಿ ಹೆಂಡತಿಯ ಮೇಲೆ ಕಿರ್ರನೆತ್ತಿದಾಗ ಕಯ್ಚೀಳಗೆಯೆ ಇದ್ದಿತು ಬಡಿಗೆ ಎಂದು——ಸಾಕು. ಈಗಲೂ ಪ್ಮೈ ಜುಮ್ಮೆನ್ನಿಸುವುದು, ಅಂತಹ ಅವಮಾನದ ಪ್ರಸಂಗಗಳನ್ನು ನನೆಸಿಕೊಂಡವರಿಗೆ. ಬರಿಯ ಅವಮಾನದ ಪ್ರಶ್ನೆಯಿಲ್ಲ. ಬೇಕಾದಂತಹ ಅವಮಾನವನ್ನು ನುಂಗಿ ಮರೆಯುವ ಗಂಡಸುತನ ಇದೆ ಎಷ್ಟೋ ಜನರಿಗೆ. ಆದರೆ—

✓ ಅಂತಹದೊಂದು 'ಆದರೆ' ಈಗ ಈ ತರುಣರ ಮುಂದೆ ನಿಂತಿದೆ—ಹೆಣ್ಣಿನ ರೂಪ ತಾಳಿ ನಿಂತಿದೆ ! ಸಹನವಾದೀತೆ? ಹೆಂಗಸಿನ ಎದುರಿನಲ್ಲಿ ಅವಮಾನ ಹೊಂದಿ ಯಾವ ಗಂಡಸು ಸಹಿಸುವನು ? ಹೆಂಗಸಿನ ಎದುರಿನಲ್ಲಾದ ಅವಮಾನಕ್ಕಾಗಿ ರಾವಣನು ಸೀತೆಯನ್ನು ಕದ್ದೊಯ್ದನು, ಭೀಮನು ಕ್ರೂರಪಶುವಿನಂತೆ ದುಃಶಾಸನನ ರಕ್ತವನ್ನು ಕುಡಿದನು, ದುರ್ಯೋಧನನು ತುಂಬಿದ ಸಭೆಯಲ್ಲಿ ದ್ರೌಪದಿಗೆ ತೊಡೆ ತೋರಿಸಿದನು. ಹೆಂಗಸಿನ ಎದುರಿನಲ್ಲಿ ಅವಮಾನ ! ಸಮಗಾಗಿ ತಾಳುವ, ಬಾಳುವ ಹೆಂಗಸಿನ ಎದುರಿನಲ್ಲಿ ಅವಮಾನವೆ ? ನವು ಆಳಿನಂತಿದ್ದ ಹೆಂಗಸಿನ ಕಣ್ಣೆದುರು ಅವಮಾನವೆ ? ಎಂದಿಗೂ ಆಗದು. ಗಂಡಸಿನ ಎದುರು ಹೆಂಗಸಿನ ಅವಮಾನವಾಗಲಿ, ಆದೇಕೆ—ಗಂಡನ ಎದುರಿನಲ್ಲಿ ಹೆಂಡತಿಯ ಅವ

ಮಾನವಾಗಲಿ, ನಡೆಯುಒಹುದು; ಪುರಾಣಕಾಲದ ದ್ರೌಪದಿಯು ಆಧಾರ ಏದೆ ಅದಕ್ಕೆ. ಆದರೆ-

ಹೆಂಡತಿಯು ಎದುರು ಗಂಡನಿಗೆ ಅವಮಾನ—? ಹೆಂಗಸಿನ ಎದುರು ಗಂಡಸಿಗೆ ಅವಮಾನ—? ತುಳಜಿಯು ಎದುರು ತಮ್ಮ ಅವಮಾನ! ಬದಿಯಲ್ಲಿ ಪೋಲೀಸನಿರಲಿ, ಪರಮಾತ್ಮನಿರಲಿ ತುಳಜಿಯು ಎದುರು ತಮಗೆ ಅವಮಾನವಾದರೆ——ಇನ್ನೇನು, ಪೋಲೀಸನೆ ಇದ್ದಲ್ಲಿ ಸಹಿಸಬಹುದು. ಆದರೂ ತುಳಜಿಯು ಎದುರು ಎವೆಯಿಕ್ಕದೆ ನಿಂತಾಗ ಸಹಿಸುವದೆಂತು? ಅದಕ್ಕಿಂತಲೂ ತಮಗೆ ಅಪಮಾನವೆ ಆಗಿಲ್ಲವೆಂದು ತಿಳಿದುಕೊಂಡರೆ? ಹಾಗೆ ತೋರಿಸಿದರೆ? ನನಗೆ ಅವಮಾನವೆ ಆಗಿಲ್ಲವೆಂದು ಹಟ ಹಿಡಿದವನಿಗೆ ಅವಮಾನವಾಗುವುದಾದರೂ ಹೇಗೆ? ಅದಕ್ಕೆಂದೇ ಅಲ್ಲಿ ನೆರೆದ ತರುಣರಲ್ಲಿ ಒಬ್ಬರೂ ಓಡಿಹೋಗಲಿಲ್ಲ. ಎದುರು ನಿಂತವನು 'ತಪಾಸ್ನೀ ಪ್ಲೀಸ' ಎಂಬ ಕಲ್ಪನೆಯಾಗಿದ್ದರೂ ಓಡಿಹೋಗಲು ಯತ್ನಿಸಲಿಲ್ಲ. ಒಬ್ಬರೂ ಇಲ್ಲ, ಒಬ್ಬೊಬ್ಬರಾಗಿಯೂ ಇಲ್ಲ. ಒಬ್ಬನೆ ಹೋಗುವುದು ಮಿಕ್ಕವರಿಗೂ ಕಾಣುವುದಲ್ಲ. ಇದಲ್ಲದೆ ಇನ್ನೂ ಒಂದು ಅವಮಾನ. ತುಳಜಿಯು ತಮ್ಮನ್ನೆ ನೋಡುತ್ತಿದ್ದಾಳೆ. ಅದರಲ್ಲೇನು ಆಶ್ಚರ್ಯ? ತಮ್ಮ ಸಲುವಾಗಿ ಆವಳಿಗೆ ಅಷ್ಟೊಂದು ಕಾಳಜಿ (ಎಂದು ಎಲ್ಲರೂ ಒಬ್ಬೊಬ್ಬರಾಗಿ ತಿಳಿದರು). ಆದರೆ ನಾರಾಯಣನೂ ಅವಳನ್ನು ನೋಡುತ್ತಿದ್ದಾನೆ—— ಕಣ್ಣು ಕೆಕ್ಕರಿಸಿ ನೋಡುತ್ತಿದ್ದಾನೆ! ತಡೆಯದಾಯಿತು ಎಷ್ಟೊ ತರುಣರಿಗೆ. ಪೋಲೀಸನಾದ ಮಾತ್ರಕ್ಕೆ ಮಂದಿಯ ಹೆಂಗಸರ ತಪಾಸಣೆ ಮಾಡುವ ಅಧಿಕಾರವೆಲ್ಲಿಂದ? ನಡುಗುವ ದೇಹದಿಂದ, ಗುಡುಗುವ ದನಿಯಿಂದ

"ಏ, ಕೆಲಸಾ ಮಾಡ್ತೀಯೊ? ಮಂದೀ ಹೆಂಗ್ಸರ್ನ ನೋಡ್ತೀಯೊ?"

ಇಂತಹರಡೆ ದನಿ ಎಂದು ಹೇಳುವಂತಿಲ್ಲ, ಯಾಕೆಂದರೆ ಎಲ್ಲರೂ ಏಕಕಾಲಕ್ಕೆ ಒದರಿದರು. ನಾರಾಯಣನು ಪೆಚ್ಚನಾದ. ಹೆದರಿಕೆಯಿಂದಲ್ಲ, ತಾನು ಇದುವರೆಗೆ ನೋಡುತ್ತಿದ್ದ ವಸ್ತುವಿಶೇಷವು ಒಂದು ಹೆಂಗಸು, ಒಂದು ಪ್ರಾಣಿ ಎಂಬುದನ್ನು ಕೇಳಿ. ಚಕಿತನಾದ. 'ಆಂ'—ಎಂದ.

"ಅರಿ ಇಲ್ಲ ವಸ್ತ್ರಾರಿ ಇಲ್ಲ—ಸಿಕ್ಸಿಕ್ಕವನ್ನ ನೋಡಿ ಬಾಯ್ಬಿಟ್ರೀ?"

"ಯಾರಿಗೂ ಅದು ಸೀ ಸಿ ಕ್ಕ ಸಿ ಕ್ಕ ವ್ರು ಅಂದದ್ದು?"

ಕಿವಿಗೊಟ್ಟು ಕಣ್ಣಿಟ್ಟು ಬಾಯ್ಬಿಟ್ಟು ಕೇಳಿದನು ನಾರಾಯಣ. ದನಿಯು ಗಂಡಸಿನದಲ್ಲ—ಆದುದರಿಂದ ಈ ವಸ್ತುವಿಶೇಷವು ಹೆಂಗಸು ಇದ್ದಿರಬಹುದೆ — ಎಂದು ಸಂಶಯದಿಂದ ನೋಡಿದನು. ಉಟ್ಟದ್ದು ಸೀರೆ — ಆದುದರಿಂದ ಹೆಂಗಸು ಇದ್ದರೂ ಇರಬಹುದು— ಎಂದು ಸಮಾಧಾನದಿಂದ ನೋಡಿದನು. ತಲೆಗೆ ಕೂದಲು, ಕಾಲ್ಬೆರಳಿನಲ್ಲಿ— ಹೆಂಗಸು! ಅಯ್ಯೋ ಹೆಂಗಸು! ದೇವಾ, ಹೆಂಗಸು! ರಾಮರಾಮಾ, ಇದು ಹೆಂಗಸು! ಎಂದು ಮೊರೆಯಿಡುವವನಂತೆ ಸುತ್ತಲೂ ನೋಡಿದನು.

ತಂಡದಲ್ಲಿ ನಗೆ. ಇದುವರೆಗೆ ತಡೆದುದಕ್ಕಾಗಿ ಗದ್ಗದ ನಗೆ. ಹೆದರಿಕೆಯ ಉರಿಯನ್ನು ನೊಂದಿಸುವ ಗಾಳಿಯ ಸೆಳೆತದಂತಹ ನಗೆ.

"ನಾಚಿಗೊಂಡ್ತೇಳು ಹುಡುಗ ನಿನ್ನೆಸರ್ಹೇಳ್ಲಿಕ್ಕೆ." ಗಹಗಹಿಸಿ ನಗುವ ತರುಣಿಯರನ್ನು ನೋಡಿದನು ನಾರಾಯಣ.

"ನಾಚಿಗೋಳ್ಳಿಕ ಮಾಡಿಕೊಂಡ್ಹೋಂಡ್ರೀ ಅಂತ ತಿಳ್ಕ್ಯಾನೇನು ಜಂಡಪ್ಪ!" ನೊಂದ ಪಾತಿವ್ರತ್ಯದ ದನಿ—'ಇದೇನು ಪಂಚ ಕನ್ಯೆಯರಲ್ಲೊಂದೊ, ಇಲ್ಲವೆ ಪಂಚಮ ಕನ್ಯೆಯೊ?' ಎಂದು ಕುತೂಹಲದಿಂದ ನೋಡಿದನು ನಾರಾಯಣನು. ನಮ್ಮ ಸಮಾಜದಲ್ಲಿ, ನಮ್ಮ ಸಾಹಿತ್ಯದಲ್ಲಿ ಮಾತಿಗೆ ಹೆದರದ ಚದುರೆಯರೆಂದರೆ ಹೊಲತಿಯರು, ಎಂದು ಬಿ. ಎ. ಪರೀಕ್ಷೆಗಾಗಿ ಓದಿದ್ದನು ನಾರಾಯಣನು. [ಪರೀಕ್ಷೆಯಲ್ಲಿ 'ಹೊಲತಿ' ಎಂದು ಬರೆದಿದ್ದಿಲ್ಲ, 'ಹೊಲೆವೆಣ್ಣು' ಎಂದು ಬರೆದಿದ್ದನು). ಆದಕಾರಣ ಪಂಚಮ—ಕನ್ಯಾ—ಕುತೂಹಲ ನಾರಾಯಣನಿಗೆ.

ತರುಣಿಯಲ್ಲಿ ಚೈತನ್ಯ! ನಾರಾಯಣನಿಗೆ ತಿಳಿಯದು; ಶಾಲಿಗ್ರಾಮವನ್ನು ನೋಡಿ ವೈಷ್ಣವರಿಗೂ, ಕೃಷ್ಣನನ್ನು ನೋಡಿ ಭಕ್ತರಿಗೂ, ಮೇಘವನ್ನು ನೋಡಿ ವಿರಹಿಗಳಿಗೂ,ಕತ್ತಲೆಯನ್ನು ನೋಡಿ ಕಳ್ಳರಿಗೂ, ಇದ್ದಲಿಯನ್ನು ನೋಡಿ ವೈಜ್ಞಾನಿಕನಿಗೂ, ಕೋಗಿಲೆಯನ್ನು ನೋಡಿ ಕವಿಗಳಿಗೂ— ಕಪ್ಪುಬಣ್ಣದಿಂದ ಎಷ್ಟು ಆನಂದಾತಿರೇಕವಾಗುವುದೊ

ಅಷ್ಟು ಆನಂದ ಈ ತರುಣರಿಗೆ ತುಳಸಿಯ ಕಪ್ಪು ಮುಖವನ್ನು ನೋಡಿ ತುಳುಕುವುದು ಎಂಬುದೂ ನಾರಾಯಣನಿಗೆ ತಿಳಿಯದು. ಸದ್ಯದಲ್ಲಿ ಪ್ರೇಮಕ್ಕೆ ತರುಣಿಯ ಮೈಬಣ್ಣಕ್ಕಿಂತ ತರುಣರ ಮೈಗಳ್ಳತನವೆ ಕಾರಣವು ಎಂಬುದೂ ಅವನಿಗೆ ತಿಳಿಯದು. ಅದಕ್ಕೆಂದೇ "ಮಾಡ್ಕೊಂಡ ದ್ಯಾಂಪ್ತಿ (ದಂಪತಿ) ಅಂತವ್ರು! ಹಹಹ!....ಮಾಡ್ಕೊಂಡ್ – ಹೆಹ – ಬಂತಪ ಪರಸಂಗ ಮೈಮ್ಯಾಗ!" ಎಂದು ಗಹ್ಗಹಿಸಿ ತಂಡವು ನಗುವಾಗ ನಾರಾಯಣನು ಹುಚ್ಚನಂತೆ ಒಬ್ಬರೊಬ್ಬರನ್ನು ಮಿಕಿಮಿಕಿ ನೋಡುತ್ತಿದ್ದನು.

"ಮೈಮ್ಯಾಗಿನ ಎಚ್ಚರ ತಪ್ಪಿದರೆ—" ನಗೆಯಲ್ಲಿ ಬಿದ್ದ ಬಳಿಯುಳಿಗೆ ನಿಂತಿದ್ದ ಕಣ್ಣುಗಳನ್ನರಳಿಸುತ್ತ ನುಡಿದಳು ತುಳಸಿ, "ಮೈಮ್ಯಾಗಿನ ಎಚ್ಚರ ತಪ್ಪಿದರೆ ಬ ರ ತ ದ ಪ ರ ಸ ಂ ಗ ಬಾ ಯಿ ಮ್ಯಾ ಗ— ಸಿಕ್ಕ ಸಿಕ್ಕವ್ರಿಗೆ ಸಿಕ್ಕಾಂಗ ಮಾತಾಡಿದರೆ" ಎಂದು ರತಿದೇವಿಯ ಹುಬ್ಬಿನಂತೆ ಮೂಗುಮುರಿದಳು.

"ಮತ್ತೆಲ್ಲಿಂದ ಬಂದ್ರು ಈ ಸಿಕ್ಕ ಸಿಕ್ಕವ್ರು?"

"ಯಾಕೊ——" ಎಂದು ಹೊರಟಳು ತುಳಸಿ. ನಾರಾಯಣನಿಗೆ ಅರ್ಥವಾಗಲಿಲ್ಲ, ಶಬ್ದವೂ ಸರಿಯಾಗಿ ಕೇಳಿಸಲಿಲ್ಲ.

"ಏ——" ನಡುಗಿದನು ನಾರಾಯಣನು. ಈ ಶಬ್ದದ ಅರ್ಥವಾಯಿತು, ಮೊದಲಿನ ಶಬ್ದದ ಸಂದರ್ಭವೂ ತಿಳಿಯಿತು. ತುಳಸಿಯು ತಿರುಗಿ ನಿಂತಳು. ಇನ್ನೂ ಬರುವುದಿದೆ ಹೊಸ ಶಬ್ದ ಎಂಬ ತಯ್ಯಾರಿಯಿಂದ ಕಿವಿಮುಚ್ಚಿಕೊಳ್ಳಬೇಕೆನ್ನಿಸಿತು ನಾರಾಯಣನಿಗೆ. ಕಿವಿಗಳನ್ನು ಮುಚ್ಚಿಕೊಂಡನು, 'ಒಲ್ಲೆ, ಒಲ್ಲೆ, ಸಾಕು' ಎನ್ನುತ್ತ ಬ್ರಾಹ್ಮಣನು ಎಲೆಯ ಮೇಲೆ ಕೈಕಟ್ಟುವಂತೆ. ಸುಸಂಸ್ಕೃತ ಬುದ್ಧಿಯು ಬೇಡೆನ್ನುವುದು, ಕವಿಯಂತೆ ಕುತೂಹಲವುಳ್ಳ ಹೃದಯವು ಬೇಕೆನ್ನುವುದು.

"ಅಯ್ಯೊ! ಹೆಂಗ್ಸರಿಗೆ ಬಯ್ಯೋ ಗಂಡಸಿನ್ನ ನೋಡ್ರ!" ತನ್ನನ್ನು "ಗಂಡಸು" ಎಂದಳಲ್ಲ ಎಂಬ ಭಾವನೆಯಿಂದಲೊ ಏನೊ—ಬೈದ ತರುಣನು ಮೀಸೆಗೆ ಹುರಿಹಾಕಿದನು. "ಅದೇನ ಮೀಸೆಯೊ, ಏನ್ ಒಲೀ ಮುಂದ ರೊಟ್ಟಿ ಬೆಯ್ಸೋವಾಗ ಬಡೆದ ಇದ್ದಲಿ ಬೂದಿಯೊ! ಹೆಂಗ್ಸರ

ಮುಂದಿನ ಬಡಿಗೆ ತಾನೆ ಜಂಬ! ಬಡಿ ಬೇಕಾದರೆ—ಆ ಮ್ಯಾಗಿನೂರ ಮಲ್ಲಣ್ಣನ ಮುಂದ ನಿನ್ನ ಬಡಿವಾರ!" ಎಂದು ಆ ಮೀಸೆಯ ತರುಣನನ್ನು ಅವಮಾನಿಸುವವಳಂತೆ ನಿಂತಳು. ಈ ದೃಷ್ಟಾಂತದ ಮರ್ಮ ನಾರಾಯಣನಿಗೆ ಹೊಳೆಯದಿದ್ದರೂ ಆ ತರುಣರಿಗೆ ತಿಳಿಯಿತು. ಇದೀಗ ಮಾತು ಕೊಟ್ಟ ಮೀಸೆಗೆ ಹುರಿಹಾಕಿದವನನ್ನು 'ಮ್ಯಾಗಿನೂರ ಮಲ್ಲಣ್ಣ'ನು ಕುಸ್ತಿಯಲ್ಲಿ ಮಣ್ಣು ಮುಕ್ಕಿಸಿದ್ದನು. ಆದರೂ ಸದ್ಯಕ್ಕೆ ಆ ಅಪಜಯಕ್ಕಿಂತಲೂ 'ಮಲ್ಲಣ್ಣ' ಎಂದಳಲ್ಲ ಈಕೆ ಆ ಮಗನಿಗೆ ಎಂದು ಮೀಸೆಯಕ್ಕೆ ಮುನಿಸು ಮುಚ್ಚಿತ್ತು ಸಿಟ್ಟಿನಿಂದ. ಮಾನಗೇಡಿ ಮುಲ್ಲ್ಯಾ! ಅವನೀಗ 'ಮಲ್ಲಣ್ಣ'ನಾದನೆಂದರೆ ತುಳಜೆಯು ಅವನನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದಳೆಂಬುದನ್ನು ಬೇರೆ ಹೇಳಬೇಕಾಗಿರಲಿಲ್ಲ.

"ಮಲ್ಲಣ್ಣೋ! ಹಾಹಾ! ಎಲ್ಲಿದ್ದಾನ ಮಲ್ಲಣ್ಣೋ? ಈವತ್ತ ಥಿಂಜೆಗ ಕೆರೀಗ ಬಂದ್ನೋಡು ಮಲ್ಲಣ್ಣೋ ಮಕ(ಮುಖ)ದ ಗುರ್ತ ಹತ್ತೈತೇನ!"

ಒಂದೆಡೆ ಮಲ್ಲಣ್ಣನೇ 'ವಧ'ದ ಪ್ರತಿಜ್ಞೆಯನ್ನು ತೊಟ್ಟಂತಾಯಿತು, ಒಂದೆಡೆ ಅವಳನ್ನು ಸಂಜೆಗೆ ಕೆರೆಯ ಕಡೆ ಬಾ ಎಂದು ಸೂಚಿಸಿದಂತೂ ಆಯಿತು —— ಎಂದು ತರುಣರೆಲ್ಲರ ಮುಖಕ್ಕೆ ಕಳೆಯೇರಿತು.

"ಮರೆತು ಈಸಿಗೀಸಿ. ಅದಕ್ಕ ಕಲ್ಲಕಟ್ಟಲೀಕ ಬರ್ತೀನಿ ಕೆರೀಗ —— ಆಗ ನೋಡ್ತೀನಿ ಮಕ!' ಎಂದವಳೆ ಮೈ ಮಣಿಸುತ್ತ, ಕೊರಳ ಕುಣಿಸುತ್ತ ಮಾಯವಾದಳು ತುಳಜೆ; ಬಾಯ್ದೆರೆಯುತ್ತ ಕಣ್ದೆರೆಯುತ್ತ ಮಂಕನಾದನು ನಾರಾಯಣ. ಹೋಗುವಾಗ ನಗೆಯೊಂದನ್ನು ಬೀರಿದ್ದಳಾಕೆ ನಾರಾಯಣನನ್ನು ನೋಡಿ.

* * * *

ಆ ನಗೆ – ಆ ನಗೆ ——? ನಾರಾಯಣನಿಗೆ ತೊಡಕು ಬಿದ್ದಿತು. ಎಲ್ಲಿಯೊ ಆ ನಗೆಯನ್ನು ನೋಡಿದಂತೆ, ಎಂದೊ ಆ ನಗೆಯ ಅರ್ಥ ತಿಳಿದಂತೆ ಅನ್ನಿಸುತ್ತಿತ್ತು —ಅವನಿಗೆ .... ಎಲ್ಲಿ? ಯಾವಾಗ? ಯಾರೊ ನಕ್ಕಂತೆ ಭಾಸವಾಯಿತು. ಓಹೊ! ನಗುತ್ತಲಿದ್ದವರು ತನ್ನ ಗೆಳೆಯರು, ತನ್ನನ್ನು ಹುಚ್ಚನೆಂದು ತಿಳಿದಿದ್ದಾರೆ. ಹುಚ್ಚು ಮಾಡಬೇಕೆಂದಿದ್ದಾರೆ! ಎಂತಹ ಕಟುಕ—ವಿನೋದ ಅವರದು! ತಾವಾಗಿಯೆ ಕರೆದುಕೊಂಡು ಹೋದರು

ತನ್ನನ್ನು. ತಾನು 'ಒಲ್ಲೆ' ಎಂದು ಹಟ ಹಿಡಿದಿದ್ದನು. 'ಗೆದ್ದಲಿ' ಎಂದರು ತನಗೆ; ಪುಸ್ತಕವನ್ನು ತಿಂದು ಮಣ್ಣಿನಗೂಡು ಕಟ್ಟಿಕೊಳ್ಳುವವ ತಾನು ಎಂದರು. ಹಾಗೆ ನೋಡಿದರೆ ಕಾಲೇಜಿನಲ್ಲಿದ್ದಾಗ ಅಷ್ಟೊಂದು ಆಸಕ್ತಿಯಿಂದ ಅಭ್ಯಾಸಮಾಡುತ್ತಿರಲಿಲ್ಲ ನಾರಾಯಣನು. ಆದರೂ ಆಟ–ಪಾಟಗಳಲ್ಲಿ ರಂಗತಮಾಷೆಗಳಲ್ಲಿ ನಾರಾಯಣನಿಗೆ ಇಷ್ಟ ಇದ್ದಿರಲಿಲ್ಲ. ಇದಲ್ಲದೆ ಸಂಜೆಯೂಟವಾದ ಮೇಲೆ ಎಲ್ಲ ವೃತ್ತಪತ್ರಿಕೆಗಳನ್ನು ಓದುವುದೊಂದು ರೂಢಿ ಅವನಿಗೆ. ಅದಕ್ಕೂ ಅಭ್ಯಾಸಕ್ಕೂ ಯಾವ ಸಂಬಂಧ–ಎಂದು ಅವನ ತಂದೆಯೂ ಆಗಾಗ ಬೈಯುತ್ತಿದ್ದರು ಅವನನ್ನು. ಹೀಗಿರುವಾಗ ತನಗೆ 'ಗೆದ್ದಲಿ' ಎನ್ನಬೇಕೆ ತನ್ನ ಗೆಳೆಯರು! ''ನಾನು news papers (ನ್ಯೂಜ್ ಪೇಪರ್ಸ್ = ವೃತ್ತಪತ್ರಿಕೆ) ಓದ್ತೀನಿ, ಒಲ್ಲೆ'' ಎಂದನು ನಾರಾಯಣನು. ''ಪೇಪರ್ನಿನಲ್ಲಿ ಎಂದಿಗೂ ಸಿಗ್ದ ತಮಾಷೆ ತೋರಿಸ್ತೀವಿ, ನಡಿಯೊ, ಗೆದ್ದಲಿ–ಗುರುವೆ'' ಎಂದರು ಅವನ ಗೆಳೆಯರು. ನಿರ್ವಾಹವಿಲ್ಲದೆ ಹೋಗಬೇಕಾಯಿತು, ''ಸಿನೆಮಾ–ನಾಟ್ಕಕ ಹೋದ್ರೂ ಹೋಗ್ಬಹುದು ಇವರು....ಕುರ್ಚಿಯಲ್ಲಿ ತಗಣಿ ಇದ್ದಿಲ್ಲಾಂದ್ರೆ ಅಲ್ಲೇ ನಿದ್ದೆ ಮಾಡೆದ್ರಾಯ್ತು'' ಎಂಬ ವಿಚಾರದಿಂದ ಮುಗುಳ್ನಗೆ ನಗುತ್ತಲೆ ಗೆಳೆಯರ ಹಿಂದಿನಿಂದ ನಡೆದನು....ನಡೆದನು, ನಡೆದನು–ಯಾರೊ ನೂಕಿದಂತಾಯ್ತು–ತಡವರಿಸಿದನು. ಮುಖವೆತ್ತಿ ನೋಡಿದನು. ಇಬ್ಬರೂ ತನ್ನ ಗೆಳೆಯರು ಒಂದೆರಡು ಹೆಜ್ಜೆ ಮುಂದೆ ನಡೆದಿದ್ದಾರೆ .... ತನ್ನನ್ನು ನೂಕಿದ್ದು ನಿಜ ನೂಕಿದ ಆ ಅಜಾನುಬಾಹು ವ್ಯಕ್ತಿಯು ''ಚಲ್ತಾ ಕ್ಯಾ?'' ಎಂದಿತು. ಮೀಸೆ-ಗಡ್ಡಗಳ ನಡುವೆ ತಾಂಬೂಲದಿಂದ ಕೆಂಪಾದ ಆ ವ್ಯಕ್ತಿಯ ಬಾಯಿಯು ಕತ್ತಲೆಯ ಬಯಲಿನಲ್ಲಿ ಸ್ಟೇಶನದ ಕೈಕಂಬದ ಕೆಂಪು ದೀಪದಂತೆ ಕಂಡಿತು ನಾರಾಯಣನಿಗೆ. ಫರ್ಸ್ಟಕ್ಲಾಸದ ಕಿಟಿಕಿಯಲ್ಲಿ ಕುಳಿತು ''ಚಲೊ–ಜಾವ್ ಆಗೇ'' ಎಂದು ಗದ್ದರಿಸುವ ಪಠಾಣ ಜಾತಿಯದೆ ಇದೂ ವ್ಯಕ್ತಿ ಎಂದೂ ತಿಳಿಯಿತು. 'ಚಲೊ ಜಾವ್' ಎಂದಂತೆಯೆ ಕೇಳಿಸಿತು ನಾರಾಯಣನಿಗೆ. ಗಿಡವನ್ನೇರುವ ಇಣಚಿಯಂತೆ ಸರ್ರನೆ ಓಡಿದನು ತನ್ನಿಬ್ಬರೂ ಗೆಳೆಯರ ನಡುವೆ. ಅವರಿಗೆ ಯಾವುದನ್ನೂ ತಿಳಿಯಗೊಡಬಾರದೆಂದವನಿಚ್ಛೆ. ಅವರಾದರೂ ಇವನ ಕಡೆ ಲಕ್ಷ್ಯವಿಲ್ಲದೆ ನಡೆದಿ

ದ್ದಾರೆ ಮುಖವನ್ನೆತ್ತಿಕೊಂಡು. ನಾರಾಯಣನು ನೋಡಿದನು–ಹಿಂದೆ, ಮುಂದೆ, ಎರಡೂ ಬದಿ, ಮೇಲೆ, ಕೆಳಗೆ, ಸುತ್ತಲೂ ನೋಡಿದನು. ಪರಿಸ್ಥಿತಿಯ ಪರಿಚಯವೆ ಹತ್ತಲಿಲ್ಲ. ಬದಿಯ ಮಹಡಿಯ ಮನೆಯಲ್ಲಿ ಯಾರೊ ನಕ್ಕಂತಾಯಿತು, ಮುಖವನ್ನೆತ್ತಿ ನೋಡಿದನು—ಹೆಂಗಸೊಬ್ಬಾಕೆ ಕಿಟಿಕಿಯಿಂದ ಕುಳಿತಲ್ಲಿಯೆ ತನ್ನನ್ನು ನೋಡಿ ನಗುತ್ತಿದ್ದಾಳೆ, ಇನ್ನೊಬ್ಬಾಕೆ ಅವಳ ಹಿಂದಿನಿಂದ ನಿಂತುಕೊಂಡು ಯಾರನ್ನೊ ಕರೆಯುತ್ತಿದ್ದಾಳೆ. ಈಗ ತಿಳಿಯಿತು ಅವನಿಗೆ ತಾನೆಲ್ಲಿ ನಡೆದಿರಬಹುದೆಂಬುದು. ಸೂಳೆ–ನಾಚಿದನು. ಸೂ ಳೆ ಗೇ ರಿ ! ಮೈ ಜುಮ್ಮೆಂದಿತು. ಪುರಾಣನು ಭೀಮಸೇನನಂತೆ ಮತ್ತೆ ಎದುರು ನಿಂತಂತಾಯಿತು....ಭೀಮಸೇನಂತೆ ! ಒಂದು ನಿಮಿಷ ಸಮಾಧಾನವಾಯಿತು ನಾರಾಯಣನಿಗೆ ತಾನೀಗ ನಾಚಬೇಕಾಗಿಲ್ಲ ಎಂದು. "ಇಂತೆಸೆವ ಗಣಿಕಾಸಮೂಹಮಂ ನೋಡುತ । ಲ್ಲಿಂ ತಳರ್ದನಿಲಜಂ—" ಎಂದು ಜೈಮಿನಿಭಾರತದಲ್ಲಿ ಭೀಮನು ಎಡಬಲದ ವೇಶ್ಯೆಯರನ್ನು ನೋಡುತ್ತ....ಬದಿಯದೊಂದು ಸಣ್ಣ ಬೀದಿಯನ್ನು ಸೇರಿದರು ನಾರಾಯಣನ ಗೆಳೆಯರು. ಕ್ಷಣಮಾತ್ರ ಹೆದರಿಕೆಯಾಯ್ತು ನಾರಾಯಣನಿಗೆ. ಗುರುತಿಲ್ಲದ ನಾಯಿಯ ತಲೆಯ ಮೇಲೆ ಕಯ್ಯಾಡಿಸುವವನಂತಾಯಿತು ಅವನ ಸ್ಥಿತಿ. ಕಯ್ಯಾಡಿಸುವಾಗ ಹೆದರಿಕೆ, ಕಚ್ಚಬಹುದೆಂದು; ಆದರೂ ಕೈಕೊಸರಿಕೊಳ್ಳಲೂ ಹೆದರಿಕೆ, ಕಚ್ಚಬಹುದೆಂದು. ಮತ್ತೆ ಒಮ್ಮೆಲೆ ಓಡಿ ತನ್ನ ಗೆಳೆಯರನ್ನು ಕೂಡಿಕೊಂಡನು. ಮೂವರು ಒಂದು ಮಹಡಿಯನ್ನೇರಿದರು. ಪಾವಟಿಗೆಗಳ ಚಿಕ್ಕ ದಾರಿಯಲ್ಲಿ ಕತ್ತಲೆ. ಪಾವಟಿಗೆಗಳೂ ಅಗಲವಾದುವಲ್ಲ. ಮೇಲೆ ಹೊರಟವನು ಅಲ್ಲಿಂದಲೆ ತಿರುಗಬೇಕೆಂದರೆ ಅವಕಾಶವಿಲ್ಲ–ಅಷ್ಟು ಇಕ್ಕಟ್ಟು ಮಹಡಿಯ ದಾರಿಯಲ್ಲಿ. ಇಷ್ಟರಲ್ಲಿ ಮೇಲಿನ ಪಾವಟಿಗೆಗೆ ಝಗ್ಗೆಂದು ಮೇಣಬತ್ತಿಯೊಂದು ಎಲ್ಲಿಂದಲೊ ತಾನಾಗಿಯೆ ಬಂದು ನಿಂತಿತು. ಹೆದರಿದನು ನಾರಾಯಣನು. ಬೀದಿಯೊಳಗಿನ ಆ ಬೆಳಕು, ಆ ಸದ್ದು, ಆ ಗಲಾಟೆ, ಆ ಜನಸಂದಣಿ—ಇದೊಂದರ ಸುಳಿವಿಲ್ಲ ಪಾವಟಿಗೆಗಳನ್ನು ಹತ್ತುವಾಗ. ಸಮೀಪ ಹೋದಂತೆ ಒಂದು ವಿಕಾರವಾದ ಮುಖ ಕಾಣಿಸಿತು ಮೇಣಬತ್ತಿಯ ಮಗ್ಗುಲಲ್ಲಿ. ಚೀರಬೇಕೆಂದನು ನಾರಾಯಣನು. ಸಿಂಹದ ದವಡೆ

ಯಂತೆ ತೆರೆಯಿತು ಆ ಮುಖ. ಹಲ್ಲಿಲ್ಲದ ಮುದುಕಿ! ಹೇಸಿದನು ನಾರಾಯಣನು. ಪಾವಟಿಗೆಗಳನ್ನು ಹತ್ತಿ ಕೋಣೆಯೊಂದನ್ನು ಹೊಕ್ಕರು ಮೂವರೂ. ಅಲ್ಲಿಯೂ ಕತ್ತಲೆ! ಇನ್ನೊಂದು ಕೋಣೆ – ಬೆಳಕು, ಕಣ್ಣು ಕುಕ್ಕುವ ಬೆಳಕು, ಬಣ್ಣ ಬಣ್ಣದ ಪಟಗಳು, ಸುಗಂಧೋತ್ಪನ್ನ ಸುವಾಸನೆ–ಎಚ್ಚರವಿಲ್ಲದಂತಾಯಿತು ನಾರಾಯಣನಿಗೆ ಅಲ್ಲಿ ಎಷ್ಟೊತ್ತು ಕುಳಿತನೋ ಗೊತ್ತಿಲ್ಲ ಅವನಿಗೆ. ಯಾರು ಮಾತನಾಡಿದರೋ ಗೊತ್ತಿಲ್ಲ ಅವನಿಗೆ. ಯಾರೋ ಬೆನ್ನು ಚಪ್ಪರಿಸಿದರು, 'ಆಂ' ಎಂದನು ಗಾಬರಿಯಿಂದ. ಗೆಳೆಯರು ಎದ್ದು ನಿಂತಿದ್ದಾರೆ, ತಾನೂ ಎದ್ದು ನಿಂತನು. ಗೆಳೆಯರು ಹೊರಟರು, ತಾನೂ ಹೊರಟನು.... ಇದೇನು....?....ಕನ್ನಡಿಯಲ್ಲಿ ಏನೋ ನೋಡಿದೆ! ಯಾರು–ಯಾವಾಗ–? ಮುಖ ತಿರುಗಿಸಿ ನೋಡಿದನು; ತರುಣಿಯೊಬ್ಬಳು, ಸುಂದರಿಯೊಬ್ಬಳು ಮುಗುಳುನಗೆಯೊಂದನ್ನು ನಕ್ಕು ಮೆಲ್ಲನೆ ತಲೆದೂಗಿದಳು. ಆ ನಗೆ! ಆ ತಲೆ ತೂಗುವಿಕೆ! ಏನೋ–ತಡೆಯು ಬೇಕೆಂದೆನ್ನಿಸಿತು. ಅವಳೂ ಅದನ್ನೇ ಸೂಚಿಸಿದಳು ಎಂಬರ್ಥ ತೋರಿಯಿತು ಅವನಿಗೆ. ಬದಿಗೆ ನೋಡಿದನು – ಗೆಳೆಯರಿರಲಿಲ್ಲ, ಓಡಿದನು ಗಾಳಿಯ ವೇಗದಿಂದ. ಕೆಳಗಿಳಿಯುವಾಗ ತಲೆ ತಟ್ಟಿತು, ಬಾಗಿಲು ಎಡವಿತು–ಆ ಮನೆಯೂ ಕೂಡ ನಾರಾಯಣನನ್ನು ತಡೆಯಬೇಕೆನ್ನುವುದೇನೋ ಎಂಬುವಂತೆ. ಯಾವುದರ ಪರಿವೆ ಇಲ್ಲದೆ ಬೀದಿಗಿಳಿದು ಬೆವರೊರೆಸಿಕೊಳ್ಳುತ್ತ ತನ್ನ ಗೆಳೆಯರ ಪಕ್ಕದಲ್ಲಿ ಸೇರಿದನು. ಅವನ ಹುಚ್ಚು ಮುಖವನ್ನು ನೋಡಿ ಅವರು ಗಹಗಹಿಸಿ ನಗುತ್ತಿದ್ದಾರೆ. ಒಮ್ಮೆಲೆ ಎಚ್ಚತ್ತವನಂತೆ ನೋಡಿದನು----

ಹಳ್ಳಿಯ ತರುಣರೆಲ್ಲರೂ ಗಹಗಹಿಸಿ ನಗುತ್ತಿದ್ದಾರೆ!

ನಾರಾಯಣನಿಗೆ ನಾಚಿಕೆಯಾಯಿತು, ತರುಣರು ತನ್ನನ್ನು ನೋಡಿ ನಗುವರೆಂದಲ್ಲ, ಮೂರು ವರುಷಗಳ ಹಿಂದೆ ಆ ವೇಶ್ಯೆಯ ಮನೆಗೆ ಹೋದುದರ ಸ್ಮರಣೆಯಾಗಿ. ತುಳಸಿಯು ನಿಂತುಕೊಂಡಿದ್ದಲ್ಲಿ ನೋಡಿದನು. ಅವಳು ಅಲ್ಲಿ ಇದ್ದಿರಲಿಲ್ಲ. ಆದರೂ ಆ ನಗೆ! ಆ ತಲೆ ತೂಗುವಿಕೆ! ಅಂದಿನದೂ ಇಂದಿನದೂ ಒಂದೆ! ಅವುಗಳ **ಅರ್ಥವೂ ಒಂದೆ!** ಎಲ್ಲಿಯಾದರೂ ಓಡಿ ಅಡಗಿಕೊಳ್ಳಬೇಕೆಂದೆನ್ನಿಸಿತ್ತು ಅವನಿಗೆ.

ಎಲ್ಲಿ ಹೋದರೂ ಆ ವೇಶ್ಯೆಯ ನಗೆ ಕಣ್ಣು ಕಟ್ಟಿದಂತಾಗಿತ್ತು, ಮನಸಿನಲ್ಲಿ ಒಂದು ಆಸೆ ಮೂಡಿತ್ತು; ಮರುದಿವಸ ಒಬ್ಬನೇ ಹೋಗಿಯೆ ತೀರಬೇಕೆಂದಿದ್ದನು ಆ ವೇಶ್ಯೆಯ ಮನೆಗೆ. ಹಾದಿಯೂ ಗೊತ್ತಿರಲಿಲ್ಲ, ಹೆದರಿಕೆಯೂ ತುಂಬಿತ್ತು. ೮-೧೦ ದಿವಸ ಹಗಲು ಹೊತ್ತಿನಲ್ಲಿಯೆ ವೇಶ್ಯೆಯರ ಬೀದಿಯನ್ನು ಹುಡುಕುತ್ತ ಸುತ್ತಾಡಿ ಕತ್ತಲಾಗುವುದರೊಳಗೆ ಕಾಲೇಜಿನ ತನ್ನ ಕೋಣೆಯಲ್ಲಿ ಬಂದು ಸೇರುತ್ತಿದ್ದನು. ಮನಸ್ಸಿಗೆ ಶಾಂತಿ ಇರಲಿಲ್ಲ, ಸಂಜೆಯೂಟವಾದ ಮೇಲೆ ಸಿಟ್ಟು ಬರುತ್ತಿತ್ತು ಕಾರಣವಿಲ್ಲದೆ, news papors ನೆಲಕ್ಕಪ್ಪಳಿಸುತ್ತಿದ್ದನು, ಆ ಸದ್ದಿಗೆ ಪಕ್ಕದವರು ಕೆಟ್ಟಗಣ್ಣಿನಿಂದ ತನ್ನನ್ನು ನೋಡಲು ಸಿಟ್ಟು ಹೆಚ್ಚಿ ವಾಚನಾಲಯದಿಂದ ಹೊರಬಿದ್ದು ಅಲ್ಲಿಯೆ ದಾರಿಯಲ್ಲಿ ಸುಳಿದಾಡುತ್ತಿದ್ದನು. ಒಂದು ರಾತ್ರಿ ಆಳುಗಳ ಮನೆಯ ಹೆಣ್ಣುಹುಡುಗಿ ಹಾಲು ಕೊಟ್ಟು ಬರುವಾಗ ಹೋಗುವುದನ್ನು ನೋಡಿದನು. ಯಾಕೊ— ಸಿಟ್ಟು ಇನ್ನೂ ಹೆಚ್ಚಿತು, ಅವಳನ್ನು ಕೆಕ್ಕರಿಸಿ ನೋಡುತ್ತ ನಿಂತನು; ಅವಳೂ ಹೋಗುವಾಗ ತಿರುತಿರುಗಿ ನೋಡಿದಳು. ಮಾರನೆಯ ರಾತ್ರಿ ಅದೇ ಸಮಯಕ್ಕೆ ಅಲ್ಲಿಯೆ ಹೋಗಿ ನಿಂತನು, ಅವಳು ಸಮೀಪದಲ್ಲಿಯೆ ಹಾಯ್ದು ಹೋದಳು. " ಅದೇ ನಗೆ! ಅಯ್ಯೋ, ದೇವರೆ, ಅದೇ ತಲೆ ತೂಗುವಿಕೆ! " ಎಂದು ಕೋಣೆಗೆ ಓಡಿದನು. ಮೂರನೆಯ ರಾತ್ರಿ. ಅದೇ ಜಾಗೆ. ಅದೇ ಸಮಯ. ಅವಳು ಅವನ ಹತ್ತಿರತ್ತಿರ ನಡೆದು ಹೋದಳು, ಒಂದೆರಡು ಹೆಜ್ಜೆ ಮುಂದೆ ನಡೆದು ಹಿಂತಿರುಗಿ ನೋಡಿ (ಅದೇ ನಗೆ!) ಸಣ್ಣದೊಂದು ಅಡ್ಡದಾರಿಯನ್ನು ಹಿಡಿದಳು. ಮತ್ತೆರಡು ಹೆಜ್ಜೆ ನಡೆದು ಮತ್ತೆ ಹಿಂತಿರುಗಿ ಚಂದ್ರನಿಗೆ ಎದುರಾಗಿ ಮುಖವನ್ನೆತ್ತಿ ತಲೆ—ಅಯ್ಯೋ! ಅದೇ ತಲೆ ತೂಗುವಿಕೆ! ಮುಂದೆ ಏನಾಯಿತೊ ನಾರಾಯಣನಿಗೆ ಎಚ್ಚರವಿರಲಿಲ್ಲ. ಮರುದಿವಸ ಮಾತ್ರ ತಾನಿನ್ನೂ ತನ್ನ ಶಿಕ್ಷಣವನ್ನು, ಅಭ್ಯಾಸವನ್ನು ಮುಗಿಸಿದ್ದಿಲ್ಲವಾದರೂ ತನ್ನ ಬ್ರಹ್ಮಚರ್ಯ ಮುಗಿದುಹೋಯ್ತು— ಎಂಬುದರ ಅರಿವು ಬಂದಿತು. ನಾಚಿಕೆಯಾಯಿತು ಆ ಸ್ಮರಣೆ ಬಂದಿತು ನಾರಾಯಣನಿಗೆ— ತುಳಜಿಯು ತಲೆ ತೂಗಿ, ಮೈ ಬಳುಕಿ ಮುಗುಳ್ನಗೆಯಿಂದ ತನ್ನನ್ನು ನೋಡಿ ಹೋದಾಗ. "ಅಯ್ಯೋ!

ಮತ್ತೆ ಅದೇ ನಗೆ! ಅದೇ ತಲೆ ತೂಗುವಿಕೆ!'). ಅರಿಯದೆ ಮಾಡಿದ ತನ್ನ ತಪ್ಪು ಕೆಲಸವೊಂದು ವಿಶ್ವರೂಪಧಾರಣೆ ಮಾಡಿ ಮತ್ತೆ ಮುಂದೆ ನಿಂತಂತಾಯಿತು. ತಾನಿರುವುದು, ಇದ್ದುದು ಎಲ್ಲಿ ಎಂಬುದರ ಎಚ್ಚರವಿಲ್ಲದಂತಾಯ್ತು.

"ಏ, ಛಾಪದ ಅಂಗ್ಡೀವಳಗ ಕೆಲಸಾ ಮಾಡ್ತೀಯೊ, ಮಂದೀ ಹೆಂಗ್ಸರ್ನ ಮಿಕಿಮಿಕಿ ನೋಡ್ತೀಯೊ? ಎಲ–ಏ——"

*    *    *    *    *

ಎರಡು–ಮೂರು ದಿವಸಗಳ ವರೆಗೆ ನಾರಾಯಣನಿಗೆ ಒಂದೇಸವನೆ ತಲೆತುರಿಸಿಕೊಳ್ಳುವ ಪ್ರಸಂಗ ಬಂದಿತು. ತಲೆಯೊಳಗಿನ ವಿಚಾರಗಳಿಗಿಂತಲೂ ಕಮತೂರಿನ ನೀರೇ ಆ ಪ್ರಸಂಗಕ್ಕೆ ಮುಖ್ಯವಾದ ಕಾರಣವಾಗಿದ್ದಿತು. ಕೆರೆಯ ನೀರು ಹೊಲಸಾದುದೆಂದು ತೋಟದ ಭಾವಿಯಲ್ಲಿ ಮುಳುಗುವ ಪರಿಪಾಠವನ್ನಿಟ್ಟಿದ್ದನು. ಆ ನೀರು ಕೂಡ 'ಧ್ಯಾನತೀರ್ಥ'ದಂತೆ ಮೂಗು ಮುಚ್ಚಿಸುವಂತಹದೆ! ಬಹಳ ಮಾಡಿ ಆ ಭಾವಿಗೆ ಪೊಟ್ಟ (ಯಾತ) ಹೊಡೆದಿರಲಿಕ್ಕಿಲ್ಲ. ಕನ್ಯಾಗತದ ಕಾಲಾವಧಿಗೊಮ್ಮೆ ಆ ಸತ್ಕಾರ್ಯ ಜರುಗುತ್ತಿರಬಹುದು ಎಂದು ತೋರಿತು ಅವನಿಗೆ. ದಿನಾಲು ಸಂಜೆಗೆ ಬಸ್ ಸ್ಟೇಶನಿನಲ್ಲಿ ನೆರೆಯುವ ಕಮತೂರಿನ ಒಕ್ಕಲಿಗರನ್ನು ನೋಡಿ ನೋಡಿ ನಾರಾಯಣನಿಗೆ ಸಿಟ್ಟು ಬರುತ್ತಿದ್ದಿತು. ನಿರುದ್ಯೋಗದಿಂದ ಹೊತ್ತುಕಳೆಯುವ ಆ ಹಳ್ಳಿಗರಿಗೂ ತೋಟದ ಭಾವಿಯ ನೀರಿಗೂ ಯಾವುದೋ ಸಂಬಂಧವನ್ನು ಕಲ್ಪಿಸಿಕೊಂಡು ಕೋಪದಿಂದ ಕರಕರ ಕೆರೆದುಕೊಳ್ಳುತ್ತಿದ್ದನು — ತನ್ನ ತಲೆಯನ್ನು. ವಿಚಾರಮಾಡುವಾಗ ತಲೆ ತುರಿಸಿಕೊಳ್ಳುವ ರೂಢಿ ಸಾಮಾನ್ಯ ಜನರದಿದ್ದರೆ, ತಲೆ ತುರಿತುರಿಸಿ ವಿಚಾರಮಾಡುವ ರೂಢಿ ಅಸಾಮಾನ್ಯ ಜನರದು; ದಿನದಿನಕ್ಕೆ ಬೆಳೆಯುತ್ತಲಿದ್ದ ಕರ್ನಾಟಕದ ಕವಿಗಣಗಳಿಂದ ಈ ಮಾತಿನ ಸತ್ಯತೆಯನ್ನು ಕಾಣಬಹುದು. ನಾರಾಯಣನೇನು ಸಾಮಾನ್ಯನೆ? ಆದುದರಿಂದ ತಲೆತುರಿಸುವಾಗ ಅವನಿಗೂ ವಿಚಾರ ಬಂದಿತು — ಭಾವಿಯ ನೀರು ಸ್ವಚ್ಛವಾಗುವ ಹಾಗೆ ಏನಾದರೊಂದು ಹಂಚಿಕೆಯನ್ನು ಹಾಕಬೇಕೆಂದು. ಬಳಿಕೆಯಿದ್ದರೆ ನೀರು ಸ್ವಚ್ಛವಾಗುವುದು. ಆದುದರಿಂದ ——? ದಿನದ ಚಹ-

ಕಾಫಿ ಮೊದಲಾದುದಕ್ಕೆ ಭಾವಿಯ ನೀರನ್ನೇ ಬಳಸಿದರೆ — ? ಹಳ್ಳಿಗರು ಕುಡಿಯುವ ಜಲದ ಪ್ರಮಾಣವನ್ನು ನೋಡಿ ಒಳಿಕೆಯ ವಿಷಯವಾಗಿ ಆಸೆ ಹುಟ್ಟಿತ್ತು ನಾರಾಯಣನಿಗೆ. ಆದರೆ ಅವರ ಆಲಸ್ಯವನ್ನು ನೋಡಿ ಆ ವಿಚಾರವನ್ನು ಬದಲಾಯಿಸಲೇಬೇಕಾಯಿತು. ಅದಕಾಗಿ ಸುತ್ತ ಮಾತ ಹೂಡುವ ಹಂಚಿಕೆಯನ್ನು ಮಾಡಿದ್ದನು; ಅದನ್ನು ಹೇಳಬೇಕೆಂದೆ ಇಂದು ಕುಲಕರ್ಣಿಯ ಕಡೆ ನಡೆದು ಬಂದಿದ್ದನು. ಕುಲಕರ್ಣಿಯು ಮಾತ್ರ ಅದನ್ನು ಕೇಳಿ ನಕ್ಕುಬಿಟ್ಟಿದ್ದನು. ಎತ್ತು ಬೇಕು, ಆಳು ಬೇಕು, ಮಾಡುವವರು ಬೇಕು; ನೋಡುವವರು ಬೇಕು. ಕುಲಕರ್ಣಿಗೆ ಈಗಾಗಲೆ ತನಗೆ ವಯಸ್ಸಾಗಿದೆ — ೪೫ ವರ್ಷ ! — ಎಂದು ಭಾವನೆ. ಇದಲ್ಲದೆ ಸಾಲವಾಗಿದೆ. ಇನ್ನೂ ಮನೆಯಲ್ಲಿ ಮಕ್ಕಳ ಮದುವೆ-ಮುಂಜಿಗಳಾಗಬೇಕು.

"ಕಾಯಿ-ಪಲ್ಲೆ, ಹಣ್ಣು-ಹೂವು, ಕಬ್ಬು-ಕಸರು ಬೆಳೆಸ್ಕೊಂಡ್ರೆ ಲಾಭವಾಗ್ತಹುದು" ಎಂದಿದ್ದನು ನಾರಾಯಣನು.

"ಎಲ್ಲಾ ಹೌದ್ರಿ—ಇದ್ರ ಅದ್ಕ ದುಡಿಯೋ ಮಂದಿಗೇ ಆಳು ಬೇಕು" ಎಂದನು ಕುಲಕರ್ಣಿ.

"ಇಷ್ಟು ಜನ ಒಕ್ಕಲಿಗರು ನಿರುದ್ಯೋಗಿ ಇದ್ದಾರ. ಇದಲ್ದೆ ನಿಮ್ಮ ವರ್ಚಸ್ಸು ಅವರ್ಮೇಲೆ" ಎಂದು ಹುರುಪು ಹುಟ್ಟಿಸುವ ಆಶೆಯಿಂದ ಹೇಳಿದನು ನಾರಾಯಣನು.

"ನಿಮಗಿನ್ನೇನ್ಹೇಳ್ಬೇಕು, ರಾಯ್ರು?" ಎಂದು ಪುರಾಣ ಬಿಚ್ಚಿದನು ಕುಲಕರ್ಣಿಯು. "ಆ ರಂಡೇಮಕ್ಕಳಿಗೆ ಉದ್ಯೋಗ ಇಲ್ಲ ಅಂತೇ ನನ್ನ ವರ್ಚಸ್ಸು ——— ವರ್ಚಸ್ಸೇನು ಸುಟ್ಟಿತು, ಆದ್ರೂ ನೀವೆ ಅಂತೀರಿ ಅಂತ ಅನ್ನೋಣಾ—ನನ್ನ ವರ್ಚಸ್ಸು ಅವರ್ಮೇಲೆ ———"

"ಅವರ ಲಾಭ ತಕ್ಕೊಂಡು ಅವರಿಗೆ ಈ ಉದ್ಯೋಗ ಹಚ್ಚಿ ಬಿಡ್ರಿ ಅಂದೆ" ಎಂದು ಹಲ್ಲುಕಿರಿಯುತ್ತ ನಡುವೆಯೆ ಬಾಯಿ ಹಾಕಿದನು ನಾರಾಯಣನು.

"ಅದೇ ಹ್ಯಾಗ——ಅಂತೀನಿ" ಎಂದು ಆಹ್ವಾನಿಸುವವನಂತೆ ಕೇಳಿದನು ಕುಲಕರ್ಣಿ. "ನೀವೇ ನೋಡೀರಿ —— ಒಬ್ಬರೊಬ್ರನ್ನ ಕಂಡ್ರ

ಆಗದ ಎರಡು ಮನ್ಸಾಳ ಅವರ್ರು. ಯಾರಿಗ್ಬೇಕು ತೋಟದ ಕೆಲಸ? ಒಂದು ಮನ್ಸಾಳದವರು ಮಾಡಿದರ ಇನ್ನೊಂದು ಮನ್ಸಾಳದವರು ಅದನ್ನ ಕೆಡಿಸುವವ್ರು. ಅಲ್ಲ——''

''ನಾನ್ಹೇಳೋದ್ಹೀಗೆ'' ಎಂದು ಮತ್ತೆ ನಡುವೆಯೆ ಮಾತನಾಡಿದನು ನಾರಾಯಣನು. ತಾನು ಈ ವಿಷಯ ಚನ್ನಾಗಿ ಅರಿತುಕೊಂಡು ವಿಚಾರ ಮಾಡಿ ನಿರ್ಣಯ ಗೊತ್ತುಪಡಿಸಿದವನು — ಎಂದು ತೋರಿಸುವ ಹಟ ದಿಂದಲೆ ನಾರಾಯಣನು ಮಾತನಾಡಿದ್ದು. '' ನಾನ್ಹೇಳೋದ್ಹೀಗೆ. ಈಗ ತೋಟದ ಕೆಲಸ, ಹೊಲದ ಕೆಲಸ, ಹಾದಿಯ ಕೆಲಸ —————''

'' ಹಾದೀ ಕೆಲಸ – ಅಂ – ದ – ರ? '' ಕುಲಕರ್ಣಿಗೆ ತೊಡಕು ಬಿದ್ದಿತು.

'' ಹಾದೀ ಕೆಲ್ಸ ಅಂದ್ರೆ — ಚಲೋ ಚಲೋ ಹಾದಿ ಹಾಕಿ ಕೊಳ್ಳೋದೂ ಅಂತ — ಹಾದಿ ಚಲೋ ಇಲ್ದದ್ರ ನೀವು ಬೆಳೆಸಿದ ಕಾಯಿ— ಪಲ್ಲೆ ಪರವೂರಿಗೆ ಒಯ್ಯಾಲಿಕ್ಕ ಅನುಕೂಲ ಆಗೋದಿಲ್ಲ, ವೆಚ್ಚನೂ ಹೆಚ್ಚು. ಅದಕ್ಕ——''

ಕುಲಕರ್ಣಿಯು ಫೊಸ್ಸನೆ ನಕ್ಕುಬಿಟ್ಟನು. '' ಅಲ್ಲ, ರಾಯ್ರು, ಸರಕಾರದವ್ರು ಲೋಕಲ್ ಬೋರ್ಡಿನವರು ಮಾಡಲಾರದ ಕೆಲಸ ಒಬ್ಬ ಕುಲಕರ್ಣಿ ರಂಗಣ್ಣಾಗೆ ಹೇಳ್ತೀರಿ — ಹಹ — ಆಯ್ತು, ಕಲಿತವರು — ಹಹ – ಮಾತಾಡ್ತೀರಿ – ಹಹ ——————''

ನಾರಾಯಣನಿಗೆ ಅವಮಾನವಾದಂತಾಯಿತು. ನಮ್ಮ ಕೆಲಸ ನಾವು ಯಾಕೆ ಮಾಡಿಕೊಳ್ಳಬಾರದು? ನಾವು ಮಾಡುವುದನ್ನು ನೋಡಿ ನೆರೆಹೊರೆಯವರೂ ಮಾಡಬಹುದು. ಒಟ್ಟು, ಒಬ್ಬರ ಲಾಭವನ್ನು ಕಂಡು ಇನ್ನೊಬ್ಬರಿಗೆ ಈರ್ಷೆಯಾಗಿ — ಅಂತೂ ಹತ್ತಿಪ್ಪತ್ತು ವರ್ಷಗಳಲ್ಲಿ ಸುತ್ತಲಿನ ಹಳ್ಳಿಗಳೆಲ್ಲ ———. ನಾರಾಯಣನ ಈ ವಿಚಾರ ಸರಣಿಯನ್ನು ಕೇಳಿಕೇಳಿದಂತೆ ಕುಲಕರ್ಣಿಗೆ ನಗೆ ತಡೆಯದಾಯಿತು. ವರ್ಷಕ್ಕೆ ಆರು ತಿಂಗಳು ನಿರುದ್ಯೋಗಿಗಳಾದ ಒಕ್ಕಲಿಗರಿಂದ ಈ ಕೆಲಸ ಅಸಾಧ್ಯವಲ್ಲ ಎಂದು ನಾರಾಯಣನು ಹಟ ಹಿಡಿದನು. ಕುಲಕರ್ಣಿಯು ಗಹಗಹಿಸಿ ನಗುತ್ತಲೆ ತಲೆ ಅಲ್ಲಾಡಿಸಿದನು. ನಾರಾಯಣನಿಗೆ ಅಸಹನೆ

ಯಾಯಿತು. "ಮುದುಕರ್ನಾಗ ಕೂತಲ್ಲಿಂದಲೆ ತಲೆ ಅಲ್ಲಾಡಿಸತಾ ನಡೆದರ ನಿರುಪಾಯ. ನಿಮ್ಮಂಥವರು ಕೂಡ ಹಾಳು ಹೊತ್ತು ಕಳೆಯೋದ್ಕಿಂತ ಯಾಕ ಈ ಕೆಲಸಕ್ಕ ಮುಂದಾಗ್ಬಾರ್ದು?" ಎಂದು ಬಿಟ್ಟನು. ಕುಲಕರ್ಣಿಯು ನಗೆ ತಡೆದನು. ಹಾರಿದವನಂತೆ ನಾರಾಯಣನನ್ನು ನೋಡಿದನು. ಅವನಿಗೂ ಅಪಮಾನವಾಯಿತು, ಸಿಟ್ಟು ಹೆಚ್ಚಿತು.

"ಹೂಊಂ!" ಎಂದು ಅತ್ಯಂತ ತಿರಸ್ಕಾರದಿಂದ ದನಿ ಎಳೆದು ಮಾತನಾಡಿದನು ಕುಲಕರ್ಣಿ. "ನಾವು ಮುಂದಾಗ್ಬೇಕ! ಕಲಿತು ಜಾತಿ-ನೀತಿ ಎಲ್ಲಾ ಬಿಟ್ಹಾಂಗ ಕಾಣಿಸ್ತದ ರಾಯ್ರು? ನಮ್ಮಂಥಾ ಬ್ರಾಹ್ಮಣರು ನಹಿತ ಇಂಥಾ ಕೆಲ್ಸ ಮಾಡಬೇಕಾದ್ರು ಒಕ್ಕಲಿಗರು ಹುಟ್ಟಿದ್ದು ಯಾಕ ನಮ್ದೇಶದೊಳಗ? ಎಂದಿನಿಂದ ನಡೆದು ಬಂದುದನ್ನು ನಾಗಿಸ್ಕೊಂಡು ಹೋಗೋ ನಾವು ನಿರುದ್ಯೋಗಿಗಳೊ, ಎಲ್ಲೀದೂ ಇಲ್ಲದ ವಿದ್ಯಾ ಕಲ್ತು ಕೆಲಸಕ್ಕೆ ಉಪಯೋಗ ಬೀಳದ ನೀವು ನಿರುದ್ಯೋಗಿಗಳೊ? ಅನಾಯಾಸ ಬಂದ ಬ್ರಾಹ್ಮಣ್ಯಾ ಬಿಟ್ಕೊಟ್ಟು ಕೆಲಸ ಹಿಡಿದು ಕೊಂಡೀರಿ ಚಹಾದ ಅಂಗ್ಡೀವಳಗ; ಬೇಕಾದರ ——"

ಬ್ರಾಹ್ಮಣ್ಯದ ಅಭಿಮಾನಕ್ಕಾಗಿ ದನಿ ಸಾಲದ ಕುಲಕರ್ಣಿಯು ಉಸಿರನ್ನೆಳೆದುಕೊಳ್ಳಲು ಮೇಲೆ ನೋಡಿ ಮಾತನ್ನೆ ತಡೆಯಬೇಕಾಯಿತು. ಯಾಕೆಂದರೆ ನಾರಾಯಣನು ಮಾಯವಾಗಿದ್ದನು. ಅಷ್ಟರಲ್ಲಿ. ಮಾತು ತಡೆದರೂ ಸಿಟ್ಟು ತಡೆಯಲಿಲ್ಲ ಕುಲಕರ್ಣಿಗೆ. "ಧರ್ಮಗ್ಲಾನಿ! ಧರ್ಮಗ್ಲಾನಿ!" ಎಂದು ಆಗಾಗ ತಲೆ ಜಾಡಿಸುತ್ತಲೆ ನಡೆದನು. ಮನೆಗೆ ಬಂದು ಒದ್ದೆಯ ಪಂಜೆಯನ್ನುಟ್ಟು ಸ್ನಾನ ಮಾಡಿದನು; ಒದ್ದೆಯ ಮಡಿಯಿಂದಲೆ ಪೂಜೆ ಮಾಡಿದನು; ತನ್ನ ಮಗಳು (ವಿಧವೆಯಾದವಳು) ನಕ್ಕದ್ದು ಕೇಳಿಸಿತು, ಸಿಟ್ಟು ಬಂದಿತು, ಅವಳು "ಹೊರಗೆ" ಇದ್ದಳು, ಕಾರಣ ಮೈಲಿಗೆಯಾಯಿತು (ನಗೆ ಕೇಳಿ); ಮತ್ತೊಮ್ಮೆ ಒದ್ದೆಯ ಸ್ನಾನ; ತಾನು ಪೂಜೆ ಮಾಡುತ್ತಿರುವುದು ತಿಳಿದು ಇನ್ನೊಮ್ಮೆ ಯಾರೂ ಮಾತನಾಡಬಾರದೆಂಬ ಉದ್ದೇಶದಿಂದ ಚಪ್ಪಾಳೆ ಬಲವಾಗಿ ತಟ್ಟಿದನು, ಗಂಟೆ ಗಡುಚಾಗಿ ಬಾರಿಸಿದನು; ಊಟಕ್ಕೆ

ಕುಳಿತಾಗ, ದವಡೆಗೆ 'ಸವಡು' ಸಿಕ್ಕಾಗ --- . "ಗೋವಿಂದ, ಗೋವಿಂದ" ಎಂದು ತೇಗಿದನು;-----ಅಂತೂ ಧರ್ಮಗ್ಲಾನಿಯ ಪ್ರತೀಕಾರವನ್ನು ಪರಿಪರಿಯಾಗಿ ಮಾಡಿದನು. ಆದರೂ ಸಿಟ್ಟು ಇಳಿಯಲಿಲ್ಲ. ಮಧ್ಯಾಹ್ನದ ನಿದ್ದೆಯಾಯಿತು, ಆವಾಗಲೂ ಸಿಟ್ಟು ಇಳಿಯಲಿಲ್ಲ. 'ಕಚೇರಿ' ಗೆ ಹೊರಟನು. ದಾರಿಯಲ್ಲಿ ಹೊಲೆಯರ ಹುಡುಗರು ಬೇಟೆಯಾಡುತ್ತಿದ್ದರು-- ಮರಿಕತ್ತೆಯೊಂದರ ಕೂಡ. ಆ ಪ್ರಾಣಿಯು ತಿಪ್ಪೆಯಿಂದ ಜಾಡಿಸಿಕೊಂಡೇಳುವುದಕ್ಕೂ, ದೂಳು ಹಾರುವುದಕ್ಕೂ, ಕುಲಕರ್ಣಿಯು ಅಲ್ಲಿಗೆ ಬರುವುದಕ್ಕೂ ವೇಳೆ ಹೊಂದಿಕೆಯಾಯಿತು. "ಕತ್ತೇಮಕ್ಕಳಿಗೆ ಊರೊಳಗೇನು ಕೆಲಸೊ!" ಎಂದವನೆ ಕಲ್ಲು ಎಸೆದನು ಕುಲಕರ್ಣಿ. ಕುಲಕರ್ಣಿಯು ತನ್ನನ್ನೆ ಗೌರವಿಸಿದನೆಂಬ ತಪ್ಪು ತಿಳುವಳಿಕೆಯಿಂದ ಕತ್ತೆಯು 'ಮಗು' ಕಾಲು ಜಾಡಿಸಿತು. ದೂಳಿನ ಬಿರುಗಾಳಿ ಎದ್ದಿತು. ಹುಡುಗನೊಬ್ಬನು ನಕ್ಕಂತಾಯಿತು. ಕುಲಕರ್ಣಿಯು ಮತ್ತೊಂದು ಕಲ್ಲನ್ನೆಸೆದನು ಹುಡುಗನೊಬ್ಬನು ಚೀರಿದಂತಾಯ್ತು— "ನಿರುದ್ಯೋಗ ಸೂಳೇಮಕ್ಕಳು! ಊರೊಳಗೇನು ಕೆಲಸೋ!" ಎನ್ನುತ್ತ ಕುಲಕರ್ಣಿಯು ಕಚೇರಿಗೆ ಸಾಗಿದನು. ಸಿಟ್ಟು ಇಳಿದಿರಲಿಲ್ಲ, ಏರಿತ್ತು.

* * * *

ಇತ್ತ ನಾರಾಯಣನಿಗೂ ಸಿಟ್ಟು ಏರಿತ್ತು. "ಕಲ್ತು ಕೆಲಸ ಸಿಕ್ಕಿದ್ದಕ್ಕೀಳು ಉದ್ಯೋಗ ಕೈಕೊಂಡ" ನೆಂದು ಕುಲಕರ್ಣಿಯು ತನ್ನನ್ನು ಅಪಹಾಸ್ಯ ಮಾಡಿದನೆಂದು ತಳಮಳಿಸಿದನು. ಅದೇ ಸಿಟ್ಟಿನ ಭರದಲ್ಲಿ ಕುಲಕರ್ಣಿಯ ತೋಟಕ್ಕೆ ತೋಟವನ್ನೆ ಕೊಂಡುಕೊಳ್ಳುವ ನಿಶ್ಚಯವನ್ನು ಮಾಡಿದನು. ಅದಕ್ಕೆ ಹಣ ಬೇಕು! "ಸಂಬಳ ಬೇಡೋಣ, ಉಪ್ಪಿಟ್ಟಿನಂಗಡಿಯಲ್ಲಿ ಸಂಬಳ ಬೇಡೋಣ" ಎಂದು ಸಿಟ್ಟಿನ ಭರದಲ್ಲಿಯೆ ನಿರ್ಧಾರಮಾಡಿಕೊಂಡನು. ಈ ೨-೩ ದಿವಸಗಳಲ್ಲಿಯೆ ಸಂಬಳವನ್ನು ಬೇಡುವಷ್ಟು ಧೈರ್ಯ ಬಂದಿತ್ತು ನಾರಾಯಣನಿಗೆ. ತನ್ನ— ಕೇವಲ ತನ್ನ-ನಿಮಿತ್ತವಾಗಿಯೆ ಅಂಗಡಿಯ ವ್ಯಾಪಾರ ಬೆಳೆದದ್ದು ಅವನ ಲಕ್ಷ್ಯಕ್ಕೆ ಬಾರದೆ ಹೋಗಿದ್ದಿಲ್ಲ. ತರುಣರು ತುಳಜಿಯ ನಿಮಿತ್ತವಾಗಿ

ಬರುವಂತೆ ಹಿರಿಯ ಒಕ್ಕಲಿಗರು ತನ್ನ ನಿಮಿತ್ತವಾಗಿ ಬರುತ್ತಿದ್ದರೆಂಬುದು ನಾರಾಯಣನಿಗೆ ಈಗಾಗಲೆ ತಿಳಿದ ಮಾತಾಗಿತ್ತು. ಹರಟೆಗೆ ಹೊಸಬನೊಬ್ಬ ಸಿಕ್ಕಿದನೆಂದು ಕೆಲವರು, 'ಇಂಗ್ರೇಜಿ ಕಲ್ತವ ಭಾಕೊಪತ್ತಾನಲ್ಲ' ಅಂತ ಕೆಲವರು, 'ತಪಾಸ್ಣೀ ಪೋಲೀಸ' ಅಹುದೋ ಅಲ್ಲೋ ಬಾಪು ತಪಾಸಣೆ ಮಾಡುವ ಕುತೂಹಲದಿಂದ ಕೆಲವರು, ಸುತ್ತಲಿನ ಊರುಗಳಲ್ಲಿ ನಡೆದ ಬಯಲಾಟದ ಕತೆಯನ್ನು ಚಂದ ಮಾಡಿ ಹೇಳುವವ ಎಂದು ಆದರದಿಂದ ಕೆಲವರು, "ದಿನಕ್ಕೆ ಎರಡು ದುಡ್ಡು, ೩೦ ದಿನಕ್ಕ — ಮೂವತ್ತೆರಡಲೆ ೧೧೦ — ಅಂದ್ರ ಒಂದ್ರೂಪಾಯಿ ೧೫ ಆಣೆ — ಒಂದಾಣೆ ಕಡಿಮೆ ೨ ರೂಪಾಯಿ — ಮೂರಾಣೆ ವೇಳಿನ್ದು ಬಿಟ್ಟೀನಿ ಆಯ್ತಲ್ಲೋ? — ಅಂತೂ ರೂಪಾಯಿ ಹನ್ನೆರಡಾಣೆ ಕೊಟ್ಟಿದ —" ಮುಂತಾಗಿ ಮಾಲಕನು ಲೆಕ್ಕಹೇಳುವಾಗ "ಮೂವತ್ತೆರಡಲೇ ೬೦" ಎಂದು ಸಹಾಯ ಮಾಡುತ್ತಲಿರುವ ಉಪಕಾರ ಸ್ಮರಿಸುತ್ತ ಕೆಲವರು, ಶಿಕ್ಷಣಕ್ಕೆ ಬೆರಗಾದ ಕೆಲವರು — ಹೀಗೆ ಅನೇಕ ಜನರು ಅನೇಕ ಕಾರಣಗಳಿಂದ — ನಾರಾಯಣನ ನಿಮಿತ್ತವಾಗಿಯೇ — ನೆರೆಯುತ್ತಿದ್ದರು. ಇಂದು ಮಾಲಕನಿಗೆ ನಾರಾಯಣನಿಗಾಗಿ ಹೆದರುವ ಸ್ಥಿತಿ ಇದ್ದಿತು. ಸಿಟ್ಟಿನ ಭರದಲ್ಲಿಯೆ ಇದೆಲ್ಲ ಹೊಳೆಯಿತು ನಾರಾಯಣನಿಗೆ. ಸಂಬಳವನ್ನು ಕೇಳಲೇ ಬೇಕು. ತನ್ನ ನಲುವಾಗಿ ಇಷ್ಟೊಂದು ಜನರು ಬರುತ್ತಿರುವಾಗ ತನ್ನನ್ನು ಹೊರದೂಡುವನೆ ಮಾಲಕನು? ಅಂತಹ ಕಾರಣಕಾಗಿಯೆ ತುಳಜಿಯನ್ನು ಕೆಲಸಕ್ಕಿಟ್ಟುಕೊಂಡ ಮಾಲಕನು..... ನಾರಾಯಣನ ಸಿಟ್ಟಿನ ಭರವು ಸರ್ರೆಂದಿಳಿಯಿತು ಬೆವರಿನ ಧಾರೆಯಾಗಿ. ತುಳಜಿಗೆ ತನ್ನನ್ನು ಪೋಲಿಸುವುದೇ? ಎಷ್ಟು ಹಂಚಿಕೆ ಹಾಕಿದರೂ ನಾರಾಯಣನಿಗೆ ನಿರುಪಾಯವಾಯಿತು. ತುಳಜಿಯ ಸ್ಥಿತಿ ತನ್ನ ಸ್ಥಿತಿ ಒಂದೇ ಎಂದು ಒಪ್ಪಲೇ ಬೇಕಾಯಿತು. ಹೊಟ್ಟೆ ಬಟ್ಟೆಗಿಲ್ಲದುದಕ್ಕೆ ಆ ವೃತ್ತಿ ಎಂದು ಅವಳು ಧೈರ್ಯವಾಗಿ ಒಪ್ಪಿಕೊಳ್ಳುವಳು; ಹೊಟ್ಟೆ ಬಟ್ಟೆಗೆ ಗತಿ ಇಲ್ಲ ಎಂದು ಒಪ್ಪಿಕೊಳ್ಳಲು ಕೂಡ ತನಗೆ ಧೈರ್ಯವಿಲ್ಲ.

"ಭಾಳ ಆದ್ರ, ಸುಗ್ಗಿ ದಿನ್ನಾಗ ಹೊಲ್ದಾಗ, ಬ್ಯಾಸಗಿ ದಿನ್ದಾಗ

ಮನೆ—ಮೂರು ಕಟ್ಟೋವಾಗ ಒನ್ನಾಲ್ಕೊಪ್ಪತ್ತು ಕೂಲಿ ಸಿಕ್ಕೋತ್ರಿ. ಏಟಾ (ಎಷ್ಟಾ) ದರೂ ಹೆಣ್ಣಾಳಿನ ಕೂಲಿ! ಹೊಟ್ಟೆ ತುಂಬೋದಿಲ್ರಿ. ಎಂಟಾಸೆಂಟ ತಿಂಗಳ ಏನ್ಮಾಡ್ಬೇಕ್ರಿ?'' ಎಂದಿದ್ದಳು ತುಳಜಿ.

ಕುಲಕರ್ಣಿಯಿಂದ ಅವಮಾನಿತನಾಗಿ ನಡೆದಾಗ ತುಳಜಿಯು ಕೂಡ ತನ್ನ ಸಂಭಾಷಣೆಯಾದುದು ಸ್ಮರಣೆಗೆ ಬಂದಿತು ನಾರಾಯಣನಿಗೆ. ತುಳಜಿಯ ನಿಜವಾದ ಯೋಗ್ಯತೆ ಈಗ ಕಂಡು ಬಂದಂತಾಯಿತು ಅವನಿಗೆ. ಮೊದಲನೆಯ ದಿವಸವೇನೂ ಅವಳ ನಡೆ-ನುಡಿಗಳನ್ನು ನೋಡಿ ಅತ್ಯಂತವಾಗಿ ಹೇಸಿಕೊಂಡಿದ್ದನು. ತನ್ನನ್ನು ನೋಡಿ ಅವಳು ನಕ್ಕು ಹೋದಾಗಂತೂ ಹಟಾತ್ತಾಗಿ ಹಿಂದಿನ ತನ್ನ ಪಾಪದ ಸ್ಮರಣೆಯಾಗಿ ಅವಳ ಪ್ರಾಣವನ್ನೇ ಹಿಚುಕುವಂತಹ ಸಿಟ್ಟು ಬಂದಿತ್ತು. ತುಳಜಿಯು ಅಷ್ಟಕ್ಕೆ ಬಿಟ್ಟಿರಲಿಲ್ಲ. ಆ ದಿನ ನಾರಾಯಣನನ್ನು ನೋಡಿದಾಗೆಲ್ಲ ಅದೇ ನಗೆಯನ್ನು ನಗುತ್ತಿದ್ದಳು. ''ಇವಳನ್ನೊಮ್ಮೆ ಮಾತಾಡಿಸಿ ಇವಳ ಮೈಸೊಕ್ಕನಿಳಿಸಿ ಬಿಡೋಣ. ಯಾರಂತ ತಿಳಿದಾಳೊ ನನ್ನ, ಹುಚ್ಚು ಮುಂಡೆ!'' ಎಂದುಕೊಂಡ. ಮರುದಿನದ ಕಾರ್ಯಕ್ರಮವು ಯಥಾಪೂರ್ವ-ಯಥಾಪ್ರಕಾರವಾಗಿ ನಡೆಯಿತು. ''ಇವಳ ವಾಸನೆಯು (—ನನ್ನ ವಿಷಯವಾಗಿ—) ದುಷ್ಟವಿದ್ದುದರಲ್ಲಿ ಸಂಶಯವಿಲ್ಲ. ಯಾವ ರೀತಿಯಿಂದ ಇವಳಿಗೆ ಬುದ್ಧಿ ಕಲಿಸೋಣ?'' ಎಂಬುದೊಂದು ವಿಚಾರ ನಾರಾಯಣನಿಗೆ. ಸ್ತ್ರೀಶಿಕ್ಷಣ, ಆರ್ಯಸಂಸ್ಕೃತಿ,ದೇಹದ ಆರೋಗ್ಯ, ಆರ್ಥಿಕ ಸ್ವಾತಂತ್ರ್ಯ—ಮುಂತಾದ ಎಷ್ಟೋ ವಿಷಯಗಳ ಪರ್ಯಾಲೋಚನೆಯನ್ನು ಮಾಡಿದನು. ಪ್ರಸ್ತುತ ಪ್ರಸಂಗಕ್ಕೆ ಒಂದೂ ಸರಿ ಹೋಗುವಂತೆ ತೋರಲಿಲ್ಲ. ಅವಳ ಮನೋವೃತ್ತಿಯು ನೀಚವಾದುದೆಂಬುದಕ್ಕೆ ಎಳ್ಳಷ್ಟಾದರೂ ಸಂದೇಹವಿದ್ದಿರಲಿಲ್ಲ ನಾರಾಯಣನಿಗೆ. ಅವಳ ನಡೆ, ಅವಳ ನುಡಿ, ಅವಳ ನಗೆ, ಅವಳ ನೋಟ, ಅವಳ ಹಾವ-ಭಾವ—ಒಂದರಲ್ಲೂ ಸಂಭಾವಿತತನದ ತೋರಿಕೆ ಇದ್ದಿರಲಿಲ್ಲ. ''ಓಹೊ! ಮತ್ತೆ ನನ್ನನ್ನು ನೋಡಿ ನಕ್ಕಳಲ್ಲವೆ! ಇದೇ ಪ್ರಸಂಗ. ಅವಳಿಗೊಂದು ನೀತಿಪಾಠ ಕಲಿಸೋಣ'' ಎಂದವನೆ ನಡೆದು ಅವಳನ್ನೆದುರಿಸಿ ''ನನ್ನನ್ನು ನೋಡಿ ಹೀಗೇಕೆ ನಗುವೆ?'' ಎಂದನು. ಮೊದಲೇ ಲೆಕ್ಕ ಹಾಕಿದ್ದನು ನಾರಾಯಣನು, ತಾನು ಮಾತನಾಡಿಸು

ವ್ಪದೊಂದೇ ತಡ ಅವಳು ಒಯ್ಯಾರತನದಿಂದ ನಟಿಸುವಳೆಂದು. ಆದರೆ ಆ ತನ್ನ ಲೆಕ್ಕ ಈಗ ತಪ್ಪಿದ್ದುದಕ್ಕೆ ಅವನಿಗೆ ಅತ್ಯಂತ ಸೋಜಿಗವೆನ್ನಿಸಿತು. ತುಳಜಿಯು ಒಯ್ಯಾರತನದಿಂದ ನಟಿಸುವದನ್ನು ಬಿಟ್ಟು, ತಲೆಯನ್ನೆತ್ತಿ ನನೆ ತಡೆದು "ತನ್ನಂಥವ್ರು ಮಾಡೋ ಕೆಲಸ ಅಲ್ರಿ ಇದು"! ಎಂದಳು.

"ಡಿಗ್ನಿಟ್—" ತಡೆದುಕೊಂಡನು ನಾರಾಯಣನು. ಕಾರ್ಯ ಗೌರವದ ತತ್ವ ಇವಳಿಗೇನು ತಿಳಿಯುವುದು ? ಅವಳಿಗೆ ತಿಳಿಯುವಂತಹದೊಂದು ಮಾತನಾಡಬೇಕೆಂದು ವಿಚಾರ ಮಾಡಿ, ಅಂತಹದೊಂದು ಮಾತೂ ತನಗೆಯೆ ತಿಳಿಯದಂತಾಗಿ ಸುಮ್ಮನೆ "ಯಾಕೆ ?" ಎಂದು ಬಿಟ್ಟನು.

"ಮರ್ಯಾದಸ್ತರು ಮಾಡೋದಲ್ರಿ ಇಂಥಾ ಕೆಲಸ."

"ತನ್ನ ಮರ್ಯಾದೆ ತಾನು ಕಾಯ್ದುಕೊಂಡು ಎಂಥಾ ಕೆಲಸ ಮಾಡಿದರೂ ಏನು ?" ಎಂದು ನಾರಾಯಣನು ಸಮಯ ಸಾಧಿಸಿ ಕೊಂಡು ನೀತಿಪಾಠ ಕಲಿಸಲುಸುವಾಡನು.

"ಎಂಥಾ ಮಾತರಿ !" ಎಂದು ತಲೆತೂಗಿದಳು.

ಅಬ್ಬ ! ಎಂದುಕೊಂಡನು ನಾರಾಯಣನು ಒಳಗಿಂದೊಳಗೆಯೆ. ಶಿಕ್ಷಕನಾಗಿ ನೀತಿಪಾಠ ಕಲಿಸಬೇಕೆಂದರೆ ತನಗೆಯೆ ಶಿಫಾರಸ ಪತ್ರವನ್ನು ಕೊಡುವಂತೆ ಮಾತನಾಡುವಳಲ್ಲ !

"ಹೆಂಗಸಿಗಂತೂ ಮರ್ಯಾದೆಯೆ ಹೆಚ್ಚಿನದು" ಎಂದನು ಹಟದಿಂದ.

"ಮನಸ್ಯಾ ಆದ್ಮ್ಯಾತಿಗೆ ಮರ್ಯಾದೆ ಬೇಕೇ ಬೇಕಲ್ರಿ. ಹೆಂಗಸೇನು ಗಂಡಸೇನು ?" ಎಂದು ಹೆಣ್ಣು – ಗಂಡುಗಳ ಭೇದಕಲ್ಪಿಸಿದುದಕ್ಕಾಗಿ ಸೃಷ್ಟಿಕರ್ತನನ್ನು ತಿರಸ್ಕರಿಸುವಂತೆ ಮೂಗು ಏರಿಸಿದಳು.

ಸಮುದ್ರದ ಮಧ್ಯದಲ್ಲಿ ಸಿಕ್ಕಿದವನು ದಡಕ್ಕೀಸಬೇಕೆನ್ನುವಾಗ ತೆರೆಗಳು ಹಿಂದೊತ್ತಿ ನೂಕಿದಂತಾಯಿತು ನಾರಾಯಣನ ಸ್ಥಿತಿ; ಬೆದಗಾದನು, ಅದನ್ನು ತೋರಗೊಡಲಿಲ್ಲ ಮಾತ್ರ.

"ಅದೇನು ಸುಳ್ಳಲ್ಲ. ಆ ಮುಂಜಾನೆ ಬರೋ ಹುಡುಗ್ರನ್ನೋಡ್ಬಾರ್ದ್ರಿ ? ಒಬ್ಬಗೂ ಮರ್ಯಾದೆ ಇಲ್ಲ." ದಡವನ್ನು ಮುಟ್ಟುವ ಹವಣಿಕೆಯಿಂದಲೆ ಮಾತನಾಡಿದನು.

"ಏನಾದ್ರೂ ಹುಡುಗರ್‍ರಿ ಅವರು. ಮನೀವಳಗ ಅವ್ವಾ–ಅಪ್ಪಾ ಇದ್ದಾಂಗ ಬೆಳೆಸವ್ರು."

ತೆರೆಗಳ ಹೊಡೆತ ಜೋರಾದಂತಾಯಿತು. ಒಂದು ಮಾತನಾಡ ಬೇಕೆನ್ನುವಾಗ ಮತ್ತೊಂದು ಮಾತಿಗೆ ತನ್ನನ್ನು ನೂಕುವ ತುಳಜಿಯ ಜಾಣತನಕ್ಕೆ ತಲೆದೂಗಬೇಕೆನ್ನಿಸಿತು ನಾರಾಯಣನಿಗೆ. ಆದರೂ ಮೊದಲು ನೀತಿಪಾಠ–ನೀತಿಪಾಠವನ್ನು ಕಲಿಸಲೇಬೇಕು ಎಂದು ಅವನ ಹಟ.

"ಅವರು ಹುಡುಗ್ರಾದ್ರೂ ನೀನು ಅವರ್‍ಕೂಡ ಹಾಗ ನಡೆಯೋದು ಸರಿಯಲ್ಲ" ಎಂದನು.

"ಅಂದರ ?"

"ಅಂದರ – ಅಂದರ – ಇಷ್ಟೆ–ಅಲ್ಲ–ಹೀಂಗಿರೋದ್ಕಿಂತ ಮದಿವೆ ಮಾಡ್ಕೊಂಡಿರೋದು–ಅಲ್ಲ–ಅಂದರ–ಆದೇ ನೆಟ್ಟಗ ಹೆಂಗಸೀಗೆ–ಅಂತ– ಅಂದರ—" ಎಂದು ತೆರೆಗಳ ಹೊಡೆತಕ್ಕೆ ಕೈಸೋತು ತೇಕುವವನಂತೆ ನುಡಿದನು ನಾರಾಯಣನು ........ಆಗ ಹೇಳಿದಳು ತುಳಜಿಯು ತನ್ನ ಕತೆಯನ್ನು. ಮದುವೆಯಾದರೂ ಉಪಜೀವನ ಸಾಗುವುದಿಲ್ಲ ಎಂದು ಅವಳ ಅಭಿಪ್ರಾಯವಿದ್ದಿತು. (ನಾರಾಯಣನಿಗೆ ಅಹುದೆಂದು ತಲೆತೂಗ ಬೇಕೆನ್ನಿಸಿತು, ಹಾಗೆ ಮಾಡಿದರೆ ತನ್ನ ಮದುವೆಯಾದುದು ಗೊತ್ತಾ ದೀತಲ್ಲ, ಎಂದು ನಾಚಿ ತಡೆದನು.) "ಎಲ್ಲಿ ಹೋದರೂ ಉಡಕೀ ಗಂಡನ ಉಪದ್ರವ ತಪ್ಪಿದ್ದಲ್ಲ ಎಂದಳು." (" ಓಹೊ ! ನಮ್ಮ ದೇವನಿಗಾಗಲಿ ನಮ್ಮ ಧರ್ಮಕ್ಕಾಗಲಿ'ಉಡಕೀ ಗಂಡ' ಎಂಬಾಭಿಧಾನದ ಬಿರುದು ಕೊಟ್ಟುಬಿಡಬೇಕು" ಎಂದು ಹೊಳೆಯಿತು ನಾರಾಯಣನಿಗೆ). "ಮದಿವೆ ಆದ ಹೆಂಗ್ಸರು ಯಾರು ಮತ್ತಂಥಾ ಛಂದ ಸಂಸಾರ ಮಾಡ್ಯಾರ್‍ರಿ ?" ಎಂದು ಸವಾಲು ಹಾಕಿದಳು ನಾರಾಯಣನಿಗೆ. "ಯಾವ ಗಂಡನು–ಅಂತ ಕೇಳ್ಲಿಲ್ಲ ಪುಣ್ಯಾತ್ಮಳು !" ಎಂದು ಉಸುರ್ಗರೆದನು). ಊರೊಳಗಿನ ಎಲ್ಲ ಹೆಂಗಸರ ಪುರಾಣವನ್ನೆ ಬಿಚ್ಚಿದಳು. ಹೊಡೆದಾಟ, ಕಡಿದಾಟ, ಕುನಸು, ಖೂನಿ–"ಎಲ್ಲ ಹೆಂಗ್ಸರ ಸಲುವಾಗೇ ನಡೆದದ್ದು" ಎಂದಳು. ("ರಾಮಾಯಣ– ಮಹಾಭಾರತಗಳ ಸಾರಾಂಶ ಹೇಳಿದ

ಹಾಗೇ ಹೇಳಿದಳಲ್ಲ!")"ಮತ್ತ ಅದರಾಗ ಕರೇವು (ನಿಜವಾದುದು) ಪತಿರಿ. ಇದೆಲ್ಲಾ ಲಗ್ಗ್ನೀಣ ಆದ ಹೆಣ್ಮಕ್ಕಳ ಮಾತು." ಅವಳ ಕಂಠ ತುಂಬಿ ಬಂದಿತು, ದನಿಯಲ್ಲಿ ನಡುಕು ಸೇರಿತು. ಎಲ್ಲವನ್ನು ಬಿಟ್ಟುಕೊಡುವ ಸಂನ್ಯಾಸ ಬುದ್ಧಿಯ ದೃಷ್ಟಿಯಂತೆ ಎಲ್ಲೊ ಏನನ್ನೊ ನೋಡಬಾರದೆಂದು ನೋಡುವಂತೆ ದೂರ–ದೂರ ದಿಟ್ಟಿಸಿದಳು. "ನಮ್ಮ ಅವ್ವನ್ನ ಕಟ್ಟಿಕೊಂಡು ಗಿಡಕ್ಕೇರಿಸಿದನ್ರಿ ಆಕೇ ಗಂಡ, ಅವನ್ನ ಗಲ್ಲಿಗೇರಿಸಿತರಿ ಸರ್ಕಾರ.ನಮ್ಮ ಮರ್ಯಾದಾ ನಾವು ಕಾಯ್ಕೊಂಡರಾಯಿತ್ರಿ, ಅದಕ ಮದಿವೀನೇ ಯಾಕ ಬೇಕು?" ಹೀಗೆನ್ನುವಾಗ ಅವಳ ದನಿ ಗದ್ಗದವಾಗಿತ್ತು, ನಾರಾಯಣನಿಗೆ ಈಗಲೂ ಕೇಳಿಸಿದಂತಾಯಿತು. ಅವಳು ಹೇಳಿದಾಗಂತೂ ಅವನಿಗೆ ಪಶ್ಚಾತ್ತಾಪವಾಗಿತ್ತು. ಪಾಪ!

"ತಂದೆ–ತಾಯಿ ತೀರಿಕೊಂಡು ಎಷ್ಟು ದಿವಸಗಳಾದುವು" ಎಂದು ಕೇಳಿದ್ದನು.

"ತಂದೆ ಇದ್ದಾರ್ರಿ ನನಗ. ತಾಯಿ ಹೋಗಿ———"

"ಮತ್ತೆ—ತಂದೇನ್ನ ಗಲ್ಲಿಗೇರಿಸಿದ್ರೂ ಅಂತ———"

" ಗಂಡನ್ನ ಗಲ್ಲಿಗೇರಿಸಿದ್ರಿ. ನಾ – ನಾ ಕುಲ್ಕರ್ಣೇರ ಮಗಳ್ರಿ "

" ಏನು ಖರೂ! "

" ಅದಕೇ ನಮ್ಮಾಯೀನ್ನ ಖೂನಿ ಮಾಡಿದನ್ರಿ ಆಕೇ ಗಂಡ "

ಹೀಗೆಂದವಳೆ ಮುಖ ಮುಚ್ಚಿಕೊಂಡು ಓಡಿಹೋಗಿದ್ದಳು. ಆಗಿನ ಅವಳ ಕಳವಳದ ಕಳೆಯು ನಾರಾಯಣನ ಎದೆಯನ್ನು ಸೀಳಿತ್ತು. " ಆವಾಗಲೆ ತಿಳಿಯಬೇಕಾಗಿತ್ತು ನನಗೆ ಕುಲಕರ್ಣಿಯ ಸ್ವಭಾವ. ಹುಚ್ಚ ನಾನು!– ಸುಮ್ಮಸುಮ್ಮನೆ ಅವನ ಕಡೆ ಹೋಗಿ ಅವಮಾನ ಮಾಡಿಸಿಕೊಂಡೆ."ಎಂದು ತಳಮಳಿಸುತ್ತ ನಡೆದನು ನಾರಾಯಣನು.ಅವಮಾನದಿಂದ ಇಷ್ಟೊಂದು ಖೇದವಾಗಲು ವಿಶೇಷ ಕಾರಣವೊಂದಿದ್ದಿತು. " ಕುಲಕರ್ಣಿ ನಿನ್ನ ತಂದೆಯೆ! ಹಾಗಿದ್ದರೆ ಅವರ ಕಡೆಯಿಂದ ನಿನಗೆ ಸಹಾಯ ಮಾಡಿಸುವೆ, ಈ ಕೀಳು ಕೆಲಸ ಬಿಟ್ಟು ಬಿಡುವಂತೆ ಅನುಕೂಲ ಮಾಡಿಸುವೆ " ಎಂದು ಅವಳ ಮುಂದೆ ಜಂಬ ಕೊಚ್ಚಿ ಹೋಗಿದ್ದನು. ಅದೊತ್ತಟ್ಟಿಗೇ ಉಳಿಯಿತು. ಎಲ್ಲೊ ಮಾತಿಗೆ ಮಾತು ಬೆಳೆದು

“ಕಲಿತು ಕೀಳು–ಕೆಲಸಕ್ಕೂಡಾ ಗತಿ ಇಲ್ಲ ನಿಮಗೆ” ಎಂದು ಹಂಗಿಸಿ ಕೊಂಡು ಬಂದನು. ಅದಕಾಗಿ ಕುಲಕರ್ಣಿಯ ಮೇಲೆ ಸಿಟ್ಟು ಕುದಿಯುತ್ತಿತ್ತು ನಾರಾಯಣನಿಗೆ. ಕೀಳು ಕೆಲಸ ಅಂತೆ! ಯಾವುದು ಕೀಳು? ಪ್ರಾಮಾಣಿಕನಾಗಿ ನಿಸ್ವಾರ್ಥನಾಗಿ ಉಪ್ಪಿಟ್ಟಿನಂಗಡಿಯಲ್ಲಿ ದುಡಿಯುವುದು ಕೀಳು ಕೆಲಸವೆ?— ಆದರೆ ತಾನೀಗ ಸಂಬಳ ಬೇಡ ಬೇಕೆಂದುದರಿಂದ “ನಿಸ್ವಾರ್ಥ” ಎನ್ನಬಹುದೆ— ಎಂದು ಸಂಶಯ ಬಂದಿತು. ಅದಕ್ಕೂ ಸಮಾಧಾನವಿದೆ. ಸಂಬಳ ಬೇಡುವುದು ಯಾತಕ್ಕಾಗಿ? ಸಮಾಜದ ಉದ್ಧಾರಕ್ಕಾಗಿ. ಆದುದರಿಂದ ಕುಲಕರ್ಣಿಯ ಸೊಕ್ಕು ಮುರಿಯಲೇಬೇಕೆಂಬ ಹಟ ಹೆಚ್ಚಿತು. ಕೀಳು ಅಂತೆ! ತನ್ನ ವಸ್ತುವನ್ನು ಕಾಯ್ದುಕೊಳ್ಳದೆ ಇನ್ನೊಬ್ಬರ ವಸ್ತುವನ್ನು ಆಶಿಸುವುದು ಕೀಳು ಕೆಲಸವಲ್ಲವೆ? ಏನಿಲ್ಲ— ಅವನಕಿಂತ ಹೆಚ್ಚಿನ ಯೋಗ್ಯತೆ ಸಂಪಾದಿಸಿ— ಕಸಿದುಕೊಂಡಂತೆ — ಕೊಂಡುಕೊಳ್ಳಬೇಕು ಅವನ ತೋಟವನ್ನು. “ಏನಿಲ್ಲ——ಹೋದವನೇ ಮಾಲಕನಿಗೆ ಸಂಬಳ ಕೇಳಿಯೆ ತೀರುವೆ” ಎಂದು ಓಡಹತ್ತಿದನು ನಾರಾಯಣನು. ಸಂಬಳದ ಆಶೆಯಿಂದ ಓಡಲಿಲ್ಲ, ಮುಂಜಾನೆಯ ಬಸ್ಸು ಬರುವ ವೇಳೆಯಾಯಿತೆಂದು ಓಡಿದನು. ಬಸ್ಸಿನ ಸಮಯಕ್ಕೆ ಅಲ್ಲಿರದಿದ್ದರೆ ಸಂಬಳ ಕೇಳುವುದೆಂತು? ಸಂಬಳ ಕೇಳದಿದ್ದರೆ ಕುಲಕರ್ಣಿಯ ಸೊಕ್ಕು ಮುರಿಯುವುದೆಂತು? ಕುಲಕರ್ಣಿಯ ಸೊಕ್ಕು ಮುರಿಯದಿದ್ದರೆ ತುಳಜೆಯ ಉದ್ಧಾರವಾಗುವುದೆಂತು? ಅಂತೂ ತುಳಜೆಗಾಗಿ ತಾನು ಓಡುತ್ತಿರುವುದು— ಎಂಬ ಸಿದ್ಧಾಂತ ಹೊಳೆಯಿತು ನಾರಾಯಣನಿಗೆ. ಬಲವು ನುಗ್ಗುತ್ತಲಿದೆ, ನೀತಿ ಜಗ್ಗುತ್ತಲಿದೆ. ಯಾಕೊ — ತುಳಜೆಯು ಕುಲಕರ್ಣಿಯ ಮಗಳೆಂದು ಕೇಳಿ ಒಂದು ತರದ ಸಮಾಧಾನವಾಗಿತ್ತು ಅವನಿಗೆ. ಅವಳು ದಿಟ್ಟಳು, ಕೆಟ್ಟವಳಲ್ಲ ಎಂದು ಕಂಡು ಸಂತೋಷವಾಗಿತ್ತು ಅವನಿಗೆ. ಅದಕಾಗಿ ಓಡಿದನು, ಓಡಿದನು. ಬಸ್ಸಿನ ಸಮಯಕ್ಕೆ ಸರಿಯಾಗಿ ಅಲ್ಲಿರುವುದು ನೋಕರಿಯ ಪ್ರಾಮಾಣಿಕತನ ಎಂದು ಸಮಾಧಾನ ತಂದುಕೊಂಡು ಓಡಿದನು. ತುಳಜೆಗೂ ತನಗೂ ಯಾವ ಸಂಬಂಧ?— ಎನ್ನುತ್ತ ಸಿಟ್ಟಿನಿಂದ ಓಡಿದನು. ಕುಲಕರ್ಣಿಯ ಸೊಕ್ಕು

ಮುರಿಯಲೇಬೇಕು ಎಂದು ಕಾಲು ಅಪ್ಪಳಿಸುತ್ತ ಓಡಿದನು. ಸಂಬಳವನ್ನು ಕೇಳಲೆ ಬೇಕು— ಎಂದು ಓಡಿದನು, ಓಡಿದನು, ತೇಕುತ್ತ ತೇಕುತ್ತ ಓಡಿದನು.

---

## ೨

ಅವಸರದ ಹೆಜ್ಜೆಗಳಿಂದ, ಅಧಿಕಾರದ ಹುಬ್ಬುಗಳಿಂದ ಬೀದಿಯಲ್ಲಿ ನಡೆಯುತ್ತ ಹೋಗುವ ಅನುಭವವು ಅನೇಕರಿಗಿರಬಹುದು; ಹಾಗೆ ಹೋಗುತ್ತಿರುವಾಗ ಕಿಸೆಯಿಂದಾಗಲಿ ಕೈಯೊಳಗಿನಿಂದಾಗಲಿ ಕಾಯ್ದಿಟ್ಟ ವಸ್ತುಗಳು ಕಳಚಿ ಬೀಳುವ ಅನುಭವವು ಕೆಲ ಜನರಿಗಿರಬಹುದು; ಆದರೆ ಹಾಗೆ ಕಳಚಿಬಿದ್ದಾಗ " ಏನೊ ಬಿತ್ತು ನೋಡಿ, ನಿಮ್ಮದೇನ್ರಿ ಇದು ? " ಮುಂತಾಗಿ ಹುಂಕರಿಸುವ ದಿಗ್ಗಜಗಳಂತೆ ಸುತ್ತಲೂ ಜನರು ಕೂಗಿಕೊಳ್ಳುವ — ಅದನ್ನು ಕೇಳಿಕೊಳ್ಳುವ — ಅನುಭವವು ಎಲ್ಲೊ ಒಬ್ಬಿಬ್ಬ ಮಹಾತ್ಮರಿಗೆ ಬರಬಹುದು. ಅಂತಹ ಅನುಭವ ಬಂದಾಗ ಅವಸರದ ಹೆಜ್ಜೆ ಉರುಳಿದಂತಾಗುವುದು. ಅಧಿಕಾರದ ಹುಬ್ಬು ಕೆರಳಿದಂತಾಗುವುದು. ಸಾಮಾನು ಬಿದ್ದರೆ ಪರಿವೆಯಿಲ್ಲ -- ನಡೆಯುವಾಗಿನ ಅಜಾಗರೂಕತನದಿಂದಾಗಲಿ, ನ್ಯೂಟನನ ಆಕರ್ಷಣ ತತ್ವ ( law of gravitation ) ದಿಂದಾಗಲಿ ಹಾಗಾಗಬಹುದು. ಆದರೆ ಅದನ್ನು ನಮ್ಮ ಲಕ್ಷ್ಯಕ್ಕೆ ತಂದುಕೊಡಬೇಕೆನ್ನುವ ಜನರ ಹಟದ ಉದ್ಧಟತನಕ್ಕೇನೆನ್ನಬೇಕು ? ಎದೆ ಸೆಟೆಸಿ ಮುಖವೆತ್ತಿ ನಡೆಯುವಾಗ ಎಡವಿ ಬೀಳಬಹುದು ನಾನು. ಆದರೆ ' ಎಡವಿದರೇನ್ರಿ ? ' ಎಂದು ನಾಲಗೆ ಚಪ್ಪರಿಸುತ್ತ ತುಟಿ ಬಿರಿಯುತ್ತ ಹಲ್ಲು ಕಿರಿಯುತ್ತ ಕೆಣಕುವ ಉದ್ಧಟತನವೇಕೊ-ಜನರಿಗೆ ? ಇಂದಿನದು ವ್ಯಕ್ತಿ ಸ್ವಾತಂತ್ರ್ಯದ ಯುಗ; ಹಾಗೆಂದರೆ ಇನ್ನೊಬ್ಬನ ಸ್ವಾತಂತ್ರ್ಯ ಕೆಣಕುವ ಅಧಿಕಾರವಿದೆ ಎಂದರ್ಥವಲ್ಲ. ಅದಕಾಗಿಯೆ ಬೀದಿಯಲ್ಲಿ ಹುಡುಗರು ಹಾಗೆ ಕೆಣಕಿದರೆ ಹೊಡೆಯಲು ಕೈ ಏಳುವುದು. ಹೊಡೆಯಲಿ ಹೊಡೆಯದಿರಲಿ -- ಅಂತಹ ಸಿಟ್ಟು ಬರುವುದೇನೊ ನಿಜ,

ಬರಬಾರದೇಕೆ? ನನ್ನ ತಪ್ಪನ್ನು ನನಗೆ ತೋರಿಸಿಕೊಡುವ ಅಧಿಕಾರ ಎಷ್ಟು ಜನರಿಗಿದೆ? ಶಾಸ್ತ್ರಹೇಳುವುದು ಯಾವಾಗಲೂ ಸುಲಭ. 'ಪರಸತಿಯರನ್ನು ಕಣ್ಣೆತ್ತಿ ನೋಡಬೇಡ' ಎಂದು ಪುರಾಣ ಬರೆಯುವುದು; ಆದರೆ 'ಮುನಿಪುಂಗವಾ, ಪಿತಾಮಹ ವ್ಯಾಸನೆ, ಮಹಾಶಯರುಗಳಾದ ತಾವು ಮದುವೆಯಾಗದ ತಾಯಿಯ ಮಗನಾಗಿ ಹುಟ್ಟಿ, ಸ್ವತಃಕ್ಕೆ ಮದುವೆ ಇಲ್ಲದೆ ಮಕ್ಕಳನ್ನು ಹಡೆದಿರಲ್ಲ? ಅದರ ಸುಖದುಃಖವೇನು? ಸೂತ್ರ-ಸೂಕ್ಷ್ಮಗಳೇನು' ಎಂದು ಕೇಳಿದರೆ? 'ಮಿಕ್ಕವರೆಲ್ಲ ಪರಸತಿಯರನ್ನು ಕಣ್ಣೆತ್ತಿ ನೋಡುವರು,— ಇಲ್ಲವೆ ನೋಡಬಾರದು' ಎಂಬ ಗ್ರಹಿಕೆ ಯಾಕೆ? ಪರಸತಿಯರನ್ನು ನೋಡಬೇಕೆಂಬ ಇಚ್ಛೆಯು ಯಾವ ಮನುಷ್ಯಪ್ರಾಣಿಯ ಸ್ವಭಾವದಲ್ಲೂ ಕಂಡುಬರುವುದಿಲ್ಲ. ಏನಾದರೊಂದು ಸಯುಕ್ತಿಕ ಕಾರಣವಿದ್ದರೆ-- ಆ ಮಾತೇ ಬೇರೆ. ಉದಾಹರಣಾರ್ಥವಾಗಿ:- ಮದುವೆಯಾಗದವನು ನೋಡಬಹುದು; ಏಕೆಂದರೆ, ಹಾಗೆ ನೋಡದ ಪಕ್ಷದಲ್ಲಿ ಅವನಿಗೆ ಮದುವೆಯಲ್ಲಿ — ಗೃಹಸ್ಥಾಶ್ರಮವನ್ನು ಪಡೆದು ತನ್ನನ್ನೂ ತಂದೆತಾತಂದಿರನ್ನೂ ಋಣಮುಕ್ತಮಾಡಬೇಕಾದ ಶಾಸ್ತ್ರವಿಹಿತ ಕರ್ತವ್ಯದಲ್ಲಿ—ಆಸಕ್ತಿ ಹುಟ್ಟುವುದೆಂತು? ಅದರಂತೆಯೆ, ಮದುವೆಯಾದವನೂ ಪರಸತಿಯರನ್ನು ನೋಡಬಹುದು; ಹೊಲ-ಮನೆ ಮಾಡುವವನು ಅನ್ಯರು ಮಾಡುತ್ತಲಿರುವ ಹೊಲ-ಮನೆಗಳನ್ನು ನೋಡಿಕೊಳ್ಳಬೇಕೆನ್ನುವಂತೆ. ಹೀಗೆ ಮದುವೆಯಾಗದನ, ಮದುವೆಯಾದವ — ಇವರಿಬ್ಬರ ಹೊರತಾಗಿ ಯಾವ ಮನುಷ್ಯನೂ ಪರಸತಿಯರನ್ನು ನೋಡಬೇಕೆಂದೆಳಸುವುದಿಲ್ಲ. ನಾರಾಯಣನ ಮದುವೆಯಾಗಿದೆ. ಆದುದರಿಂದ ಪರಸತಿಯರನ್ನು ನೋಡುವ ಯೋಗ್ಯತೆ ಅವನಿಗೂ ಇದೆ. ಆದರೆ ಅದನ್ನು ತಿಳಿದುಕೊಳ್ಳುವ ಯೋಗ್ಯತೆ ಮಾತ್ರ ಅವನಿಗಿದ್ದಿಲ್ಲವೆಂದೇ ಹೇಳಬಹುದು. ಪರಸತಿಯರನ್ನು ನೋಡುವುದು ಪಾಪವೆಂದೇ ಅವನಿಗಿನ್ನೂ ಗ್ರಹಿಕೆ. ಅಂತಹ ಪಾಪಬುದ್ಧಿಯು ಇಂದು ತನಗೇಕೆ ತೋಚಿತು— ಎಂದು ಅವನ ಹಂಬಲ. ತನ್ನ ಸಂಸ್ಕೃತಿ ಯಾವುದು? ತನ್ನ ಶಿಕ್ಷಣವೆಂತಹುದು? ಎರಡನೆಯ ಹೆಂಗಸರನ್ನು ಕಣ್ಣೆತ್ತಿ ನೋಡುವ ಈ ಕೀಳ್ತನವೆಂತಹುದು? " ತುಳಜಿ ಯಾರು?

ಬ್ರಾಹ್ಮಣನಾದ ಕುಲಕರ್ಣಿಯ ಮಗಳು -- 'ಅಸಂಶಯಂ' ಸನ್ನ 'ಪರಿಗ್ರಹಕ್ಷಮಾ '-- ಛೀ, ಇದೆಂತಹ ಹುಚ್ಚುತನ! ಹೇಸಿತನ!" ಎಂದುಕೊಳ್ಳುವನೊಮ್ಮೆ. ಮತ್ತೊಮ್ಮೆ ಮನಸು ತುಳಜಿಯ ಕಡೆ ಎಳೆಎಳೆದಂತೆ ಮಾಡಿಕೊಂಡ ಮಡದಿಯ ಸ್ಮರಣೆ ಹೆಚ್ಚಾಗಿ ಆಗುವುದಲ್ಲ-- ಎಂದು ಗೋಳಿಡುವನು. ಮದುವೆಯನ್ನು ಮರೆಯಬೇಕೆಂದರೆ ಸಾಧ್ಯವಾಗದು, ಮಂದಿಯ ಮಡದಿಯರನ್ನು ನೋಡಬಾರದು ಎಂದರೆ ಸಾಧ್ಯವಾಗದು. 'ಅಯ್ಯೋ! ನನ್ನ ಕರ್ಮ!' ಎಂದುಕೊಂಡನು ನಾರಾಯಣನು. ತರುಣನಾದ ನಾರಾಯಣನು ತಾತ್ವಿಕನಾದನು, ಕಂಬಡಂತೆ ಕಾಣಿಸಿದ ಪ್ರಾಚೀನ ಕರ್ಮಕ್ಕೆ ಕಯ್ಯಾರಿ ನಿಂತುಕೊಂಡನು. ಶಿಕ್ಷಣ ಪಡೆದಾಗೂ ನೌಕರಿ ಸಿಕ್ಕದ ತರುಣರಂತೆ "ತಾ ಮಾಡಿದ ಕರ್ಮ" ಅದಾವುದೋ ?-- ಎನ್ನಹತ್ತಿದನು. 'ಬಾತ್ಮೀದಾರರ ಅಭಿಪ್ರಾಯಕ್ಕೆ ಸಂಪಾದಕರು ಜಬಾಬ್ದಾರರಲ್ಲ'ಎನ್ನುವಂತಹ ಗಾಂಭೀರ್ಯ, ದಿಂದ 'ನಾಹಂ ಕರ್ತಾ ಹರಿಃ ಕರ್ತಾ' ಎಂದು ಶಾಸ್ತ್ರಹೇಳುವವರಿಗಾಗಿ ನಗುತ್ತಿದ್ದನು ನಾರಾಯಣನು; ಆದರೆ ಈಗ ತಾನೂ ಅವರಂತೆಯೆ 'ತಾ ಮಾಡಿದ ಕರ್ಮ' ಯಾರಿಗೂ ಬಿಟ್ಟದ್ದಲ್ಲ ಎಂದು ಅಭಿಪ್ರಾಯಪಟ್ಟನು; ಇಲ್ಲವಾದರೆ ಪರಸತಿಯರನ್ನು ನೋಡುವಂತಹ ಪಾಪದ ಪ್ರವೃತ್ತಿಯು-- ಹಾಳಾಗಲಿ "ತಾ ಮಾಡಿದ ಕರ್ಮ!" ಈಗ ಅದಕ್ಕಿಂತಲೂ 'ತಾ ಮಾಡಿದ ಮಡದಿ'ಯೆ ಹೆಚ್ಚಿನ 'ಬಲವಂತ' ಎಂದು ಬಾಧೆಯಾಗಹತ್ತಿತು ಅವನಿಗೆ. ಅಂತೂ ತುಳಜಿಯ ವಿಷಯವಾಗಿ ತನ್ನ ಹೃದಯಸಾಗರದಲ್ಲಿ ಕ್ಷೋಭವೆದ್ದಿದೆ, ಎಂದು ಒಪ್ಪಿಕೊಳ್ಳಲೇಬೇಕಾಯಿತು ನಾರಾಯಣನಿಗೆ. ತುಳಜಿಯನ್ನು ಮರೆಯಬೇಕೆಂದರೆ ಮದುವೆಯ ಸ್ಮರಣೆ ಬಲವಾಗುವುದು, ಆ ಮೇಲೆ ಮದುವೆಯನ್ನು ಮರೆಯುವ ಯತ್ನದಲ್ಲಿ ತುಳಜಿಗಾಗಿ ವಿಚಾರ ಬಲಿಯುವುದು; ಈ ವಿಚಿತ್ರ ಅನುಭವವನ್ನೂ ಒಪ್ಪಿಕೊಳ್ಳಬೇಕಾಯಿತು ನಾರಾಯಣನು. ಇದಲ್ಲದೆ ಒಂದೆರಡು ದಿವಸಗಳಿಂದ ಅಂಗಡಿಗೆ ಹೋಗಿ ಬರುವ ಜನರು ತನ್ನನ್ನು ನೋಡಿ ಏನೇನೊ ರಹಸ್ಯವಾಗಿ ಪಿಸುಗುಟ್ಟುತ್ತಿದ್ದರು. ತನ್ನ ಮತ್ತು ತುಳಜಿಯ ಸಂಬಂಧವಾಗಿಯೆ ಈ ಜನರು ಒಬ್ಬರೊಬ್ಬರ ಕಿವಿ ಕಚ್ಚುವಂತೆ ಕದ್ದು ಮಾತನಾಡುವರೆಂದು

ನಾರಾಯಣನಿಗೆ ಸಂಶಯ ಬಂದಿತ್ತು. ಕುಲಕರ್ಣಿಯಿಂದ ಅವಮಾನಿತನಾಗಿ ಬಂದ ಮೇಲೆ ನಡೆದ ವರ್ತಮಾನವೇ ಇದಕ್ಕೆ ಕಾರಣವಿದ್ದಿರಬಹುದು—ಎಂದೂ ಕಾಯಾಸ ಕಟ್ಟಿದನು. ಅಂತಹದೇನಿದೆ ಆ ಸಂಗತಿಯಲ್ಲಿ? ತನಗೆ ಕೂಡ ಆಗ ಆ ವಿಚಾರ ಬಂದಿದ್ದಿಲ್ಲ. ಕುಲಕರ್ಣಿಯ ಮೇಲಿನ ಸಿಟ್ಟಿನಿಂದಲೂ ತುಳಜಿಯ ಮೇಲಿನ ಕನಿಕರದಿಂದಲೂ ತಾನು ಸಂಬಳವನ್ನು ಬೇಡಿದ್ದನು; ಸಂಬಳ ಬೇಡುವುದಕ್ಕೆ ಇಂತಹ ಕಾರಣ ಎಂದು ಹೇಳುವ ಹಾಗಿಲ್ಲ, ಆದಕಾಗಿ ಹೇಳಲಿಲ್ಲ; ಇದಲ್ಲದೆ ತನಗೆ ಸಂಬಳ ಬೇಡುವ ಯೋಗ್ಯತೆ ಇಲ್ಲವೆ? ಸುಶಿಕ್ಷಿತನು ತಾನು! ಚಹಾದ ಅಂಗಡಿಯಲ್ಲಿ ದುಡಿಯುವನು! ತನಗೆ ಸಂಬಳ ಬೇಡವೆ?

"ಹೌದ್ರಿ,ಸ್ವಾಮಿ;ಆದ್ರ ತಾವೇ ತಮ್ಮ ಇಚ್ಛಾದಿಂದ ಬಂದವ್ರು" ಎಂದಿದ್ದ ಮಾಲಕನು!

"ತಾವಾಗೇ–ತಮ್ಮ ಇಚ್ಛಾದಿಂದ–ಬಂದರ ಸಂಬಳ ಕೊಡೋ ಹಾಗಿಲ್ಲ ಅಂತೇನು?" ಎಂದು ಕೇಳಿದ್ದನು ನಾರಾಯಣನು.

"ಹಾಗಲ್ಲ. ಸಂಬಳ ಕೊಟ್ಟು ಕೆಲಸಕ್ಕಿಟ್ಕೊಬೇಕಾಗಿದ್ರ ಕೆಲಸ ಬರೋದೊ ಇಲ್ಲೊ ನೋಡ್ತೇವಿ ಮುಂಚಿತ."

"ಅಂದರ? ನನಗ ಕೆಲಸೇ ಬರೋದಿಲ್ಲಾ ಅಂತ ನಿಂ ಅಭಿಪ್ರಾಯ್ವೇನು?" ನಾರಾಯಣನಿಗೆ ಸ್ವಾಭಿಮಾನ ಕುದಿಯುತ್ತಿದ್ದಿತು ಹೀಗೆ ಹೇಳುವಾಗ. "ಹುಂ! ನಾನು ಕಲಿತವ ಇದ್ದೇನಿ–ಮರೆಯಬೇಡ್ರಿ."

"ಆ ತಂ ಕಲಿತದ್ದನ್ನ ತಾವೇ ಮರೆತಬಿಟ್ರಿ—"

ನಾರಾಯಣನಿಗೆ ಈಗಲಾದರೂ ಶಬ್ದಕ್ಕೆ ಶಬ್ದ ಸ್ಮರಣೆಯಲ್ಲಿದ್ದಿತು, ಆವಾಗ ತಾನು ಸಿಟ್ಟಿನಿಂದ ಏನೇನು ಹೇಳಿದನೆಂಬುದು. ಕಲಿತದ್ದನ್ನು ಮರೆಯುವನಂತೆ! ಎಷ್ಟು ಹಣ, ಎಷ್ಟು ವೇಳೆ, ಎಂತಹ ಸಂಸ್ಕಾರ! "ಎಲ್ಲರಿಗೂ ಆದರ ಕಲ್ಪನಾ ಹ್ಯಾಗ ಬಂದೀತು?" ಎಂದು ಹಂಗಿಸಿದ್ದನು. ಕಲಿತದ್ದನ್ನು ಮರೆಯುವದಂತೆ! "ಬೆಳಿಗ್ಗೆದ್ದರ ಬಂದವ್ರೆಲ್ಲಾ ಮಾನ ತೋರಿಸ್ತಾರ ನನಗ, ನೀವೇ ನೋಡೀರಲ್ಲ–ಎಷ್ಟು ಆದರದಿಂದ........... ಇಷ್ಟೆಲ್ಲಾ ರಗಳೆ ಯಾಕೆ? ಬರೀ ನನ್ನ ಮಾತಾಡಿಸ್ಬೇಕಂಬೋ ಇಚ್ಛಾದಿಂದ್ಲೇ ಎಷ್ಟು ಜನ ಬರೋದಿಲ್ಲ ನಿಮ್ಮಂಗ್ಡಿಗೆ?"

" ಇಲ್ಲಾ ಅಂದನೆ ನಾನು? ಅದಕ್ಕೇ ಹೇಳಿದೆನಲ್ಲ, ಇದ್ಕ್ಕೋಳಲಿಕ್ಕೆ ಏನು —————— "

" ಅದಲ್ಲ ನಾನು ಹೇಳೋದು. ನಾನು ಕಲಿತವ – ಅದಕ್ಕೇ ಈ ಸನ್ಮಾನ ಅಂತ ————— "

" ಹೌದು, ಸ್ವಾಮೀ; ನಿಮಗ ಸನ್ಮಾನ ಕೊಡಿಸಲಿಕ್ಕೆ ಅಂಗ್ಡೀ ಹಾಕ್ಕೊಂಡು ಕುಳಿತಿಲ್ಲ ನಾನು "

" ಅದೇ ಹೇಳ್ತೀನಿ; ನಿಮ್ಮನ್ನೊಬ್ಬರನ್ನ ಬಿಟ್ಟು ಉಳಿದವರೆಲ್ರೂ ' ಸುಶಿಕ್ಷಿತ ' ಅಂತ ನನಗ ಮಾನ ಕೊಡ್ತಾರ "

" ಕೊಡ್ತಿರಬಹುದು. ಅವರಿಗೇನು ನೀವು ಸಂಬಳ ಬೇಡಿಲ್ಲ ವಲ್ಲ ? ——— "

"ನಾನು ಸಂಬಳ ಬೇಡಲಿಕ್ಕೆ ಬಂದಿಲ್ಲ ನಿಮ್ಮ ಕಡೆ. ಆ ಯೋಗ್ಯತಾ ನನ್ನಲ್ಲಿದೆ. **ಕೊಡಿರಿ** ಸಂಬಳ ಅಂತ ಹೇಳ್ತೀನಿ, ಬೇಡೋದಿಲ್ಲ "

" ಇದೊಳ್ಳೇ ಜುಲ್ಮಾನೇ ಕೆಲಸ ! ಅಲ್ಲ, ಸ್ವಾಮೀ, ಕಲಿತವ್ರನ್ನ ಕಟ್ಟಿಕೊಂಡು ನನಗೇನು ಸಾಯ್ಬೇಕಾಗಿದೆ ? ಸುಶಿಕ್ಷಿತರನ್ನ ಇಟ್ಕೊಂಡರೆ ಒಂದು ಕಪ್ಪು ಒಡೆದು ಎರಡು ಆದೀತು ಹೊರತು, ಒಂದು ಚಹ ಎರಡು ಆಗೋದಿಲ್ಲ. "

ಎಲ್ಲವನ್ನೂ ಸಜ್ಜುಪಡಿಸಿಟ್ಟುಕೊಂಡು, ಕಾಲು ಚಾಚಿ, ವಿಶ್ರಮಿಸುತ್ತ ಓದಬೇಕೆನ್ನುವಾಗ ಕನ್ನಡಕಗಳನ್ನು ಕಿಸೆಯಲ್ಲಿಯೇ ಮರೆತ ಮುದುಕನಂತಾಯಿತು ನಾರಾಯಣನ ಸ್ಥಿತಿ. ಇದುವರೆಗೆ ತನ್ನ ಪಕ್ಷವನ್ನು ಸಪ್ರಮಾಣವಾಗಿ, ಸಯುಕ್ತಿಕವಾಗಿ, ಸಬಲವಾಗಿ ಮಂಡಿಸುತ್ತಾ ತಾನು ನಡೆದಿದ್ದನೆಂದು ತಿಳಿದುಕೊಂಡಿದ್ದನು. ಅದೇ ಸಂದರ್ಭದಲ್ಲಿ ತಾನು ದಿನಾಲು ಒಂದು ಕಪ್ಪನ್ನಾದರೂ ಒಡೆಯುತ್ತಿದ್ದ ಸಂಗತಿಯು ಸ್ಮರಣೆಯಾಗಬೇಕೆ ಪಾಲಕನಿಗೆ? ಒಂದೆರಡು ನಿಮಿಷ ನಾರಾಯಣನ ಸುಶಿಕ್ಷಿತ ತಲೆಗೆ ಉತ್ತರವೇ ಸೂಚಿಸಿದ್ದಿಲ್ಲ. ಕೊನೆಗೆ " ಅಹುದು, ಒಡೆದಿರಬಹುದು. ಅದ್ಕೇ ಹೇಳ್ತೀನಿ ನಿಮಗೆ – ನನಗ ಸಂಬಳ ಕೊಡಿರಿ ಅಂತ. ಸಂಬಳ ಕೊಡ್ತಿದ್ದರ ಆ ಹಣದೊಳ್ಗ ಮುರಿದುಕೊಳ್ಳಲಿಕ್ಕೆ ಬರತಿತ್ತು ಕಪ್ಪಿನ ಕಿಮ್ಮತ್ತು. "

ಅತ್ಯಂತ ಬುದ್ಧಿವಂತಿಕೆಯ ಈ ಉತ್ತರಕ್ಕಾಗಿ ಎಷ್ಟು ಅಭಿಮಾನ ಎದ್ದಿತೋ ಅದರ ಹತ್ತರಷ್ಟು ಅವಮಾನವಾಗಿತ್ತು— ಮಾಲಕನು ಆ ಮಾತಿಗೆ ಗಹಗಹಿಸಿ ನಕ್ಕುದಕ್ಕಾಗಿ.

“ ಒಳ್ಳೇ ಲೆಕ್ಕಾಚಾರ ಕಲಿತವರದು ! ಹಹ ! ಗಟ್ಟಿ ಕಿಸೆಯೊಳಗಿನ ಹಣ ತೂತು ಬಿದ್ದ ಕಿಸೆಯೊಳಗ ಹಾಕಿರಿ ಅಂತ ಹೇಳೋದು ! ಹಹ ! ”

“ ನಗ್ತೀರೇನು ? ” ಎಂದು ಗದ್ದರಿಸಿದ್ದನು ನಾರಾಯಣನು. “ ನಾನು ನಿಮಗೆ ಹೇಳೋದು ಎಕಾನಾಮಿಕ್ಸದ ( economics ) ದ ವಿಷಯ ---- ”

ಆ ಮಾಲಕನ ‘ ಮಡ್ಡ ’ ತಲೆಗೆ ಹೊಳೆಯುವುದೆಂತು ? “ ನಮಗ್ಯಾಕೆ, ಸ್ವಾಮೀ, ಈ ಮಿಕ್ಸ ಬೊಕ್ಸ ? ನಮ್ಮ ಹಿರಿಯರಿಂದ ಬಂದ ವ್ಯವಹಾರ. ಅವರ್ನೋಡಿ ಕಲಿತುಕೊಂಡೀವಿ. ಒಂದು ಹಟದ್ಮಾತಿಗಾಗಿ ಮನೆಯಿಂದ ಓಡಿ ಹೊರಬಿದ್ದಾಗ ೧೨ ವರ್ಷ, ಬರಿಯ ಹನ್ನೆರಡು ವರ್ಷ, ಸ್ವಾಮೀ ! ಅಂದಿನಿಂದ ಇಂದಿನ ತನಕ — ಏನೊ — ಇದ್ದ ನನ್ನ ಅಲ್ಪ ಬುದ್ಧೀಲೆ ನಡೆಸೀನಿ, ಮುಪ್ಪಿನೊಳಗ ಕೈ ಆಡಿಸದೆ ಬಾಯಿ ಆಡಿಸುವಷ್ಟು ಸಂಪಾದಿಸೀನಿ. ”

ಆಡಬೇಕೆಂದಿದ್ದ ಮಾತನ್ನು ತಡೆಯಬೇಕಾಯಿತು ನಾರಾಯಣನಿಗೆ; ಯಾಕೆಂದರೆ, ಮಾತು ಮುಗಿಸಿ ಮಾಲಕನು ಕೈಯಲ್ಲಿಯ ಚಿನ್ನದ ಕಡಗಗಳನ್ನು ಆಡಿಸತೊಡಗಿದ್ದನು. ಇದುವರೆಗೆ ಬ್ರಹ್ಮಾಸ್ತ್ರದಂತೆ ಕಾದಿಟ್ಟ ಕೊನೆಯ ಮಾತನ್ನೇ ಹೇಳಿಬಿಡಬೇಕೆಂದನು ನಾರಾಯಣನು. ‘ ಇನ್ನೊಂದು ಬಾಣ ಬಿಟ್ಟು ನೋಡೋಣ ’ ಎಂದುಕೊಂಡು, “ ಹಿಂದಿನ್ಹಾಂಗ ಧಂದೆ ನಡೆಸೋದಿದ್ರ ನಮ್ಮ ಮಾತೇ ನಿಂತಿತು. ಇಲ್ದೆ, ಇಂದಿನ ಕಾಲಕ್ಕ ಸರಿಹೋಗೋಹಾಂಗ ಏನಾದ್ರೊಂದು ಸುಧಾರಿಸಿದ ಪ್ರಯೋಗ ಮಾಡಿ ಧಂದೆ ಬೆಳೆಸ್ಬೇಕೂ ಅಂತ ಇದ್ದರ, ಅದಕ ಸುಶಿಕ್ಷಿತರು ಬೇಕು ಸುಶಿಕ್ಷಿತರಿಗೆ ಸಂಬಳ ಬೇಕೂ, ಅಂತ ನಾನು ಹೇಳೋದು ” ಎಂದನು.

“ಧಂದೆ ಬೆಳೆಸೋದು ನಮಗ್ಯಾಕ, ಸ್ವಾಮೀ ? ನಮ್ದೊಂದು ಹೊಟ್ಟೆತುಂಬಿದರೆ ಸಾಕು ” ಎಂದು ಸಂನ್ಯಾಸಾಶ್ರಮವನ್ನು ಪಡೆಯುವವರಂತೆ ನಿರ್ವಿಕಾರದ ದನಿಯಲ್ಲಿಯೆ ಹೇಳಿದನು ಮಾಲಕನು.

ಇಂತಹವನ ಕೂಡ ವಾದ ಬೆಳೆಸುವದರಲ್ಲಿ ಅರ್ಥವಿಲ್ಲ ಎನ್ನಿಸಿತು ನಾರಾಯಣನಿಗೆ. ಹೊಟ್ಟೆ ತುಂಬುವುದಂತೆ! ನೋಡಿದರೆ ತುಳುಕುವಂತಹ ಹೊಟ್ಟೆ! ಬ್ರಹ್ಮಾಸ್ತ್ರದ ಪ್ರಯೋಗವನ್ನೆ ಹೂಡಿಬಿಟ್ಟರಾಯಿತು—ಎಂದುಕೊಂಡು "ಆಗಲಿ. ಸಂಬಳ ಕೊಡೋ ಹಾಗ ಇಲ್ಲ ಅಂದ್ಮೇಲೆ ಇಂದಿನಿಂದ ನಾನು ಕೆಲಸ್ಮಾಡೋದೂ ಇಲ್ಲ."

"ತಮ್ಮ ಇಷ್ಟ" ಎಂದವನು ಎದ್ದೇ ಬಿಟ್ಟಿದ್ದನು ಮಾಲಕನು! ಆಗ ನಾರಾಯಣನಿಗೆ ಏನೊ ಒಂದು ವೇದನೆಯಾಯಿತು. ಎಂತಹ ದುಷ್ಟ ಜನರು ನಮ್ಮವರು–ಎಂಬ ನಿರಾಶೆಯ ಕನಿಕರದ ವಿಚಾರವೊಂದು; ಬಿ. ಎ. ಆದರೂ ಚಹದಂಗಡಿಯಲ್ಲಿ ಸಂಬಳ ಸಿಕ್ಕುವದಿಲ್ಲವಲ್ಲ–ಎಂಬ ಅಪಮಾನದ ಅನನ್ಯಗತಿಯ ವಿಚಾರವೊಂದು; ಈ ಸಮಯವನ್ನು ಕಳೆದುಕೊಂಡರೆ ತನ್ನ ಸಮಾಜಸುಧಾರಣೆಯು ಕನಸಿನಲ್ಲಿಯೆ ಉಳಿಯುವುದಲ್ಲ–ಎಂಬ ನಿರುತ್ಸಾಹದ ವಿಚಾರವೊಂದು; ಇದೊಂದನ್ನೂ ಲಕ್ಷ್ಯಕ್ಕೆ ತಾರದೆ ಎದ್ದು ಬಿಟ್ಟ ಈ ಮಾಲಕನು ಎಂತಹ ಕಟುಕನು!–ಎಂಬ ಹತವೀರ್ಯದ ಹೇಸಿಕೆಯ ವಿಚಾರವೊಂದು. ಈ ನಾಲ್ಕು ವಿಚಾರಗಳಿಂದ ನಾಲ್ಕು ವೇದಗಳ ನೆಳವಿನಲ್ಲಿ ಸಿಕ್ಕ ಸನಾತನ ಸಮಾಜದಂತೆ ಕಿಂಕರ್ತವ್ಯತಾಮೂಢನಾದನು ನಾರಾಯಣನು. ಇಲ್ಲಿಯೆ ಉಳಿಯಲು ಮಾನ ಸಾಲುವಂತಿಲ್ಲ, ಬಿಟ್ಟು ಹೋಗಲು ಧೈರ್ಯ ಸಾಲುವಂತಿಲ್ಲ. ಹೀಗೆ ಹೊರಗೊಂದು ಒಳಗೊಂದು ಕಾಲಿಟ್ಟಾಗ ಹೊಸ್ತಿಲ ಮೇಲೆ ಹಾವನ್ನು ಕಂಡವನಂತಾಯಿತು ಅವನ ಸ್ಥಿತಿ. ಗಂಟಲು ಒಣಗಿತೇನೊ? "ಹಾಗಾದ್ರೆ ಹೋಗಿಬಿಡ್ತೀನಿ ನಾನು" ಎಂದು ಬತ್ತಿದ ಬಾಯಿಯಿಂದ ಬಿಸಿಯುಸಿರನ್ನು ಬಿಡುವುದು ಮಾಲಕನಿಗೆ ಕೇಳಿಸಲೇ ಇಲ್ಲವೇನೊ? ಮಾಲಕನು ಹಾಗೆಯೆ ನಡೆದಿದ್ದನು.

ಆ ಸಮಯಕ್ಕೆ ಸರಿಯಾಗಿ ಬಂದಿದ್ದಳು ತುಳಜಿ. ಆ ಸಮಯಕ್ಕೆ ಸರಿಯಾಗಿ ತಿರುಗಿ ತಡೆದು ನಿಂತಿದ್ದನು ಮಾಲಕನು. ತುಳಜಿಯ ಮುಖದಲ್ಲಿ ಗಾಂಭೀರ್ಯ. ಒಂದು ಬದಿಯಲ್ಲಿ ಚಕಿತನಾದ ಮಾಲಕನು, ಒಂದು ಬದಿ ಹೆದರಿದ ನಾರಾಯಣನು. ಇವರಿಬ್ಬರ ಸ್ವಭಾವಗಳನ್ನು ತೂಗುವ ತಕ್ಕಡಿಯ ಕಾಣೆಯೇನೊ ಎಂಬಂತೆ ತುಳಜಿಯ ತಲೆಯು ನಾರಾಯಣನ

ಕಡೆಗೊಮ್ಮೆ ಮಾಲಕನ ಕಡೆಗೊಮ್ಮೆ ಹೊಯ್ದಾಡುತ್ತಲಿದೆ. ತುಳಜೆಯ ಮುಖದಲ್ಲಿ ಕೋಪ; ಮಾಲಕನಿಗೆ ಕೋಪವಡಗಿ ಭಯ ಹುಟ್ಟಿತು; ನಾರಾಯಣನಿಗೆ ಭಯ ಹೋಗಿ ಧೈರ್ಯ ಬಂದಿತು. ನಾರಾಯಣನ ಧೈರ್ಯ ನೋಡಿ ತುಳಜೆಯ ತುಟಿ ಬಿರಿದುವು; ತುಳಜೆಯ ತುಟಿ ಬಿರಿದಂತೆ ಮಾಲಕನ ಕಾಲು ನಡುಗಿದುವು; ಮಾಲಕನ ಕಾಲು ನಡುಗಿದಂತೆ ನಾರಾಯಣನ ಕಣ್ಣು ಅರಳಿದುವು. ಕೂಡಲೆ ತುಳಜೆ ತಲೆ ತೂಗಿದಳು, ಮಾಲಕನು ಬಾಯ್ಬಿಟ್ಟನು, ನಾರಾಯಣನು ಎದೆ ಸೆಟಿಸಿದನು. ತುಳಜೆಯ ತಲೆ ಸ್ಥಿರವಾಗಿ ನಿಂತಿತು—ಮಾಲಕನನ್ನು ನೋಡುತ್ತ; ಮಾಲಕನ ತುಟಿ ಅಲ್ಲಾಡಿದುವು – ನಾರಾಯಣನನ್ನು ಬೇಡುತ್ತ; ನಾರಾಯಣನ ಕಾಲು ನೆಲಗೊಂಡವು—ಬೆರಳಿನಿಂದ ತೀಡುತ್ತ. ತಕ್ಕಡಿಯ ಕಾಣೆಯು ಸ್ತಿಮಿತವಾಗಿ ನಿಂತಿತು. ತೂಗಿ ನೋಡುವುದು ಮುಗಿಯಿತು. ಭಾರದ ಕಲ್ಲುಗಳನ್ನು ಒಂದೊಂದಾಗಿ ತಕ್ಕಡಿಯಿಂದ ತೆಗೆದಿಡುವಂತೆ ಮಾತನಾಡಿದಳು ತುಳಜೆ. 'ಅವರು-ಬಿಟ್ಟೋದ್ರ--ನಾ ನೂ ಬಿಟ್ಟೋಗೋಕೆ''

ಆ ದಿನ ನಡೆದ ಸಂಗತಿ ಎಂದರೆ ಇದಿಷ್ಟೆ. ಇಷ್ಟಕ್ಕಾಗಿ ಜನರು ತನ್ನ ಮತ್ತು ತುಳಜೆಯ ಸಂಬಂಧವಾಗಿ ರಹಸ್ಯವಾಗಿ ಆಡಿಕೊಳ್ಳುವುದೆಂದರೆ? ಆ ದಿನ ತುಳಜೆಯು ಮಾತನಾಡಿದ್ದೆಂದರೆ ಅವೇ ನಾಲ್ಕು ಶಬ್ದಗಳನ್ನು. ತನ್ನ ವಿಷಯವಾಗಿ ಅದೂ, ತನ್ನ ಕೂಡ ಅಲ್ಲ. ಇಷ್ಟೇ ಅಲ್ಲ. ಅಂದಿನಿಂದ ಈ ೨-೩ ದಿವಸ ತುಳಜೆಯು ತನ್ನ ಕೂಡ ಮಾತನಾಡಿಲ್ಲ (—ಅಥವಾ, ಹಾಗೆ ಯಾಕೆ ಹೇಳುವುದು? ಅವಳ ಮನಸ್ಸಿನಲ್ಲಿ ತನ್ನೊಡನೆ ಮಾತನಾಡಬೇಕೆಂದಿದ್ದರೂ ಇರಬಹುದು. ಆದರೆ–) ತಾನೂ ಅವಳ ಕೂಡ ಮಾತನಾಡಿಲ್ಲ. ಹೀಗಿರಲು ಜನರು ಕೆಟ್ಟುದನ್ನು ಕಲ್ಪಿಸಿಕೊಳ್ಳುವುದೆಂದರೆ? ತುಳಜೆಯ ಆದೊಂದೇ ಮಾತಿನಿಂದ ತನಗೆ ಸಂಬಳ ಸಿಕ್ಕಿತೆಂಬುದು ನಾರಾಯಣನಿಗೆ ಗೊತ್ತಾಯಿತು. ಅವಳು ಬಿಟ್ಟು ಹೋಗುವವಳೆಂದೊಡನೆ ಮಾಲಕನು ಏನೇನೊ ಸುತ್ತಿ ಸುತ್ತಿ ಮಾತನಾಡಿ ''ಅವರಿಗೆ ಹೋಗು ಅಂದವರ್ಯಾರು ? ಹೆಹೆ....ಅಂಥಾ ಕಲಿತವರು—ಹೆಂ—ಸುಶಿಕ್ಷಿತರು ನಮ್ಮ ಕಡೆ ಬಂದಿರೋದಂದ್ರೇನು? ನಾವು ಬೇಡಾ ಅನ್ನೋದೇನು? ಹೆಹೆಹೆ....

ಆದ್ರ–ಅವರ ಯೋಗ್ಯತಾಕ್ಕೆ ತಕ್ಕ ಸಂಬಳ ನಮ್ಮಂಥಾ ಬಡವರ ಕಡೆಯಿಂದ—ಹೆಹೆಹೆಹ!'' ಎಂದು ಬಿಕ್ಕಿದನು. ಅಂತೂ ತನಗೆ ಸಂಬಳ ಗೊತ್ತಾಯಿತು. ಇದರಲ್ಲಿ ಮುಚ್ಚುವವೇನು – ಒಬ್ಬರೊಬ್ಬರ ಕಿವಿ ಚುಚ್ಚುವದೇನು–ನಾಲಗೆ ಕಚ್ಚುವದೇನು! ಹುಚ್ಚರು! ನಿರುದ್ಯೋಗಿಗಳು! ಹೆಂಗಸಿಗೆ ಸಹಜವಾದ ಮಮತಾ ಬುದ್ಧಿಯಿಂದಲೆ ತುಳಜಿಯು ಮಾತನಾಡಿರಬಹುದು. ''ಅವರು ಹೋದರ ನಾನೂ ಹೋಗುವಾಕೆ'' ಅಂದರೇನಾಯಿತು? ತಾನು **ಹೋದಲ್ಲಿ** ಅವಳೂ ಬರುವಳೆಂದರ್ಥವಲ್ಲ. ಇದಲ್ಲದೆ-ತನ್ನ ಮದುವೆಯಾಗಿದೆ! ಯಾವುದೂ ಗೊತ್ತಿಲ್ಲದೆ ಪಿಸುಗುಟ್ಟುವರು ಬಾಯ್ಬಡಕತನದ ಬಕಾಸುರರು! ''ಬಾಯಿ ಸುಡುವಂತೆ ಬಿಸಿ ಬಿಸಿ ಚಹ ಕೊಡುವೆ ಇವರಿಗೆ. ಕಡೆಗೆ ಏನಿಲ್ಲೆಂದರೂ ಬಾಯಿ ನೋವಾಗಿ ಇನ್ನೆರಡು ದಿನಗಳಾದರೂ ಮಾತಾಡದಂತಾಗಲಿ ಇವರ ಸ್ಥಿತಿ'' ಎಂದುಕೊಳ್ಳುವಾಗ ಚಹ ತುಳುಕಿ–ಬೆರಳು ಸುಟ್ಟಿತು. 'ಉಫ್' ಎಂದು ಊದಿಕೊಂಡನು; 'ಬಕಾಸುರ'ರೂ ಉಫ್ ಎಂದು ಊದುತ್ತಿದ್ದಾರೆ ಬಸಿಯೊಳಗಿನ ಚಹವನ್ನು. ಬೊಟ್ಟು ಕಚ್ಚಿದನು ನಾರಾಯಣನು!

* * * *

'ಬಕಾಸುರ'ರ ಹಾವಳಿ ಒಂದೆರಡು ದಿವಸಗಳ ವರೆಗಾದರೂ ತಡೆಯಬೇಕೆಂದು ನಾರಾಯಣನು ಕಾತೊರೆಯುವುದಕ್ಕೆ ಇನ್ನೂ ಒಂದು ವಿಶೇಷ ಕಾರಣವಿದ್ದಿತು. ತಾನು ಕಮತೂರಿಗೆ ಬಂದು ಸೇರಿದ ಮೂರನೆಯ ದಿವಸವೇ ತನ್ನ ತಂದೆಯಿಂದ ಪತ್ರವೊಂದು ಬಂದಿತ್ತು. '' ನನ್ನ ಕುಲವೃಕ್ಷಕ್ಕೆ ಕೊಡಲಿಯನ್ನು ಹಾಕಿದೆ '' ಎಂದು ಬರೆದಿದ್ದರು. ಆಗಿನಿಂದ ಕೇಳಿದವರಿಗೆಲ್ಲ ತನ್ನ ಗೋತ್ರ ' ಭಾರ್ಗವ ಅರ್ಥಾತ್ ಕೊಡಲಿಯ ರಾಮ ' ಎಂದು ಹೇಳಬೇಕೆಂದು ನಿರ್ಧರಿಸಿದ್ದನು. '' ನನ್ನ ಮುಖಕ್ಕೆ ಕಲಂಕ ಹಚ್ಚಿದೆ '' ಎಂದಿದ್ದರು. '' ನಿನ್ನ ಮುಖವನ್ನು ಎಂದಿಗೂ ನೋಡಲಿಕ್ಕಿಲ್ಲ '' ಎಂದಿದ್ದರು. ' ಬಹಳ ಮಾಡಿ ಕಪ್ಪು ಹತ್ತಿದ ತಮ್ಮ ಮುಖ ನನಗೆ ತೋರಿಸಬಾರದೆಂಬ ಉದ್ದೇಶವೇನೋ! ಹಿರಿಯರ ಇಚ್ಛೆ ' ಎಂದು ಸಮಾಧಾನದಿಂದ ಉಸುರ್ಗರೆದಿದ್ದನು. ತಂದೆಯ ಈ ಯಾವ ಅಭಿಪ್ರಾಯಕ್ಕೂ ಸೊಪ್ಪು ಹಾಕುವ ಸ್ಥಿತಿಯಲ್ಲಿದ್ದಿಲ್ಲ ನಾರಾಯಣನು.

ಮುಂದೆ "ಕುಲಕರ್ಣಿ ರಂಗಣ್ಣನಿಗೆ ನಮ್ಮ ಮನೆತನದ ಪರಿಚಯ ವಿಶೇಷವಿದೆ" ಎಂಬುದನ್ನೋದಿ ಎದೆ ಧಸ್ಸೆಂದಿತು. ಕುಲಕರ್ಣಿಯ ಪರಿಚಯವು ತನಗೂ 'ವಿಶೇಷ' ವಾಗಿದ್ದಿತು. ಇವನು ತನ್ನ ತಂದೆಯು "ಸ್ವಂತ ಸುದ್ದಿಗಾರ" ನಾದರೆ ತನ್ನ ಸ್ಥಿತಿ ಏನು — ಎಂಬುದರ ಬಗ್ಗೆ ನಾರಾಯಣನಿಗೆ ಸಂಶಯವೇ ಇದ್ದಿರಲಿಲ್ಲ. ಮುಂದೆ ಎರಡು ದಿವಸಗಳಲ್ಲಿ ಮತ್ತೊಂದು ಪತ್ರ ಬಂದಿತು. "ನಿನ್ನ ಮಾವಂದಿರನ್ನಾಗಲಿ ಬೀಗರನ್ನಾಗಲಿ ಕರೆದುಕೊಂಡು ಒಂದೆರಡು ದಿವಸಗಳಲ್ಲಿ ಕಮತೂರಿಗೆ ಬರುವೆ. ವಿಶೇಷ ಭೆಟ್ಟಿಯಾದಲ್ಲಿ" ಎಂದು ಬರೆದಿದ್ದನು ಶೀನಪ್ಪನಾಯಕನು. ಮೊದಲು ಭೆಟ್ಟಿಯ ಪ್ರಸಂಗವನ್ನು ಬರಗೊಡಬೇಕೊ ಹೇಗೆ ಎಂಬ ಪ್ರಶ್ನೆ ನಾರಾಯಣನಿಗೆ; ಆ ಮೇಲೆ 'ವಿಶೇಷ' ವೆಂದರೇನು — ಎಂಬ ಪ್ರಶ್ನೆ. ಕಮತೂರನ್ನು ಬಿಟ್ಟು ಹೋದರೆ ಹೇಡಿತನ ತೋರಿಸಿದಂತಾಗುವುದು; ಕಮತೂರಿನಲ್ಲಿ ಉಳಿದುಕೊಂಡು ಕೊನೆಗೆ ಹೇಡಿತನವನ್ನೆ ತೋರಿಸುವ ಪ್ರಸಂಗ ಬಂದರೆ? ಇದಲ್ಲದೆ ತಂದೆ—ಮಕ್ಕಳ ಭೆಟ್ಟಿಯಾಗಬೇಕಾದರೆ ಮಾವನ ಮಧ್ಯಸ್ಥಿಕೆಯಾಗಲಿ ಬೀಗನ ಅಧ್ಯಕ್ಷತೆಯಾಗಲಿ ಯಾಕೆ ಬೇಕು? ಬಹಳ ಮಾಡಿ ಮದುವೆಯ ಕಾಲಕ್ಕೆ ಘಟಿಸಿದ ಪ್ರಸಂಗದ ಸಂಬಂಧವಾಗಿ ಬ—ರ—ಬ—ಹು—ದೊ—? ಮುಂದೆ ಗತಿ! ತಾನಂತೂ ಮನೆಗೆ ಹೋಗಬಾರದೆಂಬ ನಿಶ್ಚಯವನ್ನು ಕೈಕೊಂಡಿದ್ದಾನೆ. 'ಆಗಲಿ, ನಿನ್ನ ಹೆಂಡತಿಯನ್ನು ಕಳುಹಿಸಿಕೊಡುವೆ ನೀನಿದ್ದಲ್ಲೆ' ಎಂದು ತನ್ನ ಹಿರಿಯರು ಹೇಳಿದರೆ—? ಅಥವಾ 'ಗಂಡ—ಹೆಂಡಂದಿರಿಬ್ಬರೂ ನಮ್ಮ ಮನೆಯಲ್ಲಿದ್ದು ಬಿಡಿರಿ' ಎಂದು ಮಾವನಾಗಲಿ ಬೀಗನಾಗಲಿ ಹಟತೊಟ್ಟರೆ— ? ಬಿಗಿಯಾದ ತೊಡಕಿನಲ್ಲಿ ಸಿಕ್ಕು ಬಿಟ್ಟನು ನಾರಾಯಣನು. ಮನೆಯು ಬೇಡ— ಎಂದರೆ ಯಾರಿಗೂ ಅಷ್ಟೊಂದು ದುಃಖವೆನ್ನಿಸಲಿಕ್ಕಿಲ್ಲ. ಆದರೆ ಮಡದಿಯೂ ಬೇಡವೆಂದರೆ —? ಅವಳ ಘೋಷಣೆ— "ಛೆ, ಇದೇನು? ಹೆಂಗಸಿಗಾಗಿ ಪುಕ್ಕಟೆ ಹಾಟೆಲ್ (hotel) ಇಡುವ ಗುತ್ತಿಗೆ ಹೊತ್ತಿರುವನೆ ಗಂಡನು?— ಮದುವೆಯ ಕಾಲಕ್ಕೆ ಒಂದು ಕರಾರು ಮಾಡಿಕೊಳ್ಳಬೇಕು— If not delivered please return to | 'ಮಾಲಕನ ಪತ್ತೆ ಆಗದಿದ್ದರೆ ಕಳಿಗಿಸ ವಿಳಾಸಕ್ಕೆ

ನಾಪಸು ಪಡಾತಬೇಕು') ಎಂದು ಕನ್ಯೆಯ ತಂದೆಯ ಹೆಸರನ್ನು ಬರೆಯಿಸಿಬಿಡಬೇಕು.... ಇದೆಂತಹ ಗೋಳು ? ಬೇಡವೆಂದರೂ ತುತ್ತು ತಿನಿಸುವ ಅಜ್ಜ ತಾಯಿಯಂತೆ ಬೇಡವೆಂದರೂ 'ತು ತ್ತು ತಿ ನಿ ಸು' ಎನ್ನುವ ಅಜ್ಜ ಹೆಂಡತಿಯ ಕಾಟ!" ಕೊನೆಗೆ ವಿಚಾರ ಮಾಡಿದಲ್ಲಿ ಲಾಭವಿಲ್ಲ ಎನ್ನಿಸಿತು ನಾರಾಯಣನಿಗೆ. ನಿರ್ಧಾರವನ್ನೆ ಮಾಡಿಬಿಡಬೇಕೆಂದನು. ನನಗೆ ಹೆಂಡತಿ—ಬೇಡವೆ ಬೇಡ ಎಂದೊಮ್ಮೆ ಹೇಳಿಬಿಡಬೇಕೆಂದನು. ಈ ಮದುವೆಯ ನನಗೆ ಸಮ್ಮತವಿಲ್ಲ ಎಂದು ತಕರಾರು ಹೂಡಬೇಕೆಂದನು. ಹುಡುಗೆಗೆ ಕಷ್ಟವಾಗುವುದೇನೊ ನಿಜ. ಮಾಡಬೇಕೇನು ? ಇನ್ನು ಮುಂದಾದರೂ ಹುಡುಗೆಯರಿಗೆ ಇಂತಹ ಅನಾಹುತ ಸಂಭವಿಸಬಾರದೆಂದು ಸ್ತ್ರೀಶಿಕ್ಷಣ—ಸ್ತ್ರೀಸ್ವಾತಂತ್ರ್ಯಗಳ ಪ್ರಚಾರವನ್ನು ಮಾಡಲೇಬೇಕಾಗಿದೆ. ಬಹುಜನರ ಕಲ್ಯಾಣಕ್ಕಾಗಿ ಒಬ್ಬರಿಗೆ—ನಾರಾಯಣನಿಗೆ ಬೇಜಾರವಾಯಿತು. ಸುಮ್ಮಸುಮ್ಮನೆ ತಾನು ತಲೆ ಕೆಡಿಸಿಕೊಳ್ಳುತ್ತಿರುವಂತೆ ಕಂಡಿತು. ಹೆಂಡತಿ ಬೇಡ ಎಂದು ಹೇಳುವುದು. ಯಾಕೆ- ಎಂದು ಕೇಳಿದರೆ 'ನನಗೆ ಇಷ್ಟವಿಲ್ಲ' ಎಂದು ಬಿಡುವುದು. ಮುಂದೆ ಕೇಳುವ ಪ್ರಶ್ನೆಗಳಿಗೆಲ್ಲ ಮೌನವ್ರತದ ಮಹಾರಾಜನಾಗುವುದು. ಹೀಗೆ ನಿಶ್ಚಯಿಸಿಕೊಂಡ ಮೇಲೆ ಹೆದರಿಕೆಯಾಯಿತು ನಾರಾಯಣನಿಗೆ 'ಬಕಾಸುರ'ನ ಬಾಯ್ಬಿಡಕತನಕಾಗಿ. ತನಗೆ ಹೆಂಡತಿ ಇಷ್ಟವಿಲ್ಲ ಎಂಬ ಸಂಗತಿಗೂ ತನ್ನ ಮತ್ತು ತುಳಜಿಯ ವಿಷಯ ಅವರಿಗಿದ್ದ ಸಂಶಯಕ್ಕೂ ಈ ಜನರು ಹೊಂದಿಕೆ ಹಾಕಿದರೆ— ? ಏನೂ ಹಂಚಿಕೆ ತೋಚದಂತಾಯಿತು. ಬಹಳ ಮಾಡಿ ಕುಲಕರ್ಣಿಯು ಈ ರೀತಿ ಅಪವಾದಾತ್ಮಕವಾಗಿ ಬರೆದಿಸಲೂ ಸಾಕು. 'ನೋಡೋಣ ಆ ತುಡುಗನ್ನ' ಎಂದನು. ಇದೇ ನಾರಾಯಣನ ನಿಶ್ಚಯವಾದಂತಾಯಿತು. ಪರಿಸ್ಥಿತಿಗೂ ಮನಃಸ್ಥಿತಿಗೂ ಅನುಸರಿಸಿ ಕೊನೆಯ ಶಬ್ದವನ್ನು ಬದಲಾಯಿಸಿ 'ನೋಡೋಣ ಆ — ನ್ನ'ಎಂದು ಬಿಡುತ್ತಿದ್ದ.... ಕೊನೆಗೆ 'ನೋಡುವ' ಪ್ರಸಂಗವೂ ಬಂದೇ ಬಿಟ್ಟಿತು. ಒಂದು ದಿನ ಸಂಜೆಗೆ "ವಿನಾಲು ಜನರು ಚಹ ಕೆಟ್ಟಿದೆ ಅಂತ ತಕರಾರು ಮಾಡುವರು. ಬಹಳ ಮಾಡಿ ಹಾಲು ಕೆಟ್ಟಿರಲಿಕ್ಕೆ ಬೇಕು. ಅದಕ್ಕೆ ಈ

ಹೊತ್ತು ಅಲ್ಲಿಯೆ ಕೂತ್ಕೊಂಡು ಹಾಲು ತೆಗೆದುಕೊಂಡು ಬರುವೆ' ಎಂದು ದೊಡ್ಡ ಪಾತ್ರೆಯನ್ನೆತ್ತಿಕೊಂಡು ಜಾರ ಗೋಪಾಲಕೃಷ್ಣನ ನಗೆಯಿಂದ ಮಾಯವಾದನು ಮುಸುಕಿನಲ್ಲಿ. ಗಿಡದ ಟೊಂಗೆಯಲ್ಲಿ ಕುಳಿತವನ ನೆರಳಿನಂತೆ ನಿಃಶಬ್ದವಾಗಿ ತೂಗಿದನು ಮಾಲಕನು ತಲೆಯನ್ನು. ಅಷ್ಟು ಬೆರಗುವಡೆದಿದ್ದಾನೆ. ಕೆಲಸಕ್ಕಾಗಿ ಇಂತಹ ಚಟುವಟಿಕೆಯನ್ನು ಇದುವರೆಗೆ ಯಾರೂ ತೋರಿಸಿದ್ದಿಲ್ಲ ಅವನ ಅಂಗಡಿಯಲ್ಲಿ. ಆದುದರಿಂದ ಮಾಲಕನಿಗೆ ವಿಶ್ವಾಸವೆ ಕೂಡಲೊಲ್ಲದು, ತನ್ನ ಕಣ್ಣೆದುರಿನಲ್ಲಿಯೆ ನಾರಾಯಣನು ಪಾತ್ರೆಯನ್ನೆತ್ತಿಕೊಂಡು ಹೋದರೂ ವಿಶ್ವಾಸ ಕೂಡ ಲೊಲ್ಲದು. ಕೊನೆಗೆ ಈ ತೊಡಕನ್ನು ಬಿಟ್ಟುಕೊಡುವವರಂತೆ ಉಸುರ್ಗ ರೆದನು. ಆ ಉಸುರಿನಲ್ಲಿ ಸಮಾಧಾನದ ಛಾಯೆಯೂ ಇದ್ದಿತು. " ಹೋದರೂ ಹೋಗಿಬಿಡಲಿ. ಬಹಳವಾದರೆ ಆವೊಂದು ಪಾತ್ರೆಯನ್ನು ತೆಗೆದುಕೊಂಡು ಹೋಗುವ. ಜೇಬಿ (ಕಿಸೆ) ನೊಳಗಿನ ಕಾಸು ಎತ್ತಿ ಕೊಂಡು ಓಡಿ ಹೋಗೋ 'ಮಾಣಿ' ಗಳಿಗಿಂತ ಎಷ್ಟೋ ಸೋವಿ--- ಎಂದು ತಿಳಿದರಾಯಿತು " ಎಂಬ ಮನಸಿನಲ್ಲಿಯ ವಿಚಾರಕ್ಕಾಗಿ ಉಸುರ್ಗರೆದು ಸಂಜೆಯ ಬಸ್ಸು ಬರುವ ಹೊತ್ತಾದುದರಿಂದ ಚಪ್ಪರ ದಿಂದ ಹೊರಗೆ ಬಂದನು. ಪಾಪ! ಆ ಮಾಲಕನಿಗೆಂತು ತಿಳಿಯುವುದು ಸುಶಿಕ್ಷಿತರ ಬುದ್ಧಿಯಾಟ! ಮೋಸ-ತುಡುಗತನಗಳನ್ನೆ ಮಾಡುವುದಾ ದರೂ ತಮ್ಮ ಯೋಗ್ಯತೆಗೆ ತಕ್ಕಂತೆ ಮಾಡುವರಲ್ಲವೆ ಸುಶಿಕ್ಷಿತರು? ವರ ದಕ್ಷಿಣೆ ಮೊದಲ್ಗೊಂಡು ಲಂಚದ ವರೆಗೆ ರಾಶಿರಾಶಿಯಾಗಿ ಹಣವನ್ನೆತ್ತಿ ಹಾಕಬೇಕೆನ್ನುವ ಸುಶಿಕ್ಷಿತರ ವರ್ಗಕ್ಕೆ ಸೇರಿದ ನಾರಾಯಣನು ಒಂದು ತಾಮ್ರದ ಪಾತ್ರೆಯನ್ನು ಎತ್ತಿಹಾಕುವನೆ? ಇದಲ್ಲದೆ ಸದ್ಯಕ್ಕೆ ಅವನು ಹೋದದ್ದು ಮನಸಿನ ಕಳ್ಳತನಕ್ಕಾಗಿ. ಈ ದಿನದ ಸಂಜೆಯ ಬಸ್ಸಿನಿಂದ ತನ್ನ ತಂದೆಯೂ ಮತ್ತು 'ಮಾವಂದಿರಾಗಲಿ ಬೀಗರಾಗಲಿ' ಬರುವವ ರೆಂದು ತಿಳಿದಿತ್ತು ಅವನಿಗೆ. ಅವರ ಕಣ್ಣು ತಪ್ಪಿಸುವ ಉದ್ದೇಶದಿಂದ ಹೊರಟುಹೋದನು ನಾರಾಯಣನು. ಇದಲ್ಲದೆ ಇನ್ನೂ ಒಂದು ತೊಡಕು. ಬಸ್ಸಿನಿಂದ ಇಳಿದು ತನ್ನನ್ನು ನೋಡಿದರೆ, ಮಾತನಾಡಿಸಿದರೆ ತಾನೂ ಮಾತನಾಡಿಸಬೇಕು ಆದರ-ಸತ್ಕಾರ ಮಾಡಬೇಕು, ಚಹವನ್ನು

ಕೊಡಬೇಕು, ತನ್ನ ತಂದೆಗೆ ಚಹದಲ್ಲಿ ಸ್ವಲ್ಪ ಹೆಚ್ಚಾಗಿ ಹಾಲು ಬೇಕಾಗುವುದು, ಅದು 'ಸ್ಪೆಶಲ್ ಚಹ' ದ ಸದರಿಯೊಳಗೆ ಬರುವುದು, ಆ ಮೇಲೆ ಹಣವನ್ನು ತೆಗೆದುಕೊಂಡರೆ ಅತಿಥಿಸ್ವರೂಪಿಗಳಾದ ತಂದೆ ಮೊದಲಾದವರಿಗೆ ಅನ್ಯಾಯ, ಹಣವನ್ನೆ ತೆಗೆದುಕೊಳ್ಳದಿದ್ದರೆ ಮಾಲಕನಿಗೆ ಅನ್ಯಾಯ--- ಅಂತೂ ಈ ಧರ್ಮಸಂಕಟದಿಂದ ಪಾರಾಗುವುದಕ್ಕೆ ಹಾಲು ತರಲು ಹೊರಟನಾಯಿತು. ತಂದೆಯ ಚಹಕ್ಕೆ ಹಾಲು ಹೆಚ್ಚಾಗಿ ಬೇಕು ಎಂಬ ವಿಚಾರದಿಂದಲೆ ಹಾಲು– ಉತ್ತಮವೆನ್ನಿಸುವಂತಹ ಹಾಲು ತರಬೇಕೆಂಬ ವಿಚಾರಬಂದದ್ದು. ಹೀಗೆ ಕೊನೆಗೆ ತಾನು ಹೊರಟು ಹೋಗುವುದು ಕೂಡ ಪರ್ಯಾಯದಿಂದ ತಂದೆಯನ್ನು ಸತ್ಕರಿಸುವುದಕ್ಕಾಗಿಯೆ ಎಂದು ದೀರ್ಘ ಆಲೋಚನೆ ಮಾಡಿ ದೀರ್ಘ ನಿಶ್ವಾಸವನ್ನು ದೂಡಿ ಸಮಾಧಾನ ತಂದುಕೊಂಡನು.

ಅಂದಿನ ರಾತ್ರಿಯೆಲ್ಲ ನಾರಾಯಣನಿಗೆ ನಿದ್ರೆಯೆ ಬರಲಿಲ್ಲ. ಆಗಾಗ ಕಣ್ಣಿಗೆ ಮಬ್ಬು ಬಂದಾಗ ಭವ್ಯವಾದೊಂದು ಆನೆಯು ಕನಸಿನಲ್ಲಿ ಎದುರಾಗುತ್ತಿತ್ತು; ತನ್ನ ಎರಡೂ ಕೋರೆಗಳಿಂದ ನಾರಾಯಣನನ್ನು ಬಲವಾಗಿ ಗೋಡೆಗೆ ಒತ್ತುತ್ತಿತ್ತು. ಬಿರುಸಾದ ಗೋಡೆಯಿಂದ ನಾರಾಯಣನ ಬೆನ್ನಿಗೆ ತೀವ್ರ ವೇದನೆಯಾಯಿತು. ಕಣ್ದೆರೆದನು, ಹಾಸಿಕೊಂಡ ಪಂಚೆಯ ಕೆಳಗೆ ನೆಲದ ಹರಳುಗಳು ಚುಚ್ಚುತ್ತಿದ್ದುವು; ಜಾಡಿಸಿಕೊಂಡೆದ್ದನು. 'ಭಾರತದಲ್ಲಿ ಭೂಮಾತೆಗೂ ಬೇನೆಯಾಗಿ ಮೈತುಂಬ ಬೊಕ್ಕೆಗಳಾಗಿವೆಯೊ ಏನೊ!' ಎಂದು ಗೊಣಗುತ್ತನಿದ್ದೆಗಣ್ಣಿನಲ್ಲಿ ಶಕ್ಯವಾದಷ್ಟು ಹರಳುಗಳನ್ನು ಜಾಡಿಸಿ, (ಒದರಿ) ನೆಲವನ್ನು ಸಮಮಾಡಿ, ಹರಳುಗಳನ್ನಾರಿಸಿ ಸೂಸುಮಣ್ಣಿನ ಗುಂಪು ಏರಿಸಿ ಅದರ ಮೇಲೆ ಎಡಗೈಯನ್ನಿರಿಸಿ "ನನ್ನ ರಟ್ಟೆಯಿಂದಲೇ ನನ್ನ ಸುಖ ಸಂಪಾದಿಸುವೆ" ಎಂದುಕೊಳ್ಳುತ್ತ ತೋಳ್ದಿಂಬಿನ ಮೇಲೆ ಮತ್ತೆ ಮಲಗಿದನು. ನಿದ್ರೆ ಹತ್ತಬಹುದಾಗಿದೆ, ಅಷ್ಟರಲ್ಲಿ ಮತ್ತೆ ಬಂದಿತು ಆನೆ. ಮೊದಲು 'ವಿಘ್ನೇಶ'ನ ಮೂರ್ತಿಯಂತೆ ಕಂಡಿತು ತಲೆಗೆ ಸುತ್ತಿದ ಮುಂಡಾಸದಿಂದ. ಕೆಳಗೆ ನೋಡಿದರೆ ನಾಲ್ಕು ಕಾಲ್ಗಳು. ದೇವರಿಗೆ ನಾಲ್ಕು ಕೈಗಳಿದ್ದುದು ಗೊತ್ತು, ನಾಲ್ಕು ಕಾಲ್ಗಳಿದ್ದುದನ್ನು ಮಾತ್ರ ಎಲ್ಲಿಯೂ ಕೇಳಿದ್ದಿಲ್ಲವಾದ್ದರಿಂದ ನಾರಾಯಣನಿಗೆ

ಹೆದರಿಕೆಯು ಜೊತೆಗೆ ಸೋಜಿಗವೂ ಎನ್ನಿಸಿತು. ಎರಡೂ ಕೋರೆಗಳು ತಿವಿಯಬೇಕೆನ್ನುತ್ತಿವೆ, ಮಗ್ಗುಲಾದನು ನಾರಾಯಣನು. ಆನೆಯ ಮುಖವು ತನ್ನ ತಂದೆಯ ಮುಖವನ್ನು ಹೋಲುತಿದೆ! ಆದರೂ ಎರಡು ಕೋರೆಗಳು! ಕ್ರೂರ ನಗೆಯ ಛಾಯೆ ಮೂಡಿದೆ ಆ ಮುಖದ ಮೇಲೆ. ನಾರಾಯಣನು ಹೆದರಿದನು, ತಟ್ಟನೆ ಎದ್ದು ಕುಳಿತನು, ಕಣ್ಣೊರೆಸಿಕೊಂಡನು. ಇದುವರೆಗೆ ಅವನಿಗೆ ಸಿಟ್ಟು ಬಂದಿದ್ದರೆ ಈಗ ಅವನಿಗೆ ಅವಮಾನವೂ ಆದಂತಾಯಿತು. ತನ್ನ ತಂದೆಗಾಗಿ ತನಗೆ ಇಷ್ಟೇಕೆ ಹೆದರಿಕೆ? ತಾನು ಸ್ವತಂತ್ರನಾಗಬೇಕೆಂದರೂ ಸ್ವತಂತ್ರನಾದಂತೆಯೆ ಇದ್ದರೂ ಎಷ್ಟೊಂದು ಪ್ರಯತ್ನಪಟ್ಟರೂ ಇನ್ನೂ ತನಗೆ ಹೆದರಿಕೆ ಬಿಡಲೊಲ್ಲದಲ್ಲ! ತೀಕ್ಷ್ಣವಾದ ಆ ಕೋರೆಗಳು! ಅಬ್ಬ! ಅವುಗಳಲ್ಲಿ ಸಿಕ್ಕಿಕೊಂಡು ತಾನು ಜೋತಾಡುತ್ತಿದ್ದಂತೆ ಭಾಸವಾಯಿತು. ಒಂದು ಸಂಸ್ಕಾರ, ಒಂದು ಶಿಕ್ಷಣ—ಇವೆರಡುಗಳ ನಡುವೆ ತಾನು ಪರವಶನಾಗಿ ಜೋತಾಡುತ್ತಿರುವುದು ನಿಜ. ಓಹೊ! ಆನೆಯ ಎರಡು ಕೋರೆಗಳಿಗೆ ಇದೇ ಸಂಕೇತವಿದ್ದಿರಬಹುದು. ಒಂದು ಕೋರೆ ಸಂಸ್ಕಾರ, ತನ್ನನ್ನು ತಿವಿಯುತ್ತಲಿದೆ; ಮನುಷ್ಯನಿಗೆ ಮನದ ಸ್ವಾತಂತ್ರ್ಯವಿದೆ, ಮೈಮುರಿ ದುಡಿದುಣ್ಣುವ ಯೋಗ್ಯತೆ ಇದೆ—ಎಂಬುದಕ್ಕೆ ಆಸ್ಪದ ಕೊಡದ ವರ್ಣಾಶ್ರಮ ಧರ್ಮದ ಸಂಸ್ಕಾರದ ಇರಿತದಿಂದ ಮನುಷ್ಯನು ಪರವಶನಾಗಿದ್ದಾನೆ—ತಾನೂ ಪರವಶನಾಗಿದ್ದಾನೆ. ಹುಟ್ಟಿದಂದಿನಿಂದ ಹಿಂದಿನಿಂದ ನಡೆದು ಬಂದುದನ್ನು ನಡೆಸುವ ಸಂಸ್ಕಾರ ತನ್ನದು. ಮಾನವನೆಂಬ ಹುಳು 'ನಾಲ್ವಳಿಗೆ ಪಲ್ಲಿಂ ಮರ್ತ್ಯಲೋಕಂಗಳೊಳ್' ಎಂಬ ಸಂಸ್ಕಾರ ತನ್ನದು. ಹುಟ್ಟಿದ ಸ್ವಲ್ಪಾವಧಿಯಲ್ಲಿಯೆ ಇಲಿಗಳನ್ನು ಹೊಡೆದು ಸ್ವತಂತ್ರವಾಗಿ ಉಪಜೀವನ ಸಾಗಿಸುವ ವಿದ್ಯೆಯನ್ನು ಬೆಕ್ಕು ತನ್ನ ಮರಿಗಳಿಗೆ ಕಲಿಸುವುದು. ಅಷ್ಟು ಕೂಡ ಬುದ್ಧಿ ಮನುಷ್ಯನಲ್ಲಿಲ್ಲ. ನಳ—ರಾಮ—ಹರಿಶ್ಚಂದ್ರರಿಂದ ಮೊದಲ್ಗೊಂಡು ಎಕ್ಕವರ ದುಃಖವನ್ನು ನೋಡಿ ತನಗೂ ದುಃಖವನ್ನು ತಂದುಕೊಂಡು ಬಾಳುವ ಭಾರತೀಯ ಮಾನವನಿಗೆ, ಇನ್ನೊಬ್ಬನ ಸುಖವನ್ನು ನೋಡಿ ಸುಖ ಸಂಪಾದಿಸಬೇಕೆಂಬ ಈರ್ಷೆ ಇಲ್ಲವಲ್ಲ, ಹುಮ್ಮಸ ಹುಟ್ಟುವದಿಲ್ಲವಲ್ಲ! ಇದಕ್ಕೆ ಉಪಾ

ಉಪಾಯವೇನು ?–ನಾರಾಯಣನು ಆಕಳಿಸಿದನು–ತನ್ನಂತೆ ಎಷ್ಟು ತರುಣರು ಕೊಳಲುತ್ತಿರಬಹುದಲ್ಲ ಎಂದುಕೊಂಡನು. ಈ ಹಳೆಯ ಸಂಸ್ಕಾರವನ್ನು ಜಾಡಿಸುವ, ತಿದ್ದಿಕೊಳ್ಳುವ ಉಪಾಯ ಯಾವುದು ?– ಎಂದು ಯೋಚಿಸ ತೊಡಗಿದನು. ಯೋಚನಾನಂತರದಿಂದ ಕಣ್ಣಿಗೆ ನಿದ್ದೆ ಒತ್ತಿಹತ್ತಿತು. ಮತ್ತೆ ಮಲಗಿಕೊಂಡನು, ಮುಖ ಮೇಲೆ ಮಾಡಿ ಕಣ್ದೆರೆದು ಶಾಂತವಾದ ಸ್ಪಷ್ಟವಾದ ಆಕಾಶವನ್ನು ನೋಡುತ್ತ ಮಲಗಿಕೊಂಡನು. ಮಿನುಗುತ್ತಿರುವ ಅನೇಕ ತಾರೆಗಳು ಗತಿ–ಗೆಟ್ಟ ಅನೇಕ ತರುಣರು ಮಿಳುಕಿಸುತ್ತಿರುವ ಕಣ್ಣುಗಳಂತೆ ಕಂಡುವು. ಇಂತಹ ಪರಿಸ್ಥಿತಿಯಲ್ಲಿ ಉಪಾಯವನ್ನು ಯೋಚಿಸದೆ ಮಲಗಬಾರದೆಂದನು. ಉಪಾಯವೇನು ? ಒಂದೇ ಒಂದು. ನೋಡಿದುದನ್ನು ಕೇಳಿದುದನ್ನು ತಿಳಿದುಕೊಳ್ಳುವ ತಿಳುವಳಿಕೆ ಮೂಡಿದಾಕ್ಷಣ ಹುಡುಗರನ್ನು ಹಿರಿಯರಿಂದ ದೂರರಿಸಬೇಕು. ಇರಿಸಲೇಬೇಕು, ಹಿಂದಿನ ಅಜ್ಞಾನದ ಅಶಕ್ತತೆಯ ಪಿಡುಗು ಹಬ್ಬುವುದು ಈ ಹಿರಿಯರ ಸಂಪರ್ಕದಿಂದಲೆ. ಸಮಾಜವಾಗಲಿ ರಾಷ್ಟ್ರವಾಗಲಿ ತಂದೆ–ತಾಯ್ಗಳಿಂದ ಮಕ್ಕಳನ್ನು ಸಂರಕ್ಷಿಸುವ ಸಂಸ್ಥೆಗಳನ್ನೇರ್ಪಡಿಸಬೇಕು. ಹುಡುಗರನ್ನು ಹುಡುಗರೊಡನೆ ಸೇರಿಸಿ ಹಳೆಯದರ ಸಂಬಂಧವಿಲ್ಲದಂತೆ ಅವರನ್ನು ಬೆಳೆಯಿಸಬೇಕು. ಇದೇ ಅವಶ್ಯವಾದುದು. 'ನಾಳಿನಿಂದ ನಮ್ಮೂರಿನಲ್ಲಿ ಶಿಶು–ಸಂಘಗಳನ್ನೇರ್ಪಡಿಸಲೇಬೇಕು' ಎಂದು ಹುರುಪಿನಿಂದ ನೆಲಕ್ಕೆ ಕೈ ಬಡಿದನು. ಒಂದು ಕೋರೆ ಮುರಿಯಿತು, ಕೈಗೆ ಪೆಟ್ಟು ತಾಕಿತು, ಮತ್ತೆ ಎಚ್ಚರಾದನು....ಮತ್ತೆ ಆಕಾಶವನ್ನು ನೋಡಿದನು.... ಉಪಾಯವನ್ನು ಯೋಚಿಸದೆ ಮಲಗಲೇಕೂಡದೆಂದು ಮತ್ತೆ ಹಟ ತೊಟ್ಟನು....ಒಂದು ಕೋರೆ ಮುರಿದಿದೆ, ಇನ್ನೊಂದು–ಶಿಕ್ಷಣದ–ಕೋರೆಯುಳಿದಿದೆ. ನಿಜವಾಗಿ ಆನೆಯ ಕೋರೆಗಿಂತ ಕ್ರೂರವಾಗಿದೆ ಶಿಕ್ಷಣ. ಯಾರಿಗೆ ಬೇಕಾಗಿದೆ? ಯಾರಿಗೆ ಉಪಯುಕ್ತವಿದೆ ? ತನಗೆ ಶಿಕ್ಷಣವಿಲ್ಲದಿದ್ದರೆ ತಾನೆಲ್ಲಿ ಇಷ್ಟು ಪರಾವಲಂಬಿ ಹತವೀರ್ಯನಾಗುತ್ತಿದ್ದನು? ಬ್ರಹ್ಮಚರ್ಯಾಶ್ರಮದಂತೆ ಶಿಕ್ಷಣ! ಬ್ರಹ್ಮಚಾರಿಯ ಎದುರು ನಿಂತಿದೆ ಈ ಶಿಕ್ಷಣ–ಶಿಖಂಡಿ. ತನ್ನಂತಹ 'ಭೀಷ್ಮ'ರು ಶರಪಂಜರದಲ್ಲೊರಗಿದ್ದಾರೆ. ಸರ್ವಾಂಗ ಚುಚ್ಚುತ್ತಿವೆ ಮುರಿದ ಬಾಣಗಳು. ಬೆನ್ನು ಕೆಳಗೆ ಕಯ್ಯನಾಡಿಸಿದನು.

ಎಚ್ಚರಾದನು. ಇನ್ನೂ ಒಂದೆರಡು ದೊಡ್ಡ ದೊಡ್ಡ ಹರುಳುಗಳುಳಿದಿವೆ, ಶಿಕ್ಷಣದಿಂದ ಪಡೆದುಕೊಂಡ ಪದವಿಗಳಂತೆ ಚುಚ್ಚುತ್ತಲಿವೆ. ಈ ಹಾಳು ಶಿಕ್ಷಣವನ್ನು ತನ್ನ ತಂದೆ ತನಗೆ ಕೊಡಿಸಿದ್ದಿಲ್ಲವೆಂದರೆ— ಎನ್ನುತ್ತ ಹರಳುಗಳನ್ನು ಹುಡುಕಿ ತೆಗೆದು ಬಿಸಾಡಿದನು. ಉಪಾಯವೇನು? ತಿಳಿಯುವುದಕ್ಕೆ ಮುಂಚಿತವಾಗಿಯೆ ಕೊರಳಿಗೆ ತೂಗಬೀಳುವ ಈ ಶಿಕ್ಷಣದ ಒತ್ತಾಯದಿಂದ ಬಿಡುಗಡೆ ಹೊಂದುವ ಉಪಾಯ ಯಾವುದು? ಆ ಶಿಕ್ಷಣವನ್ನು ಈಗಾಗಲೆ ಸಿಕ್ಕಿಸಿಕೊಂಡ ತನ್ನಂತಹ ತರುಣರ ತರಣೋಪಾಯ, ಜೀವನೋಪಾಯ ಯಾವುದು? ತನ್ನ ತಂದೆಯನ್ನು ಕಾಣಲು ತನಗೀಗ ಹೆದರಿಕೆಯಾದುದು ತಾನು ಚಹದಂಗಡಿಯಲ್ಲಿದುಡಿಯುತ್ತಿರುವುದಕ್ಕಾಗಿ; ತಾನು ಚಹದಂಗಡಿಯಲ್ಲಿ ದುಡಿಯಬೇಕಾದುದು ಶಿಕ್ಷಣ ಪಡೆದುದರ ಪ್ರಾಯಶ್ಚಿತ್ತಕ್ಕಾಗಿ.ಆ ಕೆಲಸಕ್ಕೂ ತನ್ನ ಉಪಯೋಗವಿಲ್ಲಎಂದು ಮಾಲಕನು ಹಂಗಿಸಿದ್ದನು. ತನ್ನ ಕರ್ತವ್ಯ ಕರ್ಮ ಯಾವುದು? ತನ್ನ ಯೋಗ್ಯತೆಗೆ ಕರ್ಮ ಯಾವುದು? ತನ್ನಂತೆ ನಿರುದ್ಯೋಗಿ ನಿರುಪಯೋಗಿಗಳಾಗಿ ತಿರುಗುವ ತರುಣರ ಕರ್ಮ ಯಾವುದು?....ಸಮಾಜ ಸುಧಾರಣೆ—? ಗ್ರಾಮ ಸುಧಾರಣೆ—? ಅಂದರೆ—? ಚಹದಂಗಡಿಯಲ್ಲಿಯ ಕೆಲಸದಲ್ಲಿ ತನಗೆ ಸಮಯ ಕೂಡ ಸಿಕ್ಕುವುದಿಲ್ಲ, ಇದಲ್ಲದೆ—ಛೆ, ಯಾವುದೂ ಉಪಯೋಗದ್ದಲ್ಲ ಎನ್ನಿಸಿತು. ಇನ್ನು ಒಂದೇ ದಾರಿ. ಇತ್ತ ಶಿಶು-ರಕ್ಷಕ-ಸಂಘವನ್ನೂ ನಡೆಯಿಸಿದಂತಾಯಿತು, ಇತ್ತ ಶಿಕ್ಷಣದ ಕೆಲಸನನ್ನೂ ನಡೆಯಿಸಿದಂತಾಯಿತು.ಹಳ್ಳಿಯಲ್ಲಿ ದುಡಿಯುವುದು, ಹಳ್ಳಿಗರಿಂದ ಭಿಕ್ಷೆ ಬೇಡುವುದು, ಇದೇ ಸರಿಯಾದ ಉಪಾಯ. ''ನಿಮ್ಮ ಹುಡುಗರಿಗೆ ಓದು ಬರೆಯಲು ಕಲಿಸುವೆ, ನನಗೆ ದಿನಾಲು ಒಂದೂಟ ಕೊಡಬೇಕು'' ಎಂದು ಹಳ್ಳಿಗರಿಗೆ ಸವಾಲು ಹಾಕುವುದನ್ನು ನಿಶ್ಚಯಿಸಿದನು. ಎರಡೂಟಗಳನ್ನೆ ಬೇಡಬೇಕೆಂದಿದ್ದನು,ಅಷ್ಟರಲ್ಲಿ ಭಾರತೀಯರಿಗೆ ಒಂದೂಟ ಸಿಕ್ಕುವುದೆ ಕಷ್ಟ ಎಂದು ತಜ್ಞರು ಬರೆದಿಟ್ಟದ್ದು ಸ್ಮರಣೆಗೆ ಬಂದು ಒಂದೂಟವನ್ನೆ ಕೇಳಿಬಿಡಬೇಕೆಂದನು. ಕೊನೆಗೆ 'ಕೇಳುವುದು ಎರಡೂಟಗಳನ್ನು, ವ್ಯಾಪಾರದ ಜಗ್ಗಾಟದಲ್ಲಿ ಒಂದಕ್ಕಾದರೂ ಅವರು ಒಪ್ಪಬಹುದು' ಎಂದು ಹಂಚಿಕೆ ಹಾಕಿ ಎರಡೂಟಗಳನ್ನೆ ಕೇಳಬೇಕೆಂದು ನಿರ್ಧಾರ

ಮಾಡಿದನು. ಒಂದೂಟ, ಶಾಲೆಯ ಕೆಲಸ. ಓದು–ಬರೆಹವನ್ನಂತೂ ಕಲಿಸಲೇಕು. ಆ ಮೇಲೆ ದುಡಿಯುವದನ್ನು. ಯಾವ ದುಡಿತ? ಕಮತೂರಿನ ಸ್ಥಿತಿಗತಿಗಳನ್ನು ನೋಡಿಕೊಂಡು ನಿಶ್ಚಯಿಸೋಣ ಎಂದನು. ಸ್ವಚ್ಛತೆ, ಆರೋಗ್ಯ, ಶಿಸ್ತು, ಸ್ವಯಂಸೇವೆ–ಇವುಗಳನ್ನೆ ಕಲಿಸುವುದು. ದೇವನ ಧರ್ಮ–ಉಹುಂ, ಬೇಡವೆ ಬೇಡ; ಧರ್ಮವನ್ನು ಕಲಿಸುವುದಾದರೆ ಮನುಷ್ಯ ಧರ್ಮವನ್ನೆ ಕಲಿಸುವುದು. ಒಂದೂಟ, ಸ್ವತಂತ್ರ ಶಿಕ್ಷಣ! ನಾರಾಯಣನಿಗೆ ಒಳ್ಳೇ ಸೊಗಸು ಕಂಡಿತು ಜೀವನದಲ್ಲಿ. ವಿಶೇಷವಾಗಿ ಒಂದೂಟವಂತೂ ಎಷ್ಟೋ ಸೊಗಸಾಗಿ ಕಂಡಿತು. ಚಹದಂಗಡಿಯಲ್ಲಿಯ ಊಟಕ್ಕಿಂತಲೂ ಹೆಚ್ಚು ರುಚಿ ಕಂಡಿತು ನಾರಾಯಣನಿಗೆ ಈ ಒಂದೂಟ. ಚಹದಂಗಡಿಯಲ್ಲಿ ತಿನಿಸು ತಲೆಯಲ್ಲಿಯೆ ಯಾವಾಗಲೂ ತುಂಬಿಕೊಂಡಂತೆ ಇದ್ದಿತು. ಇದಲ್ಲದೆ ಈಗಿನ ಒಂದೂಟ ಸತ್ಕಾರ್ಯಕ್ಕಾಗಿ ನಿಸ್ವಾರ್ಥ ಬುದ್ಧಿಯಿಂದ ಸೇವಾವೃತ್ತಿಯಿಂದ ದೊರಕಿಸಿದ್ದು. ಆದುದರಿಂದ ಮನಸ್ಸಿಗೆ ತುಷ್ಟಿ, ಶರೀರಕ್ಕೆ ಪುಷ್ಟಿ ದೊರಕುತ್ತಿತ್ತು ನಾರಾಯಣನಿಗೆ. ತಾನು ಮಾಡಿದ ಕೆಲಸವನ್ನು ತನ್ನ ತಂದೆಯ ಮುಂದೆ ತೋರಿಸುವಾಗ ನಾರಾಯಣನಿಗೆ ಅಭಿಮಾನ ಉಕ್ಕುತ್ತಲಿದ್ದಿತು, ಧೈರ್ಯ ಒಡಮೂಡುತ್ತಿದ್ದಿತು. ತಾನೂ ತಂದೆಯಾಗಿದ್ದಾನೆ, ಶಿಕ್ಷಣ ಕೊಟ್ಟು ಸಾಮಾಜಿಕ ವೀರರನ್ನು ಹುಟ್ಟಿಸುವ ತಂದೆ. ಗಿಡದಡಿಯಲ್ಲಿ ಶಾಲೆ. ಹುಡುಗರು ಆಡುತ್ತಲಿದ್ದಾರೆ, ಒರಗಿಕೊಂಡು ತಾನು ನೋಡುತ್ತಲಿದ್ದಾನೆ. ಹುಡುಗರು ಕೂಗಿ ಕುಣಿದಾಡುತ್ತಲಿದ್ದಾರೆ. ನಾರಾಯಣನ ಮುಖದಲ್ಲಿ ನಗೆ. ಸಲಿಗೆಯಿಂದ ತನ್ನನ್ನು ಕೆಣಕುತ್ತಲಿದ್ದಾರೆ, ಎಳೆಯುತ್ತಲಿದ್ದಾರೆ, ಜಗ್ಗುತ್ತಲಿದ್ದಾರೆ....ತಟ್ಟನೆ ಎದ್ದನು ನಾರಾಯಣನು ಕಣ್ಣೊರೆಸಿಕೊಳ್ಳುತ್ತ. ಮಾಲಕನು ಮೈಮೇಲಿನ ಹೊದಿಕೆಯನ್ನೆಳೆದು ನಿಂತಿದ್ದಾನೆ. ಅವನ ಮುಖ ಕೆಂಪು, ಎದುರು ಸೂರ್ಯ ಕೆಂಪು.

* * * *

ಮುಂಜಾವಿನ ಮೂರು ತಾಸು ಹೊತ್ತೇರಿದೆ. ನಾರಾಯಣನು ಕುಲಕರ್ಣಿಯ ಮನೆಗೆ ನಡೆದಿದ್ದಾನೆ. ಮುಖವನ್ನು ಕೆಳಗೆ ಮಾಡಿಕೊಂಡು ನಡೆದುದರಿಂದ ನೋಡಿದವರಿಗೆ ಬರಿಯ ಅವನ ಹಣೆಯ ಗಂಟು

ಗಳೇ ಕಾಣುವಂತಲಿವೆ. ನನ್ನ ಸತ್ಕಾರ್ಯ-ಸಾಹಸಗಳೆಲ್ಲ ಕನಸಿನ ಲ್ಲಿಯೆ ನಡೆದುವಲ್ಲ - ಎಂಬ ಅಸಂತೋಷ, ಆ ಮಾಯಾಸೃಷ್ಟಿಗಾಗಿ ತನಗೆ ನಿದ್ದೆ ಇಲ್ಲದೆ ಹೋಯಿತಲ್ಲ—ಎಂಬ ಅಸಮಾಧಾನ, ಅದೇ ಹಾಳು ಕನಸಿಗಾಗಿ ಮಾಲಕನಿಂದ ತಾನು ಮಾತನಾಡಿಸಿಕೊಳ್ಳಬೇಕಾಯಿತಲ್ಲ— ಎಂಬ ಹೊಟ್ಟೆಯುರಿ. ತಡಮಾಡಿ ಎದ್ದುದಕ್ಕೆ ಮಾಲಕನಿಗೆ ಸಿಟ್ಟು ಬರು ವುದೇನೊ ಸಹಜ. ಆದರೆ ಸದ್ಯದ ಪ್ರಸಂಗದಲ್ಲಿ ಆ ಕಾರಣಕ್ಕಿಂತಲೂ ಸಂಬಳವನ್ನು ಕೊಡುವ ಜಂಬದಿಂದಲೇ ಮಾಲಕನು ಮಾತನಾಡಿದ್ದು— ಎಂದು ನಾರಾಯಣನಿಗೆ ಕಲ್ಪನೆಯಾಯಿತು. ಸಂಬಳದಿಂದ ತನ್ನ ಬೆಲೆ ಹೆಚ್ಚುವುದೆಂದು ತಿಳಿದುಕೊಂಡ ನಾರಾಯಣನಿಗೆ ಸಂಬಳವೆ ತನ್ನ ಅಪ ಮಾನಕ್ಕೆ ಕಾರಣವಾಯ್ತೆಂಬ ವಿಚಾರದಿಂದ ಅಸಹ್ಯ ವೇದನೆಯಾಯಿತು. ಇನ್ನು ಈ ಕೆಲಸದಲ್ಲಿಯೆ ಬಹಳ ದಿವಸ ತೊಡಕುವುದರಲ್ಲಿ ಅರ್ಥವಿಲ್ಲ, ಸೇವಾವೃತ್ತಿಯು ಶಿಕ್ಷಕನೆ ಆಗಬೇಕು ಎಂಬ ವಿಚಾರವು ತಲೆ ಎತ್ತ ಹತ್ತಿತು. ಇಂತಹ ಸಮಯಕ್ಕೆ ಈ ಹಾಳು ತೊಂದರೆ! — ಎಂದು ತಂದೆಯ ಮೇಲೆ ಸಿಟ್ಟಾದನು. ತನ್ನ ದೃಢನಿಶ್ಚಯ ಗೊತ್ತಿದ್ದೂ ಯಾಕೆ ಬರಬೇಕೊ ಇವರೀಗ? ಆ ತುಂಟ ಕುಲಕರ್ಣಿಯೆ ಇದಕ್ಕೆ ಕಾರಣ. ಮೊದಲಿನಿಂದಲೂ ಅವನದೆ ಈ ಉಪದ್ವ್ಯಾಪ. ಕುಲಕರ್ಣಿಯ ವಿಷಯ ವಾಗಿ ದ್ವೇಷ ನೂಸಹತ್ತಿತು ನಾರಾಯಣನ ಹೃದಯದಲ್ಲಿ. ಅವನ ಮನಸ್ಸಾದರೂ ಎಷ್ಟು ಕೀಳಾದುದು! ತನ್ನ ತಂದೆಯನ್ನು ಪೂಸ ಟಿದ್ದಾರೆ ತನ್ನನ್ನು ಕಾಣಲಿಕ್ಕೆ. ಕುಲಕರ್ಣಿಯೆ ಅವರನ್ನು ಕರೆದು ಕೊಂಡು ನಡೆದಿರಬೇಕು. ಜಹದಂಗಡಿಯಲ್ಲಿ ತಾನು ದುಡಿಯುತ್ತಿರು ವುದನ್ನು ತನ್ನ ತಂದೆಗೆ ತೋರಿಸಬೇಕೆಂಬ ತಾಮಸ ವಿಚಾರದಿಂದಲೆ ಅವನೀ ಕೆಲಸವನ್ನು ಕೈಕೊಂಡಿರಬೇಕು. ಅಷ್ಟರಲ್ಲಿ ತುಳಜಿಯು ಹೋಗು ತ್ತಿರುವುದನ್ನು ನೋಡಿದನಂತೆ ಕುಲಕರ್ಣಿ. ನೋಡಿದವನೆ ಅವಳನ್ನು ಕರೆದನಂತೆ. ಅವಳೂ ಹೋದಳು, ಕುಲಕರ್ಣಿಯ ಜೊತೆಯಲ್ಲಿ ಮತ್ತಾ ರೋ ಇಬ್ಬರು ಇದ್ದುದರಿಂದ ತುಳಜಿಯು ಹೆದರಿಕೆಯಿಂದಲೆ ಹೋದಳು. | ಆ ಇಬ್ಬರಲ್ಲಿ ಒಬ್ಬರು ತನ್ನ ತಂದೆ ಎಂದು ನಾರಾಯಣನು ತುಳಜಿ ಯಿಂದ ಕೇಳಿಕೊಂಡ ಸಂಗತಿಗಳಿಂದ ಊಹಿಸಿದ್ದನು. ಇನ್ನೊಬ್ಬನಾರೊ-

ಎಂದು ಅವನಿಗೂ ಕುತೂಹಲ). "ನಾರಾಯಣರಾಯರು ಇದ್ದಲ್ಲಿಯೆ ಇವಳಿದ್ದಾಳ" ಎಂದು ಕುಲಕರ್ಣಿ ಹೇಳಿದನಂತೆ ಉಳಿದಿಬ್ಬರಿಗೆ. "ನಾರಾಯಣರಾಯರು ಇರತಾರೇನು ಈ ಹೊತ್ತಿಗೆ ?" ಎಂದು ತುಳಜಿಯನ್ನು ಕೇಳಿದನಂತೆ. ದುಷ್ಟ! ತನ್ನ ವಿಷಯವಾಗಿ ಕುಶಂಕೆಯನ್ನು ಹುಟ್ಟಿಸಬೇಕು ತನ್ನ ತಂದೆಯ ಮನಸಿನಲ್ಲಿ ಎಂಬ ಹೊಲಸು ಹಂಚಿಕೆ ಅವನದು! ಪಾಪ! ತುಳಜಿಗೆ ನಾರಾಯಣನ ಪರಿಚಯವಿದ್ದರೂ ಹೆಸರು ಗೊತ್ತಿರಬೇಕಲ್ಲ. ಅವಳು ಮೊದಲೇ ಹೆದರಿದ್ದಳು. "ನಾರಾಯಣ ರಾಯರು ಯಾರ್ರಿ ?" ಎಂದು ಕೇಳಿದಳಂತೆ. ಅವಳದೇನು ತಪ್ಪು ? ಕುಲಕರ್ಣಿಗೆ ಎಷ್ಟು ದ್ವೇಷ ತನ್ನಮೇಲೆ ! "ಆ ಹೊಸ್ತಾಗಿ ಬಂದಾರು ನೋಡು, ಚಹಾ-ಕೊಡೋ ಕೆಲ್ಸ ಹಿಡಿದಾರಲ್ಲ. ಅವರು. ಗೊತ್ತಿಲ್ಲ ನಿನಗ?" ಎಂದನಂತೆ. "ಅವರು ಈಗ ಇರ್ತಾರೇನು ? ಅವರಿಗೆ ಭೆಟ್ಟಿ ಆಗ್ಬೇಕೂ ಅಂತ ಬಂದಾರ." ತುಳಜಿಯು ಜಾಣತನವೊ ನಾರಾಯಣನ ಸುದೈವವೊ ಹೇಳಲು ಬರುವದಿಲ್ಲ. ಏನೇ ಇರಲಿ, "ಇಷ್ಟೊತ್ತಿನಾಗ ಅವರಿಗೆ ಕೆಲಸ ಭಾಳ ಇರ್ತೈತಿರಿ. ಭೆಟ್ಟಿ ಆಗ್ತಾರೊ ಇಲ್ಲೊ" ಎಂದಳಂತೆ ತುಳಜಿ. ಕುಲಕರ್ಣಿಗೇನು ? ತನ್ನ ಉದ್ದೇಶ ಸಾಧಿಸಿತು, ಇನ್ನು ಯಾವಾಗ ಭೆಟ್ಟಿಯಾದರೇನು ? "ಹಾಂಗಾದರ ಅವರ್ನ ಇಲ್ಲಿ ಕರೆಸಿ ಬಿಡೋಣ" ಎಂದು ತುಳಜಿಗೆ "ಅವರಿಗೆ ಹೇಳ್ತೀಯಾ ಇಲ್ಲಿ ಬಂದ್ಹೋಗಲಿಕ್ಕೆ ? ಅವರ ಮನೆಯವರು ಬಂದಾರ, ಕುಲಕರ್ಣಿ ರಂಗಣ್ಣಾ ಅವರಲ್ಲಿಳಿದಾರ, ಅಲ್ಲಿ ನಿಮಗ ಬಾ ಅಂದಾರ ಅಂತ ಹೇಳ್ತೀಯಾ ?- ಮತ್ತ-ಇದ್ನೋಡು, ಮಧ್ಯಾಹ್ನಕ ಇಲ್ಲೇ ಊಟ ಮಾಡ್ಲಿಕ್ಕೆ ಹೇಳ್ಯಾರ ಅಂತ್ಹೇಳು, ಹೇಳ್ತಿಯಾ? ಊಟದ್ಮಾದಲು ಹೇಳು. ಮರೀಬೇಡ- ಆಂ." "ಊಟದ್ಮರೀಬ್ಯಾಡ ಅಂತ ಭಾಳ ಹೇಳಿದರ್ರಿ" ಎಂದು ತುಳಜಿಯು ಸಂದೇಶವನ್ನು ಮುಟ್ಟಿಸುವಾಗ ನಾರಾಯಣನಿಗೆ ಹೇಸಿಕೆ ಇಟ್ಟಿತ್ತು. ಕುಲಕರ್ಣಿಯ ಮನೆಯ ಮಧ್ಯಾಹ್ನದೂಟದ ಹಣೆಬರಹ ಚನ್ನಾಗಿ ಗೊತ್ತಿದ್ದಿತು. 'ಸಹಸ್ರಯುಗಪರ್ಯಂತಂ ಅಹರ್ಯದ್ ಬ್ರಹ್ಮಣೋ ವಿದುಃ, ಸಾವಿರ ಯುಗಗಳೆಂದರೆ ಬ್ರಹ್ಮನ ಒಂದು ದಿವಸ' ಎಂಬ ಸ್ಮೃತಿಗನುಸರಿಸಿ ಕುಲಕರ್ಣಿಯ ಪಂಚಾಂಗ ಬರೆದಿರಬಹುದೇನೊ-

ಎಂದೆನ್ನಿಸಿತ್ತು ನಾರಾಯಣನಿಗೆ. ಅಂತೂ ಕೈಲಾದಷ್ಟು ಮಟ್ಟಿಗೆ ಕುಲಕರ್ಣಿಯು ತಂದೆಯ ಸಮಕ್ಷ ತನ್ನ ಹೆಸರುಗೆಡಿಸಲು ಪ್ರಯತ್ನಪಟ್ಟಿದ್ದಾನೆಂದು ನಾರಾಯಣನಿಗೆ ಮನವರಿಕೆಯಾಯಿತು. ಇದೆಲ್ಲದರ ಜೊತೆಗೆ ತುಳಜಿಯು 'ಹಸಿದವನ ಮುಂದೆ ಉಂಡು ತೇಗಿದರೆಂ'ಬಂತೆ ಹುಚ್ಚು ಪ್ರಶ್ನೆಯೊಂದನ್ನು ಕೇಳಿ ಕೆಣಕಿದ್ದಳು ನಾರಾಯಣನನ್ನು. 'ಲಗ್ನದ ಮಾತುಕಥೆ ನಡೆದಿತೇನ್ರಿ?' ಎಂದು ಕೇಳಿದ್ದಳು. 'ಆದ ಲಗ್ನ ಮುರಿಯೋ ಮಾತು–ಕಥೆ ನಡೆದಿದೆ' ಎಂದು ಹೇಳಬೇಕೆಂದಿದ್ದನು ನಾರಾಯಣನು. ಯಾರಿಗೂ ಗೊತ್ತಿಲ್ಲದ ತನ್ನ ಮದುವೆಯ ಮಾತನ್ನು ತಾನಾಗಿಯೆ ಯಾಕೆ ಹೊರಗೆಡಹಬೇಕೆಂದು ತಡೆದಿದ್ದನು. ಕುಲಕರ್ಣಿಯು ಅದನ್ನೂ ಹೇಳಿರಲಿಕ್ಕಿಲ್ಲವೆಂಬ ಭರವಸೆ ಎಲ್ಲಿ? ಕುಲಕರ್ಣಿಯ ಮನೆ ಸಮೀಪಿಸಿದಂತೆ ಹೆಜ್ಜೆಗಳನ್ನು ಭರದಿಂದಿಡಹತ್ತಿದನು ನಾರಾಯಣನು. ಅಷ್ಟು ಅವನ ಸಿಟ್ಟು ಕುದಿಯುತ್ತಿತ್ತು ಕುಲಕರ್ಣಿಯ ಮೇಲೆ. ಆದರೆ ಪಡಸಾಲೆಯೊಳಗೆ ಕಾಲಿಟ್ಟ ಕೂಡಲೆ, ಎದುರು ಕುಳಿತ ತನ್ನ ತಂದೆಯನ್ನು ನೋಡಿದ ಕೂಡಲೆ, 'ಬರ್ರಿ, ಬರ್ರಿ' ಎಂದು ಹಲ್ಲು ಕಿರಿಯುವ ಕುಲಕರ್ಣಿಯನ್ನು ನೋಡಿದ ಕೂಡಲೆ, 'ಬಂದೇಬಿಟ್ರಲ್ಲ ರಾಯರು' ಎಂದು ಕುಳಿತಲ್ಲಿಂದ ಎದ್ದು ಸುಳ್ಳುನಗೆಯಿಂದ ಕೈಮುಗಿಯುವ ಬ್ರಾಹ್ಮಣನೊಬ್ಬನನ್ನು ನೋಡಿದ ಕೂಡಲೆ, ತುಟಿ ಪಿಸುಕದೆ ಕಣ್ಣು ಮಿಸುಕದೆ ತನ್ನನ್ನೆ ದಿಟ್ಟಿಸುತ್ತಲಿರುವ ತನ್ನ ತಂದೆಯನ್ನು ನೋಡಿದ ಕೂಡಲೆ——ನಾರಾಯಣನ ಸಿಟ್ಟು ಅಡಗಿತು, ಎದೆ ನಡುಗಿತು; ಕಾಲು ಕಳಚಿದಂತಾಗಿ ಮೊಳಕಾಲ್ಗಳ ಮೇಲೆ ಜಾರುತ್ತ ನಡೆಯುವವರಂತೆ ಸರ್ರೆಂದು ಚಾಚಿದ ಕೈಗಳನ್ನೂರಿ ಕುಳಿತೇಬಿಟ್ಟನು. ಎರಡು–ಮೂರು ನಿಮಿಷಗಳಾಗಿರಬಹುದು, ಉಸಿರಾಡಿಸಲು ಹವೆ ಸಾಲದೆಂದೆನ್ನಿಸಿತು ನಾರಾಯಣನಿಗೆ. ಕುಲಕರ್ಣಿಯೂ ಬ್ರಾಹ್ಮಣನೂ ತನ್ನನ್ನೆ ನೋಡಿ ನಗುತ್ತಿದ್ದರು. ಅವರಿಗಾಗಿ ತನ್ನಲ್ಲಿ ತುಳುಕುತ್ತಿದ್ದ ತಿರಸ್ಕಾರವನ್ನು ತೋರಿಸಬೇಕೆಂದು ತಾನೇ ಮಾತನಾಡಲು ಮೊದಲು ಮಾಡಿದನು ನಾರಾಯಣನು, ತನ್ನ ತಂದೆಗೆ ತಾನು ಎಳ್ಳಷ್ಟಾದರೂ ಹೆದರಿಲ್ಲವೆಂದು ತೋರಿಸಲು ತಂದೆಯನ್ನೆ ಮಾತನಾಡಿಸಿದನು. “ನಿನ್ನೆ

ಸಂಜೆಗೆ ಒಂದಿರೇನು ?" ಎಂದು ಎದುರಿಸುತ್ತಲೆ ಕೇಳಿದನು ತಂದೆಗೆ.

"ನಿನ್ನ ಸಂಜೆಗೆ ?" ನಾರಾಯಣನು ಮುಖ ತಿರುಗಿಸಿದನು ಅಕಸ್ಮಾತ್ತಾಗಿ ಮಾತನಾಡಿದ ವ್ಯಕ್ತಿಯನ್ನು ನೋಡಲು. ಮಾತನಾಡಿದವನು ಬ್ರಾಹ್ಮಣನು. ಮಾತನಾಡಿಸದೆಯೆ ಮಾತನಾಡಿದನೆಂದ ಮೇಲೆ ಆಚಾರ್ಯನಿರಬೇಕು ಈ ವ್ಯಕ್ತಿ, ಎಂದೂಹಿಸಿದನು ನಾರಾಯಣನು. ಇಂತಹದೊಂದೂ ತೊಡಕಿನ ಪರಿವೆ ಇಲ್ಲದೆ ಮುಂದುವರಿಸಿದನು ಬ್ರಾಹ್ಮಣನು ತನ್ನ ಮಾತನ್ನು. "ನಿನ್ನೆ ಸಂಜೆಗೆ ? ಅಂದರ ಹೀಂಗ ಆಯ್ತು, ೫-೬ ದಿವಸ್ಗಳ್ಹಿಂದೇ ನಾವು ಬರಬೇಕಾಗಿತ್ತು——"

"ಹಂ- ನಾನೂ ಅದೇ ತಿಳಿದಿದ್ದೆ–" ನಡುವೆಯೆ ಮಾತನಾಡಿದನು ಕುಲಕರ್ಣಿ. "ಯಾಕಂದ್ರೆ ಮೊದಲಿನ ಪತ್ರದಾಗ ಬರೆದಿತ್ತು – ನಾಳೆ ನಾವು ಹೊರಡ್ತೀವಿ ಅಂತ——"

(ಎಂತಹ ಠಕ್ಕ ಈ ಕುಲಕರ್ಣಿ! ಎಂದಿನಿಂದಲೊ ನಡೆಸಿದ್ದಾನೆ ಪತ್ರವ್ಯವಹಾರ– ಎಂದು ಕುಳಿತಲ್ಲಿಯೆ ಹಲ್ಲು ತಿನ್ನಹತ್ತಿದನು ನಾರಾಯಣನು.)

"ಹೌದು. ಗಡಬಿಡಿಯೊಳಗ ಬರೆದದ್ದು ಆ ಪತ್ರ" ಎಂದು ಬ್ರಾಹ್ಮಣನು ಕುಲಕರ್ಣಿಗೆ ಸಮಾಧಾನ ಹೇಳಹತ್ತಿದನು.

"ಯಾಕಂದರ——"

ಕುಲಕರ್ಣಿಯು ನಡುವೆಯೆ ಬಾಯಿಹಾಕಿದನು, "ನನಗೂ ಅನ್ನಿಸ್ತು ಗಡಬಿಡೀವಳಗ ಬರೆದಿರಬೇಕು ಅಂತ. ಯಾಕಂದರ——"

"ಹೌದು. ಬರೆದದ್ದೇನೊ ಗಡಬಿಡಿಯೊಳಗೇ ಬರೆದಿತ್ತು." ಎಂದು ತಲೆತೂಗಿದನು ಬ್ರಾಹ್ಮಣನು; "ಯಾಕಂದರ, ನಿಮ್ದೂ ಪತ್ರ ಬಂದಿತ್ತೂ ಆದನ್ನ ನೋಡಿ——"

"ನಾನೇನೊ ಬರೆಯ್ಬೇಕೋ ಬರೀಬಾರ್ದೊ ಅಂತ ವಿಚಾರ ಮಾಡ್ದೆ." ಎಂದು ಒಮ್ಮೆ ನಾರಾಯಣನ ಕಡೆ ನೋಡಿದವನೆ ಲಗಬಗೆಯಿಂದ ನಡುವೆ ಮಾತನಾಡಿದನು ಕುಲಕರ್ಣಿ.

"ನೀವ್ಬರೆದದ್ದು ಯೋಗ್ಯನೇ ಆಯ್ತು" ಎಂದು ನಿರ್ಣಯವನ್ನು ಕೊಟ್ಟನು ಬ್ರಾಹ್ಮಣನು. "ಆದರೆ ರಾಯ್ರು ಪತ್ರಕ್ಕ ಉತ್ತರ ಬರೆಯು

ವಾಗ ನಾನು ಅಲ್ಲಿ ಇದ್ದಿಲ್ಲ. ನಮ್ಮ ರಾಯರ್‍ಗೂ— ಅಂದರ ನಾರಾಯಣರಾಯ್ರು ಮಾವಂದಿರು ಅವರಿಗೂ–ಮೈಯೊಳಗ ನೆಟ್ಟಗಿದ್ದಿಲ್ಲ. ಅದಕ——''

'' ಛೆ,ಛೆ, ನಾನು ನಿಮ್ಮನ್ನ ತ್ರಾಸ ಕೊಟ್ಹಾಂಗ ಆಯಿತಲ್ಲ!'' ಎಂದು ಕನಿಕರದಿಂದ ತಲೆ ಜಾಡಿಸಿದನು ಕುಲಕರ್ಣಿ.

'' ಇಲ್ಲಿಲ್ಲ, ರಂಗಣ್ಣಾವರೆ, ನಿಮ್ದು ಬರೋಬರೀ (ಯೋಗ್ಯ)ನೆ. ನೀವ್ಹ್ಯಾಂಗ ತಿಳೀಬೇಕು? ನನಕ್ಕೂಡಾ ಗೊತ್ತಿದ್ದಿಲ್ಲಾ ಅವರ್ಮೈಯೊಳಗ ನೆಟ್ಟಗಿಲ್ಲದ್ದು. ದಿನಾಲು ಹೋಗೋ ಹಾಂಗ ಹೋದೆ——''

'' ಯೋಗ್ಯ ಮಾತು '' ಎಂದು ಕುಲಕರ್ಣಿಯು ಶಿಫಾರಸು ಕೊಟ್ಟನು ನಡುವೆಯೆ.

'' ದಿನಾಲು ಹೋಗೋ ಹಾಂಗ ಹೋದೆ. ಆಗ ಹೇಳಿದರು ರಾಯರು, 'ಕೃಷ್ಣಾಚಾರ್ರ, ಹೀಂಗಿನ ಮಾತು ಹೀಂಗ. ನನಗಂತೂ ಹೀಂಗ. ಅದಕ ನೀವೇ ನಾಳೆ ನಾಯಕರ ಜೋಡಿ ಹೋಗ್ಬಿಡ್ರಿ ' ಅಂತ.''

ಏನೆ ಆಗಲಿ–ಕೊನೆಗೆ ಕುಲಕರ್ಣಿಯು ಪತ್ರದಲ್ಲಿಯ ಸಂಗತಿಯಾದರೂ ತಿಳಿದೀತು ಎಂಬಾಶೆಯಿಂದ ಇದುವರೆಗೆ ಈ ಹಾಳು ರಗಳೆಯನ್ನು ಅತ್ಯಂತ ಮನಃಸಂಯಮನದಿಂದ ತಡೆದುಕೊಂಡ ನಾರಾಯಣನಿಗೆ 'ಹೀಂಗಿನ ಮಾತು ಹೀಂಗ' ಎಂದು ಕೇಳಿದಾಕ್ಷಣ ತಲೆ ತಿರುಗಿದಂತಾಯಿತು. ಇದುವರೆಗೆ ತನ್ನ ತಂದೆಯವರು ಒಂದು ಶಬ್ದವನ್ನುಚ್ಚರಿಸಿಲ್ಲವಲ್ಲ! ನಿನ್ನೆ ಸಂಜೆಗೆ ಅವರು ಬಂದದ್ದು ಗೊತ್ತಿದ್ದರೂ 'ನಿನ್ನೆ ಸಂಜೆಗೆ ಬಂದಿರೇನು ?' ಎಂದು ಔಪಚಾರಿಕವಾಗಿ ಹುಚ್ಚನಂತೆ ಕೇಳಿದ್ದಕ್ಕೆ ಪಶ್ಚಾತ್ತಾಪವೂ ಆಯಿತು, ಪ್ರಾಯಶ್ಚಿತ್ತವೂ ಆದಂತಾಯಿತು ತನಗೆ.

'' ನೀವ್ಹೇಳಲೇ ಇಲ್ಲಲ್ಲ ನನಗ, ನಿಮ್ಮಾವಂದಿರ ಮೈಯೊಳಗ ನೆಟ್ಟಗಿಲ್ಲದ್ದು ?– ನಾರಾಯಣರಾಯ್ರು ?'' ನಾರಾಯಣರಾಯರು ಕಣ್ಣು ಪಿಳುಕಿಸುತ್ತ ನೋಡಿದರು ಕುಲಕರ್ಣಿಯನ್ನು. '' ನನಗೆ ಗೊತ್ತಿದ್ದಿಲ್ಲ'' ಎಂದು ಹೇಳಬೇಕೆ, ಮಾವನ ಅಸ್ತಿತ್ವವನ್ನು ಒಪ್ಪಿದಂತಾಗಿ ಮದುವೆಗೆ ರುಜು ಹಾಕಿದಂತಾಗುವುದು; '' ನನ್ನ ಮಾವ ಯಾರು ?'' ಎಂದು ಕೇಳಬೇಕೆ, ಒಬ್ಬೊಬ್ಬರಿಗೆ ಒಂದೊಂದು ಅರ್ಥವಾಗಿ ಒಟ್ಟು ಅನರ್ಥವಾ

ಗುವುದು. ಇವೆರಡನ್ನೂ ಬಿಟ್ಟುಕೊಟ್ಟು ಕುಲಕರ್ಣಿಯು ತಲೆಯನ್ನು ತೂಗಿಸುತ್ತಿದ್ದನು... ನಾರಾಯಣನು ಮುಖವನೆತ್ತಿ ನೋಡಿದನು, ಕುಲಕರ್ಣಿಯ ತಲೆಯು ಬ್ರಾಹ್ಮಣನ ಕಡೆ ತಿರುಗಿತ್ತು, ತೂಗುತಿತ್ತು.

" ನಿಮಗ ಆಗಿಂದಾಗಲೆ ಬರ್‍ಲಿಕ್ಕೆ ಅನುಕೂಲ ಆಗ್ಲಿಲ್ಲೆನೋ "
ಎಂದನು ಕುಲಕರ್ಣಿ.

" ಎಂಥಾ ಮಾತು, ರಂಗಣ್ಣಾವರ ? " ಕೃಷ್ಣಾಚಾರಿಗೆ ಚಿತ್ರಾಹುತಿಯನ್ನಿಡುವಾಗ ಅನ್ನದಲ್ಲಿ ಕೂದಲೆಳೆ ಸೇರಿಕೊಂಡಂತಾಯಿತು. ಮೈಲಿಗೆ ಆಯಿತೆನ್ನಬೇಕೆ? ಹಸಿದ ಕಾಲಕ್ಕೆ ಊಟವನ್ನು ಬಿಟ್ಟುಕೊಟ್ಟು ಏಳಬೇಕು; ಮೈಲಿಗೆ ಆಗಿಲ್ಲವೆನ್ನಬೇಕೆ, ಕೂದಲೆಳೆ ಉದ್ದವಾಗಿ ಎದ್ದುದು ಬರಿಯುವರೆಗೆ ಕಾಣಿಸಿದೆ. ಅಂತಹ ಪೇಚಿನಲ್ಲಿ ಸಿಕ್ಕಿಕೊಂಡನು ಬ್ರಾಹ್ಮಣನು. " ಅನುಕೂಲ ಆಗಲಿಲ್ಲಾ ಅಂದ್ರು ಎಂಥಾ ಮಾತು, ರಂಗಣ್ಣಾವರ ? " ಅನುಕೂಲವಾಗಿತ್ತು ಕೊನೆಗೆ, ಆದರೆ ಅದನ್ನು ಹೇಳುವಂತಿರಲಿಲ್ಲ. ಮನೆಯಲ್ಲಿ ಕೆಲಸ, ಇದಲ್ಲದೆ ಹೊರಗೆ ಪ್ರಾಪ್ತಿಯ ಆಮಂತ್ರಣ; ಇದನ್ನು ಬಿಟ್ಟು ಹೋಗುವುದು ಹೇಗೆ ಎಂದು ಹಟ ಹಿಡಿದಿದ್ದನು ಕೃಷ್ಣಾಚಾರಿ. ಕಡೆಗೆ, ಹೋಗಿ ಬರುವ ವೆಚ್ಚವಲ್ಲದೆ ಮೇಲೆ ಹದಿನೈದೊ ಇಪ್ಪತ್ತೊ ಕೊಡಬೇಕು ನಾರಾಯಣನ ಮಾವಂದಿರು, ಎಂಬ ಕರಾರಿನಿಂದ ಒಪ್ಪಿದ್ದನು ಅವನು ಶೀನಪ್ಪ ನಾಯಕರ ಜೊತೆಯಲ್ಲಿ ಹೋಗಲಿಕ್ಕೆ. " ರಾಯರ ಮನೆ–ಗೆಲಸಕ್ಕ ನನಗ ಅನುಕೂಲ ಆಗ್ಲಿಲ್ಲ ಅನ್ನೋದು ಎಂಥಾ ಮಾತು !"

" ಅಲ್ಲ. ಸಹಜ ಕೇಳಿದೆ " ಎಂದನು ಕುಲಕರ್ಣಿ.

" ಅನುಕೂಲ ಎಲ್ಲಾ ಆಯ್ತು. ಆದರೂ, ನೋಡಿರಿ, ಸ್ಥಿತಿಗತಿ ಹೀಂಗ್ಹೀಂಗ ಇದ್ದ ಮ್ಯಾಲೆ ಮುಹೂರ್ತ ನೋಡದೇ ಹೊರಡೋದು ಹ್ಯಾಗ ? ನಿನ್ನಿನ ಹೊರತು ಸಮೀಪದೊಳಗ ಮುಹೂರ್ತ ಇದ್ದಿಲ್ಲ ಪ್ರವಾಸಕ್ಕ. ನಾನು ಹೇಳ್ದೆ ಪ್ರಸ್ಥಾನ ಇಟ್ಟು ಹೊರಟರ ಏನೂ ಬಾಧೆ ಇಲ್ಲ ಅಂತ. ಆದರ, ನಾಯಕರೇ ಅಂದರು. ' ಒಂದೆರಡು ದಿವಸ ತಡ ಆದರೂ ಅಡ್ಡಿ ಇಲ್ಲ, ಕೃಷ್ಣಾಚಾರಿ, ಕೆಲಸ ಸಾಧಿಸೋ ಮುಹೂರ್ತಕ್ಕೇ ಹೋಗೋಣಾ'ಂತ"– ಎಂದು ಶೀನಪ್ಪನಾಯಕನನ್ನು ನೋಡುತ್ತ

ಹಲ್ಲು ಕಿರಿದನು ಕೃಷ್ಣಾಚಾರಿ. ನಾರಾಯಣನಿಗೆ ನಗೆ ತಡೆಯದಂತಾಯಿತು. ಬ್ರಾಹ್ಮಣನು ನಗುವನೊ ಅಳುವನೊ, ಉಭಯ ಪಕ್ಷದಲ್ಲೂ ಕಾರಣವೇನು– ಎಂದು ಸಂದೇಹ ಅವನಿಗೆ. ಬಾಯಿಯನ್ನು ನೋಡಿದರೆ ನಗುವ ಲಕ್ಷಣವಿದೆ, ಏಕೆ ಮುಖಚರ್ಯೆ ನೋಡಿದರೆ ಅಳುತ್ತಿರುವ ಲಕ್ಷಣಗಳಿವೆ. ಒಟ್ಟು ಬರಿಯ ಹಲ್ಲು ಕಿರಿದಿದ್ದಾನೆ ಮಾತ್ರ. ಬಾಯ್ತೆರೆದು ನಗುವಾಗ ದವಡೆಗೆ ನೋವಾಗಿ ಹಾಗೆಯೆ ತಡೆದು ಹುಚ್ಚು–ಪೆಚ್ಚಾದ ಕಳೆಯನ್ನು ತಾಳಿದಂತಿದ್ದ ಬ್ರಾಹ್ಮಣನ ಮುಖವನ್ನು ನೋಡಿ ನಾರಾಯಣನಿಗೆ ನಗೆ ತಡೆಯದಂತಾಯಿತು. ನಕ್ಕುಬಿಟ್ಟನು.

"ಯಾಕ? ಮುಹೂರ್ತ ನೋಡ್ಕೊಂಡು ಬಂದರು ಅಂತ್ಲೇಳಿ ನಗೆ ಬಂತೇನು ನಿನಗೆ?" ಮಾತನಾಡಿದವರು ಶೀನಪ್ಪ ನಾಯಕರು. ಒಮ್ಮೆಲೆ ಅವರು ಮಾತನಾಡಿದುದರಿಂದ ಉಳಿದ ಮೂವ್ವರೂ ಒಮ್ಮೆಲೆ ಅವರನ್ನು ನೋಡಿದರು, ನಾರಾಯಣನು ಸುಮ್ಮನಿದ್ದನು. ನಾಯಕರು ಮಗನನ್ನೆ ನೋಡಹತ್ತಿದರು; ಆದುದರಿಂದ ರಂಗಣ್ಣ–ಕೃಷ್ಣಾಚಾರಿ ಇವರೂ ನಾರಾಯಣನನ್ನೆ ನೋಡಹತ್ತಿದರು.

"ಅಂ?" ಎಂದು ಕೆಪರಿದ ಧ್ವನಿಯಿಂದ ಮೊದಲಿನ ಪ್ರಶ್ನೆಯನ್ನೆ ಸಂಕ್ಷೇಪವಾಗಿ ಕೇಳಿದರು ನಾಯಕರು.

ನಾರಾಯಣನು ಮತ್ತೂ ಸುಮ್ಮನಿದ್ದನು. ತಾನು ನಕ್ಕದ್ದು ಆಚಾರಿಯ ಮುಖದ ಮರ್ಕಟ ಮುದ್ರೆಗಾಗಿ, ಮುಹೂರ್ತದ ಮಾತಿಗಲ್ಲ ಎಂದು ಹೇಳುವುದೂ ಕಷ್ಟ; ಹೇಳಿದರೆ ವಿಶ್ವಾಸ ಕೂಡುವುದು ಅದಕ್ಕೂ ಕಷ್ಟ. ಇದಲ್ಲದೆ ತನ್ನ ತಂದೆಯ ದನಿಯನ್ನು ಕೇಳಿ ಅವರ ಮನಃಸ್ಥಿತಿಯ ಕಲ್ಪನೆಯೂ ಬಂದಿತು ನಾರಾಯಣನಿಗೆ. ಇದುವರೆಗೆ ಒಂದು ಮಾತನ್ನೂ ಆಡದೆ, ತನ್ನಿಂದ ಸಹಜವಾಗಿ ಘಟಿಸಿದ ಒಂದು ಸಂಗತಿಯ ನೆವ ಮಾಡಿಕೊಂಡು ಸಿಟ್ಟಿಗೆದ್ದು ಕೆದರಿ ಜಗಳ ಹೂಡಬೇಕೆನ್ನುವವರು ಮುಹೂರ್ತವನ್ನು ಹುಡುಕಿಕೊಂಡು ಬರುವುದಾದರೆ ನಗತಕ್ಕಂತಹ– ತಿರಸ್ಕಾರದಿಂದ ನಗಿಸಿಕೊಳ್ಳುವಂತಹ ವಿಷಯವೆ ಅಲ್ಲವೆ– ಎಂದು ಒಳಗಿಂದೊಳಗೆಯೆ ನಕ್ಕು ಸುಮ್ಮನಿದ್ದನು ನಾರಾಯಣನು.

"ಮುಹೂರ್ತ ನೋಡಿದ್ದು ನಿನ್ನ ಸಲುವಾಗಿ" ಎಂದು ಗದ್ದರಿಸಿದರು ನಾಯಕರು.

ನಾರಾಯಣನು ಮತ್ತೂ ಸುಮ್ಮನಿದ್ದನು. ಮತ್ತೂ ಒಳಗಿಂದೊಳಗೆಯೆ ಅತ್ಯಂತ ತಿರಸ್ಕಾರದಿಂದ ನಕ್ಕನು. ತನ್ನ ಸಲುವಾಗಿ ಅಂತೆ! ತನಗೇನಾಗಿದೆ ಅಂತಹ ಅನರ್ಥ? ಆಗಿದ್ದರೆ ಮುಹೂರ್ತ ನೋಡಿ ವೇಳೆ ಕಳೆಯುವುದು ಮೂರ್ಖತನವಲ್ಲವೆ? ಮನೆಗೆ ಬೆಂಕಿ ಹತ್ತಿದಾಗ ಬಾವಿ ತೋಡಲಿಕ್ಕೆ ಮುಹೂರ್ತ ನೋಡುವವರು!

"ನಿನಗ ಮನೀ ಕಾಳಜಿ ಇಲ್ಲಾ ಅಂದ್ರ ನಮಗೂ ಇಲ್ಲಾ ಅಂತ ತಿಳಿದೆಯೊ ಏನು?" ನಾಯಕರ ಮೈ ನಡುಗುತ್ತಿತ್ತು ಸಿಟ್ಟಿನಿಂದ. ಮನೆಯ ಕಾಳಜಿಗಿಂತಲೂ ಸದ್ಯಕ್ಕೆ ಮಗನು ಮಾತನಾಡಲಿಲ್ಲವೆಂಬುದು ಅವರ ಸಂತಾಪಕ್ಕೆ ಕಾರಣ. ಒಳಿತಾಗಿ ನಾಲ್ಕು ಬಯ್ಯಬೇಕೆಂದರೆ ಹೀಗೆ ಕಲ್ಲಿನಂತೆ ಕುಳಿತವರಿಗೆ ಬೈಯುವದಾದರೂ ಹೇಗೆ? ಸಿಟ್ಟಿನಿಂದ ಬಯ್ಯಬೇಕೆಂಬ ಇಚ್ಛೆ; ಬಯ್ಯಲು ಬಾರದುದನ್ನು ಕಂಡು ಸಿಟ್ಟು ಹೆಚ್ಚಿದೆ. "ಆಂ?" ಎಂದು ಮತ್ತೆ ಸಂಕ್ಷೇಪಿಸಿದರು ತಮ್ಮ ಪ್ರಶ್ನೆಯನ್ನು.

"ಅವರಿಗೆ ಕಾಳಜಿ ಇಲ್ಲಾ ಅಂದರ ಎಂಥಾ ಮಾತು!" ಎಂದು ಗಹಗಹಿಸಿದನು ಕೃಷ್ಣಾಚಾರಿ. "ಇಂದಿಲ್ಲ ನಾಳೆ ಮನೀ ನಡೆಸೋವ್ರು ಅವರು; ಯಾಕರೀ, ರಂಗಣ್ಣಾವರ?"

"ಛೆ, ಎಂಥಾ ಮಾತು ಅಂತೀರಿ" ಎನ್ನುತ್ತ ಕುಲಕರ್ಣಿಯೂ ತಲೆ ತೂಗಿದನು. "ಅವರೇನು ನಮ್ಮ ನಿಮ್ಹಾಂಗ? ನಾರಾಯಣರಾಯ್ರು ವಿಚಾರ ಬಹಾಳ ಪ್ರಬುದ್ಧ, ಭಾಳೇ ಪ್ರಬುದ್ಧ" ಎಂದು ಕೃಪಾದೃಷ್ಟಿಯೊಂದನ್ನು ಬೀರಿದನು ನಾರಾಯಣನ ಮೇಲೆ.

"ಏನು ಸುಡೋದು ಆ ವಿಚಾರ ತಕ್ಕೊಂಡು!" ಎಂದು ನಾಯಕರು ಅರ್ಭಟಿಸಿದರು. ಈಗ ಅವರಿಗೆ ನಿಜವಾದ ಆವೇಶ ಬಂದಿತು. ವಾದೇ ವಾದೇ ಜಾಯತೇ ಕಂಠಶೋಷಃ, ಎನ್ನುವಂತೆ ಈಗ ಮಾತಿಗೆ ಮಾತು ಬೆರೆತು ತಮ್ಮ ಜಾಣತನವನ್ನು ಹೊರಗೆಡಹುವ ಸುಸಂಧಿ ದೊರಕಿಸುದಕ್ಕೆ ನಾಯಕರು ಸೆಟೆದು ಕುಳಿತು ಪ್ರತಿಭಟಿಸಿರು. "ಏನು ಸುಡೋದು ಆ ವಿಚಾರ ತಕ್ಕೊಂಡೂ— ಅಂತೀನಿ. ಎಲ್ಲಿಗೆ

ತಂದು ಮುಟ್ಟಿಸಿತು ತನ್ನ ವಿಚಾರ ಅಂಬೋದು ಈಗಾದರೂ ತಿಳೀ ಬಾರ್ದ?"

ನಾರಾಯಣನಿಗೆ ಸಂದರ್ಭ ತಿಳಿಯಿತು. ತನ್ನ ಸದ್ಯದ ಸ್ಥಿತಿಗಾಗಿ ಈ ಮಾತು ಎಂಬುದು ಗೊತ್ತಾಯ್ತು. ಕುಲಕರ್ಣಿಗೂ ತಿಳಿದು ಬಂದಿತು ಪ್ರಸಂಗ. "ಛೆ, ಛೆ, ಆ ಮಾತು ಮನಸಿಗೆ ಹಚ್ಕೊಂಡು ಸಿಟ್ಟಿ ಗೇಳ್ಬ್ಯಾಡ್ರಿ ನಾಯಕರು. ಅದೇನು? ಒಂದೆರಡು ದಿವಸದ ಮೋಜು— ಹುಡುಗತನದ ಮೋಜು" ಎಂದು ಮುಗ್ಧಸ್ಥಿತಿಯನ್ನು ವಹಿಸಿಯೆ ಮಾತ ನಾಡಿದನು ಕುಲಕರ್ಣಿ.

"ಆ ಮಾತು ಮನಸಿಗೆ ಹಚ್ಕೊಳ್ಳಾಕ ಅಷ್ಟು ಮೂರ್ಖ ನಾ ಅಲ್ಲ, ರಂಗಣ್ಣಾವರ. ಚಹದಂಗ್ಡೀವಳಗ ಕಪ್ಪ-ಬಸಿ ತೊಳಿಯೊಲ್ಲನ್ಯಾಕ, ಊರ ಗಟಾರ್ದೊಳಗಿನ ಕಸ ಬಳಿಯೊಲ್ಲನ್ಯಾಕ. ಆ ಕೆಲಸಕೆ ಅವನ ಯೋಗ್ಯತಾ ಇದ್ದರ ಅದರಿಂದಲೆ ಹೊಟ್ಟೆತುಂಬಿಕೊಳ್ತಾನ. ಅದನ್ನೇನ—"

"ಎಲ! ನಾಯಕರು ಸಿಟ್ಟಿಗೆದ್ದು ಏನಾದ್ರೂ ಮಾತಾಡಿದ್ರ ಹ್ಯಾಂಗ" ಎನ್ನುತ್ತ ನಗೆಮೊಗದಿಂದ ಮುಂದೆ ಸರಿದನು ಕೃಷ್ಣಾಚಾರಿ. "ಎಲ! ಎಂಥಾ ಮಾತು! ಯಾಕರೀ, ರಂಗಣ್ಣನವರ? ಅಳಿಯಂದಿರ ಬುದ್ಧಿಮತ್ತಾ ನೋಡಿಯೆ ಅಲ್ಲ ನಮ್ಮ ರಾಯ್ರು ಮಗಳ್ನ ಕೊಟ್ಟದ್ದು? ಹೆಣ್ಣಿನ ಕಡೆಯುವರು ನಾವು; ಅಳಿಯಂದ್ರಿಗೆ ಹೀಂಗ ಅಂದ್ರ ಸಹನ ಮಾಡ್ತೀವೆ? ಯಾಕರೀ, ರಂಗಣ್ಣಾವರ? ಎಂಥಾ ಮಾತು!"

ಇವೇ ವಿಚಾರಗಳಿಂದ ತುಳುಕುತ್ತಿದ್ದ ಕುಲಕರ್ಣಿಯು ತಲೆಯು ತೂಗುತ್ತಲಿತ್ತು ಒಂದೇ ಸಮನೆ. ತಾನು ಹೆಣ್ಣಿನ ಕಡೆಯುವನೂ ಅಲ್ಲ. ಗಂಡಿನ ಕಡೆಯುವನೂ ಅಲ್ಲ, ವಿಷ್ವಾಸ್ನಮಿತರೇ ಜನಾಃ ಎಂಬ ಗೋತ್ರಕ್ಕೆ ಸೇರಿದವನು; ಇದಲ್ಲದೆ—"ಅಲ್ಲ, ಇದ್ಯಾತ್ಮತಿಗೆ ಒಪ್ಪಲಿಕ್ಕೆ ಯಾರದೇನರಿ?"

"ಇದಾತ್ಮತು ಒಪ್ಪಿಕೊಳ್ಳೋದಂತ! ತಿಳಿದ್ಕೊಳ್ಳೋ ಬುದ್ಧಿ ಬೇಕಲ್ಲ ಮೊದಲು" ಎಂದು ಮೂಗು ಏರಿಸಿದರು ನಾಯಕರು.

ಈ "ಇದ್ದಾತ್ಮತಿ"ನ ರಹಸ್ಯವೆ ತಿಳಿಯದಂತಾಯಿತು ನಾರಾಯ ಣನಿಗೆ. ಯಾವ ಮಾತು ಇದ್ದುದು? ಮುಹೂರ್ತ ನೋಡಿದ್ದೆ? ಇಲ್ಲಿಗೆ

ಬಂದಿದ್ದೆ? ಬಂದುದಾದರೂ ಯಾಕೆ? ತನ್ನನ್ನು ಕರೆಸಿದುದಾದರೂ ಯಾಕೆ? ಅಥವಾ, ತಾನು ಬಂದುದಾದರೂ ಯಾಕೆ? ತಾನು ಬಂದುದೆ ಮೂರ್ಖತನ. ಹಾಗೆ ಒಪ್ಪಿಕೊಳ್ಳುವುದಕ್ಕಿಂತ ಏನೊಂದು ಮಾತನಾಡದೆಯೆ ಎದ್ದು ಹೋಗುವುದೆ ಒಳಿತು ಎಂದು ಎಣಿಕೆ ಹಾಕಿದನು. ಹಾಗೆ ಹೋದರೆ ತಿಳಿದುಕೊಳ್ಳಲು ತನಗೆ ಬುದ್ಧಿಯೆ ಇಲ್ಲವೆಂಬ ಇವರ ಕಲ್ಪನೆಯು ದೃಢವಾದೀತೆಂಬ ಸಂಶಯದಿಂದ ತಡೆದನು. ಇದ್ದ ಮಾತು! ಯಾವುದು? ತಾನು ಚಹದಂಗಡಿಯಲ್ಲಿ ದುಡಿಯುವುದೆ? "ಸದ್ಯಕ್ಕ ಇದ್ದದ್ದು ತಿಳಿದುಕೊಳ್ಳಿಕ್ಕೆ ಅಷ್ಟೇನು ಕಠಿಣ ಅಂತ ನನಗ ಅನಿಸೋದಿಲ್ಲ" ಎಂದು ಕೊನೆಗೊಮ್ಮೆ ಗಟ್ಟಿಯಾಗಿಯೆ ನುಡಿದುಬಿಟ್ಟನು.

"ಸದ್ಯಕ್ಕ ಇದ್ದದ್ದು?" ಕಣ್ಣು ಅರಳಿಸಿದರು ನಾಯಕರು; "ಸದ್ಯಕ್ಕ ಏನಿದೆ ಅಂತ ಅದನ್ನ ತಿಳಿದುಕೊಳ್ಳೋಕಂತಿ?"

"ಬಂದ ಭಾವನೆಗಳನ್ನೆಲ್ಲ ನುಂಗಿಕೊಳ್ಳುತ್ತ" "ನೀವೇ ಅಂದಿರಿ 'ಇದ್ದಾತ್ರು' ಅಂತ, ಅದಕ್ಕೇಳಿದೆ" ಎಂದನು ನಾರಾಯಣ.

"ನಾವೇ ಅಂದೆವಿ?"—'ಅಹುದು, ಅಂದಿವಿ. ಆದರ ಅದನ್ನೆ ತಿರುಗಿ ಅನ್ನಲಿಕ್ಕೆ ನಿನಗೆ ಯಾವ ಅಧಿಕಾರ?' ಎನ್ನುವಂತಹ ದನಿಯಿಂದ ಕೇಳಿದರು ಹಿರಿಯರು. "ನಮಗೊತ್ತಿದೆ, ನಾವು ಅಂದಿವಿ."

"ಅದನ್ನೆ ಹೇಳಿದೆ" ಎಂದು ಕೆಣಕಿದನು ನಾರಾಯಣನು.

"ಅದನ್ನೆ ಹೇಳ್ಲಿಕ್ಕೆ ನಮ್ಮ ಸಲುವಾಗಿ ನಾವು ಮಾತಾಡಿದೆವೆ, ಇಲ್ಲ– ನಮ್ಮ ಮಾತು ನಮಗೇ ಕೇಳಿಸೋದಿಲ್ಲ ಅಂತ ನಿನ್ನ ವಿಚಾರೊ?"

"ನೀವನ್ನೋದೇ ನನಗೆ ತಿಳಿಯೋದಿಲ್ಲ."

"ಅದಕ್ಕೇ ಹೇಳಲಿಲ್ಲೇನು—ನಿನಗೆ ತಿಳಿದ್ಕೊಳ್ಳೊ ಬುದ್ಧಿ ಕೂಡಾ ಇಲ್ಲ ಅಂತ?"

"ಅದಲ್ಲ, ನಾರಾಯಣರಾಯ್ರು, ನನ್ನ ಮಾತು ಕೇಳ್ಕೊಳ್ಳಿರಿ" ಎನ್ನುತ್ತ ಕೃಷ್ಣಾಚಾರಿಯು ಎದ್ದು ನಾರಾಯಣನ ಹತ್ತಿರ ಬಂದು ಕುಳಿತನು. ಬೆನ್ನ ಮೇಲೆ ಕಯ್ಯನಿಟ್ಟನು, ಕಿವಿಗೆ ಬಾಯಿ ಹಚ್ಚಿದನು, ಬೆಕ್ಕು ಹಾಲು ಕುಡಿಯುವ ರೀತಿಯಲ್ಲಿ ಎತ್ತರವಾದ ಕಳ್ಳದನಿಯಿಂದ ರಹಸ್ಯದ ಮಾತನ್ನು ಹೇಳಿದನು. "ನನ್ನ ಮಾತು ಕೇಳ್ಕೊಳ್ಳಿರಿ, ನಾರಾ

ಯಣಾಚಾರ್ಯರು. ನಾಯಕರು ಸಿಟ್ಟಿಗೆ ಬರಿದಾರ. ಅಲ್ಲ, ತಂದೆಯ ಸಿಟ್ಟು ಅಂದರ ಎಂಥಾದು! ಬೆಣ್ಣಿ ಕಾಯ್ಸಿದ ಹಾಂಗ. ಕೊನೆಗೆ ತುಪ್ಪ ಆಗೋದೆ. ಮುಪ್ಪಿನೊಳಗ ಮಕ್ಕಳು ಸಂರಕ್ಷಣಾ ಮಾಡ್ಬೇಕೂ ಅನ್ನೋದೊಂದು ಹಂಬ-ಕರುಳಿನ ಹಂಬಲ ಮನುಷ್ಯಾಗ. ನೀವು ಇಲ್ಲಿ ಬಂದು ಕೂತಿರಿ—''

''ಇಲ್ಲಾ ಅಂದರ ನನ್ನ ಸಂರಕ್ಷಣಾ ಹ್ಯಾಗ'' ಎನ್ನುತ್ತ ದೂರ ಸರಿದನು ನಾರಾಯಣನು.

''ಛೆ, ಛೆ, ಛೆ – ಛೆ - ಇದು ನಿಮ್ಮಂಥಾ ಕಲಿತವ್ರು ಆಡೋ ಮಾತಲ್ಲ'' ಎಂದು ಕುಲಕರ್ಣಿ ನಿರ್ಣಯ ಕೊಟ್ಟನು.

ಶೀನಪ್ಪ ನಾಯಕರು ''ಹುಂ'' ಎಂದು ಉಸಿರೆಳೆದು ಮುಂದಿದ್ದ ಎಲ್ಯಾಪ ಡಬ್ಬಿಯನ್ನು ಎಳೆದುಕೊಂಡರು. ಆ ಮೇಲೆ ಎಸೆದರು ಮೊದಲಿದ್ದ ಸ್ಥಳಕ್ಕೆ.

''ನೀವು ಚಿಕ್ಕವರು, ಬೆಳೆಯುವವರು—''ಎಂದು ಉಪದೇಶಾಮೃತ ವನ್ನು ಗುಟುಗುಟುಕು ಕುಡಿಸುವವನಂತೆ ಬಿಡಿಬಿಡಿಸಿ ಮಾತನಾಡ ಹತ್ತಿದನು ಆಚಾರ್ಯನು, ''ನಿಮ್ಮ ರಟ್ಟೆಯೊಳಗ ಶಕ್ತಿ ಇದೆ, ಹೊಸ ಸಂಸಾರ ನಿಮ್ಮದು. ಇದಲ್ದೆ, ನೋಡಿರಿ, ಹಾಂಗ ಕೇಳಿದರ ಯಾರು ಯಾರ್‍ನ ಸಂರಕ್ಷಣಾ ಮಾಡೋವ್ರು? ಶ್ರೀಹರಿ ಇದ್ದಾನ—''

''ಆಹಾ!'' ಎಂದು ಕಣ್ಣು ಬೆಳ್ಳಗೆ ಮಾಡಿ, ಬಾಯ್ದೆರೆದು, ಕೈ ಚಲ್ಲಿ, ತಲೆ ಎತ್ತಿ, ಮೇಲೆ ನೋಡುತ್ತ ತಿದಿಯೂದಿದನು ಕುಲಕರ್ಣಿ.

ಅಂಕಣಗಳಲ್ಲಿ ಕಾಡಿಗೆ ಮುಸುಕಿದೆ, ಜೇಡಗಳ ಬಲೆ ಹಬ್ಬಿವೆ, ರಾತ್ರಿ ಇಲಿಗಳೂ ಓಡಾಡುತ್ತಿವೆ. ಆದರೂ ಹಗಲು ಹೊತ್ತಿನಲ್ಲಿ ದೇವನು ಅಲ್ಲಿ ಹುದುಗಿಕೊಳ್ಳಲು ಯಾವ ಅಡ್ಡಿ? ತಟ್ಟನೆ ಮಾಳಿಗೆಯಲ್ಲಿ ಕಾಣುವ ಸಣ್ಣ ಸಣ್ಣ ಸಂದುಗಳ ಕಡೆಗೆ ರಂಗಣ್ಣನ ಲಕ್ಷ್ಯ ಹೋಯಿತು. ಮಾಳಿ ಗೆಯು ಬೀಳಲಾಗಿದೆ. ಬೇಸಗೆಯ ದಿನ. ಇರುವೆಗಳು ಎಷ್ಟಾಗಿವೆಯೊ ಏನೊ? ನಾಳೆ ಮಳೆಗಾಲ ಬಂದಿತೆಂದರೆ ದಬದಬನೆ ಸೋರುವುದು! 'ದುರುಸ್ತಿ' ಮಾಡಿಸಬೇಕು. ಹೋದ ವರ್ಷ ಮನೆಯೊಳಗೆ ಮದುವೆ–ಮುಂಜಿಗಳಾಗುವಾಗ ಹೊರಗೋಡೆಗೆ ಸುಣ್ಣ ಸವರಿಸಿದ್ದಕ್ಕೇ ಇನ್ನೂ ಕೂಲಿ ಕೊಟ್ಟಿಲ್ಲ. ಸಾಲ ದೊರಕುವಂತಿಲ್ಲ, ಎನಿಲ್ಲೆಂದರೂ ಈಗಾದು ದನ್ನೆ ಮಟ್ಟಿನದ ಮುಂಚಿತ ಅದರ ಆಶೆ ಇಲ್ಲ. ಇಷ್ಟರಲ್ಲಿ ಮಾಳಿಗೆಯ

'ದುರುಸ್ತಿ !' ಹೇಗೆ ಮಾಡುವುದು ? ಆಯಿತು, ಶ್ರೀಹರಿ ಇದ್ದಾನೆ ಎಂದು ಮತ್ತೆ "ಆಹಾ!" ಎಂದು ಉಸುರ್ಗರೆದು ಕೆಳಗೆ ನೋಡಿದನು ಕುಲಕರ್ಣಿ.

ಇಷ್ಟರಲ್ಲಿ ನಾಯಕರು ವೀಳ್ಯದ ಡಬ್ಬಿಯನ್ನು ಮತ್ತೆ ಮುಂದೆ ಳೆದುಕೊಂಡು ಅದರ ಮುಚ್ಚಳವನ್ನು ತೆರೆಯುತ್ತ "ಇದರಿಂದ ಸಂರಕ್ಷಣ ಯಾರಿಗೆ ಬೇಕಾಗೇದ? ಸಾಯೋತನಕ ನಂ ನಮುಗ ಸಾಕಾಗುವಷ್ಟು ಕೊಟ್ಟಾನ ಶ್ರೀಹರಿ" ಎಂದು ಅಡಿಕೆಯ ಹೋಳನೊಂದನ್ನು ಬಾಯಿಯಲ್ಲಿ ಎಸೆದುಕೊಂಡರು, 'ಖಟ್' ಎಂದು ಒಡೆದರು ಕೂಡ. ಅದನ್ನು—ಮುಪ್ಪು ಏರುವಾಗಲೂ ಶ್ರೀಹರಿ ಕೊಟ್ಟ ಹಲ್ಲು ಇನ್ನೂ ಗಟ್ಟಿಯಾಗಿವೆ ಎಂದು ತೋರಿಸುವ ಉದ್ದೇಶದಿಂದಲೊ ಏನೊ! ನಾಯಕರ ಮಾತು ಸುಳ್ಳಾಗಿರಲಿಲ್ಲ. ಶ್ರೀಹರಿಯು ಅವರಿಗೆ ಸಾಕಾಗುವಷ್ಟನ್ನು ಕೊಟ್ಟಿದ್ದನು. ತನ್ನ ಮನೆಯ ಆಸ್ತಿಯನ್ನೇನು ಕೊಡುವದಿಲ್ಲ ಶ್ರೀಹರಿ; ಎಂದ ಮೇಲೆ ಹಿಂದುಮುಂದೆ ನೋಡುವನು ಯಾಕೆ? ಅಷ್ಟರನ್ನು ಕೊಟ್ಟಿದ್ದ, ಸಣ್ಣೂರಿನ ಜನವಸತಿಯನ್ನು ಕೊಟ್ಟಿದ್ದ, ಅಷ್ಟರ ಕೂಡ ಕಡಿದಾಡುವ ಕಲಿತನ ಕೊಟ್ಟಿದ್ದ, ಬಡವರೊಡನೆ ಬಡ್ಡಿಯ ವ್ಯವಹಾರವನ್ನು ಮಾಡುವ 'ಬುದ್ಧಿಮತ್ತೆ'ಯನ್ನು ಕೊಟ್ಟಿದ್ದ. ಇನ್ನೂ ಹೆಚ್ಚಿಗೇನು ಕೊಡಬೇಕು ಶ್ರೀಹರಿಯಾದರೂ? ಬಂದುದನ್ನು ನುಂಗಿ, ತಿಂದುದನ್ನು ಪಚನ ಮಾಡಿಕೊಳ್ಳುವ ಶಕ್ತಿಯನ್ನು ಕೊಟ್ಟಿದ್ದ. ಆ ಮಾತಿಗೆ ಸಾಕ್ಷ್ಯವಾಗಿ ಅಡಿಕೆಯ ಹೋಳು ಪುಡಿಯಾಯಿತು ನಾಯಕರ ಬಾಯಿಯಲ್ಲಿ. ಅದಕ್ಕಾಗಿ ನಾಯಕರು ಯಾವಾಗಲೂ ಹೇಳುತ್ತಿದ್ದರು, "ಸಾಯೋತನಕ ನಂ ನಮುಗ ಸಾಕಾಗುವಷ್ಟು ಕೊಟ್ಟಾನ ಶ್ರೀಹರಿ. ಇವರು ತಂ ಸಂರಕ್ಷಣೆ ತಾವ್ಮಾಡಿಕೊಂಡ್ರ ಸಾಕಾಗೇದ."

"ಹಂ, ನಾನೂ ಅದನ್ನೆ ಹೇಳ್ತೀನಿ ನಾರಾಯಣರಾಯ್ರಿಗೆ" ಎಂದು ಪ್ರತಿಧ್ವನಿಸಿ ಕೃಷ್ಣಾಚಾರಿಯು ನಾರಾಯಣನನ್ನು ನೋಡುತ್ತ ಮಾತು ಮುಂದುವರಿಸಿದನು. "ನಿಮ್ಮನ್ನ ನೀವು ನೋಡಿಕೊಂಡ್ರ ಸಾಕು. ಅಷ್ಟಾದರ ಸಂತೋಷ ನಾಯ್ಕರಿಗೆ."

"ನನ್ನ ಸಂತೋಷ ಹಾಳಾಯ್ತು" ಎಂದು ಮತ್ತೆ ಡಬ್ಬಿಯ ಮುಚ್ಚಳವನ್ನು ಸಿಟ್ಟಿನಿಂದಪ್ಪಳಿಸಿದರು ಶೀನಪ್ಪನಾಯಕರು.

"ಆದರೂ ಕರುಳು ಒಂದಿರತಕ್ಕದಲ್ಲ, ಯಾಕರೀ, ಕೃಷ್ಣಾಚಾರ್ರ?" ಎಂದು ಕುಲಕರ್ಣಿ ನಾಲಗೆ ಚಪ್ಪರಿಸಿದನು.

"ಎಂಥಾ ಮಾತು, ರಂಗಣ್ಣಾವರ!" ಎಂದು ಕೃಷ್ಣಾಚಾರಿಯೂ ಚಂಡಿಕೆ ಜಾಡಿಸಿದನು.

"ನಮ್ದು ನಾವು ನೋಡಿಕೊಳ್ಳೋದಂದ್ರು ಏನ್ಮಾಡಬೇಕು?"

ಹುಚ್ಚ! ನಾರಾಯಣಾ, ನೀನು ಶುದ್ಧ ಹುಡುಗ! ಹುಚ್ಚ! ಇಪ್ಪತ್ಮೂರು ವರ್ಷಗಳಾದುವು ನಿನಗೆ! ಇನ್ನೂ "ನಮ್ದು ನಾವು ನೋಡಿಕೊಳ್ಳೋದಂದ್ರ ಏನ್ಮಾಡಬೇಕು ಅಂತ" ಕೇಳುವೆಯಾ? ಈ ನಿನ್ನ ವಯಸ್ಸಿಗೆ ಮೊದಲು ಮದುವೆಯನ್ನು ಮಾಡಿಕೊಳ್ಳಬೇಕು, ಮಡದಿಯೊಡನೆ ಸಂಸಾರ ಹೂಡಬೇಕು, ಮಕ್ಕಳನ್ನು ಹಡೆಯಬೇಕು. ಹೆಂಡತಿ ಸತ್ತರೆ ಇಲ್ಲವೆ ಸಂಸಾರಕ್ಕೆ ಅಯೋಗ್ಯಳಿದ್ದರೆ ಮತ್ತೊಂದು ಮಡದಿಯನ್ನು ಮಾಡಿಕೊಂಡು ಮತ್ತೂ ಮಕ್ಕಳ ತಂದೆಯಾಗಬೇಕು. ಬುದ್ಧಿ ಬಲಿಯುವುದರೊಳಗಾಗಿ ಕೂದಲು ನರೆತು "ಶ್ರೀಹರಿಯ ಇಚ್ಛೆ ಏನಿದೆಯೊ?" ಎನ್ನುತ್ತ ಸಾವಿಗೆ ಎದುರಾಗಬೇಕು. ತಾಯಿಯ ಸೇವೆ, ತಂದೆಯ ಸೇವೆ, ಗುರುಗಳ ಸೇವೆ, ಹಿರಿಯರ ಸೇವೆ ಎಂದು ಲೌಕಿಕದಲ್ಲಿ; ದೇವನ ಸೇವೆ, ಧರ್ಮದ ಸೇವೆ,ಬ್ರಾಹ್ಮಣರ ಸೇವೆ ಎಂದು ಪಾರಮಾರ್ಥದಲ್ಲಿ; ಹೀಗೆ ತವರ್ಮನೆ—ಅತ್ತೆಯ ಮನೆ ಎರಡರಲ್ಲೂ ದಾಸ್ಯವೃತ್ತಿಯ ಪಾಠಗಳನ್ನು ಕಲಿತು ನುರಿತು ಸಂಸಾರದಲ್ಲಿ, ಸಮಾಜದಲ್ಲಿ ನಿಸ್ವಾರ್ಥಬುದ್ಧಿಯ ದಾಸನಾಗಬೇಕು. ಇದನ್ನೆಲ್ಲ ಮರೆತು "ಏನ್ಮಾಡಬೇಕು" ಎಂದು ಕೇಳುವೆಯಾ?ನಿನ್ನನ್ನು ನೋಡಿದರೆ ಕನಿಕರ ಬರುವುದು! ಯಾವ ಸಹೃದಯನಿಗಾದರೂ ಯಾವ ಸಮಂಜಸಬುದ್ಧಿಯವನಿಗಾದರೂ ಕನಿಕರ ಬರಬಹುದು. ಅದಕ್ಕೆಂದೇ ಕೃಷ್ಣಾಚಾರಿಯು ಕರುಣಾರ್ದ್ರ ದೃಷ್ಟಿಯಿಂದ ನೋಡುತ್ತಿದ್ದಾನೆ, ಕುಲಕರ್ಣಿಯು ಕೃಪಾಳುವಿನಂತೆ ನೋಡುತ್ತಿದ್ದಾನೆ, ತಂದೆಯು ಕಳವಳದಿಂದ ನೋಡುತ್ತಿದ್ದಾನೆ.

"ಏನ್ಮಾಡ್ಬೇಕಂದ್ರಿ ಪಸ್ರಿ?" ಎಂದು ತಲೆ ಅಲ್ಲಾಡಿಸಿದನು ಕುಲಕರ್ಣಿ.

"ಏನ್ಮಾಡಬೇಕು ಅಂದ್ರಿ– ಎಂಥಾ ಮಾತಿದು!" ಎಂದು ನಸ್ಯ ಏರಿಸಿದನು ಕೃಷ್ಣಾಚಾರಿ.

"ಏನ್ಮಾಡ್ಬೇಕು ಅಂದ್ರಿ–ಚಹಾದಂಗ್ಡೀವಳಗ ಕೆಲ್ಸಾ ಮಾಡ್ಬೇಕ?" ಎಂದು ಮುಚ್ಚಳದ ಮೇಲೆ ಕೈ ಅಪ್ಪಳಿಸಿದನು ಶೀನಪ್ಪನಾಯಕನು. ನಿನ್ನ ಮಗನು ಬೇಕಾದರೆ ತಡೆದುಕೊಳ್ಳಲಿ, ನನ್ನ ಮೇಲೆ ಬೇಡ ಇಂತಹ ಆಟ– ಎನ್ನುವಂತೆ ಮುಚ್ಚಳದ ಮೇಲಿನ ಹಿಡಿಕೆಯು ಬಲವಾಗಿ ಏಟನ್ನು ತಾಕಿಸಿತು ನಾಯಕರಿಗೆ. ಸಿಟ್ಟು ಹೆಚ್ಚಿತು ನಾಯಕರಿಗೆ– ಮಗನ ಮೇಲೆ.

"ಚಹಾದಂಗ್ಡೀವಳಗ ಇದ್ದರೇನು, ಗಟಾರ ಬಳೆದರೇನು ಅಂತ ನೀವೇ——"

ಮಗನ ಮಾತು ಮುಗಿಯಗೊಡುವಷ್ಟು ಸಹನಶಕ್ತಿ ಉಳಿದಿರ ಲಿಲ್ಲ ತಂದೆಯಲ್ಲಿ.

"ನಾನು ಬೇಕಾದ್ದೇಳ್ತಿನಿ. ನಿನಗ ತಿಳೀಬೇಕೋ ತಿಳೀಬಾರ್ದೊ–"

ಉಸಿರು ಸಾಲದೆ ತೊಂದರೆಯಾದೀತು ತಂದೆಗೆ ಎನ್ನುವಂತೆ ನಾರಾ ಯಣನು ನಡುವೆಯೆ "ತಿಳಿಯೋದೇನು ಇದರೊಳಗ?" ಎಂದನು.

"ಬ್ರಾಹ್ಮಣನಾಗಿ ಹುಟ್ಟಿದ್ದಕ್ಕ ಅಭಿಮಾನ ಆದ್ರೂ ಅದನೊ ಇಲ್ಲೊ?" ಎಂದು ಹುಂಕರಿಸಿದನು ನಾಯಕರು.

"ನೋಕರಿ ಸಿಕ್ಕದಿದ್ದರ ಏನ್ಮಾಡ್ಬೇಕು?" ಎಂದು ತಕರಾರಿನ ದನಿ ಎಳೆದನು ನಾರಾಯಣನು.

"ನಿನಗ್ಯಾರು ಹೇಳಿದರು ನೋಕರಿ ಸಿಗೋದಿಲ್ಲಾಂತ?" ಮಗನ ಮಾತಿನಲ್ಲಿ ಸತ್ಯಾಂಶವಿದೆ ಎಂದು ಕಂಡು ಬಂದು ನಾಯಕರ ದನಿ ಒಂದೆ ರಡು ಮೆಟ್ಟಿಲು ಇಳಿದಿತ್ತು. "ನಿನಗ್ಯಾರು ಹೇಳಿದರು ನೋಕರಿ ಸಿಗೋದಿಲ್ಲಾಂತ? ನಿನ್ನ ಮನಸಿನೊಳಗ ಇದ್ದರ ಎಲ್ಲಿ ಬೇಕಾದಲ್ಲಿ ಹಚ್ಚಿಸಿ ಕೊಡ್ತೇನಿ. ನಿನಗ ಬ್ಯಾಡಾಗೇದ ಸಂಭಾವಿತತನದಿಂದ ಇರೋದು–"

ನಾರಾಯಣನು ತನ್ನನ್ನು ಉರಿಗಣ್ಣಿನಿಂದ ನೋಡುವಷ್ಟರಲ್ಲಿ ಕುಲ

ಕರ್ಣಿಯು ಬಾಯಿ ಬಿಚ್ಚಿದನು. " ನೀವ್ಹೇಳ್ರಿ ನಾಯ್ಕರಿಗೆ- ಇಂಥಲ್ಲಿ ನನಗ ಸೇರ್ತದೆ ಅಂತ. ಅಂದ್ರ ಹಚ್ಕೊಡ್ತಾರ ಅವರು. "

ನಾಯಕರ ಬೆಲೆ ಹೆಚ್ಚಿತು, ತಲೆ ಕೊಬ್ಬಿತು. " ಅದೇನಿಲ್ಲ. ಅವ ನಿಗೇ ಬ್ಯಾಡಾಗೇದ ಸಂಭಾವಿತತನದಿಂದ ಇರೋದು——"

ಮತ್ತೆ ಕುಲಕರ್ಣಿಗೆ ನಡುವೆ ಮಾತನಾಡಲೇ ಬೇಕಾಯಿತು. ಯಾಕೆಂದರೆ ನಾರಾಯಣನು ಮತ್ತೆ ಅವನನ್ನು ದಿಟ್ಟಿಸಿದ್ದನು. " ನೋಡ್ರಿ, ಇಲ್ಲಿಂದಿಲ್ಲೆ ಹೇಳ್ಬಿಡ್ರಿ, ಇಂಥಾ ನೌಕರಿ ಅಂತ——"

" ನೌಕರಿಯದು ಪ್ರಶ್ನ ಇಲ್ಲ ಬಿಡ್ರಿ, ರಂಗಣ್ಣಾವರ. " ಕೃಷ್ಣಾಚಾರಿಯು ಹಿರಿತನದಿಂದ ಹೇಳಿದನು. " ನಾಯ್ಕರು ಕೊಡ್ತಿಸ್ತಾರು ಇಲ್ಲಾ, ನಮ್ಮ ರಾಯ್ರು- ಇನ್ನ ಎರಡು ತಿಂಗಳಾಗಿಲ್ಲ ಮಾಮುಲೇದಾರಕಿಯಿಂದ ಪೆನ್‌ಶನಿ ತಕ್ಕೊಂಡು. ಅಳಿಯಂದಿರಿಗೆ ಕೆಲ್ಸ ಕೊಡಿಸೋದಿಲ್ಲ ಅನರು ? ಅದೇನಿಲ್ಲ. ಆದ್ರ, ದೊಡ್ಡ ಮನೆತನದವರು, ಜನ್ಮತಃ ಬ್ರಾಹ್ಮಣಾರು- ಇಂಥಾ ಕೆಲ್ಸ- ಅಂದ್ರ ಆ ಅಂಗ್ಡೀವಳಗಿನ ಕೆಲ್ಸ- ಮಾಡ್ಬೇಕೇನೂ ಅಂತ. "

"ಬ್ರಾಹ್ಮಣಾರಾಗಿ ಇಂಗ್ಲೀಶ ಕಲೀಬೇಕೇನು ?" ಎಂದು ನಾರಾಯಣನು ಸವಾಲು ಹಾಕಿದನು.

" ಏನ್ಹಾಂಗ ಹುಚ್ಚನ್ಹಾಂಗ ಮಾತಾಡ್ತಿದಿ ?" ಎಂದು ನಾಯಕರು ಮಗನನ್ನು ಹೆದರಿಸಿದರು.

" ನಮಗ ತಿಳದಷ್ಟು ಮಟ್ಟಿಗೆ ನಾವ್ಹೇಳ್ತೇವಿ; ಯಾಕನೀ, ರಂಗಣ್ಣಾವರ ?" ಬ್ರಾಹ್ಮಣನ ದನಿ ಕುಗ್ಗಿತು.

" ಇದೇನ್ಹೇಳೋದು, ಕೃಷ್ಣಾಚಾರ್ರ ? ಹೇಳೋದು ಕರ್ತವ್ಯ ಕರ್ಮ ಅಂತ ನೀವ್ಹೇಳ್ತೀರಿ, ಅಲ್ದೆ ನಿಮ್ಗೇನು ಸ್ವತಃಕ್ಕ ಒರೋದ್ಕ ಬಿಡೋದ್ಕ? "

" ಯಾರೇನು ಬರೋದರ ಆಶಾದಿಂದ ಮಾತ್ಹಾಡ್ತಾರೇನ್ರಿ, ರಂಗಣ್ಣಾವರ? " ಎಂದು ಆಕಾಶದಲ್ಲಿ ಕಣ್ಣಿಟ್ಟು ದೀನನಂತೆ ನುಡಿದನು ಕೃಷ್ಣಾಚಾರಿ. ಅವನ ಕಣ್ಣಿಗೆ ತನ್ನ ರಾಯರು ಮಾತುಕೊಟ್ಟ ' ಹದಿನೈದೋ- ಇಪ್ಪತ್ತೊ ' ಕಾಣಿಸಿತು. ಕಣ್ಣು ಮುಚ್ಚಿದನು.

ನಾರಾಯಣನಿಗೆ ಒಮ್ಮೆಲೆ ಏನೂ ತಿಳಿಯದಂತಾಯ್ತು. ಯಾರೊಡನೆ ಯಾವ ಮಾತನ್ನಾಡಬೇಕು ಎಂಬುದು ತಿಳಿಯದು, ಮಾತನಾಡುವ ಸಂದರ್ಭವಾದರೂ ಯಾವುದು— ಎಂಬುದೂ ತಿಳಿಯದು. 'ಮುಹೂರ್ತ'ದ ಪ್ರಶ್ನೆಯಿಂದ ಬೆಳೆದ ಹರಟೆ ನೀತಿಶಾಸ್ತ್ರಕ್ಕೆ ಬಂದು ಮುಟ್ಟಿತು, ಆದರೂ ತಾನು ಬಂದುದು ಯಾಕೆ, ತನ್ನ ತಂದೆ ಬಂದುದು ಯಾಕೆ ಎಂಬುದರ ಕಲ್ಪನೆ ಕೂಡ ಇಲ್ಲ. ಮಾತನಾಡಿಸಿ ಕೇಳಬೇಕೆ— ಎಲ್ಲರೂ ತನ್ನ ಮೇಲೆ ಸಿಟ್ಟಾಗಿದ್ದಾರೆ! ಆದದ್ದಾದರೂ ಏನು ? " ನಾನು ಮಾಡಿದ್ದಾದರೂ ಅಂತಹಾದ್ದೇನು, ನೀವೆಲ್ಲರೂ ಇಷ್ಟು ಮನಸ್ಸು ನೋಯಿಸಿಕೊಳ್ಳಲಿಕ್ಕೆ ? " ಎಂದು ಎಲ್ಲರನ್ನೂ ಕೇಳಿದಂತೆಯೆ ಕೇಳಿದನು.

" ಇ–ದ–ಕ್ಕೂ–ಇ–ಸ್ನೇ–ನ್ನಾ–ಡ–ಬೇ–ಕು–ಊ ? " ಬೇಜಾರದ ದನಿಯಿಂದ ಮಾತನಾಡಿದರು ನಾಯಕರು. " ನಮ್ಮ ಮನೆತನದ ಮಾನ ಹೋಯ್ತು–ಹೋಗಲೊಲ್ಲದೇಕೆ ? ಆದರೆ, ಸಂಬಂಧ ಕೂಡಿದ ಮರ್ಯಾದಸ್ಥರ ಮಾನಾನೂ ಕಳೆಯಲಿಕ್ಕೆ ನಿಂತು——"

" ಮರ್ಯಾದಸ್ಥರು ಯಾರು ?"— ಎಲ್ಲವನ್ನೂ ಒಮ್ಮೆ ಮುಗಿಸಿ ಬಿಡಬೇಕೆಂಬ ನಿರ್ಧಾರದಿಂದ ಕೇಳಿದನು ನಾರಾಯಣನು.

ಕೃಷ್ಣಾಚಾರಿಯ ತಲೆ ತಿರುಗಿದಂತಾಯಿತು,ಪ್ರಸಂಗವೆ ಮರ್ಯಾದೆ ಮೀರಿದಂತಾಯಿತು. ಇದುವರೆಗೆ ತನ್ನನ್ನೇ ಆಡಿಕೊಂಡನು ಈ ಹುಡುಗ. ನಡೆಯಲಿ;ರಾಯರ ಕೆಲಸ; ಹುಡುಗನ ಮಾತಿಗೆ ಮಹತ್ವವನ್ನೇಕೆ ಕೊಡಬೇಕು ಎಂದು— ತಡೆದುಕೊಂಡಿದ್ದನು. ಆದರೆ ಇದೆಂತಹ ಉದ್ಧಟತನ ! ಮರ್ಯಾದಸ್ಥರು ಯಾರಂತೆ! ತಮ್ಮ ರಾಯರ ವಿಷಯ ಹೀಗೆ ಮಾತನಾಡಿದರೆ ? ಸಂಬಂಧ ಕೂಡಿದ್ದಕ್ಕೆ ಒಳ್ಳೇ ಸನ್ಮಾನ! " ಎಂಥಾ ಮಾತಿದು, ರಾಯ್ರು!ಮರ್ಯಾದಸ್ಥರು ಯಾರೂ ಅಂತ! ಸಂಬಂಧ ಕೂಡಿದ ಮಾವಂದಿರಿಗೆ ಒಳ್ಳೇ ಮರ್ಯಾದೆ ತೋರಿಸ್ತೀರಲ್ಲ! ನಿಮ್ಮ ಮಾತು ಏನೆ ಇರಲಿ, ಚಹಾದಂಗ್ಡೀವಳಗ ಕೆಲಸ್ಮಾಡೋದು ನಿಮ್ಮಾವಂದಿರ ಮರ್ಯಾದೆಗೆ ತಕ್ಕುದಲ್ಲ!ಆದನ್ನೆ ಹೇಳ್ಬೇಕೂ,ಅಂತ ಬಂದೀವಿ— ಅವರೇ ಕಳಿಸಿಕೊಟ್ಟಾರ ನನ್ನ ಇಲ್ಲಿಯ ತನಕ— ಇನ್ನ ನಿಮ್ಮ ಇಷ್ಟ.... ಯಾಕರೀ, ಏನಂತೀರಿ, ರಂಗಣ್ಣನವರ ? "

ರಂಗಣ್ಣವರು ಅನ್ನೋದು ಬೇಕಾದಷ್ಟು ಇದ್ದಿತು. ಆದರೆ-ಯಾರ ಮನಸ್ಸನ್ನು ನೋಯಿಸಬೇಕು, ರಂಗಣ್ಣವರು? ಅದಕ್ಕೆ ಮೊದಲು ಬರಿಯ ನಕ್ಕು ಬಿಟ್ಟರು. 'ಆಂ?' ಎಂದು ಆಚಾರಿಯು ಮುಖವನ್ನು ತೊಟ್ಟಂತೆ ಕೇಳಲು ಮತ್ತೂ ನಕ್ಕುಬಿಟ್ಟರು ರಂಗಣ್ಣವರು. '' ಹಹ.... ಬೀಗ–ಬೀಗರ ಜಗಳ.... ಯಾರದ್ದಾಂಗ ಮಾತಾಡೋಣ ನಾವು? ....ನಾಳೆ ನೀವೂ ನೀವೂ ಒಂದೇ....ಮತ್ತೆ ನಾವೇ ಹೊರಗೆ . . ಹಹ! ಹಹ! '' ಎಂದು ಗದ್ಗದಿಸಿದರು ರಂಗಣ್ಣವರು.

ನಾರಾಯಣನಿಗೆ ಸಮಯ ಸಾಧಿಸಿದಂತಾಯ್ತು. ಈ ಮಾತನ್ನು ಕೊನೆಗೊಮ್ಮೆ ಮುಗಿಸಿಬಿಡಬೇಕೆಂಬುದೊಂದು, ಕಾಲು ಕೆದರಿ ಜಗಳ ಹೂಡಿಯಾದರೂ ಚಿಂತೆಯಿಲ್ಲ ಕುಲಕರ್ಣಿಯ ಮನೆಯ ಊಟ ತಪ್ಪಿಸಿಕೊಳ್ಳಬೇಕೆಂಬುದೊಂದು; ಇವೆರಡಕ್ಕಾಗಿ ಬಾಯ್ಬಿಟ್ಟು ಕುಳಿತ ನಾರಾಯಣನಿಗೆ ಕುಲಕರ್ಣಿಯ ಮಾತಿನಲ್ಲಿ ಅಮೃತದ ಹನಿಗಳುದುರಿದಂತೆ ಕಂಡು ಬಂದಿತು. ಬೀಗ–ಬೀಗರ ಜಗಳ! '' ನಾನು ಯಾರ ಬೀಗನೂ ಅಲ್ಲ, ನನಗ್ಹೇಳಿಬಿಡ್ರಿ—'' ಎಂದು ಪ್ರಸ್ತಾಪಿಸಿದನು.

ಶೀನಪ್ಪನಾಯಕರಿಗೆ ಮಗನ ವರ್ತನವೆ ತಿಳಿಯದಂತಾಯ್ತು. ಇದೇನು ಭ್ರಮೆ ಬಡಿದ ಬುದ್ಧಿಯ ಲಕ್ಷಣವೋ, ವಿಪರೀತ ಬುದ್ಧಿಯ ಲಕ್ಷಣವೋ– ಎಂದು ಅವರ ಬುದ್ಧಿಗೆ ತೋಚದು. ತಾವು ಹೇಗೆ ವರ್ತಿಸಿದ್ದರೆ ತಮ್ಮ ತಂದೆಯವರು ಏನು ಮಾಡುತ್ತಿದ್ದರೆಂಬುದರಲ್ಲಿ ಅವರಿಗೆ ಸಂಶಯವಿಲ್ಲ. ಪರಂಪರೆಯಾಗಿ ನಡೆದು ಬಂದ ಆ ಪಿತೃಧರ್ಮವನ್ನು ನಡೆಸಿ ಮಗನ ಮೈಯೊಳಗೆ ಹೆಚ್ಚಾಗಿದ್ದ ಎಲುಬುಗಳನ್ನು ಹೊರಗೆಳೆಯಬೇಕೆ? ತಂದೆಯಂತೆಯೆ ತಾನೂ ನಡೆಯಬೇಕೆಂಬ ಪಿತೃಭಕ್ತಿಯಿಂದ ಪ್ರೇರಿತನಾಗಿ ಮಗನೂ ತಮಗೆ ಹಾಗೆಯೆ ಮಾಡಿದರೆ—? ಶುದ್ಧ ಪಶು! ಪಶುವಿನಂತೆ ವರ್ತಿಸುತ್ತಿದ್ದಾನೆ!'' ಅಲ್ಲೋ, ಮನುಷ್ಯನಾದ ಮಾತ್ರಕ್ಕ ಮನುಷ್ಯಧರ್ಮ ಬಿಡ್ಬಾರ್ದು ಅಂಬೋದನ್ನ ಮಂದಿ ಹೇಳ್ಬೇಕ ನಿನಗ?'' ಎಂದು ಅತ್ಯಂತ ತಿರಸ್ಕಾರದ ದನಿಯಲ್ಲಿ ಕೇಳಿದರು.

'' ಮನುಷ್ಯ ಧರ್ಮ ಅಂದ್ರ?'' ನಾರಾಯಣನಿಗೂ ಅರ್ಥವಾಗಿ

ರಲಿಲ್ಲ. ಆದರೂ ಅದನ್ನು ತೋರಗೊಡಬಾರದೆಂದು ಅದೇ ಪ್ರಶ್ನೆಯನ್ನು ಹೆಚ್ಚು ಗಟ್ಟಿಯಾಗಿ ಕೇಳಿದನು.

" ಎಂಥಾ ಮಾತಿದು, ರಾಯ್ರು ? " ಕೃಷ್ಣಾಚಾರಿಯು ತಲೆ ಅಲ್ಲಾಡಿಸಿದನು.

" ಸಮಾಜಸೇವಾ ಮನುಷ್ಯಧರ್ಮ ಅಲ್ಲ ? " ಎಲ್ಲಿಯೊ ಓದಿಕೊಂಡಿದ್ದು ಸ್ಮರಣೆಗೆ ಬಂದು ಸಹಜವಾಗಿಯೆ ಕೇಳಿದನು ನಾರಾಯಣನು.

" ಏನು, ನಿನ್ನ ತಲೆ, ಹಾಂಗ ಮಾತಾಡಿದರ ! " ಎಂದು ತಂದೆಯು ಅಬ್ಬರಿಸಿದರು.

ಮನುಷ್ಯಧರ್ಮ ಯಾವುದು ಎಂಬುದಕ್ಕೆ 'ತನ್ನ ತಲೆ' ಎಂಬ ಉತ್ತರವು ನಾರಾಯಣನಿಗೂ ಒಪ್ಪಿಗೆಯಾಯಿತು. **ತನ್ನ** ವಿಚಾರ, **ತನ್ನ** ಆಚಾರ, **ತನ್ನ** ಧ್ಯೇಯ, **ತನ್ನ** ಧೋರಣ—ಇವೇ ಮನುಷ್ಯನಾದ **ತನ್ನ** ಧರ್ಮ ಎಂಬುದು ಬಹಳೇ ಸಯುಕ್ತಿಕವೆನ್ನಿಸಿತು ಆನಸಿಗೆ. ಹಾಗೆ ತಿಳುಹಿಸಿಕೊಟ್ಟುದಕ್ಕಾಗಿ ತನ್ನ ತಂದೆಯ ಆಭಾರ ಮನ್ನಿಸಬೇಕೊ ಹೇಗೆ ಎಂಬ ವಿಚಾರದಲ್ಲಿ ಸಿಕ್ಕಿಕೊಂಡಾಗ ಕೃಷ್ಣಾಚಾರಿಯು ಮಾತನಾಡಿದನು; "ಅಲ್ಲ, ರಾಯ್ರು, ಎಂಥಾ ಮಾತಿದು ? ಕಲಿತವ್ರು ನೀವು ಹೀಂಗ ಪ್ರಶ್ನ ಕೇಳ್ಬಹು—"

"ಕಲಿತಿದ್ದುದರ ಹಣೆಬರಹ ಇದು !" ಎಂದು ನಾಯಕರು ಸಡುವೆಯೆ ಹಂಗಿಸಿದರು.

ನಾಯಕರ ಮಾತು ತನಗಲ್ಲ, ದೇವನಿಗೆ ಉದ್ದೇಶಿಸಿದ್ದು ಎಂಬ ನಿಶ್ಚಯದಿಂದ ಬ್ರಾಹ್ಮಣನು ತಡೆ ಇಲ್ಲದೆ ಮಾತು ಮುಂದುವರಿಸಿದನು.

"—ನೀವು ಹೀಂಗ ಪ್ರಶ್ನ ಕೇಳ್ಬೇಕ ? ಅಲ್ಲ, ತಾನಾಯ್ತು, ತನ್ನ ಮನೆ ಆಯ್ತು, ತನ್ನ ಹೆಂಡಿರು-ಮಕ್ಕಳ ಕೂಡ ಸಂಸಾರ ಮಾಡಿಕೊಂಡು ಇರೋದ್ನ ಬಿಟ್ಟು ಈ ಸಮಾಜ ಈ ಸೇವಾ ಅನ್ನೋ ಧರ್ಮ ಯಾಕ ಮನುಷ್ಯಗ ? ಏನೊ—ಇದ್ದ ನಾಲ್ಕೊಪ್ಪತ್ತು ಇದ್ದದ್ನ ಬಿದ್ದದ್ನ ಕೊಟ್ಟುದಕ್ಕ ಆ ಶ್ರೀಹರಿ—"

"ಆಹಾ!" ಎಂದು ಮತ್ತೆ ಕುಲಕರ್ಣಿಯು ಮಾಳಿಗೆಯ 'ದುರುಸ್ತಿ'ಯ ವಿಚಾರ ನಡೆಸಿದನು.

"—ಆ ಶ್ರೀಹರೀನ್ನ ಸ್ಮರಿಸತಾ ಕಾಲ ಕಳಿಯೋದು—"

"ಈ ಪ್ರಕಾರಾ ಶ್ರೀಮನ್ಮಹಾ—" ಎಂದು ಪುರಾಣದ ಠೀವಿಯಲ್ಲಿ ದನಿಯನ್ನೆಳೆದನು ನಾರಾಯಣನು. ಕೃಷ್ಣಾಚಾರಿಯು ತೆರೆದ ಬಾಯನ್ನು ಮುಚ್ಚದಾದನು, ಕುಲಕರ್ಣಿಯು ಮುಚ್ಚಿದ ಬಾಯಿಯನ್ನು ತೆರೆಯದಾದನು, ನಾಯಕರಿಗೆ ಬಾಯಿ ಮುಚ್ಚಿದೆಯೊ ತೆರೆದೆಯೊ ಎಂಬುದರ ಅರಿವಿಲ್ಲದಾಯಿತು. ನಾರಾಯಣನು ಸಿಡಿದೆದ್ದನು. "ವ್ಯವಹಾರದ ಪಶುಧರ್ಮಕ್ಕ ಪುರಾಣದೊಳಗ ಮನುಷ್ಯಧರ್ಮ ಅಂತ ಹೇಳ್ತಾರ ಅಂಬೋ ಕಲ್ಪನಾ ಇದ್ದಿದ್ದಿಲ್ಲ ನನಗ. ನನಗ ಯಾವಾಗ್ನಿಂದಲೊ ತಿಳಿದಽದ, ನೀವ್ಹೇಳ್ಬೇಕನ್ನೋದು. ಯಾಕ ನಮ್ಮನ್ನ ಶ್ರೀಹರೀನ್ನ ಕೆಣಕ್ತೀರಿ?—"

"ಏ, ನಿನಗೆಚ್ಚರ ಅದಽನೊ ಇಲ್ಲೊ ಮೈಮ್ಯಾಲೆ? ಏನ್ಮಾತಾಡ್ತೀ?"

ತಂದೆಯು ಗದರಿಕೆಗೆ ಬೆದರುವ ಸ್ಥಿತಿಯಲ್ಲಿದ್ದಿರಲಿಲ್ಲ ನಾರಾಯಣ. ಇವರೆಲ್ಲರಿಗೆ ಹೇಳಬೇಕೆಂದ ಮಾತು ಅವನಿಗೆ ಈ ಮೊದಲೆ ವಿಚಾರ ಮಾಡಿ ಮಾಡಿ ಮುಖಪಾಠ ಆದಂತಾಗಿದ್ದಿತು. ಉಪನ್ಯಾಸದ ಠೀವಿಯಿಂದಲೆ ಸಾಗಿದನು. "ಯಾಕ ಕೆಣಕ್ತೀರಿ ಶ್ರೀಹರೀನ್ನ? ಮೊನ್ನಿನ ಮದುವೆ ಒಪ್ಕೊಂಡು ಮಡದೀನ್ನ ಕೂಡಿಕೊಂಡು ನಾನೂ ಮಕ್ಕಳ್ನ ಹಡೆದು ಸಾಯ್ಬೇಕೂ ಅಂತಲ್ಲೆ ನೀವ್ಹೇಳೋದು?—"

"ನಿನಗೇನು ಕೆಟ್ಟದಾಗಲಿ ಅಂತ ಹೇಳ್ತೀವೆ?"

ನಾರಾಯಣನ ಮುಖಪಾಠ ಮರೆತಂತಾಯಿತು. ಉಪನ್ಯಾಸ ತಡೆಯಿತು. ಹುಡುಗತನದ ಹಟದಿಂದ ಬರಿಯ "ನನಗೇನೂ ಬೇಡ" ಎಂದವನೆ ಕುಳಿತುಬಿಟ್ಟನು.

"ಎಲ! ಎಂಥಾ ಮಾತಿದು! ಮಾಡ್ಕೊಂಡ ಹೆಂಡ್ತಿ ಬ್ಯಾಡಾ ಅಂದರ— ಯಾಕರೀ, ರಂಗಣ್ಣಾವರ, ನೀವೇನಂತೀರಿ?"

ಎರಡನೆಯ ಸಲ ಬ್ರಾಹ್ಮಣನು ರಂಗಣ್ಣನನ್ನು ಪೇಚಿನಲ್ಲಿ

ಸಿಕ್ಕಿಸಿದ್ದು. ಆದರೆ ರಂಗಣ್ಣನೂ ಮನೆಯೊಳಗೆ ಮಕ್ಕಳ–ವಿಶೇಷವಾಗಿ ಹೆಣ್ಣುಮಕ್ಕಳ— ಮುಸುಪೆ ಮಾಡಿದ ಪುಂಡ. ಪೇಚಿಗೆ ಸಿಕ್ಕಲಿಲ್ಲ, ಹೆದರಲಿಲ್ಲ; ಹಲ್ಲು ಕಿರಿದನು. "ಅಳಿಯಂದಿರ ಆಟ ಏನದೊ ನಾವು ಹ್ಯಾಂಗ ಹೇಳೋಣ? ಏನಾದ್ರೂ ನಾವು ಹೊರಗೇ.... ನೀವು–ನೀವು ಬೀಗರು–ನೋಡಿಕೊಳ್ರಿ.... ಹಹ!" ಎಂದನು.

ಪೇಚಿನಲ್ಲಿ ನಿಜವಾಗಿ ಸಿಕ್ಕಿಕೊಂಡರು ನಾಯಕರು. ಮಗನ ಮಾತಿನ ಸಂದರ್ಭವೆ ಅವರಿಗೆ ತಿಳಿಯದಂತಾಯ್ತು. ಇಷ್ಟೊಂದು ಶ್ರಮ ಪಟ್ಟು, ಸಡಗರ ಸಮಾಪ್ತಿ, ಸುಳ್ಳೊಂದು ನೂಟೊಂದು ಸಾಧಿಸಿ, ಸಂಭಾವಿತರ ಕನ್ಯೆಯನ್ನು ತೆಗೆದುಕೊಂಡಿದೆ. ಈ ಹುಡುಗನ ತಲೆಯೊಳಗೆ ಈ ಹುಚ್ಚು ಯಾರು ತುಂಬಿದರೊ! ನನಗೇನೂ ಬೇಡ– ಅಂದರೇನು? "ನೀನು ಒಲ್ಲೋದಾದರೂ ಏನು?" ಎಂದು ಸೋತು ಸಣ್ಣಾದ ಬೇಜಾರದ ದನಿಯಲ್ಲಿ ಕೇಳಿದರು ಮಗನಿಗೆ.

"ನನಗ ಮದಿವೀನೇ ಬ್ಯಾಡ" ಎಂದುಬಿಟ್ಟನು ನಾರಾಯಣನು!

ಈ ಉದ್ಧಟತನದ ಪರಿಣಾಮವೇನಾಗುತ್ತಿತ್ತೊ ಹೇಳಲು ಧೈರ್ಯ ಕೂಡ ಸಾಲುತ್ತಿದ್ದಿಲ್ಲ. ಅಷ್ಟರಲ್ಲಿ ಕುಲಕರ್ಣಿಯು ಘೊಳ್ಳೆಂದು ನಕ್ಕನು. ಮಿಕ್ಕವರು ಚಕಿತರಾಗಿ ತನ್ನನ್ನು ನೋಡಲು ಕುಲಕರ್ಣಿಯು ಮತ್ತಿಷ್ಟು ತಡೆಯದೆ ನಗುತ್ತಿದನು. ನಾರಾಯಣನ ಮಾತಿನಲ್ಲಿಯ ಹಾಸ್ಯದ ಮರ್ಮ ಅವನೊಬ್ಬನಿಗೆಯೆ ತಿಳಿದಿತ್ತು, ಆದರೆ ಹೇಳಬೇಕೆಂದರೆ ನಗೆ ಉಕ್ಕುತ್ತದೆ. ಮದುವೆ ಆಗಿ ಹೋಗಿದೆ– 'ನನಗ ಮದಿವೀನೇ ಬ್ಯಾಡ' ಎಂದರೆ ಯಾರಿಗೆ ನಗೆ ಬರಲಿಕ್ಕಿಲ್ಲ?

"ಅಂದ್ರೇನು ನಿನ್ನ ತಲೆ!" ಎಂದು ಗದ್ದರಿಸಿದರು ನಾಯಕರು. ಕುಲಕರ್ಣಿಯ ನಗೆಯಿಂದ ಅವರಿಗೆ ಕೋಪವೇರಿತು.

"ಮದಿವಿ–ಹಹ–ಮದಿವೆ– ಹ–ಆಗ್ಯದ–ರಾಯರ–ಹ– ಆಗ್–ಹುಶ್....ಬಹಳೇ ಮೋಜು ಮಾತಾಡುವವರು ನೀವ್ ಉಹು–" ಎಂದು ನಗೆಯೊಳಗಿಂದ ಊದಿದನು ಕುಲಕರ್ಣಿ.

ತನ್ನ ಹುಚ್ಚುತನ ಕಂಡು ಬಂದಿತು ನಾರಾಯಣನಿಗೆ, ಕುಲಕರ್ಣಿಯ ನಗೆಯಿಂದಂತೂ ಕೆಂಡವಿಟ್ಟಂತಾಯಿತು ತಲೆಯೊಳಗೆ. ತನ್ನ

ಮದುವೆ ಆಗಿದೆ ಎಂದು ತನ್ನನ್ನು ನೋಡಿ ಹಿಂತನದಿಂದ ನಗುವನಲ್ಲ ಎಂಬುದೊಂದು, 'ನನಗೇನೂ ಬ್ಯಾಡ' ಎಂದಾಗ ಅದರಲ್ಲಿ ಬೇರೆ ಗತನದ ತಂಟೆ ಇದೆ ಎಂಬ ಕಲ್ಪನೆಯ ಆರೋಪಣೆ ಹೊರಿಸಿದ್ದೊಂದು—ಇವೆರಡೂ ಕುಲಕರ್ಣಿಯು ತನ್ನ ಎರಡೂ ಕಣ್ಣುಗಳಲ್ಲಿ ಕಿವಿದ ಬೊಟ್ಟುಗಳಂತೆ ಬಾಧಿಸಹತ್ತಿದುವು ನಾರಾಯಣನನ್ನು. ಇವರಿಗೆ ಬುದ್ಧಿಯೇ ಇಲ್ಲವೆ? ತಮಗೆ ಸರಿಯಾದ ವಿಚಾರಗಳು ತೋಚದಿದ್ದಾಗೂ ಇನ್ನೊಬ್ಬನು ತನಗೆ ತೋಚಿದ ಸರಿಯಾದ ವಿಚಾರಗಳನ್ನು ಹೇಳಿದರೆ ತಿಳಿದುಕೊಳ್ಳಬಾರದೆ ಇವರು? ತನಗೆ ಮದುವೆ ಬೇಡೆನ್ನುವದರೊಳಗೆ ಪಾಪದ ಕೂಡ ತಂಟೆ ಹೂಡುವ ಹಂಚಿಕೆ ಇದೆ ಎಂದಿಷ್ಟು ಇವನಿಗೆ ತಿಳಿಯುತ್ತಿಲ್ಲವೆ? ಒಮ್ಮೆ ಆಗಿ ಹೋದ ಮದುವೆ ಬೇಡನೆಂದರೂ ಬಿಟ್ಟೀತು ಹೇಗೆ—ಎಂದು ನಗುವ ನಲ್ಲವೆ?

" ಎಲ! ಎಂಥಾ ಮಾತಿದು! ಬ್ಯಾಡಾಂದ್ರ ಹ್ಯಾಂಗ ಬಿಟ್ಟೀತರಿ? ಯಾಕರೀ, ರಂಗಣ್ಣನವರ? ಅಲ್ಲ—ನಾವೂ ನೀವೂ ಒಮ್ಮೆ ಹೀಂಗೇ ಬ್ಯಾಡಾ ಅಂದವರೆ. ಹೌದಲ್ಲೊ? ನೀವೇ ಹೇಳಿರಿ. " ಹೀಗೆನ್ನುವಾಗ ಕೃಷ್ಣಾ ಚಾರಿಗೂ ಮುಗುಳ್ನಗೆ ತಡೆಯದಂತಾಯಿತು.

ನಾರಾಯಣನು ಸುಮ್ಮನಿದ್ದನು. ಈ ಬ್ರಾಹ್ಮಣ, ಈ ಕುಲಕರ್ಣಿ ತಮ್ಮ ತಮ್ಮೊಳಗೆ ಮಾತನಾಡುವುದನ್ನು ನೋಡಿದರೆ ಇವರಿಬ್ಬರೂ ಸಮಾಜದ ಚಿತ್ರ—ಗುಪ್ತರೇನೊ ಎನ್ನಿಸುವಂತಿತ್ತು. ಎಲ್ಲರ ಅನುಭವಗಳ ಯಾದಿ (ಟಿಪ್ಪಣಿ ಪಟ್ಟಿ)ಯೆ ಇವರ ಹತ್ತಿರ ಇದ್ದಂತಿದೆ.

" ಶ್ರೀಹರಿಯ ಇಚ್ಛಾ ಅದು. ನಾವು ಹ್ಯಾಂಗ ಮೀರೇವು! " ಕುಲಕರ್ಣಿಯ ದನಿಯಲ್ಲಿ ದನ್ಪಾದ ಗಾಂಭೀರ್ಯವಿದ್ದಿತು; ಯಾಕೆಂದರೆ ಇದೇ ಮೊದಲನೆಯ ಸಲ, ಅವನಿಗೆ ತತ್ವಜ್ಞಾನವನ್ನು ಹೇಳುವ ಸಂಧಿ ಸಿಕ್ಕದು.

ನಾರಾಯಣನು ಇನ್ನೂ ಸುಮ್ಮನಿದ್ದನು. ಅವನಿಗೆ ಹೇಸಿಕೆಯಾಯಿತು ಕುಲಕರ್ಣಿಯ ಮಾತು ಕೇಳಿ. ಶ್ರೀಹರಿಯ ಇಚ್ಛೆ! ಏನೆಂದು? ಮದುವೆಯಾದ ಕಮತೂರಿನ ಕುಲಕರ್ಣಿಯು ತುಳಜಿಯ ತಾಯಿಯೊಡನೆ ವ್ಯವಹರಿಸಬೇಕೆಂದೊ? " ನಾವು ಹ್ಯಾಂಗ ಮೀರೇವು " ಎನ್ನಲಿಕ್ಕೆ ಇವ

ನಿಗೆ ಸಾಚಿಕೆಯಾದರೂ ಇಲ್ಲವೆ? ನಾರಾಯಣನಿಗೆ ಒಂದೊಂದೇ ಸಂಗತಿ ಸ್ಮರಣೆಗೆ ಬಂದಿತು. ಶ್ರೀಹರಿಯ ಇಚ್ಛೆಯನ್ನು ತನ್ನ ತಂದೆ ಕೂಡಾ ಹ್ಯಾಗೆ ಮೀರಿದ್ದನೆಂಬುದು ಅವನ ಸ್ಮರಣೆಗೆ ಬಂದಿತು. ತನ್ನ ತಾಯಿಯು ಟಿಸಾಲು ಸಾಯಂಕಾಲದ ಸೂರ್ಯನ ಕಿರಣಗಳಂತೆ ಕಣ್ಣು ಕೆಂಪು ಮಾಡಿಕೊಂಡು ಹೇಗೆ ಆ ಸೂರ್ಯನಂತೆಯೆ ರಾತ್ರಿಯೆಲ್ಲಾ ದುಃಖ ಸಮುದ್ರದಲ್ಲಿ ಮುಳುಗುತ್ತಿದ್ದಳೆಂಬುದು ಈಗಲೂ ಅವನ ಕಣ್ಣು ಕಟ್ಟಿತು. ತನ್ನ ತಂದೆಯನ್ನು ಮತ್ತೊಮ್ಮೆ ನೋಡಿದನು. ಹುಬ್ಬುಗಂಟಿಕ್ಕಿದ್ದಾನೆ ಪೀನಪ್ಪ ನಾಯಕ! ಅಹುದು, ಇದೇ ಮುಖಮುದ್ರೆಯಿಂದ ತನ್ನ ತಂಡೆ ಯಾವಾಗಲೂ ಮನೆಗೆ ಬರುತ್ತಿದ್ದನು. ಶ್ರೀಹರಿಯ ಇಚ್ಛೆ! ಏನೆಂದು? ಹೆಂಡಿರು–ಮಕ್ಕಳೊಡನೆ ಅಸಭ್ಯತನದಿಂದ ಕ್ರೂರತನದಿಂದ ವರ್ತಿಸಬೇಕೆಂದೊ? ತನ್ನೊಡನಾಗಲಿ ತನ್ನ ತಾಯಿಯೊಡನಾಗಲಿ ಒಂದು ದಿವಸ ಮನಮೆಚ್ಚಿ ಎದೆಬಿಚ್ಚಿ ಮಾತನಾಡಿದ್ದಿಲ್ಲ ತನ್ನ ತಂದೆ! ಶ್ರೀಹರಿಯು ಹಾಗೆಯೆ ಇಚ್ಛಿಸಿದನೆ? ಇವರೇ ತನಗೀಗ ಉಪದೇಶ ಮಾಡುವರು, ಮಾಡಿದ ಮದುವೆ ಬಿಟ್ಟೀತು ಹೇಗೆಂದು! ಬಿಟ್ಟಂತೆಯೆ ಒಂದೇ ಮನೆಯೊಳಗೆ ವರ್ತಿಸುವುದಕ್ಕಿಂತಲೂ ಮೊದಲೇ ಯಾರಾದರೊಬ್ಬರೂ ಮನೆ ಬಿಟ್ಟರೆ ಒಳಿತಲ್ಲವೆ? ಬೇಡಾದ ಹೆಂಡತಿಯಲ್ಲಿ ಮಕ್ಕಳನ್ನು ಪಡೆಯುವುದು ಮನುಷ್ಯನ ಧರ್ಮವಂತೆ! ಇದನ್ನು ಕುಲಕರ್ಣಿಯು ಹೇಳಬೇಕೆ ತನಗೆ? ಅವನ ಮಕ್ಕಳನ್ನು ನೋಡಿಲ್ಲವೆ ತಾನು? ಇವರೆಲ್ಲರೂ ಹೀಗೆಯೆ. ಪಶುಧರ್ಮವೆ ಇವರಿಗೆ ಮನುಷ್ಯಧರ್ಮ....ತನ್ನ ಈ ವಿಚಾರಗಳನ್ನೆಲ್ಲ ಹೇಳಿಬಿಡಬೇಕೆಂದರೆ ಒಮ್ಮೆ ಧೈರ್ಯ ಸಾಲದು ನಾರಾಯಣನಿಗೆ, ತಿಳಿದುಕೊಳ್ಳಲು ಇಚ್ಛೆ ಇಲ್ಲದ ಇವರಿಗೆ ಹೇಳಿಯಾದರೂ ಮಾಡುವುದೇನು ಎಂದುಕೊಳ್ಳುವನೊಮ್ಮೆ.

"ಯಾಕೊ? ಸುಮ್ಮನ್ಯಾಕ ನಿಂತುಕೊಂಡೆ? ನಿನ್ನ ಮನಸಿನೊಳಗ ಇದ್ದದ್ದಾದರೂ ಏನು?"

ಎಚ್ಚತ್ತವನಂತೆ ಮುಖವನೆತ್ತಿದನು ನಾರಾಯಣನು. ಮಾತನಾಡಿದವರು ತನ್ನ ತಂದೆ. ಮತ್ತೊ ಸುಮ್ಮನಿದ್ದನು ನಾರಾಯಣನು. ಮನಸಿನೊಳಗೆ ಏನಿದೆಯಂತೆ! ಅದನ್ನು ಕೇಳುವ ಬುದ್ಧಿ **ಇಂದು** ಬಂದಿದೆ

ತನ್ನ ತಂದೆಗೆ. ಮನಸಿನೊಳಗಿದೆಯೊ ಇಲ್ಲವೊ ಇದರ ಪರಿವೆ ಇಲ್ಲದೆ ಶಿಕ್ಷಣ ಕೊಡಿಸಿದ್ದಾಯಿತು; ಮನಸಿನೊಳಗಿದೆಯೊ ಇಲ್ಲವೊ ಇದರ ಪರಿವೆ ಇಲ್ಲದೆ ಮದುವೆಯನ್ನು ಮಾಡಿಸಿದ್ದಾಯಿತು. ಬೊಟ್ಟು ತಿವಿದು ಪೆಟ್ಟು ತಾಕಿತೆ ಎಂದು ಕೇಳುವವರಂತೆ ಇಂದು ಕೇಳುವನು ತನ್ನ ತಂದೆಯು ಮಗನ ಮನಸ್ಸಿನಲ್ಲಿ ಏನಿದೆ ಎಂದು ! ಕೊಡಿಸಿದ ಶಿಕ್ಷಣ ನಿರುಪಯೋಗ ದ್ದಾಯಿತು, ಉಪ್ಪಿಟ್ಟಿನಂಗಡಿಯ ಮಾಲಕನು ಕೂತ ಈ ಮಾತಿಗೆ ಸಾಕ್ಷಿದಾರ. ಮಾಡಿಸಿದ ಮದುವೆಯು ಹಾಗೆಯೆ ನಿರುಪಯೋಗದ್ದು, ಉಪ್ಪಿಟ್ಟಿನಂಗಡಿಯಲ್ಲಿಯ ತುಳಜಿಯೆ ಈ ಮಾತಿಗೆ ಸಾಕ್ಷಿ. ನಾರಾಯ ಣನಿಗೆ ಈಗ ಧೈರ್ಯ ಬಂದಿತು ತನ್ನಷ್ಟಕ್ಕೆ ಒಪ್ಪಿಕೊಳ್ಳಲು. ಮುಂದಿದ್ದ ಮುವ್ವರು ಸಂಸಾರಧೂರ್ತರ ಚರಿತ್ರೆಯ ಕಲ್ಪನೆ ಬಂದಂತೆ ನಾರಾಯಣ ನಿಗೆ ಧೈರ್ಯ ಬಂದಿತು, ತುಳಜಿಯ ವಿಷಯವಾಗಿ ತನ್ನ ಹೃದಯದಲ್ಲಿ ಅಸಭ್ಯ ವಿಚಾರಗಳು ಗೂಡುಗಟ್ಟಿದ್ದುವು, ಎಂದು ತನ್ನಷ್ಟಕ್ಕೆ ಒಪ್ಪಿಕೊ ಳ್ಳಲು. ಹೊಲಸು ! ಹೇಸಿ ! ಬಡವರು ಬಡತನದಿಂದ ತನ್ನ ಜೀವನವನ್ನು ಹೇಸಿ ಮಾಡಿಕೊಂಡರೆ, ಸಿರಿವಂತರು ಸಿರಿತನದಿಂದ ತಮ್ಮ ಜೀವನವನ್ನು ಹೇಸಿ ಮಾಡಿಕೊಳ್ಳುವರು. ಇಬ್ಬರಿಗೂ ಧರ್ಮದ ಆಧಾರ ! ಆ ಧರ್ಮವೆ ಇಂದು ತನ್ನನ್ನು ಮನೆಗೆಳೆಯಬೇಕೆನ್ನುತಿದೆ, ಆ ಧರ್ಮವೇ ತನಗಿಂದು 'ಬಡವರು ಬಡತನದಲ್ಲಿ ಸಾಯಲಿ ನೀನು ನಿನ್ನ ಸಿರಿವಂತಿಕೆ ಯಲ್ಲಿ ಸಾಯುವೆಯಂತೆ ' ಎನ್ನುತ್ತಲಿದೆ, ಆ ಧರ್ಮವೆ ಕುಲಕರ್ಣಿ ಯನ್ನು ತುಳಜಿಯ ತಂದೆಯನ್ನಾಗಿ ಮಾಡಿದೆ, ಅದೇ ಧರ್ಮವೆ ತಿನ್ನು ವಾಗ 'ಗೋವಿಂದ ಗೋವಿಂದ,' ತೇಕುವಾಗ 'ಶ್ರೀಹರಿಯ ಇಚ್ಛೆ' ಎನ್ನಿ ಸುತ್ತಲಿದೆ. ತನಗೇನೂ ಬೇಡ, ಧರ್ಮ ಬೇಡ, ಮಡದಿ ಬೇಡ, ಮಕ್ಕಳೂ ಬೇಡ—ಎಂದರೆ ಸದ್ಯದ ಧರ್ಮ ಬೇಡ, ಸದ್ಯದ ಮಡದಿ ಬೇಡ, ಅವಳಲ್ಲಿ ಮಕ್ಕಳು ಬೇಡ. ಬೇಕಾದಾಗ ನೋಡೋಣ, ಸದ್ಯಕ್ಕೆ ಇದಾವುದೂ ಬೇಡೆಂದು ಹೇಳೋಣ. "ನನಗೇನೂ ಬೇಡ " ಎಂದನು ಮತ್ತೆ ನಾರಾ ಯಣನು.

ಶ್ರೀನಪ್ಪನಾಯಕನಿಗೆ ಬೇಜಾರವಾಯಿತು, ತಡೆಯದಾಯಿತು. ಕುಲಕರ್ಣಿ–ಕೃಷ್ಣಾಚಾರಿಯರು ಹುಬ್ಬು ಏರಿಸಿ ಒಬ್ಬರನ್ನೊಬ್ಬರು

ನೋಡಿದರು. ಶ್ರೀಹರಿಯು ಇಷ್ಟ ಕುಣಿಯುತ್ತಲಿದ್ದಿತು ಅವರ ಹುಬ್ಬು ಗಳಲ್ಲಿ. ನಾಯಕರ ಹುಬ್ಬು ಮಾತ್ರ ತಲೆಯೊಳಗೆ ವಿಚಾರಗಳನ್ನು ಕೆಣ ಕಲು ಹೊರಟಂತಿತ್ತು ಹಣೆಯ ಮಡಿಕೆಗಳ ಮಾರ್ಗವಾಗಿ.

"ಹಾಗಾದ್ರ ಏನ್ಮಾಡ್ಬೇಕಂತೀ ?" ಎಂದು ಕೇಳಿದರು ಮಗನನ್ನು.

"ಸಮಾಜ ಸೇವಾ ಮಾಡ್ತೀನಿ" ಎಂದನು ನಾರಾಯಣ.

"ಹಾಗಂದ್ರ ಏನು ನಿನ್ನ ತಲೆ !" ಎಂದು ತಮ್ಮ ತಲೆಯನ್ನೆ ತುರಿ ಸಿದರು ನಾಯಕರು.

ತಂದೆ–ಮಗನ ಕಾಳಗವು ತಟಸ್ಥಕ್ಕೆ ಬಂದಿತು. ಎಷ್ಟು ಸಲ ತಂದೆ 'ಏನು ಮಾಡುವೆ' ಎಂದು ಕೇಳಿದರೂ 'ಸಮಾಜ ಸೇವಾ' ಎಂದೆ ಉತ್ತರ ಕೊಡಬಹುದಾಗಿತ್ತು ನಾರಾಯಣ; ಆ ಮೇಲೆ ಅಷ್ಟು ಸಲ "ನಿನ್ನ ತಲೆ !" ಎನ್ನಬಹುದಾಗಿತ್ತು ಶೀನಪ್ಪನಾಯಕ. ಇಂತಹ ತಟಸ್ಥ ವೃತ್ತಿಯು ರಾಮಾಯ ಸ್ವಸ್ತಿ ರಾವಣಾಯ ಸ್ವಸ್ತಿ ಎನ್ನುವ ಕುಲಕರ್ಣಿಗೆ ಒಪ್ಪುವುದು ಹೇಗೆ ?

"ಸಮಾಜ ಸೇವಾ ಮಾಡಲಿ. ಆದ್ರ ಹೆಂಡ್ತೀನ್ನ ಬಿಟ್ರ ಮುಂದ ಆಡಿಕೊಳ್ಳಲಿಕ್ಕಿಲ್ಲ ?" ಎಂದು ಅವನು ನಾಲಗೆ ಚಾಚಿದನು.

"ಮೊದಲು ಅವರಿಗೆ ಆಡಿಕೊಳ್ಳಲಿಕ್ಕೆ ಒಂದು ವಿಷಯ ಕೊಟ್ಟು ಆ ಮ್ಯಾಲ ಸುರೂ ಮಾಡ್ತೀನಿ ಸಮಾಜಸೇವಾ." ಹೀಗೆ ಹೇಳುವಾಗ ನಾರಾಯಣನ ದನಿಯಲ್ಲಿ ತಿರಸ್ಕಾರದ ಕರ್ಕಶತನವಿದ್ದಿತು.

"ಎಲ ! ಎಂಥಾ ಮಾತಿದು ! ಮನೀ ಹೆಂಡಿರು-ಮಕ್ಕಳನ್ನ ಬಿಟ್ಟು ಸಮಾಜಸೇವಾ ಅನ್ನೋದು !"

"ಮಂದಿ ಹೆಂಡಿರು-ಮಕ್ಕಳದೆಲ್ಲಾ ಮನೀಯವರಂತಿಳ್ಕೊಂಡು ಕಾಳ್ಜೀ ಮಾಡೋದೇ ಸಮಾಜಸೇವಾ." ನಾರಾಯಣನಿಗೆ ಒಮ್ಮೆಲೆ ಆಶ್ಚರ್ಯವಾಯಿತು ತನ್ನ ಮಾತಿಗಾಗಿ. ಇದುವರೆಗೆ ಇದೇ ಮಾತನ್ನೇ ಹೇಳಬೇಕೆಂದಿದ್ದನು. ಆದರೆ ಸರಿಯಾದ ಶಬ್ದಗಳು ಸಿಕ್ಕಿರಲಿಲ್ಲ. ನಿಜ. ಇದೇ ನಿಜವಾದ ಮಾತು. ಮಂದಿಯವರನ್ನೆಲ್ಲ ಮನೆಯವರಂತೆ ಭಾವಿಸಿ ಕೊಂಡು ವರ್ತಿಸುವದೇ ಸರಿಯಾದ ದಾರಿ. ಸ್ವಾರ್ಥವು ಎಷ್ಟಾದರೂ ಬಿಟ್ಟದ್ದಲ್ಲ. ಮಾಡುವ ಕೆಲಸ ತನ್ನದೇ ಎನ್ನದ ಹೊರತು ಆ ಕೆಲಸದಲ್ಲಿ

ಆಸಕ್ತಿಯಾಗುವುದಿಲ್ಲ, ಅವಿಶ್ರಾಂತ ಪರಿಶ್ರಮವಾಗುವುದಿಲ್ಲ; ಮುಂದಿಯ ಹಿತವೇ ತನ್ನ ಹಿತ ಎನ್ನುವ ಹೊರತು ಮುಂದಿಗಾಗಿ ದುಡಿಯುವುದಾಗುವುದಿಲ್ಲ. ನಮ್ಮಲ್ಲೂ ಇದೇ ಮಾತನ್ನೇ ಹೇಳಿದೆ, ಅವರೆ ಧರ್ಮಗ್ರಂಥಗಳಲ್ಲಿ ಹೇಳಿದೆ. ಸ್ವರ್ಗ-ನರಕ ಮೋಕ್ಷ-ಬಂಧನಗಳನ್ನು ಸಂಬಂಧಿಸಿದ ನುಳ್ಳಿನ ಸೂತ್ರಗಳಲ್ಲಿ ಸೇರಿಸಿದೆ. ಆದಕಾಗಿ ನಾರಾಯಣನಿಗೆ ಈ ಮಾತು ಮೊದಲಿಗೆ ಒಪ್ಪಿಗೆಯಾಗಿರಲಿಲ್ಲ, ಈಗ–ತನ್ನ ಅನುಭವದ ತರುವಾಯ–ಒಪ್ಪಿಗೆಯಾಯಿತು ಅವನಿಗೆ. ಚತುರಂಗಡಿಯಲ್ಲಿ ದುಡಿಯುವುದಕ್ಕಾಗಿ ನುಳ್ಳ ಸಮಾಧಾನವನ್ನು ಇನ್ನೆಂದಿಗೂ ತಂದುಕೊಳ್ಳುವುದಿಲ್ಲ, ನನ್ನ ತಂದೆಯು ಊರಿಗೆ ತಿರುಗುವಾಗ ಅವರ ಕಣ್ಣೆದುರಿನಲ್ಲಿಯೆ 'ಮಾಣಿ'ಯಾಗಿ ಮೆರೆಯುವೆನು—ಎಂದುಕೊಂಡನು. ತುಳಜಿಯು ಕೂಡ ಮಾತನಾಡಲು ಇನ್ನು ನಾಚುವುದಿಲ್ಲ, ಅವಳೂ ನಮ್ಮೆಲ್ಲರ ಬಳಗದವಳೆ, ನನ್ನ ತಂದೆ ಊರಿಗೆ ಹೋಗುವಾಗ ಅವಳು ಅಂಗಡಿಯಲ್ಲಿದ್ದರೆ ಅವಳೊಡನೆ ಮಾತನಾಡುತ್ತ ನಿಲ್ಲುವೆ ನನ್ನ ತಂದೆಯು ನರಿಗೆ ಒಡೆದು ಕಾಣುವಂತೆ—ಎಂದುಕೊಂಡನು. ಒಂದು ತರದ ದರ್ಪದ ಕಳೆ ಮೂಡಿತು ಅವನ ಮುಖದಲ್ಲಿ. "ಪ್ರಿಂಕ್ಕವರ ಹೆಂಡರು–ಮಕ್ಕಳಡೆಲ್ಲಾ ಮನೀಯವರಂತೆ ತಿಳ್ಕೊಂಡು ಕಾಳ್ಜೀ ಮಾಡೋದೇ ಸಮಾಜಸೇವಾ" ಎಂದು ಮಾತಿನ ಭರದಲ್ಲಿ ತನ್ನ ಬಾಯಿಯಿಂದ ಹೊರಬಿದ್ದ ಶಬ್ದಗಳನ್ನು ಒಂದೊಂದಾಗಿ ಮುತ್ತಿನಂತೆ ಎತ್ತಿ ಬುದ್ಧಿಯ ಬೆಳಕಿನಲ್ಲಿ ಮತ್ತೆ ಮತ್ತೆ ಪರೀಕ್ಷಿಸುತ್ತ ನಿಂತುಕೊಂಡನು.

"ಆದಕ ಚಹಾದಂಗಡೀವಳಗ ಕಪ್ಪು–ಬಸಿ ತೊಳೀತೀಯಾ?"

ತಂದೆಯು ಮಾತಿನ ಕಡೆಗೆ ನಾರಾಯಣನ ಲಕ್ಷ್ಯವೆ ಇದ್ದಿರಲಿಲ್ಲ.

"ಈಗ ನೀನು ಸಂಭಾವಿತತನದಿಂದ ಊರಿಗೆ ಒರದಿದ್ರ ಊರೊಳಗ ಮುಖ ಎತ್ತಲಾರದ್ಹಾಂಗ ಆಗ್ತದ ನನ್ನ ಸ್ಥಿತಿ."

ಈ ಸಲ ಕೇಳಿಸಿತು ನಾರಾಯಣನಿಗೆ ತಂದೆಯ ಮಾತು. ಅವರೆ ದಿನದಿನಕ್ಕೆ ಮುಪ್ಪಿನಿಂದ ಕಳೆಗೆಡುವ ತನ್ನ ತಂದೆಯ ಮುಖವು ನಣ್ಣಗಾದ ಸಂಭಾವಿತರಿಗೆ ಕಾಣಿಸದ ಪಕ್ಷದಲ್ಲಿ ಅಷ್ಟೇನು ಯಾರಿಗೂ ಹಾನಿ ತಟ್ಟಲಿಕ್ಕಿಲ್ಲ ಎಂದು ಸಮಾಧಾನಸಿದ್ದನು.

"ಮದಿವೆಗೆ ಮಾಡಿದ ರೆಚ್ಚ ಮಣ್ಣುಗೂಡಿಸಿದ್ಹಾಂಗ ಆಯ್ತು." ನಾಯಕರು ನಡಗುವ ದನಿಯಿಂದ ನುಡಿದರು.

ಗುಡ್ಡದ ನೀರು ಸಮುದ್ರ ಸೇರಿತು—ಎಂದುಕೊಂಡು ಮತ್ತೂ ಸುಮ್ಮನಿದ್ದನು ನಾರಾಯಣನು.

"ಏಲ! ಎಂಥಾ ಮಾತಿದು! ಖರ್ಚ ಏನು ಕಡಿಮಿ ಆಗಲಿಲ್ಲ, ರಂಗ ಣ್ಣಾಪರ, ಮೂರು ಘೂಮದ ಮದಿವಿ!"

"ಇದೇನ್ಹೇಳ್ತೀರಿ? ನಾಯಕರ ಮನೆತನ ಸಣ್ಣದs? ಯಥಾ ಪ್ರಕಾರ—"

"ಎಲ! ಎಂಥಾ ಮಾತಿದು! ನಮ್ಮ ರಾಯರು ಹಿಂದ್ಮಂದ ನೋಡವರಲ್ಲ ಮದಿವೀಮುಂಜೀ ಪ್ರಸಂಗಕ್ಕ!"

ಇವೇ ಮಾತುಗಳನ್ನು ಕೇಳಿ ಪಕ್ಕಿಯಂತೆ ಹಾಡುತ್ತ ಹಾರಾಡುತ್ತ ಆಕಾಶಕ್ಕೆ ನೆಗೆಯುತ್ತಿದ್ದ ನಾಯಕರ ಮನಸ್ಸು ಈಗ ಮಳೆಹುಳುವಿ ನಂತೆ ಮುದುಡಿತು.

"ಅದೆಲ್ಲ ಆಯ್ತು. ಮಾಡಿದ್ದು ಮುಪ್ಪಿನೊಳಗ ಭೋಗಿಸೋ ಭಾಗ್ಯ ಬೇಕಲ್ಲ" ಎಂದರು ನಾಯಕರು; ಉಗುಳ್ನುಂಗಿದರು.

ನಾರಾಯಣನಿಗೆ ಹೆದರಿಕೆಯಾಯಿತು. ಹಿಮಾಲಯದಲ್ಲಿ ಬರ್ಫ (ಹಿಮ) ಕರಗಹತ್ತಿತು, ಇನ್ನು ಗಂಗೆಗೆ ಪೂರ ಬರುವುದೆಂಬ ಹೆದರಿಕೆ ಯಾಯಿತು. ಆದಷ್ಟು ಬೇಗ ನಿವಾರಣೋಪಾಯವೆಂದು ಇಲ್ಲಿಂದ ಕಾಲ್ತೆಗೆಯಬೇಕೆಂದನು.

"ರಾಯರ ಮನಸಿನಾಗ ಏನದs ನೊ ಏನೊ," ಎಂದು ನಾರಾ ಯಣನನ್ನು ನೋಡುತ್ತ ಕುಲಕರ್ಣಿಯು ಪೂರ ತಡೆಯಲು ಭಗೀರಥ ಪ್ರಯತ್ನ ನಡೆಸಿದನು, "ಅದ್ರ ನನಗ ಖಾತ್ರೀ ಅದ ಅವರ್ಮನಸು ಬದ ಲಾಗ್ತದ ಅಂತ. ಬೇಕಾದರ ನಾಯಕರು ತಮ್ಮ ಸೊಸೀನ್ನಲ್ಲೇ ಕಳಿಸಿ ಬಿಡಿಸಲಿ, ಬೇಕಾದ್ರ ನಮ್ಮನ್ನೀಗ ಕಳಿಸಲಿ ———"

ಒಂದೇಟಿಗೆ ಕುಲಕರ್ಣಿಯ ಕುತ್ತಿಗೆ (ಕತ್ತು) ಹಿಚುಕಬೇಕು ಎಂದೆ ನ್ನಿಸಿತು ನಾರಾಯಣನಿಗೆ. ಆದರೆ ಆ ಭಾಗ್ಯದೊರೆಯಲಿಲ್ಲ. ಕುಲಕರ್ಣಿಯ ಮಾತನ್ನು ಕೃಷ್ಣಾಚಾರಿಯೆ ಮುಗಿಯಗೊಡಲಿಲ್ಲ. "ಎಲ! ಎಲ!

ಎಂಥಾ—ಎಂಥಾ ಮಾತಿದು ! ತಮ್ಮ ಅಳಿಯ ಚಹಾದಂಗ್ಡೀನಾಗ ಕೆಲಸ ಮಾಡ್ತಾನ ಅಂತ ಗೊತ್ತಾದರ ನಮ್ಮ ರಾಯ್ರು ಎಂದಿಗೂ ಕಳಿಸ್ಕೊಡಲಿಕ್ಕಿಲ್ಲ ಮಗಳ್ನ. ಎಲ! ಎಂಥಾ–ಎಂಥಾ ಮಾತಿದು ಅಂತೀನಿ?"

ಮುತ್ತಿನಂಥಾ ಮಾತು — ಎಂದುಕೊಂಡನು ನಾರಾಯಣನು ಮನಸಿನಲ್ಲಿಯೆ.

"ಅಲ್ಲ, ಆಚಾರ್ರು, ಅದಲ್ಲ ನಾನು ಹೇಳೋದು. ಚಹಾದಂಗ್ಡೀ ಒಳಗಿನ ಕೆಲಸ ಏನು ? ಸಮಾಜಸೇವಾ ಅಂತ್ಹೇಳ್ತಾರ ತಾವಾಗಿಯೆ. ಈಗಿನ ದಿವಸಕಾಲೇ ಬದಲಾಗೇದ. ಇಂಥಾ ಸಣ್ಣಾ ಪುಟ್ಟಾ ಮಾತು ನಡೀತಾವ, ಹಅಂಗೇ. ನಮ್ಮ ಆ ಇವರ ಮಗ ಇಲ್ಲs—ಅ-ಆ ಇವರು ಇದ್ದಾರ ನೋಡ್ರಿ – ಆ ಹುಡುಗ ವಿಲಾಯ್ತೀ ( ಸೀಮೆ ) ಗೆ ಹೋಗಿ ಬಂದಾನಲ್ಲ–ಆ ಹುಡುಗ ಪ್ಯಾಂಟೊಳಗ ಅಂಗಿ (ಷರ್ಟ) ಹಾಕ್ಕೊಂಡೇ ಊಟಾ ಮಾಡ್ತಾನಂತ – ಛೀ !— ಅಮಲ್ದಾರ್ರು ಸಮಾಜಾದ್ಗ ಹಂಗೇ (ಹಾಗೇ) ಮಾಡ್ಬೇಕಾಗ್ತದಂತ.... ನಡೀತಾವ ಇಂಥಾ ಸಣ್ಣಾ ಪುಟ್ಟಾ ಮಾತು. ಅದಲ್ಲ, ನಾ ಹೇಳೋದು———"

"ಅಮಲ್ದಾರ್ರು ಆದ್ರೇನಾಯ್ತು ? " ಕೃಷ್ಣಾಚಾರಿಯು ಸಂಭವಾವಿ ಯಂಗೇ ಯಂಗೇ ಎಂದು ಹೇಳಿದ ಕೃಷ್ಣ ತಾನೇ ಎನ್ನುವಂತೆ ದರ್ಪದಿಂದ ಮಾತನಾಡಿದನು; "ಅಮಲ್ದಾರ್ರಾದ್ರು ಏ–ನಾ–ಯ್ತು ? ಅಂಗೀ ಹಾಕ್ಕೊಂಡು ಊಟಾ ಮಾಡಿದ್ರ ನರಕಕ್ಕ ಹೋಗೋವರೆ ? ರೌರವ ! ರೌರವ ನರಕ !! " ಕೃಷ್ಣಾಚಾರಿಯು ಸಿಟ್ಟು ಆಳತೆಗೆಟ್ಟಿತು, ಯಾಕೆಂದರೆ ಬನಿವ್ಯೆಯಲಿದ್ದ ತನ್ನ ಬೆನ್ನಿಗೆ ಏನೋ ಕಡಿಯುತ್ತಿದೆ,ಕೈಗೆ ನಿಲುಕಲೊಲ್ಲದು. "ರೌರವ–ರೌರವ ಅಂದೆ? " ಎಂದು ಚಪ್ಪನೆ ಹಲ್ಲು ಕಚ್ಚಿ ತನ್ನ ಬೆನ್ನಿಗೊಂದು ಏಟು ಕೊಟ್ಟನು, ಕಡಿಯುವ ಹುಳು ಕೈಗೆ ಸಿಕ್ಕಿತ್ತು.

"ಅಲ್ರಿ, ಆಚಾರ್ರು, ಸತ್ತ ಮ್ಯಾಲ ಕೆಟ್ಟ ಭಾಗ್ಯ ಅಷ್ಟೇ ಅದ– ' ಎಂದು ಕುಲಕರ್ಣಿಯು ವಾದವನ್ನು ಮುಂದೆ ಸಾಗಿಸಿದನು. ಕೃಷ್ಣಾಚಾರಿಯ ಮಾತಿಗೆ ಉತ್ತರ ಕೊಡುವುದಕ್ಕಿಂತ ಶೀನಪ್ಪನಾಯಕರ ಮನಃಸ್ಥಿತಿಯ ಕಡೆಗೆ ಅವನ ಲಕ್ಷ್ಯ ಹೆಚ್ಚಾಗಿ ಇದ್ದಿತು. ನಾಯಕರು ಹತಾ

ಶರಾಗಿದ್ದಾರೆ, ಅವರಿಗೆ ಹುರುಪು ಕೊಡಬೇಕು ಎಂದು ಮತ್ತೊಂದು ಹಾದಿಯನ್ನು ಹಿಡಿದನು ಕುಲಕರ್ಣಿ; " ನತ್ತ ನಾಲ್ಲಿ ಚಿಟ್ಟಿ ಭಾಗ್ಯ ಅಷ್ಟೆ ಅದ. ನಂನಮ್ಮ ಹಣೆಯೊಳಗ ಬರೆದ್ದಾಂಗ ಆದೀತು—— "

" ಆದೀತೇನು ? **ಆಗಿಯೆ ಆಗ್ತದ** " ಎಂದು ಕುಂಭಕರ್ಣನ ಗುರಿಕೆಯಿಂದ ನಸ್ಯವನ್ನೇರಿಸಿದನು ಕೃಷ್ಣಾಚಾರಿ.

" ಹಂ – ಅದು ತನ್ನ ಆಗೋ ಹಾಂಗ ಆಗೇ ಆಗ್ತದ " ಎಂದು ಕುಲಕರ್ಣಿಯೂ ತಲೆ ತೂಗಿದನು. ಮುಖದ ಮುಂದೆ ನೊಣಗಳು ನುತ್ತಾಡುತ್ತಿದ್ದುದರಿಂದ ರಭಸದಿಂದಲೆ ತಲೆ ತೂಗಿದನು. ಒಳಗಿಂ ದೊಳಗೆಯೆ ಸಿಟ್ಟು ಬಂದಿತು ಕುಲಕರ್ಣಿಗೆ—ತನ್ನ ಹೆಂಡತಿಯ ಮೇಲೆ. ಹುಡುಗರ ಕೈಯಲ್ಲಿ ಬೆಲ್ಲವನ್ನೂ ಸಕ್ಕರೆಯನ್ನೂ ತಿರುಗಾಡುತ್ತ ತಿನ್ನಲು ಕೊಡಬೇಡ ಎಂದು ಎಷ್ಟು ಸಲ ಹೇಳಿಲ್ಲ ಆಕೆಗೆ ? ತಿಳಿಯು ವುದೇ ಇಲ್ಲ ! ಮನೆ ತುಂಬ ಬೆಲ್ಲ, ಸಕ್ಕರೆ ! ನೊಣಗಳು ಮುತ್ತು ವುವು. ಮತ್ತೂ ತಲೆ ಜಾಡಿಸಿದನು. " ಆಗೇ ಆಗ್ತದ .... ಆದ್ರೂ ಇದ್ದಾಗ ಯಾಕ ನಾಲ್ಕ ಮಂದೀಯಿಂದ ಆಡಿಸಿಕೊಳ್ಳೇಕೂ ಅಂತ. ಹೌದಂತೀರೊ ಇಲ್ಲಂತೀರೊ—ಅಂ ? "

ಕೃಷ್ಣಾಚಾರಿಯು ಎರಡೂ ಅನ್ನಲಿಲ್ಲ. ಬೇಟೆಯ ವಾಸ ಬಡೆ ಯಿತು ಕೆರಳಿದ ಸಿಂಹಕ್ಕೆ. ಒಳಗಿನಿಂದ ಯಾವುದಕ್ಕೊ ಒಗ್ಗರಣೆ ಕೊಡುವ ವಾಸ ಬಡೆಯಿತು ಬ್ರಾಹ್ಮಣನ ನಾಸಿಕರಂಧ್ರಕ್ಕೆ. ಯೋಗ ಬಲದಿಂದ ಆ ವಾಸ ಬ್ರಹ್ಮರಂಧ್ರಕ್ಕೇರಿತು. ಕ್ಷಣಮಾತ್ರ ಬ್ರಹ್ಮ ಸಾಕ್ಷಾತ್ಕಾರವಾದಂತಾಯಿತು. ಭಕ್ತನ ಬಾಯಿಗೆ ನೀರು ಬಿಟ್ಟಿತು. ತತ್ವಜ್ಞಾನದ ರಸವೇ ಇಳಿಯಹತ್ತಿತು.

" ಈ ಕಲಿಯುಗದೊಳಗ ಯಾವ ರಂಡೇಮಕ್ಕಳು ಹ್ಯಾಂಗ ಇರ್ತಾರ ನಮಗೇನ್ಮಾಡೋದು ? ನಮ್ಮಷ್ಟಕ್ಕ ನಾವು ಸ್ನಾನ–ಸಂಧ್ಯಾ ವಂದನೆ ಮಾಡ್ಕೊಂಡು, ಇದ್ದ ಒಂದ್ಹಿಡಿ ಬೇಳೆ–ಬೆಲ್ಲ ಶ್ರೀಹರಿಗೆ ನೈವೇದ್ಯ ಅರ್ಪಿಸಿ ತಿಂದ್ಕೊಂಡು ಬದುಕಿದರಾಯ್ತು " ಎಂದು ದೋತರದ ಮೇಲೆ ಬಿದ್ದ ನಸ್ಯದ ಪುಡಿಯನ್ನು ಜಾಡಿಸಿಕೊಂಡನು.

ಸಂದರ್ಭ ತಿಳಿದು ಕುಲಕರ್ಣಿಯೂ ಗಡಬಿಡಿ ಮಾಡಿದನು.

"ಹಂ, ಅದೇ ಅಂತೀನಿ ನಾನೂ; ಇರೋತನಕ ಮುಂದೀ ಕಡಿಂದ ಆಡಿಸ್ಕೊಳ್ಳೋ ಹಾಂಗ ಯಾಕ ಮಾಡ್ಬೇಕು?"

"ನಮ್ಹಣೇಬರಹ, ರಂಗಣ್ಣಾವರ, ನಮ್ಹಣೇಬರಹ!" ಎಂದು ನರಳಿದರು ನಾಯಕರು.

ಕುಲಕರ್ಣಿಗೆ ಬಹಳೇ ವ್ಯಥೆಯಾಯಿತೊ ಏನೊ— ನಾಯಕರ ಮನ ನೊಂದುದಕ್ಕೆ. "ಛೆ–ಛೆ–ಛೆ, ನಿಮಗಲ್ಲ. ನಿಮಗ್ಯಾರು ಏನು ಅನ್ನುವವರು——"

"ಎಲ! ಎಂಥಾ ಮಾತಿದು!" ಆಚಾರ್ಯನಿಗೆ ಮಾತು ಮುಗಿಸಬೇಕಾಗಿತ್ತು.

"ನಿಮಗ್ಯಾರು ಏನು ಅನ್ನೋವವರು? ಆದ್ರ—" ನಾರಾಯಣನನ್ನು ಕಡೆಗಣ್ಣಿನಿಂದ ನೋಡುತ್ತ ಮಾತನಾಡಿದನು ಕುಲಕರ್ಣಿ, "—ಆದ್ರ, ನಾರಾಯಣಾರ್ಯರಿಗೆ ಹೇಳ್ತೀನಿ—ಅಲ್ಲ— ಮುಂದಿ ಅಂದಾರು ಅಂತ— ಯಾಕಂದರೆ ನಮಗೆಲ್ಲಾ ಗೊತ್ತಿರ್ತದ ಅನ್ನಿರಿ—ನಮ್ಮ ವಿಶ್ವಾಸ ಕೂಡ್ಲಿಕ್ಕಿಲ್ಲಾ ಅನ್ರಿ—ಆದ್ರ—ಯಾಕರೀ, ಕೃಷ್ಣಾಚಾರ್ರ?— ನಿಮ್ಮಾರ್ಯರಿಗೆ ಕೆಟ್ಟ ಅನಿಸಲಿಕ್ಕಿಲ್ಲ ತಮ್ಮ ಅಳಿಯಂದ್ರಿಗೆ ಮುಂದಿ ಆಡ್ಕೊಂಡ್ರ?—— ಯಾಕಂದ್ರ-- ಮುಂಜಾನೆ ನೀವೇ ನೋಡಿದರಲ್ಲ – ಎಷ್ಟಾದ್ರೂ ಶೂದ್ರರಾಕೆ!-– ಅಲ್ಲ, ನುಳ್ಳೇ ನಾರಾಯಣಾರ್ಯರ ಮ್ಯಾಲ ಅಪವಾದ ಬಂದ್ರ——"

ನಾರಾಯಣನು ತಟ್ಟನೆ ಎದ್ದು ನಿಂತನು.

"ಉಹುಂ -- ಅಪವಾದ **ಬಂದ್ರ** ಅಂತೀನಿ – ಅದಕ್ಕ ಮನೀಯವರ್ನ ಇಲ್ಲಿ ಕರಿಸಿಬಿಟ್ರಿ – ಯಾಕಂದ್ರ – ಮುಂದೇನು ಮಾತಾಡಿದ್ರೂ ಅಷ್ಟೇ – ಹೌದಲ್ಲೊ?– ಯಾಕಂದ್ರ – ಇಲ್ಲಾ ಅಂದ್ರ – ಒಂದು ಕೆಟ್ಟ ಶೂದ್ರ ಹೆಂಗಸಿನ ನಿಮಿತ್ತ----ಅಂದ್ರ, ಅಪವಾದ ಬಂದ್ರ——"

"ಬಂದರೆ ನಾನು **ನಿಮ್ಮ ಅಳಿಯ** ಆದಂತೆ. ಅಲ್ಲನ?" ಎಂದನು ನಾರಾಯಣನು.

ನಾಯಕರೂ ಆಚಾರ್ಯನೂ 'ಆಂ! ಎಲ!' ಎಂದರು ಸ್ವರಗೂಡಿಸಿ. ಕುಲಕರ್ಣಿಯೂ ಹೊರಗೆ ನೋಡುತ್ತ 'ಆಂ! ಎಲ! ಹಲ್ಯಾ!

ಏ — ಯಾರಿದ್ದೀರೊ ಇಲ್ಲೊ ಮನೆವಳಗ ? — ಯಾರದೊ ಎಷ್ಮ್ಯ ಹೊಕ್ಕಿತು ಮನೀವಳಗ – ತುಳಸೀ ಮುಟ್ಟೀತರೊ !– ಏ — ಹತ್ — ಛೂ — ಏ — ' ಎಂದು ಗದ್ದರಿಸುತ್ತ ಆರ್ಭಟಿಸುತ್ತ ಒಂದೇಟಿಗೆ ಹೊರಗೋಡಿದನು.

* * * *

ಮಧ್ಯಾಹ್ನ. ಗಿಡಗಳು ಬೀಸಿದರೆ ಉಸಿರಾಡಿಸುವ ಭೂದೇವಿಗೆ ಜ್ವರ ಬಂದಂತೆ ಭಾಸವಾಗುವುದು; ಗಿಡಗಳು ಬೀಸದಿದ್ದರೆ ಬಂದ ಜ್ವರ ಇಳಿಯುವಂತೆ ಮೈಗೆ ಬೆವರೊಡೆಯುವುದು. ಹಕ್ಕಿಗಳು ಕೂಡ ಸದ್ದಿಲ್ಲದೆ ಗಿಡಗಳ ಹೂದರಿನಲ್ಲಿ ತಮ್ಮ ಗೂಡುಗಳಲ್ಲಿ ಸೇರಿಕೊಂಡಿವೆ. ಗಿಡದ ನೆರಳಿನ ಕೆಳಗಿನಿಂದ ಶಕ್ಯವಾದಾಗ ಮೇಲೆ ನೋಡಿದಲ್ಲಿ ಬಿಸಿಲಿನಂತೆ ಕ್ರೂರವಾದ ಒಂದು ಗಿಡಗ, ಒಂದು ಹದ್ದು, ಒಂದು ರಣಹದ್ದು ಅಲ್ಲಲ್ಲಿ ಆಕಾಶದಲ್ಲಿ ರೆಕ್ಕೆ ಒಡೆಯದೆ ತೂಗುತ್ತ ತೇಲುತ್ತ ಸಾಗುತ್ತಿರುವುದು ಕಂಡು ಬರುವುದು. ಚಿಕ್ಕವನಿದ್ದಾಗ ಊರಹೊರಗಿನ ಬಯಲಿನಲ್ಲಿ ಒಮ್ಮೆ ರಣಹದ್ದನೊಂದನ್ನು ನೋಡಿದ್ದನು ನಾರಾಯಣನು. ಕೊಳೆತು ಬಿದ್ದ ಪ್ರಾಣಿಗಳ ದೇಹಗಳನ್ನು ತಿನ್ನುವ ಆ ಕ್ರೂರ ಹಕ್ಕಿಯನ್ನು ನೋಡಿ ಹೆದರಿದ್ದನು. ತಿರುಗಿ ಊರೊಳಗೆ ಬರುವಾಗ ಹೊಲಗೇರಿಯ ಸಮೀಪದಲ್ಲಿಯೆ ಹಾಯ್ದು ಬಂದಿದ್ದನು. ಅಲ್ಲಿಯೂ ಕೊಳೆತು ಬಿದ್ದಿವೆ ದನದ ಕೆಲವು ದೇಹಗಳು. ಅವುಗಳನ್ನು ಕುಕ್ಕುತ್ತಿದ್ದಾರೆ, ಚುಚ್ಚುತ್ತಿದ್ದಾರೆ, ಇರಿಯುತ್ತಿದ್ದಾರೆ, ಹರಿಯುತ್ತಿದ್ದಾರೆ, ತಿವಿಯುತ್ತಿದ್ದಾರೆ, ತಿನ್ನುತ್ತಿದ್ದಾರೆ ಕೆಲವರು **ಮ–ನು–ಷ್ಯ–ರು !** ಮೂಗು ಮುಚ್ಚಿಕೊಂಡು, ಜನಿವಾರವನ್ನು ಮುಟ್ಟಿಕೊಂಡು ನೋಡಿದ್ದನು ನಾರಾಯಣನು. ಮನುಷ್ಯರಿದ್ದಿಲ್ಲ ಅವರು, ಹೊಲೆಯರಿದ್ದರು. ಹೊಲೆಯರಿಗಾಗಿ ಮೊದಲೆ ಹೇಸುತ್ತಿದ್ದ ನಾರಾಯಣನಿಗೆ ಅವರನ್ನು ನೋಡಿ ಹೆದರಿಕೆಯೂ ಬಂದಿತ್ತು. ಮನೆಗೆ ಓಡಿದ್ದನು, ಯಾರಿಗೂ ಹೇಳಿದ್ದಿಲ್ಲ, ಹೊಲಗೇರಿಯ ಸಮೀಪದಲ್ಲಿ ಹಾಯ್ದು ಬಂದುದಕ್ಕೆ ಸ್ನಾನವನ್ನು ಮಾಡಿದ್ದಿಲ್ಲ; ಅದಕಾಗಿ ರಾತ್ರಿಯೆಲ್ಲಾ ಹೆದರಿದ್ದನು, ಬ್ರಹ್ಮರಾಕ್ಷಸನು ಬಂದು ತನ್ನನ್ನು ಎತ್ತಿಕೊಂಡೊಯ್ಯಬಹುದೆಂದು. ಮರುದಿವಸದ ಸೂರ್ಯನು ಎಂದಿನಂತೆ

ಮೂಡಿಸುದರಿಂದ ಮುಂದೆ ಆ ಸಂಗತಿಯೆ ಮರೆತು ಹೋಗಿತ್ತು ನಾರಾಯಣನಿಗೆ. ಇಂದು—ತಂದೆಯ ಎದುರಿನಲ್ಲಿ ಕಸಲಿ, ಕುಲಕರ್ಣಿಯ ಊಟ ತಪ್ಪಿಸಿ, ಒಬ್ಬನೇ ದೂರ ನಡೆದು ಬಂದು, ನಿಶ್ಶಬ್ದವಾದ ಈ ಮಧ್ಯಾಹ್ನದಲ್ಲಿ ಗಿಡಪಡಿಯಲ್ಲಿ – ನೆರಳಿನಲ್ಲಿ – ಬಿದ್ದುಕೊಂಡು ಆಗಾಗ ನುಳಿಯುವ ಗಿಡಗ—ರಣಹದ್ದುಗಳನ್ನು ನೋಡಿದಾಗ ಹುಡುಗನಿದ್ದಾಗಿನ ಆ ಅನುಭವದ ಸ್ಮರಣೆಯಾಯಿತು ನಾರಾಯಣನಿಗೆ. ಯಾರದೂ ಸುಳಿವಿಲ್ಲ. ಒಬ್ಬನೇ ಒರಗಿಕೊಂಡಿದ್ದಾನೆ. ಸ್ವಲ್ಪ ದೂರದಲ್ಲಿ ಇದ್ದ ಒಂದೆರಡು ಗಿಡಗಳ ನೆರಳಿನಲ್ಲಿ ಕೆಲವು ಎಮ್ಮೆ—ಆಕಳು ಮುಂತಾದ ದನಗಳು ಬಿದ್ದುಕೊಂಡಿವೆ. ನೆರಳಿನಲ್ಲಿ ಬಿದ್ದಿವೆ ಕೆಲವು. ಕೆಲವು ಬಿಸಿಲಿನಲ್ಲಿ ಬಿದ್ದಿವೆ. ಕಣ್ಣು ಮುಚ್ಚಿವೆ ಕೆಲವು, ಬಾಯಿ ನಾಡಿಸುತ್ತಲಿವೆ ಕೆಲವು, ಹುಳುಗಳನ್ನು ಜಾಡಿಸುತ್ತಲಿವೆ ಕೆಲವು, ಆರೆಗಣ್ಣಿನಿಂದ ಜೊಲ್ಲು ಸುರಿಸುತ್ತಲಿವೆ ಕೆಲವು, ತೀರ ತಟಸ್ಥವಾಗಿ ಬಿದ್ದಿವೆ ಕೆಲವು. ಸುಖ—ದುಃಖಗಳ ವಿವೇಕ ಬುದ್ಧಿ ಇಲ್ಲದ ದನಗಳು ಕೂಡ ಬಿಸಿಲಿಗೆ ಹೆದರಿ ಹಣ್ಣಾಗಿವೆ. ಇಂತಹ ಸಮಯದಲ್ಲಿ ಕೆಲವು ದನಕಾಯುವ ಹುಡುಗರು ಏನೊ ಒಂದು ಆಟವನ್ನಾಡುತ್ತಲಿದ್ದಾರೆ! ಈ ಹುಡುಗರು ಮೊಲೆಯರ ಜಾತಿಗೇ ಸೇರಿದುವಿರಬೇಕು, ಮನುಷ್ಯರಾಗಿದ್ದಾದರೆ ಈ ಬಿಸಿಲಿನಲ್ಲಿ—. ಎಲ್ಲಿಂದಲೊ ಒಂದು ನಾಯಿ ಬಂದಿತು. ನಾರಾಯಣನೂ ನೋಡಿದನು, ದನ ಕಾಯುವ ಹುಡುಗರೂ ನೋಡಿದರು. ಹುಡುಗರ ಜೊತೆಯಲ್ಲಿ ಬಂದ ಒಂದೆರಡು ನಾಯಿಗಳೂ ಅಲ್ಲಿಯೆ ಬಿಸಿಲಿಗೆ ಕಣ್ಣುಮುಚ್ಚಿಕೊಂಡು ನಾಲಗೆ ಹೊರಚಾಚಿ ತೇಕುವಂತೆ ಮಲಗಿಕೊಂಡಿದ್ದವು. ಹುಡುಗರು 'ಛೂ !', ಎಂದರು, ಮಲಗಿದ ನಾಯಿಗಳು ಕಣ್ಣು ಪಿಳುಕಿಸಿದುವು, ಹೊರಗಿನಿಂದ ಬಂದ ನಾಯಿಯು ತಡೆಯಿತು. ಮತ್ತೆ 'ಛೂ !' ಹುಡುಗರ ನಾಯಿಗಳು ಮಲಗಿದಲ್ಲಿಯೆ 'ಗುರ್' ಎಂದುವು, ಹೊಸ ನಾಯಿಯು ನಿಂತಲ್ಲಿಯೆ 'ಕುಂಯ್'ಎಂದಿತು. ಮತ್ತೆ 'ಛೂ!', ಸಾಕಿದ ನಾಯಿಗಳು ಮೊದಲಿಗಿಂತ ಜೋರಾಗಿ 'ಗುರ್' ಎಂದುವು, ಊರ ನಾಯಿ ಮೊದಲಿಗಿಂತಲೂ ಕನಿಕರವಾಗಿ 'ಕುಂಯ್' ಎಂದಿತು. ಮತ್ತೂ 'ಛೂ !'. ನಾರಾಯಣನಿಗೆ ಕರುಣೆ ಬಂದಿತು, ಎದ್ದು ಹೋಗಿ ತಡೆಯಬೇಕೆಂದ. ಆದರೆ ನಾಯಿಗಳು ಒಂದನ್ನೊಂದು ಶಬ್ದ

ನಿಲ್ಲದೆ ನೋಡುತ್ತಲಿದ್ದುವು. ಜಾತಿಗೆ ಜಾತಿ ಕೂಡಿತೇನೊ, ಇನ್ನೇನು ಭಯವಿಲ್ಲ ಎನ್ನುವಷ್ಟರಲ್ಲಿ—ಒಮ್ಮೆಲೆ ಗದ್ದಲ (ಗಲಾಟೆ), ಚೀರಾಟ, ಕೂಗಾಟ! ಬಾದ ನಾಯಿಯು ಬಾಲವನ್ನೂ ಕಾಲ್ಗಳನ್ನೂ ಹೊಟ್ಟೆಗೆ ಒಡೆದುಕೊಳ್ಳುತ್ತ ಕುಂಯ್‌ಗುಡುತ್ತ ಓಡಹತ್ತಿದೆ, ಹುಡುಗರ ನಾಯಿಗಳು ಬಾಯ್ದೆರೆದು ಬೊಗಳುತ್ತ ಬೆನ್ನುಹತ್ತಿವೆ, ಅವುಗಳ ಜೊತೆಯಲ್ಲಿ 'ಛೂ! ಛೂ!' ಎನ್ನುತ್ತ ಹುಡುಗರೂ ಓಡುತ್ತಿದ್ದಾರೆ. ನಾರಾಯಣನು ತಟ್ಟನೆ ಎದ್ದನು. ಅಷ್ಟರಲ್ಲಿ ಊರ ನಾಯಿಯು ಕಾಲ್ಗಳನ್ನು ಮುದುಡಿಕೊಂಡು ಬೆನ್ನು ಮೇಲೆ ಹೊರಳಾಡುತ್ತಲಿದೆ, ಎಂಕ್ಕ ನಾಯಿಗಳೂ ಸುತ್ತಲೂ ಬೊಗಳುತ್ತ ಕಚ್ಚುತ್ತಲಿವೆ, ಹುಡುಗರು ಕಯ್ಯೊಳಗಿನ ಬಡಿಗೆಗಳನ್ನು ನೆಲಕ್ಕೆ ಅಪ್ಪಳಿಸುತ್ತಲಿದ್ದಾರೆ. 'ಏ!' ಎಂದು ಗದ್ದರಿಸಿದನು ನಾರಾಯಣನು. ಅವನನ್ನು ನೋಡಿ ಹುಡುಗರು ಓಡಿದರು, ಹುಡುಗರನ್ನು ನೋಡಿ ಅವರ ನಾಯಿಗಳೂ ಓಡಿದುವು ಹಿಂದಿನಿಂದ. ಊರ ನಾಯಿಯೊಂದೆ ನರಳುತ್ತ ಬಿದ್ದಿತು. ನಾರಾಯಣನು ಮತ್ತೆ ಮಲಗಿಕೊಂಡನು. ಒಂದೆರಡು ನಿಮಿಷಗಳಾಗಿರಬಹುದು, ತಾನು ಮಲಗಿದ ನೆರಳಿನಲ್ಲಿಯೆ ಸ್ವಲ್ಪ ದೂರದಲ್ಲಿ ನರಳುವ ದನಿ ಕೇಳಿಸಿತು. ಹೊರಳಿ ನೋಡಿದನು. ಮೈಯ ಗಾಯಗಳನ್ನು ನೆಕ್ಕುತ್ತ, ನಾರಾಯಣನನ್ನು ನೋಡಿ ಹಿಂದೆ ಸರಿಯುತ್ತ, ತೋಯ್ದ ಕಣ್ಣುಗಳಿಂದ ನಾರಾಯಣನನ್ನು ಮೊರೆ ಇಡುವಂತೆ ನೋಡುತ್ತ ಬಿದ್ದುಕೊಂಡಿದೆ ಊರ ನಾಯಿ. ನಾರಾಯಣನು ಎದ್ದನು; ನಾಯಿಯೂ ಹೆದರಿ ಓಡಿಹೋಗಲು ಎದ್ದಿತು, ಶಕ್ತಿಸಾಲದೆ ಮುಗ್ಗರಿಸಿತು, ಜೀವದಾಸೆಯನ್ನು ತೊರೆದ ಕಣ್ಣುಗಳಿಂದ ನಾರಾಯಣನನ್ನು ನೋಡಹತ್ತಿತು. ಹತ್ತಿರ ಹೋದನು, ಬಾಗಿ ಮೈಮೇಲೆ ಕಯ್ಯಾಡಿಸಿದನು, ಆಗ ಅವನ ಕಾಲು ನೆಕ್ಕಿತು ಊರನಾಯಿ. ಮೈಮೇಲಿನ ಕೂದಲು ನೆಟ್ಟಗಾದಂತಾಯಿತು ನಾರಾಯಣನಿಗೆ. ತಟ್ಟನೆ ಕುಳಿತು ಬಿಟ್ಟನು ಅದರ ಪಕ್ಕದಲ್ಲಿ. 'ಹುಚ್ಚ!' ಎಂದನು. ಆ ನಾಯಿಗೇನು ಅರ್ಥವಾಯಿತೊ, ಗಂಭೀರ ಮುದ್ರೆಯಿಂದ ನೋಡಿತು ನಾರಾಯಣನನ್ನು. "ನೀನೂ ನಿನ್ನ ಸಮಾಜ ಸುಧಾರಿಸ್ಬೇಕಂತೀಯಾ?" ಎಂದು ತಲೆಯ ಮೇಲೆ ಕಯ್ಯಾಡಿಸಿದನು; ಮುಖವನ್ನೆತ್ತಿ ಅವನ ಅಂಗೈ

ಯನ್ನು ನೆಕ್ಕಿತು ನಾಯಿ. "ಅದ್ರ, ಎಂದ್ನಿಂದ ಮನುಷ್ಯನ ಕೈಕೆಳಗ ಹೇಳಿದ್ನ ಕೇಳ್ಕೊಂಡು ಬೆಳೆದು ಬಾಳೋದೇ ಬೇಕಾಗಿದೆ ನಿನ್ನ ಜಾತಿಯವರಿಗೆ. ನೋಡಿದೆಯೊ–ಇಲ್ಲೊ ?". ತನ್ನ ಮಾತಿಗೆ ನಾಯಿಯು ಬಾಲವನ್ನಲ್ಲಾಡಿಸುವುದನ್ನು ನೋಡಿ "ನಮ್ಮೂ ನಿಮ್ಮೂ ಗೆಳೆತನ ಇನ್ನು" ಎಂದು ಬೆನ್ನು ಚಪ್ಪರಿಸಿದನು ನಾರಾಯಣನು. ಗೆಳೆಯರಿಬ್ಬರೂ ತಮ್ಮ ತಮ್ಮ ವಿಚಾರಗಳಲ್ಲಿಯೇ ಮಗ್ನರಾದವರಂತೆ ಕೆಲಹೊತ್ತು ಸುಮ್ಮನಿದ್ದರು. ನಾರಾಯಣನಿಗೆ ಏನೋ ವಿಚಾರ ಹೊಳೆಯಿತು. ಅದನ್ನು ಹೇಳುವ ಆತುರತೆಯಿಂದ ಕೆಳಗೆ ನೋಡಿದನು. ಮುಂಗಾಲ್ಗಳ ನಡುವೆ ತಲೆಯನ್ನಿಟ್ಟುಕೊಂಡು ನಿದ್ದೆ ಹೋಗಿದ್ದಾನೆ ತನ್ನ ಗೆಳೆಯ ! ಬೆನ್ನ ಮೇಲಿನ ಕಯ್ಯನ್ನು ಸಾವಕಾಶವಾಗಿ ಮೇಲಕ್ಕೆತ್ತಿದನು ನಾರಾಯಣನು. ಸದ್ದು ಮಾಡದೆ ದೂರ ಸರಿದನು. ಸರಿದಲ್ಲಿಯೆ ಮುಖ ಮೇಲೆ ಮಾಡಿಕೊಂಡು ಅಡ್ಡಾದನು. ಆ ಹುಡುಗರ ಮೇಲೆ ಸಿಟ್ಟು ಬಂದಿತು ಅವನಿಗೆ. ದನಕಾಯುವುದನ್ನು ಬಿಟ್ಟು ಕಾರಣವಿಲ್ಲದೆ ಗತಿಗೆಟ್ಟ ನಾಯಿಯನ್ನು ಕೆಣಕುವುದೇಕೆ ? — ಯಾಕೇನು ? ಶಿಕ್ಷಣವಿಲ್ಲದುದಕ್ಕೆ, ಸಂಸ್ಕಾರವಿಲ್ಲದುದಕ್ಕೆ. ಎಷ್ಟೋ ದೇಶಗಳಲ್ಲಿ ಈ ವಯಸ್ಸಿನ ಹುಡುಗರನ್ನು ಶಾಲೆಗೆ ಕಳುಹಿಸುವರು. ನಮ್ಮ ದೇಶದಲ್ಲಿ ಹಾಗೆ ಯಾಕೆ ಮಾಡಬಾರದು ? ಒಕ್ಕಲತನವೆ ಪ್ರಧಾನ ವ್ಯವಸಾಯವಾಗಿದ್ದ ನಮ್ಮ ದೇಶದಲ್ಲಿ ದನಕಾಯುವವರು ಬೇಕೇ ಬೇಕೆಂಬ ಮಾತನ್ನು ಒಪ್ಪಿಕೊಂಡನು ನಾರಾಯಣನು; ಅದಕಾಗಿ ಬೇರೊಂದು ವ್ಯವಸ್ಥೆಯನ್ನೂ ಗೊತ್ತು ಮಾಡಿದನು. ಸದ್ಯಕ್ಕೆ ಚಿಕ್ಕ ಬಾಲಕರ ಶಾಲೆಗಳಲ್ಲಿ ಶಿಕ್ಷಕರಿದ್ದವರನ್ನು ಈ ಕೆಲಸಕ್ಕೆ ನಿಯಮಿಸಬೇಕು; ನಿರುದ್ಯೋಗಿಗಳಾದ ಸುಶಿಕ್ಷಿತ ತರುಣರನ್ನು ಚಿಕ್ಕ ಮಕ್ಕಳ ಶಾಲೆಗೆ ಶಿಕ್ಷಕರನ್ನಾಗಿ ನಿಯಮಿಸಬೇಕು. ದನಕ್ಕ ಹಿತಕರ; ವಯಸ್ಸಾದ ಶಿಕ್ಷಕರು ದನ ಬಿಟ್ಟುಕೊಟ್ಟು ಹೀಗೆ ಆಟವನ್ನಾಡುವುದಿಲ್ಲ. ಹುಡುಗರಿಗೂ ಹಿತಕರ, ಶಾಲೆಗಳಲ್ಲಿ ತಮ್ಮ ಜೊತೆಯಲ್ಲಿ ಆಡಲಿಕ್ಕೆ ಉತ್ಸಾಹದ ತರುಣ ಶಿಕ್ಷಕರು ಸಿಕ್ಕುವರು.... ನಾಯಿಯು ಇನ್ನೂ ನರಳುತ್ತಲಿದೆ ! ಪಾಪ ! ಅದಕ್ಕೆ ಎಷ್ಟು ನೋವಾಗಿರಬೇಕು ! ನೋವಾಗದಿದ್ದರೂ ಮೈ ಉರಿಯುವುದು ಈ ಬಿಸಿಲಿನಲ್ಲಿ.

ತನಗಂತೂ ಮುಂಜಾವಿನ ಸಂಗತಿಯಿಂದ ಹೊಟ್ಟೆಯೊಳಗೆ ಬೆಂಕಿ ಬಿದ್ದಂತಾಗಿದೆ, ಮೇಲೆ ಹೊಟ್ಟೆಯೊಳಗೆ ಊಟವಿಲ್ಲ. ಅಪವಾದ ಬರುವುದಂತೆ ತನ್ನ ಮೇಲೆ! ಬರಲೊಲ್ಲದೇಕೆ?....ಪಾಪ! ನಾಯಿ ಇನ್ನೂ ನರಳುತ್ತಲಿದೆ....ಮುಂಜಾವಿನಲ್ಲಿ ತಾನು ತಂದೆಯ ಮಾತನ್ನು ಕೇಳಿದ್ದರೆ ಈ ನಾಯಿಯ ಜೀವ ಉಳಿಯುತ್ತಿದ್ದಿತೆ? ಮುಂದಿಗಾಗಿ ನಾವೇಕೆ ಕಾಳಜಿ ಮಾಡುವುದು—ಅಂತೆ! ಮುಂದಿಗಾಗಿ ಕಾಳಜಿ ಮಾಡುವ ಗುತ್ತಿಗೆಯನ್ನು ದೇವನೇ ಹೊತ್ತಿದ್ದಾನಂತೆ!....'ಥೂ,—ಎಂದು ಮುಖವನ್ನೊರೆಸಿಕೊಂಡು ಮೇಲೆ ನೋಡಿದನು ನಾರಾಯಣನು, ಕಾಗೆಯೊಂದು ಹಾರಿಹೋಯಿತು. ಇದೆಂತಹ ಧರ್ಮವೋ!....ಎದ್ದು ಕುಳಿತನು....ನಮ್ಮ ಮೈಮೇಲಿನ ಹೊಲಸು ನಾವು ತೆಗೆಯಬಾರದೆಂದರೆ? ನಮಗೆ ಬೇಡ, ಅದನ್ನು ನಾವು ಬಿಟ್ಟುಬಿಡುವೆವು....ಅಪವಾದ ಬರುವುದಂತೆ ನನ್ನ ಮೇಲೆ!....ಮುಂದಿಯ ಕಾಳಜಿ ತಮಗೆ ಯಾಕೊ?....ಆಕಳಿಸಿದನು, ಮತ್ತೆ ಅಡ್ಡಾದನು.... ಇವರು ಹೇಳಿದಂತೆ ನಾವು ನಡೆಯಬೇಕು! ಅದೇ ಇವರ ಧರ್ಮ!.... ಮತ್ತೆ ಆಕಳಿಕೆ ಬಂದಿತು, ಎದ್ದು ಕುಳಿತನು; ನಿದ್ದೆ ಹೋದರೆ ಅಂಗಡಿಗೆ ಸರಿಯಾದ ವೇಳೆಗೆ ಹೋಗಲು ಅಡ್ಡಿಯಾಗಬಹುದು....ಮಲಗಿದರೆ ನಿದ್ದೆ ಬರುವುದು, ಎದ್ದು ಕುಳಿತರೆ ಕಣ್ಣು ಕುಕ್ಕುವುದು—ಎರಡೂ ತಾಪ. ನಮ್ಮ ಸಮಾಜದಂತಿದೆ ಈ ನಡುಮಧ್ಯಾಹ್ನದ ಬಿಸಿಲು. ಇದ್ದುದೂ ಪಾಪ, ತಿದ್ದುವುದೂ ಪಾಪ!............ ಕಣ್ಣು ಮುಚ್ಚುವುದೆ ಒಳಿತೊ ಏನೊ ಈ ನಡುಮಧ್ಯಾಹ್ನದಲ್ಲಿ!........ಮತ್ತೆ ಅಡ್ಡಾದನು....ನಡುಮಧ್ಯಾಹ್ನ.. ಅರೆಸಮಾಸವಂತೆ! ಒಂದು ಸಂಸ್ಕೃತ ಶಬ್ದ, ಒಂದು ಕನ್ನಡ ಶಬ್ದ....ಅವುಗಳನ್ನು ಕೂಡಿಸುವುದು ದೋಷವಂತೆ!....ಹಾಗಾದರೆ ಸರ್ವಸಾಮಾನ್ಯ ನಮ್ಮಲ್ಲಿ ಎಲ್ಲ ಮದುವೆಗಳೂ ದೋಷಗಳೆ....ನನ್ನಂತಹರ ಮದುವೆಯಂತೂ ಅಚ್ಚ ಅರೆಸಮಾಸ.... ಸಂಸ್ಕೃತ ಗಂಡನು, ಅಸಂಸ್ಕೃತ ಹೆಂಗಸು....ಇವರನ್ನು ಕೂಡಿಸುವುದು ಹೇಗೆ?....ಹೆಂಗಸರಿಗೆ ಶಿಕ್ಷಣ ಸಂಸ್ಕಾರಗಳನ್ನು ಕೊಡುವವರೆಗೆ ವಿವಾಹಪದ್ಧತಿಯನ್ನು ರದ್ದುಪಡಿಸಬೇಕು..ತುಳಜಿಯ ಉದಾಹರಣೆ ಇದೆಯಲ್ಲ? ಅವಳು ವಿವಾಹ ಪದ್ಧತಿಯನ್ನು—........

ನಾರಾಯಣನು ತಟ್ಟನೆ ಕಣ್ತೆರೆಸಿಕೊಂಡನು. ನಿದ್ರೆಯ ಭರದಲ್ಲಿ ವಿಚಾರವು ಮೇರೆ ಮೀರಿ ನಡೆದಂತೆ ಭಾಸವಾಯಿತು ಅವನಿಗೆ. ಎಂತಹ ಹುಚ್ಚ ತಾನು! ಮುಂಜಾವಿನಿಂದ ಇದುವರೆಗೆ ಒಂದು ಸಲವಾದರೂ ತನ್ನ ಸ್ಮರಣೆಗೆ ಬರಲಿಲ್ಲವಲ್ಲ! ತಾನೇನೊ ಮದುವೆಯನ್ನು ಒಪ್ಪುವದಿಲ್ಲೆಂದು ಹೇಳಿದನು. ಎಲ್ಲರೂ ಹೇಳಿದರು— ಮನೆತನಕ್ಕೆ ಗೌರವವಲ್ಲ, ತನಗೆ ಹಿತಕರವಲ್ಲ— ಮುಂತಾಗಿ. ಒಬ್ಬನಿಗೂ ತೋಚಲಿಲ್ಲವಲ್ಲ ಆಗ— ಆ ಹುಡುಗೆಯ ಗತಿ ಏನೆಂದು? ತನಗೂ ತೋಚಲಿಲ್ಲವಲ್ಲ! ಮಂದಿಯ ಸಲುವಾಗಿ ಹೆಣಗುವವನೆಂದು ಬಾಯಿಯಿಂದ ಬೊಗಳಿಕೊಂಡಾಗಲೂ ವಿಚಾರದಿಂದ ಸ್ವಾರ್ಥಿಯೆ ಆದನಲ್ಲ ತಾನೂ! ಆ ಹುಡುಗೆಯ ಗತಿ ಏನು? ತುಳಜೆಯ ಸ್ಥಿತಿ ಚನ್ನಾಗಿ ಗೊತ್ತಿದೆ ತನಗೆ........ ಅಯ್ಯೋ! ತಾನೆಂತಹ ಹುಚ್ಚ! ಹುಡುಗೆಯನ್ನು ಕರೆಯಿಸಿಕೊಳ್ಳಬೇಕೆಂದು ಕುಲಕರ್ಣಿಯು ಸೂಚಿಸಿದಾಗ ತಾನೇಕೆ ಒಪ್ಪಿಕೊಳ್ಳಲಿಲ್ಲ? ಅವಳು ಬರುತ್ತಿದ್ದಳು.. ಬಂದರೆ ಅವಳನ್ನು ಹೆಂಡತಿಯಂತೆಯೆ ನಡೆಸಿಕೊಳ್ಳಬೇಕೆಂದು ಆಗ್ರಹ (ಬಲವಂತ) ವೆಲ್ಲಿ? ತನ್ನ ಸಮಾಜಸುಧಾರಣೆಯ ವಿಚಾರವನ್ನು ಆಚಾರದಲ್ಲಿ ತಂದುಕೊಳ್ಳಲಿಕ್ಕೆ ಎಂತಹ ಸಮಯವಿದ್ದಿತು ತನಗೆ! ಆ ಹುಡುಗೆಗೆ ಶಿಕ್ಷಣ ಕೊಡಬಹುದಾಗಿತ್ತು, ಸಂಸ್ಕೃತಿಯನ್ನು ತಿಳುಹಿಸಬಹುದಾಗಿತ್ತು, ಅವಳನ್ನು ಮಾದರಿಯ ಹೆಂಗಸನ್ನಾಗಿ ಮಾಡಿ ಸಮಾಜಕ್ಕೆ ತೋರಿಸಬಹುದಾಗಿತ್ತು. ಈಗ—? ಈಗೇನಿದೆ? ಸುಧಾರಿಸಬೇಕೆಂದರೆ ಸ್ತ್ರೀಯರು ಕೂಡ ಸಿಕ್ಕುವಂತಿಲ್ಲ ತನಗೆ. 'ಅಪವಾದ, ಅಪವಾದ' ಎಂದು ಕನಕರಿಸುವ ಕುಲಕರ್ಣಿಯ ಬಾಯಿಯನ್ನು ನಡಿಲು ಬಿಟ್ಟರೆ ತನ್ನ ಶಾಲೆಗೆ ಯಾರೂ ಹೆಣ್ಣುಮಕ್ಕಳನ್ನು ಕಳುಹಿಸಲಿಕ್ಕಿಲ್ಲ. ಋಷ್ಯಶೃಂಗನ ಸಮಾಜವಾಗುವುದು ತನ್ನ ಸುಧಾರಿಸಿದ ಸಮಾಜ. ಕರ್ನಾಟಕದ ಅರ್ಧಕ್ಕರ್ಧ ಭಾಗ ತನ್ನ ಕೈಮೀರಿದಂತಾಯಿತಲ್ಲ.... ಆಯಿತು........ ನಾರಾಯಣನಿಗೆ ವಿಚಾರಭರದಿಂದ ಶ್ರಮವೂ ಆಯಿತು.... ದೀರ್ಘವಾಗಿ ಆಕಳಿಸಿದನು.... ಆಯಿತು.... ಕೊನೆಗೆ ತುಳಜೆ ಇದ್ದಾಳಲ್ಲ.. ಗಂಡಸರೊಡನೆ ಬೆರೆತು ವ್ಯವಹರಿಸುವ ಧೈರ್ಯವಿದ್ದ ಹೆಂಗಸು ಇಲ್ಲಿ ಅವಳೊಬ್ಬಳೆ.... ಅವಳನ್ನೆ ಮಾದರಿಯನ್ನಾಗಿ ಮಾಡೋಣ.... ಅಂದರೆ ಗಂಡಸರಿಗೂ ತಿಳಿ

ಯುವುದು.... ಆದರೂ ಕುಲಕರ್ಣಿ ಹೇಳಿದಂತೆ ಆ ಹುಡುಗಿಯನ್ನೇ ಕರೆಸಿಕೊಂಡಿದ್ದರೆ ಹೆಚ್ಚು ಒಳಿತಾಗುತ್ತಿತ್ತೇನೊ! ಬ್ರಾಹ್ಮಣ ಹೆಂಗಸು ಸುಧಾರಿಸಿದಂತಾಗಿ ಅದರ ಪರಿಣಾಮ ಚನ್ನಾಗುತ್ತಿತ್ತು....ತುಳಜಿಯೂ ಬ್ರಾಹ್ಮಣಳೆ .... ಯಾರಿಗೂ ಗೊತ್ತಿಲ್ಲವಲ್ಲ? ಹೇಳಿದರಾಯಿತು .... ಅದಕ್ಕೇಕೆ ಹೆದರಿಕೆ?.... 'ಯಾರು?' ಎಂದು ತಟ್ಟನೆ ಎದ್ದನು ನಾರಾಯಣನು. ನಾಯಿಯು ತನ್ನನ್ನು ತಿವಿಯುತ್ತಲಿದೆ.. ಎದ್ದನು — " ಓಹೊ — ನನ್ನ ಕರ್ತವ್ಯದ ಸ್ಮರಣೆಯನ್ನು ಮಾಡಿಕೊಡುವೆಯಾ? ನಡೆ, ಹೋಗೋಣ.. ಈ ಸುಧಾರಣಾ ಯುದ್ಧದಲ್ಲಿ ನಾನು ಅರ್ಜುನ, ನೀನು ಕೃಷ್ಣ. ನಷ್ಟಾ ನಿದ್ರಾ ಸ್ಮೃತಿರ್ಲಬ್ಧಾ, ನೀನು ಹೇಳಿದ್ದೇ ನನ್ನ ಹಾದಿ " ಎಂದು ಅದರ ಹಿಂದಿನಿಂದ ನಡೆದನು. ಅಂದಿನಿಂದ ಕಮತೂರಿನ ಜನರಿಗೆ 'ಕೃಷ್ಣ' ನೆಂಬ ನಾಯಿಯು ಪರಿಚಯವಾಯಿತು.

* * * *

ಮರುದಿನ ಮುಂಜಾವಿನಲ್ಲಿ ಉಪ್ಪಿಟ್ಟಿನಂಗಡಿಯಲ್ಲಿ ನಾರಾಯಣನು ಒಂದು ಸ್ಪೇಶಲ್ ಚಹ, ಒಂದು ಕಪ್ಪು ಹಾಲು—ಚಾರ್ಜ ಮಾಡಿದ್ದಿಲ್ಲವೆಂದು ಮಾಲಕನಿಗೆ ಕಂಡು ಬಂದಿತು. ನಾರಾಯಣನು ತನ್ನ ಕೈಯಿಂದ ಕೊಡಲು ಸಿದ್ಧನಾದನು. " ಕಾಸಿನ ಬೆಲೆ ಇಲ್ಲ ನಮಗ, ಆದ್ರ ವಿಶ್ವಾಸಿಲ್ಲದ ಆಸಾಮಿ ಬೇಡ " ಎಂದನು ಮಾಲಕನು. ಕೊನೆಗೆ ನಾರಾಯಣನು 'ಅಸಾಮಿ' ಯಾಗಿ ನೌಕರಿಯನ್ನು ಬಿಟ್ಟುಕೊಟ್ಟನು.

---

## ೩

" ಏಕೋ ರಸಃ ಕರುಣ ಏವ ನಿಮಿತ್ತಭೇದಾತ್ ಭಿನ್ನಃ ಪೃಥಕ್ ಪೃಥಗಿವಾಶ್ರಯತೇ ವಿವರ್ತಾನ್ " ಎಂದು ಭವಭೂತಿ ಮಹಾಕವಿ ಹೇಳಿದ್ದಾನೆ. ತಾತ್ಪರ್ಯವೇನಂದರೆ, ಒಂದೇ ಮಾತು ಬೇರೆ ಬೇರೆ ಜನರಿಗೆ ಬೇರೆ ಬೇರೆಯಾಗಿ ಕಾಣಿಸುವುದು. ಸದ್ಯಕ್ಕೆ ತುಳಜಿಯನ್ನೇ ಇದಕ್ಕೆ ಉದಾಹರಣೆಯೆಂದು ನೋಡಬಹುದು. ತುಳಜಿ ಎಂದರೆ ಮಾದರಿಯ ಸಂಸ್ಕೃತಿಯನ್ನು ಹೊಂದಬೇಕಾದ ಸ್ತ್ರೀ ಎನ್ನಿಸಿ ಸಮಾಜದ

ಹೆಂಗಸುತನದ ಪ್ರಗತಿಯ ಪ್ರತಿ-ನಿಧಿಯಾಗಿದ್ದಾಳೆ ನಾರಾಯಣನಿಗೆ; ಅದೇ ತುಳಜಿಯು ಮಾದರಿಯ ಸಂಸ್ಕೃತಿಯನ್ನು ಕಳೆದುಕೊಂಡ ಸಮಾಜದ ಗಂಡಸರ ಅಧೋಗತಿಯ ಪ್ರತಿನಿಧಿಯಾಗಿದ್ದಾಳೆ ಕುಲಕರ್ಣಿಗೆ. "ತುಳಜಿಯ ಕೂಡ ಸಂಬಂಧ ಬೆಳೆಸಿದರೆ ನಿಮ್ಮ ಅಳಿಯನಾದಂತಾಗುವೆನು" ಎಂದು ನಾರಾಯಣನು ಹೇಳಿದಾಗ ಕುಲಕರ್ಣಿಯು ಮನೆ ಹೊಕ್ಕ ದನವನ್ನು ಹೊಡೆದೋಡಿಸಲು ಸೈನಿಕನ ಆವೇಶದಿಂದ ಓಡಿದ್ದೇನೇನೋ ನಿಜ; ಆದರೆ ಹೊರಗೆ ಹೋಗಿ ನೋಡಿದಲ್ಲಿ ದನ ಮನೆಯೊಳಗೆ ಹೊಕ್ಕಿಲ್ಲ ತನ್ನ ಮನದೊಳಗೆಯೆ ಹೊಕ್ಕಿದೆ ಎಂದು ಒಪ್ಪಿಕೊಳ್ಳಬೇಕಾಗಿತ್ತು ತನ್ನಷ್ಟಕ್ಕೆ. ತುಳಜಿಯ ತಾಯಿಯು 'ಖೂನಿ' ಯಾದಾಗ ವಿಚಾರಣೆಯಲ್ಲಿ ತನ್ನ ಗುಟ್ಟು ಒಂದೂ ಹೊರಬೀಳದಂತೆ ವ್ಯವಸ್ಥೆ ಮಾಡಿಸಿದ್ದನು ರಂಗಣ್ಣ. ಅದಕಾಗಿ ಮನೆಯ ಮದುವೆ – ಮುಂಜಿಗಳನ್ನು ಮುಂದೆ ಹಾಕಬೇಕಾಗಿತ್ತು. ಮನೆ - ಮಕ್ಕಳು ಮಣ್ಣು – ಪಾಲಾದರೂ ಮುಂದಿಯಲ್ಲಿ ಮಾನ ಉಳಿಯಿತಲ್ಲ, ಎಂಬುದೊಂದು ಸಮಾಧಾನದಿಂದ ಇದುವರೆಗೆ ಕಾಲ ಕಳೆದಿದ್ದನು. ಈಗ ಆ ವಿಷಯ ನಾರಾಯಣನಿಗೆ ತಿಳಿದಿದೆ? ಹೇಗೆ? ತುಳಜಿಯೆ ಹೇಳಿರಬಹುದೆ? ಸಾಯುವ ಮುಂಚಿತ ಅವಳ ತಾಯಿ ಅವಳಿಗೆ ಹೇಳಿರಬಹುದೆ? ಅಂತೂ ಈ ವೇಳೆಗಾಲಕ್ಕೂ ಮನೆಯ 'ದುರುಸ್ತಿ' ಯನ್ನು ಮುಂದೆ ಹಾಕಬೇಕಾಯಿತು, ಮಾನದ 'ದುರುಸ್ತಿ' ಯನ್ನು ಮೊದಲು ಮಾಡಿಕೊಳ್ಳಬೇಕಾಯಿತು. ಯಾವಾಗಲೂ ಕಳಕಳಿಯ ಹೃದಯ ತನ್ನದು; ತನಗೆಯೆ ಆಗಲಿ ಅನ್ಯರಿಗೆಯೆ ಆಗಲಿ – ಯಾರ ನೋವೂ ತಡೆಯುವುದಿಲ್ಲ. ಎಲ್ಲರೂ ಸುಖದಿಂದಿರಬೇಕು, ತನ್ನಿಂದ ಯಾರಿಗೂ ದುಃಖವಾಗಬಾರದು, ಒಂದುವೇಳೆ ತನ್ನಿಂದಲೆ ಇನ್ನೊಬ್ಬರಿಗೆ ಸುಖವಾಗುವಂತಿದ್ದರೆ ಅದಕ್ಕೆ ಯಾವಾಗಲೂ ಸಿದ್ಧನೆ. ತುಳಜಿಯ ತಾಯಿಯ ಕೂಡ ಸಂಬಂಧ ಬೆಳೆಸಿದ್ದು ಯಾಕೆ? ಅವಳಿಗೆ ಗಂಡನಿಂದ ಸುಖವಿದ್ದಿಲ್ಲ, ಇಷ್ಟೇ ಅಲ್ಲ ತನ್ನಿಂದ ಅವಳಿಗೆ ಸುಖವು ತಪ್ಪಿದ್ದಲ್ಲ – ಎಂದು ಕಂಡು ಬಂದಿತ್ತು. ಆದರೆ ಇಂತಹ ಉದಾತ್ತ ವಿಚಾರಗಳು ಜನರಿಗೆ ತಿಳಿಯಬೇಕಲ್ಲ? ಇಂತಹ ಸಂಗತಿಗಳನ್ನು ಜನರು ತಪ್ಪುತಿಳಿದುಕೊಳ್ಳುವುದೇ ಹೆಚ್ಚು ಸಂಭವ

ಸೀಯ. ತನ್ನನ್ನೆ ಮಾದರಿಯನ್ನಾಗಿಟ್ಟುಕೊಂಡ ಹಳ್ಳಿಗರಿಗೆ ತನ್ನ ವಿಷಯ ತಪ್ಪು ಕಲ್ಪನೆಯಾದರೆ ಎಂತಹ ಸಾಮಾಜಿಕ ಅನರ್ಥ ! ಅದಕಾಗಿ ತಾನು ಮಾನವನ್ನು ಕಾಯ್ದುಕೊಳ್ಳಲು ಯತ್ನಿಸುವುದು, ಮಾನವು ನಿಜವಾಗಿಯೆ ಅಳಿದಿದೆ ಎಂದಲ್ಲ.... ಈ ಮನೋಧೈರ್ಯ, ಇಂತಹ ಆತ್ಮವಿಶ್ವಾಸ ತನಗಿದ್ದಿತೆಂದೇ ಮರುದಿವಸ ರಂಗಣ್ಣನು ನಾರಾಯಣನ ಭೆಟ್ಟಿಯಾಗಬೇಕೆಂದು ನಡೆದಿದ್ದನು.... ಜನರು ಆಡಿದರೇನು ಬಿಟ್ಟರೇನು ? ತನ್ನ ಹೃದಯದ ಕಳಕಳಿ ಒಂದಿದೆಯಲ್ಲ? ಪಾಪ ! ನಾರಾಯಣರಾಯರಿಗೆ ಎಷ್ಟು ಮನಸ್ತಾಪವಾಗಿರಬೇಕು ! ಆ ಹಾಳು ಚಹದಂಗಡಿಯಲ್ಲಿ ದುಡಿದುಣ್ಣುವಾಗ ಎಷ್ಟು ಅನನುಕೂಲ ! ಇರುವುದೆಲ್ಲಿ ? ಮಲಗುವುದೆಲ್ಲಿ ? ಮನರಂಜನೆಗಾಗಿ ಮಾತನಾಡಬೇಕೆಂದರೆ ನಾಲ್ಕು ಜನ ತಿಳುವಳಿಕೆ ಇದ್ದವರು ಕೂಡ ಅಲ್ಲಿ ಸಿಕ್ಕುವುದಿಲ್ಲ ! ಏನಿಲ್ಲ, ಅವರನ್ನು ಬಲುಮೆಯಿಂದಾದರೂ ಎಳೆದುಕೊಂಡು ಬರಬೇಕು, ತನ್ನ ಮನೆಯಲ್ಲಿಯೆ ಉಂಡುಟ್ಟು ಇದ್ದುಕೊಳ್ಳಲಿಕ್ಕೆ ಆಗ್ರಹ ( ಬಲವಂತ ) ಮಾಡಬೇಕು;– ಶೀನಪ್ಪನಾಯಕರಿಗೇನು ಕಡಿಮೆ ಕೊಟ್ಟಿಲ್ಲ ಶ್ರೀಹರಿ? – ಅಂತಹರಿಗೆ ನೆರವಾಗದಿದ್ದರೆ ' ಪರೋಪಕಾರಾರ್ಥಮಿದಂ ಶರೀರಂ ' ಎಂದು ಕಂಠಪಾಠ ಹೇಳುವುದರಲ್ಲಿ ಏನಿದೆ? ಅದೇನೂ ಕೇಳುವಂತಿಲ್ಲ, ''ನಾರಾಯಣರಾಯ್ರನ್ನ ತರೋದೆ,ನಮ್ಮಮನೆವಳಗ ಅವರು ಇರೋದೆ, ಅವರಿಗೆ ಯಾವ್ದೂ ಅನನುಕೂಲ ಆಗ್ಧಾಂಗ ನೋಡ್ಕೊಳ್ಳಿಕ್ಕೆ ತಯ್ಯಾರಿದ್ದೀನಿ ನಾನು '' ಎಂದು ನಿಶ್ಚಯಿಸುತ್ತ, ನಿಶ್ಚಯಿಸಿದಂತೆ ಉದ್ದುದ್ದ ಹೆಜ್ಜೆಗಳನ್ನಿಡುತ್ತ ಅವಸರವರವಾಗಿ ಸಾಗಿದ್ದನು ಕುಲಕರ್ಣಿ ಉಪ್ಪಿಟ್ಟಿನಂಗಡಿಗೆ.

* * * *

ಇತ್ತ ನಾರಾಯಣನು ಉಪ್ಪಿಟ್ಟಿನಂಗಡಿಯಿಂದ ಕಮತೂರಿನ ಕಡೆ ನಡೆದಿದ್ದಾನೆ. ಮುಂದೆ 'ಕೃಷ್ಣ'ನೂ ನಡೆದಿದ್ದಾನೆ–ಕಾಲು ಕುಣಿಸುತ್ತ, ಮೈ ಬಳುಕಿಸುತ್ತ. ಕೆಳಗೆ ಮುಖ ಮಾಡಿಕೊಂಡು ನಡೆದ ತನ್ನ ಯಜಮಾನನು ಚಿಂತಾಕ್ರಾಂತನಾಗಿರಬಹುದೆ–ಎಂದು ಸಂಶಯ 'ಕೃಷ್ಣ'ನಿಗೆ. ಆದಕ್ಕೆಂದೇ ಹತ್ತಿಪ್ಪತ್ತು ಹೆಜ್ಜೆಗಳನ್ನು ಮುಂದೆ ಮುಂದೆ ನಡೆದು 'ಇದೇ

ನಿನ್ನ ದಾರಿಯಲ್ಲವೆ ?' ಎಂದು ಕೇಳುವವನಂತೆ ತಿರುಗಿಸಿದ ಮುಖವನ್ನು ಮೇಲೆತ್ತಿಕೊಂಡು ತಡೆಯುತ್ತಿದ್ದನು. ಆಗಾಗಲೊಮ್ಮೆ ನಾರಾಯಣನು ತನ್ನನ್ನು ನೋಡದಿದ್ದರೆ ಬಾಲ ಬಡಿಯುತ್ತ ನಿಂತಲ್ಲಿಯೆ ಕುಣಿಯುತ್ತ ತಡೆಯುತ್ತಿದ್ದನು ಅವನನ್ನು. ಆಗ ನಾರಾಯಣನು ತನ್ನನ್ನು ನೋಡಿ ನಕ್ಕು "ಕೃಷ್ಣಾ, ನೀನು ತೋರಿಸಿದ್ದೆ ನನ್ನ ಹಾದಿಯಪ್ಪ!" ಎಂದಾಗಲಿ, "ಕೃಷ್ಣಾ, ನೀನು ನಾಯಕ ನಾನೂ ನಾಯಕ, ನಮ್ಮಿಬ್ಬರ ಹಾದಿ ಒಂದೇ" ಎಂದಾಗಲಿ ಹೇಳಿದಾಕ್ಷಣ ಮತ್ತೆ ಸಂತೋಷದಿಂದ ಒಂದೆರಡು ಸಲ ಮುಂಗಾಲ್ಗಳ ಮೇಲೆ ಜಿಗಿದು ಕುಣಿದು ಮುಂದೆ ನಡೆಯುತ್ತಿದ್ದನು. 'ಕೃಷ್ಣ'ನಿಗೂ ಸಂಶಯ ಬಂದಿತು. ತನ್ನ ಯಜಮಾನನ ಚಿಂತಾಭಾರವು ಬಹಳೇ ದೊಡ್ಡದಾಗಿರಬೇಕೆಂಬ ಊಹೆಯಾಯಿತು. ತನಗೂ ಹೇಳಬಾರದೆ—ಹಂಚಿಕೊಡಬಾರದೆ—ಭಾರವನ್ನು ಹಗುರ ಮಾಡಬಾರದೆ?—ಎಂದು 'ಕೃಷ್ಣ'ನ ಹಂಬಲ. ಅದಕಾಗಿ ಒಮ್ಮೊಮ್ಮೆ ಭಾವಗರ್ಭಿತವಾದ ದೃಷ್ಟಿಯಿಂದ ನೋಡುತ್ತಿದ್ದನು ನಾರಾಯಣನನ್ನು. ಉಪ್ಪಿಟ್ಟಿನಂಗಡಿಯಲ್ಲಿ ತನಗೆ ಯಾರೂ ಕೈಯನೆತ್ತಿ ಒಂದು ತುತ್ತನ್ನು ನೀಡಿದ್ದಿಲ್ಲ. ಅದಕಾಗಿ ನೊಂದು ತನ್ನನ್ನು ಕರೆದುಕೊಂಡು ಮತ್ತೊಂದು ಜಾಗೆಗೆ ಹೊರಟಿರಬಹುದೆ—ತನ್ನ ಯಜಮಾನನು? ಹಾಗಿದ್ದರೆ ತನಗೇಕೆ ಹೇಳಬಾರದು? ಬೇಕಾದಲ್ಲಿ ತಿರುಗಾಡಿ ದುಡಿದು ತಿಂದುಕೊಂಡಿರುವ ಶಕ್ತಿ ತನ್ನಲ್ಲಿದೆ. ತನಗೆ ಹೇಳಬಾರದೇಕೆ? ತಾನು ತನ್ನ ಹೊಟ್ಟೆ ತುಂಬಿಕೊಳ್ಳುವ ಶಕ್ತಿ ಇದ್ದವನು ಎಂಬ ಕಲ್ಪನೆಯೆ ಇರಲಿಕ್ಕಿಲ್ಲವೆ—ತನ್ನ ಯಜಮಾನನಿಗೆ ? ಹೀಗೆ ಅನೇಕ ವಿಚಾರಗಳಿಂದ ಕ್ರಮೇಣ 'ಕೃಷ್ಣ'ನ ಹೆಜ್ಜೆಗಳು ಕಿರಿದಾಗಹತ್ತಿದುವು. ಬರಬರುತ್ತ ನಾಯಿಯೂ ನಾರಾಯಣನೂ ಬದಿಬದಿಯಲ್ಲಿಯೆ ನಡೆಯಹತ್ತಿದರು; ನಡೆ ನಡೆಯುತ್ತ ನಾರಾಯಣನ ಹೆಜ್ಜೆಗಳೆ ಉದ್ದುದ್ದವಾದುವು. 'ಕೃಷ್ಣ'ನಿಗೆ ಆಶ್ಚರ್ಯವಾಯಿತು. ಮುಖವನ್ನೆತ್ತಿಕೊಂಡು ನಾರಾಯಣನನ್ನು ನೋಡುತ್ತ ಹಿಂದಿನಿಂದ ಕುಣಿಯುತ್ತ ನಡೆದನು. ಪಾಪ! ಅವನಿಗೆಂತು ತಿಳಿಯುವುದು? ತನ್ನ ಯಜಮಾನನ ಹೆಜ್ಜೆಗಳು ಒಮ್ಮೆಲೆ ಉದ್ದವಾದುದರ ಕಾರಣ ಅವನಿಗೆಂತು ತಿಳಿಯುವುದು? ಯೋಚಿಸಿ ಯೋಚಿಸಿ ನಿಶ್ಚಯವನ್ನು ಗೊತ್ತುಮಾಡಿದ್ದನು

ನಾರಾಯಣನು; ಅದನ್ನು ಕೈಕೊಳ್ಳಲು ಆತುರ, ಅವಸರ ಅವನಿಗೆ; ಅದಕಾಗಿ ದೊಡ್ಡ ಹೆಜ್ಜೆಗಳು. ಆ ಹೆಜ್ಜೆಗಳಿಗೆ ತಾಳಕೂಡಿಸಿ ಏನನ್ನೋ ಗುಂಯ್‌ಗುಡಿಸುತ್ತಲಿದ್ದಾನೆ. ಏನನ್ನೋ ಎನ್ನುವುದಾದರೂ ಯಾಕೆ? ನಾರಾಯಣನಿಗೆ ಯಾವ ತೆರದಿಂದಲೂ ನಾಚಿಕೆಯಾಗುವುದಿಲ್ಲ ತಾನು ಪುರಂದರದಾಸರ ಪದವನೊಂದನ್ನು ಗುಂಯ್‌ಗುಡಿಸುತ್ತಲಿದ್ದಾನೆಂದು ಒಪ್ಪಿಕೊಳ್ಳಲು. ಅಬ್ಬ! ಗಟ್ಟಿಗ ದಾಸಯ್ಯ! ಧಂಡೆಯಿಂದ ಚಿನಿವಾರನಂತೆ! ಧರ್ಮದಿಂದ ಇಬ್ಬರು ಹೆಂಡಂದಿರ ಗಂಡನಂತೆ! ಆದರೂ ಹಣದಾಸೆಯಿಲ್ಲದೆ ಹೆಣ್ಣಿನಾಸೆಯಿಲ್ಲದೆ ಕುಂಬಳ ಸೊಟ್ಟೆ (ಬುರುಡೆ)ಗೆ ದಾರ ಕಟ್ಟಿ ಕಯ್ಯನಾಡಿಸುತ್ತ ಮನೆಮನೆ ಹಾಡುಗಳನ್ನು ಕಿರುಚುತ್ತ ಹೋದನಲ್ಲವೆ? ತನ್ನ ಸ್ಥಿತಿ ಆ ದಾಸನ ಸ್ಥಿತಿಗೆ ಹೋಲುವುದೆಂದೆನ್ನಿಸಿತು ನಾರಾಯಣನಿಗೆ. ತಾನೂ ಇಬ್ಬರು ಹೆಂಡಂದಿರನ್ನು ಬಿಟ್ಟುಕೊಟ್ಟಿದ್ದ; ತುಳಜಿ ಮತ್ತು 'ಆ ಹುಡುಗೆ.' ತುಳಜಿಯು ತನ್ನ ಹೆಂಡತಿಯಲ್ಲವೇನೊ ನಿಜ; ಆದರಂತೆ 'ಆ ಹುಡುಗೆ'ಯಾದರೂ ತನ್ನ ಹೆಂಡತಿ ಎಂದು ತಾನೆಲ್ಲಿ ಒಪ್ಪಿಕೊಂಡಿರುವ? ಅಂತೂ—ಇಬ್ಬರು ಹೆಂಗಸರ ಮೇಲಿನ ಆಸೆಯನ್ನು ಇಚ್ಛೆಯನ್ನು ಬಿಟ್ಟುಕೊಟ್ಟಿದ್ದನೊ ಇಲ್ಲವೊ? ತಾನೂ ಮನೆಮನೆ ತಿರಿದು ಹೊಟ್ಟೆತುಂಬಿಕೊಳ್ಳಬೇಕೆನ್ನುವ. ಆ ದಾಸನಂತೆ ದುಡಿಯದೆಯಾಗಲಿ ಪುಕ್ಕಟೆಯಾಗಲಿ ಮಾತ್ರ ಭಿಕ್ಷೆಬೇಡುವುದಿಲ್ಲ ತಾನು. ಶಿಕ್ಷಣವನ್ನು ಕೊಡುವ, ಬೇಕಾದವರಿಗೆ, ಹಿರಿಯರಿಗೆ, ಹುಡುಗರಿಗೆ, ಒಪ್ಪಿಗೆಯಿದ್ದರೆ ಹೆಂಗಸರಿಗೆ ಕೂಡ. ಆ ದಾಸಯ್ಯನು ಮಾತ್ರ— ಅದೇಕೆ?—ಅವನ ಹಾಡುಗಳಲ್ಲೂ ಎಷ್ಟೋ ಅನುಭವದ ಮಾತಗಳಿವೆಯಲ್ಲ? ಏನೊ—ತನಗಂತೂ ಆ ದಾಸಯ್ಯನ ಹಾಡುಗಳಲ್ಲಿ ಶಿಕ್ಷಣದ ಮೂಲತತ್ವ ಕಂಡು ಬರುವುದಿಲ್ಲ. ತತ್ವವೇನು ಸುಟ್ಟಿತು? "ಹಾಡಿದ್ದೆ ಹಾಡಯ್ಯ ಕಿಸವಾಯಿ ದಾಸಯ್ಯ." ಎಂದಿನಿಂದ ನಡೆದು ಬಂದ ಹಾಳು ರಗಳೆ! ಹಿಂದಿನದಕ್ಕೆ ಕಣ್ಣು ಬಿಡುವುದು, ಮುಂದಿನದಕ್ಕೆ ಬಾಯಿ ಬಿಡುವುದು, ಇಂದಿನದಕ್ಕೆ ನೀರು ಬಿಡುವುದು! ಈ ದಾಸರಲ್ಲಿ ದೊಡ್ಡಸ್ತನವೆ ಇದ್ದಂತೆ ತೋರುವುದಿಲ್ಲ. ಹೆಣ್ಣಿನಾಶೆ ಇದ್ದಿಲ್ಲವೆಂಬುದೂ ಅಂತಹುದೇನು ದೊಡ್ಡಸ್ತನ? 'ನಾರಿ ತಾ ಮಹಾಮಾರಿ!' ಎಂದ ದಾಸಯ್ಯನಿಗೆ ಹೆಣ್ಣಿನಾಶೆ

ಇರುವ ಶಕ್ಯತೆಯಾದರೂ ಎಲ್ಲಿ? ಆಶೆಯ ಶಕ್ಯತೆ ಇಲ್ಲದಲ್ಲಿ ಸಂನ್ಯಾಸದ ಮಾತೇ ಹೊರಡುವುದಿಲ್ಲ. ಸಂನ್ಯಾಸಿಯಾದ ಶಂಕರಾಚಾರ್ಯನೆ ಹೇಳು ತ್ತಾನೆ 'ಷಂಢನ ಬ್ರಹ್ಮಚರ್ಯದಿಂದ ಮೋಕ್ಷ ಸಾಧಿಸುವುದಿಲ್ಲ'ವೆಂದು.. ಆದರೆ ಈ ದಾಸರು ಮಾತ್ರ ತಮ್ಮ ಜನ್ಮ ಸಾಧಿಸಿಕೊಂಡರು.. .ಅವರಿಗೆ ಆ ಯುಕ್ತಿಯೆ ಸಾಧಿಸಿತ್ತೊ ಏನೊ!..ಎಲ್ಲರಿಗೆ ತಿಳಿಯುವಂತಹ ಭಾಷೆಯ ಸುಲಭ ಶೈಲಿ ಸಾಧಿಸಿತ್ತು ಅವರಿಗೆ....ಅದೊಂದು ಮಾತ್ರ ಸಾಧಿಸಿತ್ತೆಂದು ಒಪ್ಪಿಕೊಳ್ಳಲೇಬೇಕಾಯಿತು ನಾರಾಯಣನಿಗೆ....ನೋಡ ಬಾರದೆ? ಈಗ ತಾನೇ ಗುಂಯ್‌ಗುಡಿಸುತ್ತಲಿದ್ದಾನೆ ಅವನದೊಂದು ಪದವನ್ನು!

"ಮಧುಕರ ವೃತ್ತಿ ಎನ್ನದು। ಅದು ಬಲು ಚೆನ್ನದು॥ ಪಲ್ಲ॥
ಪದುಮನಾಭನ ಪಾದ। ಪದುಮ ಮಧುಪವೆಂಬ॥ಅನುಪಲ್ಲ॥

ಮುಂದೆ ಸ್ಮರಣೆಗೆ ಬರಲೊಲ್ಲದು...."ಮಧುಕರ ವೃತ್ತಿ ಎನ್ನದು"ಎಂದೇ ಮೇಲಿಂದ ಮೇಲೆ ನುಡಿಯಹತ್ತಿದನು....ಕೆಳಗೆ ನೋಡಿದರೆ 'ಕೃಷ್ಣ'ನು ಸಾಶಂಕನಾಗಿ ತನ್ನನ್ನೆ ದಿಟ್ಟಿಸುತ್ತಲಿದ್ದಾನೆ....ನಾರಾಯಣನಿಗೆ ನಗೆ ಬಂದಿತು....'ಮಧುಕರ ವೃತ್ತಿ ಎನ್ನದು—ಎಂದುದಕ್ಕೆ ಸಿಟ್ಟು ಬಂದಿತೆ? 'ಕೃಷ್ಣಾ, ನಾನೂ ನೀನೂ ಒಂದೆ.'

" ಮಧುಕರವೃತ್ತಿ **ಎನ್ನದು**। ಅದು ಬಲು ಚೆನ್ನದು॥ ಪ॥
ಪದುಮನಾಭನ ಪಾದ। ಪದುಮ ಮಧುಪವೆಂಬ॥ ಅನು॥...."

ಮುಂದೆ--? ಹಾಳಾಗಲಿ. ಸದ್ಯಕ್ಕೆ ತನ್ನ 'ಮಧುಕರ ವೃತ್ತಿ' ಯನ್ನು ಬಣ್ಣಿಸುವ ಹುರುಪು ಬಂದಿದೆ, ಪುರಂದರನದಲ್ಲ.

ಸಾಲೆಯ ಕಲಿತಿಟ್ಟೆ। ಕಾಲೇಜ ಡಿಗ್ರಿ ಕಟ್ಟಿ॥
ಹಾಳಾದೆ ನಿನಗಿನ್ನು। ಕೂಳಿಗೆ ಗತಿ—ಇಲ್ಲ॥———
— ಮಧುಕರ ವೃತ್ತಿ ॥ ೧ ॥

ಕೃಷ್ಣಾ, ಕೇಳಿದೆಯಾ? ಪದುಮನಾಭನ ಪಾದಪದುಮಮಧುಪ ವೆಂಬ - ಎಂದು ಸ್ಫೂರ್ತಿಯ ಆವೇಶದಲ್ಲಿ ನಾಯಿಯ ಬೆನ್ನು ಚಪ್ಪರಿ ಸುತ್ತ ನಡೆದನು ಮಧುಕರ ವೃತ್ತಿಯ ಮಹತ್ವಾಕಾಂಕ್ಷೆಯಿಂದ.

* * * *

ನಾರಾಯಣನನ್ನು ಕರೆದುಕೊಂಡು ಬರಲೇಬೇಕೆಂಬ ನಿಶ್ಚಯದಿಂದ, ಹಟದಿಂದ ನಡೆದಿದ್ದಾನೆ ಕುಲಕರ್ಣಿ. ಅವನಿಗೆ ಅದಷ್ಟು ಸಹಾಯವನ್ನೂ ಮಾಡಬೇಕೆಂದು ಕುಲಕರ್ಣಿಯ ಆಲೋಚನೆ. ಅದಷ್ಟು ಹುಟ್ಟಿಗೆ ಅವನೊಬ್ಬನನ್ನೆ ಹೊರಗೆ ಬಿಡಬಾರದೆಂದೂ ಕುಲಕರ್ಣಿಯ ಆಲೋಚನೆ. ಅದಷ್ಟು ಮಟ್ಟಿಗೆ ತುಳಜಿಯ ಪೂರ್ವೇತಿಹಾಸ ಅರ್ಥಾತ್ ತನ್ನ ಪೂರ್ವಾಶ್ರಮ ಜನರಿಗೆ ತಿಳಿಯಗೊಡಬಾರದು. ಜನರಾದರೂ ಮಹಾಮೂರ್ಖರೇ ಅಲ್ಲವೆ?—ಎಂದೆನ್ನಿಸಿತು ಕುಲಕರ್ಣಿಗೆ. ಇಂತಹ ವಿಷಯಗಳಿಗೆ ಇಷ್ಟೇಕೆ ಮಹತ್ವವನ್ನು ಕೊಡಬೇಕೊ? ಇದಲ್ಲದೆ ೧೮–೧೯ ವರ್ಷಗಳ ಹಿಂದಿನ ಮಾತು. ಆಗ ತನಗೆ ಸುಮಾರು ೨೬–೨೭ ವಯಸ್ಸಾಗಿರಬಹುದು.ಮದುವೆಯಾಗಿ ೩–೪ ವರ್ಷಗಳಾಗಿದ್ದುವು...ಮದುವೆಯಲ್ಲಿ ತನ್ನ ಹೆಂಡತಿಗೆ ೯,ಬಹಳವಾದರೆ ೧೦ ವರ್ಷಗಳಾಗಿರಬೇಕು.೨–೩ ವರ್ಷ ಗೌರಿಯೊ ಗಂಗೆಯೊ ಎಂದು ಹುಡುಗಿಯು ಅತ್ತೆಯ ಮನೆಗೆ ಆಗಾಗ ಬಂದು ಹೋಗುತ್ತಿತ್ತು. ಅಷ್ಟರಲ್ಲಿಯೆ 'ಪ್ರಬುದ್ಧ' ವಾಯಿತು. ಊರ ತುಂಬ ಡಿಂಗುರ ಸಾರಿದ್ದಾಯಿತು, ಗೃಹಸ್ಥಾಶ್ರಮ ಸೇರಿದ್ದಾಯಿತು; ಒಂದೆರಡು ದಿವಸಗಳಲ್ಲಿಯೆ 'ಅವಳ್ಕೂಡ ನೀ ಸಂಸಾರ್ಮಾಡಿದ್ರ ಭಾಂವಿ ಹಾರ್ಕೊಂಡು ಜೀವ ಕೊಡ್ತೀನಿ' ಎಂದಳು ತನ್ನ ತಾಯಿ. ಏನು ಮಾಡಿದರೆ ತನ್ನ ತಾಯಿಯ ಜೀವ ಉಳಿಯಬಹುದು — ಎಂದು ಚಿಂತಿಸತೊಡಗಿದನು ರಂಗಣ್ಣ. 'ನಿನ್ಮ್ಯಾವ ಇನ್ನೂರು ರೂಪಾಯಿ ಕೊಡ್ತೀನಿ ಅಂತ್ಹೇಳಿ ————'. ಮುಂದೆ ಸಂದರ್ಭವೆಲ್ಲಾ ತಿಳಿಯಿತು ರಂಗಣ್ಣನಿಗೆ. ಉಪಯೋಗವೇನು? ಮದುವೆಯಂತೂ ಆಗಿದೆ ಎಂಬ ಧೈರ್ಯದಿಂದ ಮಾವನು ಒಂದು ದುಡ್ಡು ಕೈ ಬಿಡಲಿಕ್ಕಿಲ್ಲ ಎಂದನು. ಆದುದರಿಂದ ರಂಗಣ್ಣನಿಗೆ ಹೆಂಡತಿ ಕೈ ಬಿಡಬೇಕಾಯಿತು. ಹೆಂಡತಿಯನ್ನು ತವರ್ಮನೆಗೆ ಎತ್ತಿಹಾಕಿ (ರವಾನಿಸಿ) ಮುಂದಿಯ ಸುಖಕ್ಕಾಗಿ, ಮುಂದಿಯ ಹೆಂಡಂದಿರಿಗಾಗಿ ಕಣ್ಣು ಬಿಡುತ್ತ ಕೇರಿಕೇರಿ ತಿರುಗಾಡಹತ್ತಿದನು. ಆಗ ತುಳಜಿಯ ತಾಯಿಯ ಸಂಗತಿ ಸಂಭವಿಸಿದ್ದು....ತಾನಾಗಿಯೆ ಮನೆಯ ಹೆಂಡತಿಯನ್ನು ಹೊರದೂಡಿ ಈ ಕೆಲಸಕ್ಕೆ ಕೈಹಾಕಲಿಲ್ಲವಲ್ಲ? —ಆದರೆ ಜನರಿಗೆ ತಿಳಿಯುವುದೆಂತು? ತನ್ನ ಸ್ಥಿತಿ ನಾರಾಯಣನಿಗೂ

ಬರಬಾರದೆಂಬ ಸದುದ್ದೇಶದಿಂದಲೆ ತಾನೀಗ ನಾರಾಯಣನನ್ನು ಕರೆತರಲು ಹೊರಟಿದ್ದು....ಆ ಹುಡುಗನಿಗೆ ಇನ್ನೂ ಗೊತ್ತಿಲ್ಲ, ಮದುವೆಯಾದ ಹೆಂಡತಿಯನ್ನು ಬಿಟ್ಟು ಇದ್ದರೆ ಮನಸಿನ ಮೇಲೆ ಎಂತಹ ಪರಿಣಾಮ ವಾಗುವುದೆಂದು....ಈಗಾಗಲೆ ಜನರು ತುಳಜಿಯ ವಿಷಯವಾಗಿ ನಾರಾಯಣನ ಮೇಲೆ ಸಂಶಯದ ಕಣ್ಣನ್ನಿಟ್ಟಿದ್ದಾರೆ....

× × × × ×

ತುಳಜಿಯ ವಿಷಯವಾಗಿ ಜನರಲ್ಲಿದ್ದ ಸಂಶಯಕ್ಕೆ ಈಗ ಸೊಪ್ಪು ಹಾಕಲಿಲ್ಲ ನಾರಾಯಣನು. ಮಧುಕರ ವೃತ್ತಿಯನ್ನು ಕೈಕೊಂಡ ಮೇಲೆ ಹೆದರಿಕೆ ಯಾಕೆ? ತಾನು,'ಕೃಷ್ಣ', ಮತ್ತು ತುಳಜಿ ಈ ಮೂವ್ವರ ಉದರನಿರ್ವಾಹವನ್ನೂ ಸಾಗಿಸಬಹುದು. ಹೀಗಾಗಿ ತುಳಜಿಗೆ ಹೊಟ್ಟೆಗಾಗಿ ದುಡಿಯುವ ಆವಶ್ಯಕತೆಯೆ ಉಳಿಯುವುದಿಲ್ಲ; ವೇಳೆಯೂ ಉಳಿಯುವುದು ಅವಳಿಗೆ, ಆಗ ಶಿಕ್ಷಣವನ್ನು ಕೊಟ್ಟರಾಯಿತು. ಅಡಿಗೆಯನ್ನು ಕಲಿಸಬೇಕೊ—ಓದುಬರೆ ಕಲಿಸಬೇಕೊ ಅವಳಿಗೆ? ಎರಡೂ ಬೇಡ. ಸಾಲೆಗೆ ಬರುವ ಹುಡುಗರ ಆರೈಕೆ ಮಾಡುವುದನ್ನು ಕಲಿಸಬೇಕು. ಸಾಲೆಯ ಮಕ್ಕಳನ್ನು ಓರಣದಲ್ಲಿಡುವುದನ್ನು ಕಲಿಸಬೇಕು ಅವಳಿಗೆ. ಹುಡುಗರಿಗೆ ಕೆಟ್ಟ ಕೆಟ್ಟ ಚಟಗಳು ಬಡೆಯದಂತೆ ನೋಡಿಕೊಳ್ಳುವುದನ್ನು ಕಲಿಸಬೇಕವಳಿಗೆ. ಸಮಾಜದ ಬೆಳವಣಿಗೆಗೆ ಹೆಂಗಸಿನ ಆವಶ್ಯಕತೆ ಎಷ್ಟಿದೆ! 'ನಾರಿ ತಾ ಮಹಾಮಾರಿ' ಅಂತೆ! ಭೆಟ್ಟಿಯಾಗಲಿ—ಆ ದಾಸಯ್ಯನ ಕುಂಬಳ ಸೊಟ್ಟೆಯನ್ನು ಅವನ ತಲೆಯ ಮೇಲೆಯೆ ಒಡೆಯುವೆ. ಇಂತಹರೆ ನಮ್ಮನ್ನು ಹಾಳು ಮಾಡಿದರು. ಮತ್ತೆ ಇವರೇ ಸರ್ವಜ್ಞರು! ಇವರೇ ಅವತಾರ ಪುರುಷರು!

" ಊಟ ಮಾಡಿದ ಮೇಲೆ ಕೂಟದ ಚಿತ್ತಿಲ್ಲ।
ಕೊಟ್ಟರೆ ಎಳ್ಳವನೊಲ್ಲೆನೆಂಬುವನೆ ॥
ಧಾಟಿಯ ತೋರುತ ಶಿಷ್ಯ ಜನರಿಗೆ।
ಪಾಠವ ಹೇಳುತ ಕುಳಿತಿಹನವ್ವಾ ॥ "

ವೈದಿಕ ಬ್ರಾಹ್ಮಣನ ಹೆಂಡತಿ ಹೇಳುವಳಂತೆ ಈ ಮಾತನ್ನು! ಪದದ ಕೊನೆಗೆ " ಪುರಂದರ ವಿಠಲ " ಎಂಬ ಮುದ್ರಿಕೆ ಇದ್ದಿಲ್ಲವಾದರೆ

ಯಾವಳೋ ಒಬ್ಬ ಸೂಳೆ ಹೇಳುವ ಮಾತು ಇದು ಎನ್ನಬಹುದಾಗಿತ್ತು. ಮಾಡುವುದೇನು? ಇಂತಹ 'ಭಕ್ತಶ್ರೇಷ್ಠ'ರ ಸುಲಭ ಶೃಂಗಾರ ಸಾಹಿತ್ಯವನ್ನು ಮೈಗೂಡಿಸಿಕೊಂಡು ಬೆಳೆದಿದೆ ನಮ್ಮ ಸಮಾಜ. ಅಂತೇ ತುಳಜಿಯಂಥವರು ಕುಲಕರ್ಣಿಯಂತಹರಿಗೆ ಕುಲಗೆಟ್ಟ ಮಕ್ಕಳಾಗುವರು.... ಆಗಲಿ.. ಆ ಕುಲಕರ್ಣಿಯ ಸೊಕ್ಕನ್ನಿಳಿಸುವೆ.. ಸುಶಿಕ್ಷಿತಳಾದ ತುಳಜಿಗೆ ತಲೆ ಬಾಗುವಂತೆ ಮಾಡುವೆ ಅವನನ್ನು.... ತನ್ನ ಹೊಟ್ಟೆಯ ಮಗಳ ವಿಷಯವಾಗಿ ಸಂಶಯವಿದೆಯಲ್ಲವೆ?

× × × ×

ಒಟ್ಟು— ರೂಢಿಯನ್ನು ಬಿಟ್ಟು ನಡೆಯದಿದ್ದರೆ ಸಾಕು ಎಂದು ಅಭಿಪ್ರಾಯಪಟ್ಟನು ಕುಲಕರ್ಣಿ. ರೂಢಿಯಂತೆ ನಡೆದರೆ ಯಾರೂ ಸಂಶಯ ತೆಗೆದುಕೊಳ್ಳುವುದಿಲ್ಲ. ವಯಸ್ಸಿಗೆ ಬಂದ ಕೂಡಲೆ ಮದುವೆಯಾಗಿ ಹೆಂಡತಿಯನ್ನು ಮನೆಯಲ್ಲಿಟ್ಟುಕೊಂಡರಾಯಿತು. ಮುಂದೆ ಏನು ಮಾಡಿದರೂ ಜನರಿಗೆ ಸಂಶಯ ತಟ್ಟುವ ಕಾರಣವೆ ಇರುವುದಿಲ್ಲ. ನಾರಾಯಣನಿಗೆ ತಾನು ಇದನ್ನೆ ಹೇಳತಕ್ಕವನು. ತನ್ನ ವಿಷಯವಾಗಿ ಕೂಡ ಜನರು ಸಂಶಯ ತೆಗೆದುಕೊಂಡಿದ್ದರು ಎಂದು ಹೇಳಿಬಿಟ್ಟರಾಯಿತು. ಗಂಡಸಿನ ಮಾತು ಬೇರೆ (ತನಗೆ ಆ ಅನುಭವವಿದ್ದಿತು, ಅವನ್ನು ಹೇಳುವಂತಿಲ್ಲ). ಆದರೆ ಹೆಂಗಸಿನ ಸ್ಥಿತಿ ಏನು? ಏನಿಲ್ಲ, ಗಂಡಸೇ ಆಗಲಿ ಹೆಂಗಸೇ ಆಗಲಿ, ವಯಸ್ಸಿಗೆ ಬಂದಾಗ ———. ಕುಲಕರ್ಣಿಯು ಒಮ್ಮೆಲೆ ತಡೆದನು ತನ್ನ ವಿಚಾರಲಹರಿಯನ್ನು. ವಯಸ್ಸಿಗೆ ಬಂದಾಗ ಹೆಂಡತಿಯ ಕೂಡ ಸಂಸಾರ ಮಾಡದೆ ಇದ್ದಾಗ ತನ್ನ ವರ್ತನ ಹೇಗಿದ್ದಿತೆಂಬುದು ಚನ್ನಾಗಿ ಗೊತ್ತಿದೆ ತನಗೆ. ಈಗ ಅದೇ ಸ್ಥಿತಿಯಲ್ಲಿದ್ದ ನಾರಾಯಣನನ್ನು ತನ್ನ ಮನೆಯಲ್ಲಿ ತಂದಿಟ್ಟುಕೊಳ್ಳುವುದೆಂದರೆ—? ತಾನೆಂತಹ ಮೂರ್ಖ! ಮದುವೆಗೆ ಬಂದ ಮಗಳಿದ್ದಾಳೆ, ಮದುವೆಯಾಗಿ ವಿಧವೆಯಾದ ಮಗಳಿದ್ದಾಳೆ, ವಿಧವಾ ಸೊಸೆ—! ಎಲ್ಲರೂ ಚಿಕ್ಕವರು! ಇಂತಹ ಪರಿಸ್ಥಿತಿಯಲ್ಲಿ ಬಣಿವೆಯಲ್ಲಿ ಬೆಂಕಿಯನ್ನು ಮುಚ್ಚಿಡುವ ಮೂರ್ಖತನ ಮಾಡಬಹುದೆ?

× × × ×

ಬರಿಯ ತುಳಜಿಯ ಉದಾಹರಣೆಯಿಂದಲೆ ಕುಲಕರ್ಣಿಗೆ ಬುದ್ಧಿ ಕಲಿಸಿದರೆ ಸಾಲದು ಎನ್ನಿಸಿತು ನಾರಾಯಣನಿಗೆ. ಏನಾದರೂ ಸದ್ಯದ ಸ್ಥಿತಿಯಲ್ಲಿ ತುಳಜಿಯು ವ್ಯವಹಾರಕ್ಕೆ ಅವನ ಮಗಳಲ್ಲ. ಆದರೆ ವ್ಯವಹಾರದ ದೃಷ್ಟಿಯಿಂದ, ಧರ್ಮದ ದೃಷ್ಟಿಯಿಂದ ತನ್ನ ಮಕ್ಕಳಾದ ಹುಡುಗಿಯರನ್ನು ಯಾವ ಸ್ಥಿತಿಯಲ್ಲಿಟ್ಟಿದ್ದಾನೆ ಈ ಕುಲಕರ್ಣಿ? ವಿಧವೆಯರಾದ ಅವನ ಸೊಸೆಯರು, ಅವನ ಮಗಳು — ಪಾಪ! ಉತ್ಸಾಹದಿಂದ ತುಂಬಿ ತುಳುಕಿ ಸಮಾಜವನ್ನೆ ಬೆಳಗಬೇಕಾದ ತಾರುಣ್ಯದಲ್ಲಿ ತಲೆ ಬೋಳಿಸಿಕೊಂಡು ಹಿತ್ತಲದ ತುಳಸೀಕಟ್ಟೆಗೆ ತೂಗಬಿದ್ದಿದ್ದಾರೆ? ಆಗಲಿ....ಶಕ್ಯವಾದರೆ ಅವರನ್ನು ಮನೆಬಿಡಿಸಿ——————

× × × ×

ನಾರಾಯಣನನ್ನು ಮನೆಯಲ್ಲಿಟ್ಟುಕೊಳ್ಳುವದಂತೂ ಶಕ್ಯವೆ ಇಲ್ಲ ಎಂದುಕೊಂಡನು ಕುಲಕರ್ಣಿ. ಅವನನ್ನು ಇರಿಸುವುದೆಲ್ಲಿ? ಓಹೋ! ತೋಟದ ಸುಧಾರಣೆಮಾಡಬೇಕೆಂದು ತಲೆತುಂಬ ಹರಟೆ ಕೊಚ್ಚುತ್ತಿದ್ದ. ಆ ನೆವದಿಂದ ಅವನನ್ನು ಅಲ್ಲಿಯೆ ಇರಿಸಿಬಿಡೋಣ. ದನಕ್ಕೆಂದು ಕಟ್ಟಿದ್ದ ಮುರುಕು ಮನೆ ಇದೆ, ಇಲ್ಲವೆ ಗುಡಿಸಲ ಇದೆ—— ಅಥವಾ ಭಾವಿ ಬಿದ್ದುಕೊಳ್ಳಲೊಲ್ಲನೇಕೆ? ನನಗೇಕೆ ಅದರ ಚಿಂತೆ? ಅವನಿಗೂ ತೋಟಕ್ಕೂ ಗಂಟುಹಾಕಿ ಬಿಟ್ಟರಾಯಿತು.

× × × ×

ಮಧುಕರ ವೃತ್ತಿಯನ್ನು ಕುಲಕರ್ಣಿಯ ಮನೆಯಿಂದಲೆ ಮೊದಲು ಮಾಡಬೇಕು; ನನ್ನ ಸಮಾಜಸುಧಾರಣೆಯ ಕುರುಕ್ಷೇತ್ರ, ಧರ್ಮಕ್ಷೇತ್ರ ಅವನ ಮನೆ ಎಂದುಕೊಂಡನು ನಾರಾಯಣನು. ನಾಯಿಯು 'ಗುರ್' ಎಂದಿತು. 'ಏನೊ, ಕೃಷ್ಣಾ, ಹೃಷೀಕೇಶಾ, ದೇವದತ್ತ ವನ್ನೂದಿದೆಯಾ?' ಎಂದು ನಗೆಮೊಗದಿಂದ ನಾಯಿಯನ್ನು ನೋಡಿದನು; ನಾಯಿಯು ಎದುರು ನೋಡುತ್ತಲೆ 'ಗುರ್' ಎನ್ನುತ್ತಿತ್ತು.

ನಾರಾಯಣನು ಎದುರು ನೋಡಿದನು — ಕುಲಕರ್ಣಿ ರಂಗಣ್ಣ!

ಕುಲಕರ್ಣಿಯು ಮುಖವೆತ್ತಿದನು – ನಾರಾಯಣ – ರಾಯರ್ರು!

'ಜ್ಯೋತಿಷ್ಯಶಾಸ್ತ್ರದಲ್ಲಿ ಯಾರಿಗಾದರೂ ಗತಿ ಇದೆಯೆ? ಎಂದರೆ ವಿಶ್ವಾಸವಿದೆಯೆ? ಜಿಜ್ಞಾಸುವಿಗೆ ಅಧಿಕಾರ ಬೇಕು. ಜ್ಯೋತಿಷ್ಯ ಶಾಸ್ತ್ರಕ್ಕೆ ಅಧಿಕಾರ ಪ್ರಾಪ್ತವಾಗುವುದು ಎರಡು ಸಂಗತಿಗಳಿಂದ. ಒಂದು, ಜ್ಯೋತಿಷ್ಯಶಾಸ್ತ್ರದಿಂದಲೆ ಹೊಟ್ಟೆತುಂಬಿಕೊಳ್ಳುತ್ತಿರಬೇಕು; ಇನ್ನೊಂದು, ದುಡಿಯದೆ ದುಡ್ಡು – 'ದೌಲತ್ತು' ದೊರಕಿಸುವ ಹಂಬಲವಿರಬೇಕು. ಇವೆರಡರಲ್ಲಿ ಯಾವುದೇ ಒಂದು ಅಧಿಕಾರವಿದ್ದರೆ ಸಾಕು, ಜ್ಯೋತಿಷ್ಯವು ಸುಖಪ್ರದವಾಗುವುದು, ಮೋಕ್ಷಪ್ರದವಾಗುವುದು. ಹೊಟ್ಟೆಹೊರೆದುಕೊಳ್ಳುವಂತಹ ಜ್ಯೋತಿಷಿಯು ಮುಂದೆ ಬುದ್ಧನು ಕೂಡ ಕಲ್ಲೆದೆಯುವ ನೆನ್ನಿಸುವಂತಿದೆ. ಜೀವಿಗಳಿಗೆ ಸುಖವನ್ನು ಬಯಸುವವನು ಅವನು; ಅವರೆಲ್ಲರ ಸುಖದಲ್ಲಿಯೆ ತನ್ನ ಸುಖವನ್ನು ಕಾಣುವವನು ಅವನು. ಅಂತಹ ನಿಸ್ವಾರ್ಥ ಬುದ್ಧಿ, ಅಂತಹ ನಿರ್ಮಲ ಪ್ರೇಮ, ಅಂತಹ ಕರುಣಾರ್ದ್ರವಾದ ಹೃದಯ ಜ್ಯೋತಿಷ್ಯದಿಂದ ಹೊಟ್ಟೆಹೊರೆದುಕೊಳ್ಳುವವನದು! ದುಡಿಯದೆ ದುಡ್ಡು ದೊರಕಿಸುವ ಹಂಬಲವಿದ್ದವನೂ ಹಾಗೆಯೆ. ವ್ಯತ್ಯಾಸವಿಷ್ಟೆ; ಜ್ಯೋತಿಷಿಗೆ ಮನುಷ್ಯರ ಸದ್ಗುಣಗಳಲ್ಲಿ ವಿಶ್ವಾಸವಿದ್ದರೆ, 'ಹಂಬಲಿಗ' ನಿಗೆ ದೇವನಲ್ಲಿ, ದೇವತೆಗಳಲ್ಲಿ, ಗ್ರಹಗಳಲ್ಲಿ ವಿಶ್ವಾಸ. ಅಂತೂ ಜ್ಯೋತಿಷಿಯೂ 'ಹಂಬಲಿಗ' ನೂ ಕೂಡಿಕೊಂಡಲ್ಲಿ ಭಾಗ್ಯೋದಯ ಖಂಡಿತವೆಂದೆ ತಿಳಿಯತಕ್ಕದ್ದು.

ದುದೋಹ ಗಾಂ ಸ ಯಜ್ಞಾಯ ಸಸ್ಯಾಯ ಮಘವಾ ದಿವಂ
ಸಂಪದ್ವಿನಿಮಯೇನೋಭೌ ದಧತುರ್ಭುವನತ್ರಯಂ

ಎಂದ ಕಾಳಿದಾಸನು ವರ್ಣಿಸಿದ ದಿಲೀಪನ ರಾಜ್ಯದಂತೆ ಜ್ಯೋತಿಷಿಯೂ 'ಹಂಬಲಿಗ' ನೂ ಕೂಡಿಕೊಂಡು ಕೆಲಸ ಮಾಡುತ್ತಿರುವಲ್ಲಿ ಸ್ವರ್ಗ–ಭೂಮಿಗಳೆರಡೂ ಪರಸ್ಪರಸಖ್ಯದಿಂದ ಪರಸ್ಪರ ಸುಖಸಂಪತ್ತಿಯನ್ನು ಬೆಳೆಸಿಕೊಂಡಿರುವುವು. ಉದಾಹರಣಾರ್ಥವಾಗಿ ಭರತವರ್ಷ (ಎಂದರೆ ಮ್ಲೇಚ್ಛರು ಹೇಳುವ 'ಇಂಡಿಯಾ ದೇಶ'ವನ್ನು) ನೋಡಬಹುದು. ನಮ್ಮ ದೇಶದಲ್ಲಿ ಭೂಮಿಗೂ ಸ್ವರ್ಗಕ್ಕೂ ಹೆಚ್ಚು ನಿಕಟ

ವಾದ ಸಖ್ಯ. ಅಲ್ಲಿಯವರು ಇಲ್ಲಿ, ಇಲ್ಲಿಯವರು ಅಲ್ಲಿ ಹೋಗಿಬರುವ ರೂಢಿಯು ಎಂದಿನಿಂದಲೂ ನಡೆದಿದೆ. ಈ ಎರಡೂ ಜನಾಂಗಗಳ ನಡೆ–ನುಡಿಗಳು ಒಂದರಿಂದೊಂದು ಅತ್ಯಂತ ಭಿನ್ನವಾಗಿದ್ದರೂ ಇವುಗಳ ಸಖ್ಯ–ಸೌಹಾರ್ದಗಳಲ್ಲಿ ಒಂದಿಷ್ಟಾದರೂ ಒಮ್ಮೆಯಾದರೂ ವ್ಯತ್ಯಯ ಬಂದಿಲ್ಲ. ಸ್ವರ್ಗದ ಭಾಷೆ ಸಂಸ್ಕೃತ, ಭೂಮಿಯ ಭಾಷೆ ದೇಶ್ಯ; ಮರ್ತ್ಯಲೋಕದವರು ಶಾಕಾಹಾರಿಗಳು, ಅಮರಲೋಕದವರು ಮಾಂಸಾಹಾರಿಗಳು; ಹುಟ್ಟುವೆವು — ಸತ್ತು ಸುಧಾರಿಸಿಕೊಳ್ಳುವೆವು ನಾವು, ಅವರು ಹುಟ್ಟುವುದೂ ಇಲ್ಲ–ಸತ್ತು ಸುಧಾರಿಸುವುದೂ ಇಲ್ಲ; ದುಡಿಯದ ಹೊರತು ಊಟವಿಲ್ಲ ನಮಗೆ, ಊಟವಿಲ್ಲದೆ ದುಡಿಯುವ ರೂಢಿಯಿಲ್ಲ ಅವರಿಗೆ. ಹೀಗೆ ತೋರಿಕೆಗೆ ವ್ಯತ್ಯಾಸಗಳಂತಿದ್ದರೂ ಪರಸ್ಪರ–ಪೋಷಕವಾಗಿವೆ ಈ ಗುಣಗಳು. ಇದಲ್ಲದೆ ಈಗಿನ ಸ್ವರ್ಗನಿವಾಸಿಗಳು ಒಂದಾನೊಂದು ಕಾಲದಲ್ಲಿ ಭರತಖಂಡದ ಮೂಲನಿವಾಸಿಗಳಿದ್ದರಂತೆ. ಈಗಲಾದರೂ ಮೂಲೆ–ಮೂಲೆಗಳಲ್ಲಿ ಉಳಿದುಕೊಂಡಿದ್ದಾರೆ ಎಷ್ಟೋ ದೇವ ದೇವತೆಗಳು. "ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ,ಕೆರೆಭಾವಿ ಹೂಗಿಡು ಮರಂಗಳಲ್ಲಿ,ಗ್ರಾಮದ ಮಧ್ಯದಲ್ಲಿ, ಚೌಪಥ ಪಟ್ಟಣ ಪ್ರವೇಶದಲ್ಲಿ,ಹಿರಿಯಾಲದ ಮರದಲ್ಲಿ,ಮನೆಮಾಡಿ"ರುವವರೆಷ್ಟು? ಜನರ ಸುಖವನ್ನು ಬಯಸುವ ಜ್ಯೋತಿಷಿಗೆ ಇವರೆಲ್ಲರ ಪರಿಚಯ. "ಕರಿದೇವಮ್ಮಯ, ಹಸಗೂಸು, ಬಸಿರೆ, ಬಾಣಂತಿ, ಕುಮಾರಿತಿ, ಕೊಂತ ಗೂಸೆಂಬವರ ಹಿಡಿದುಂಬ ತಿರಿದುಂಬ ಮಾರಯ್ಯ, ಬೀರಯ್ಯ, ಖೇಚರ ಗಾವಿಲ, ಅಂತರಬೆಂತರ, ಕಾಳಯ್ಯ, ಮಾಳಯ್ಯ, ಕೇತಯ್ಯ"ಗಳೆಂಬವರೆಲ್ಲ ಬಂದು ನೆರವಾಗುವರು 'ಹಂಬಲಿಗ'ನಿಗೆ. ಮದುವೆ ಬೇಕಾದರೆ,ಮಕ್ಕಳು ಬೇಕಾದರೆ, ಮಂದಿಯ ಮಕ್ಕಳು ಬೇಡಾದರೆ, ನೋಕರಿ ಸಿಕ್ಕಬೇಕೆಂದರೆ, ಸಂಬಳ ಹೆಚ್ಚಾಗಬೇಕೆಂದರೆ ಯೋಗ್ಯ ಸ್ಟಾಂಪು (stamp = ತಿಕೀಟು) ಗಳನ್ನಿಟ್ಟು ಜ್ಯೋತಿಷಿಗೆ ಬರೆಯುವುದು, ಜ್ಯೋತಿಷಿಯು ಮೇಲಿನಧಿಕಾರಿಗಳಿಗೆ ಬರೆಯುವುದು. ಅವರು ತಮ್ಮ 'ಬಾಬು' (ಸಲ್ಲತಕ್ಕ ಲಂಚ) ತಿಳುಹಿಸುವುದು. ಕೊನೆಗೆ 'ಹಂಬಲಿಗ'ನು ಅದನ್ನು ಪೂರಯಿಸುವುದು. ಈ ಶ್ರಮವಿಭಾಗದಿಂದ ನಡೆಯುತ್ತ ಬಂದಿದೆ ಭಾರತೀಯನ ಜೀವನ

ಪ್ರಗತಿ. ಹಾಳಾದ ಈ ಕಲಿಯುಗದಲ್ಲಿ ಈ ಪದ್ಧತಿ ಎಲ್ಲಿ ಕುಗ್ಗುವುದೊ, ನಮ್ಮ ದೇಶವೆಲ್ಲಿ ದುರ್ದಶೆಗೀಳಿಯುವುದೊ ಎಂಬ ಭೀತಿ. ಆದರೂ ನಮ್ಮ ಸುದೈವದಿಂದ ಇದೇ ವ್ಯವಹಾರವು ಇನ್ನೂ ನಮ್ಮ ಹಳ್ಳಿಗಳಲ್ಲಿ ಅಮಲಿನ (ಜಾರಿಯ)ಲ್ಲಿದೆ; ಶಹರುಗಳಲ್ಲೂ ಕೂಡ ವಾರಕ್ಕೊಮ್ಮೆ ಈ ಗ್ರಹಗಳ, ದೇವ-ದೇವತೆಗಳ market quotations ಎಂದರೆ ಬಾಜಾರ ಭಾವ ಇಲ್ಲವೆ ಪೇಟೆಯ ಧಾರಣೆ ಕನ್ನಡ ವೃತ್ತಪತ್ರಗಳಲ್ಲಿ ಪ್ರಕಟವಾಗುತ್ತಲಿದೆ. ಅಂತೂ ಕನ್ನಡ ವೃತ್ತಪತ್ರಗಳನ್ನು ನಡೆಸಬೇಕೆನ್ನುವವರೂ ಹಳ್ಳಿಯ ಪುನರುಜ್ಜೀವನೆಯನ್ನು ಮಾಡಬೇಕೆನ್ನುವವರೂ ಭರತಖಂಡಕ್ಕೆ ಭಾಗ್ಯೋದಯವನ್ನು ತರುವ ಈ ಪ್ರಾಚೀನ ಸಂಸ್ಕೃತಿಯ ಪದ್ಧತಿಯನ್ನು ಮರೆಯತಕ್ಕದ್ದಲ್ಲ. ನಾರಾಯಣನಿಗೆ ಸದ್ಯಕ್ಕಂತೂ ವೃತ್ತಪತ್ರ ನಡೆಸುವ ಯೋಚನೆ ಇದ್ದಿಲ್ಲ; ಹಳ್ಳಿಯ ಪುನರುಜ್ಜೀವನದ ಹಂಬಲ ಮಾತ್ರ ಬಹಳವಿದ್ದಿತು. ಕುಲಕರ್ಣಿಗೆ ಹೇಳಿದನು-ಎಲ್ಲವನ್ನು. ನಾರಾಯಣನಿಗೆ ಬಹಳೇ ವಿಚಿತ್ರವೆನ್ನಿಸಿತು. ತನ್ನ ಕಾರ್ಯಕ್ರಮದಲ್ಲಿ ವಿರೋಧ ಬಂದರೆ ಕುಲಕರ್ಣಿಯಿಂದಲೇ ಬಂದೀತು ಎಂದೆಣಿಸಿದ್ದನು. ಆದರೆ ಈ ೩-೪ ದಿವಸಗಳಲ್ಲಿ ನಡೆದ ಸಂಗತಿಗಳನ್ನು ನೆನೆಸಿಕೊಂಡರೆ ಆಶ್ಚರ್ಯವಾಗುವಂತಿದೆ. ಪ್ರತಿಯೊಂದು ವಿಚಾರದಲ್ಲಿ, ಪ್ರತಿಯೊಂದು ಕಾರ್ಯದಲ್ಲಿ ಕೈಗೊಟ್ಟು ನೆರವಾಗಲು ಸಿದ್ಧನಾಗಿದ್ದಾನೆ ಕುಲಕರ್ಣಿ! ಮೊದಲು ದಾರಿಯಲ್ಲಿ ಭೆಟ್ಟಿಯಾದಾಕ್ಷಣವೆ ಬಹು ವಿನಯದಿಂದ ವರ್ತಿಸಹತ್ತಿದನು. ಬಹಳ ಮಾಡಿ ತನ್ನ ಜೊತೆಯಲ್ಲಿ ಈಗ ಕಂಡು ಬರುವ 'ಕೃಷ್ಣ'ನ ಪ್ರಭಾವವಿದ್ದರೂ ಇರಬಹುದು ಎಂದುಕೊಂಡಿದ್ದನು ನಾರಾಯಣನು. ಆದರೆ ಕ್ರಮೇಣ ಕುಲಕರ್ಣಿಯ ಮನೋವೃತ್ತಿಯೆ ಬದಲಾಗಿದೆ ಎಂದು ಕಂಡುಬಂದಿತು ನಾರಾಯಣನಿಗೆ.

"ಚಹಾದಂಗ್ಡೀವಳಗಿನ ಕೆಲಸ ಬಿಟ್ಬಿಟ್ಟೆ" ಎಂದಿದ್ದನು ನಾರಾಯಣನು.

"ಅಂ-ನಾನೂ ಅದನ್ನೆ ಹೇಳ್ಲಿಕ್ಕೆ ಬಂದಿದ್ದೆ" ಎಂದು ಹಲ್ಲುಕಿರಿದಿದ್ದನು ಕುಲಕರ್ಣಿ.

"ಹೇಳಲಿಕ್ಕೆ ?"

''ಅಂದ್ರು—ನಮ್ಕಡೀನೆ ಬಂದು ಇದ್ಕೋಬೇಕು ಅಂತ''

''ನಾನು ಮನೆಮನೆ ಮಧುಕರಿ ಬೇಡಬೇಕಂತೀನಿ''

''ಇದನ್ನೇನ್ಹೇಳ್ತೀರಿ, ನಾರಾಯಣರಾಯ್ರು? ನಾನು—''

''ನನಗ ಸ್ವತಂತ್ರ ಶಾಲೆ ಸುರೂ ಮಾಡ್ಬೇಕಾಗೇದ—ಹಳ್ಳಿಯ ಹುಡುಗರ ಸಲುವಾಗಿ''

''ಹುಡುಗರ್ಯಾಕ? ನಾವೂ ಬರ್ತೀವಿ ತಗೊಳ್ಳಿರಿ. ನಿಮ್ಮಂಥಾವ್ರು ಸಾಲೀ ತೆಗೆಯೋದಂದ್ರೇನು? ನಾವು ನಿಮಗ ಮಧುಕರಿಗೆ ಬಿಡೋದಂದ್ರೇನು? ನಿಮ್ಮಂಥವ್ರು ನಮ್ಹಳ್ಳೀ ದಶಿಂದ (ಸಲುವಾಗಿ) ಇಷ್ಟೊಂದು ಕಾಳ್ಜೀ ಮಾಡೋದೂ ಅಂದ್ರ ನಮ್ಮೂರ ಗ್ರಹಾನೇ ಬದಲಾದ್ಹಾ ಅನ್ನಬೇಕು....ಸೀವ್ಮಾಡೋದಕಾಗಿ ಊರಿಗೆಲ್ಲಾ ಸತ್ಯನಾರಾಯಣ ಕೊಡ್ಬೇಕಂತೀನಿ.''

ನಾರಾಯಣನಿಗೆ ಮೊದಲು ಈ ಸಂದರ್ಭವೆ ತಿಳಿದಿರಲಿಲ್ಲ. ಏನಾಗುವುದೊ ನೋಡೋಣ ಎಂದು ಎಲ್ಲವನ್ನೂ ಕುಲಕರ್ಣಿಗೇ ಬಿಟ್ಟುಕೊಟ್ಟಿದ್ದನು. ಕುಲಕರ್ಣಿಯೂ ನಿರ್ವಂಚನೆ ತೋರಿಸುತ್ತ ವ್ಯವಸ್ಥೆ ಮಾಡಿಕೊಟ್ಟನು. ತೋಟವೆ ನಾರಾಯಣನ ನಿವಾಸಸ್ಥಾನ, ಗುಡಿಸಲು ಅವನ ಮಂದಿರ. ದಿನಾಲು ಊರೊಳಗೆ ಯಾರಿಗೆ ಶಕ್ಯವಾಗುತ್ತಿದೆಯೊ ಅಂತಹರು 'ಮಧುಕರ'ಯನ್ನು ತಂದಿಡುತ್ತಿದ್ದರು. ಒಂದು ೮–೧೦ ಹುಡುಗರೂ ಬರುತ್ತಿದ್ದರು. ಆ ಕಾರಣದಿಂದ ಸಾಮಾನ್ಯವಾಗಿ ಮನೆಯ ಹೆಣ್ಣುಮಕ್ಕಳೆ 'ಮಧುಕರಿ'ಯನ್ನು ತಂದುಕೊಡುತ್ತಿದ್ದರು. ತನ್ನ ಮನೆಯ ಮಧುಕರಿಯನ್ನು ಮಾತ್ರ ಕುಲಕರ್ಣಿಯು ತಾನಾಗಿಯೆ ತರುತ್ತಿದ್ದನು. ನಾರಾಯಣನ ನಿಮಿತ್ತವಾಗಿ ಮನೆಯೊಳಗಿನ ಹುಡುಗರೆಲ್ಲ ತೋಟದಲ್ಲಿಯೆ ಸೇರಿ ಆಡುತ್ತಿದ್ದುದರಿಂದ ಆ ಹುಡುಗರ ಕಾಟ ಮನೆಯಿಂದ ತಪ್ಪಿದಂತಾಗಿ ಎಷ್ಟೋ ತಂದೆಯರು ನಾರಾಯಣನನ್ನು ಹಾಡಿ ಹರಸುತ್ತಿದ್ದರು. ಮನಸ್ಸಿನಲ್ಲಿ ಶಿಶು–ಸಂಘವೆ ಸೇರಿದಂತಾಗಿದ್ದರೂ ನಾರಾಯಣನ ಶಾಲೆಗೆ ಮಾತ್ರ ಇನ್ನೂ ಪ್ರಾರಂಭವಾಗಿದ್ದಿಲ್ಲ. ಮೊದಲಿನ ಒಂದೆರಡು ದಿನ ನಾಯಿಗೆ ಹೆದರಿ ದೂರಿನಿಂದಲೆ 'ಇದೇನೊ ವಿಚಿತ್ರ ನಡೆದಿದೆ' ಎಂದು ಕುತೂಹಲದಿಂದ ನೋಡಿ ಓಡಿ ಹೋಗುತ್ತಿ

ದ್ದರು. ಇದಲ್ಲದೆ ಮೊದಲಿನ ಒಂದೆರಡು ದಿನ ನಾರಾಯಣನ ಲಕ್ಷ್ಯವೂ
ಶಾಲೆಗಿಂತ ತುಳಜಿಯ ಕಡೆ ಹೆಚ್ಚಾಗಿದ್ದಿತು. ಅವಳೂ ಉಪ್ಪಿಟ್ಟಿನಂಗ
ಡಿಯ ಕೆಲಸವನ್ನು ಬಿಟ್ಟಿದ್ದಳು. ನಿಜವಾಗಿ ಹೇಳಬೇಕಾದರೆ ಮಾಲಕನೆ
ಅವಳನ್ನು ಹೊರಗೆ ಹಾಕಿದ್ದನು. ತನ್ನಲ್ಲಿಯ ಸುದ್ದಿಯನ್ನೆಲ್ಲ ಅವಳು
ನಾರಾಯಣನಿಗೆ ಮುಟ್ಟಿಸುವಳೆಂದು ಮಾಲಕನ ಸಂಶಯ. ಇದಲ್ಲದೆ ಅವ
ಳದೂ ನಾರಾಯಣನದೂ ಸಂಬಂಧ ಎಂಬ ಸುದ್ದಿಯನ್ನು ಹರಡಿ ನಾರಾ
ಯಣನ ಹೆಸರು ಕೆಡಿಸಬೇಕಾದರೆ ಜನರಿಗೆ ಸಂಶಯ ಬರುವಂತೆ ಇಬ್ಬ
ರನ್ನೂ ಒಂದೇ ಕಾಲಕ್ಕೆ ಬಿಡಿಸಬೇಕಲ್ಲವೆ ? ನಾರಾಯಣನು ಬೇರೊಂದು
ಸ್ವತಂತ್ರ ಕಾಫಿಯಂಗಡಿಯನ್ನು ಸುರುಮಾಡಬಹುದೆಂದೆಣಿಸಿ ಅದಕ್ಕೆ
ಕಲ್ಲು (ತಡೆ) ಹಾಕುವ ಪೂರ್ವ ತಯ್ಯಾರಿಯಿಂದ ಮಾಲಕನು ನಾರಾಯ
ಣನ ಹೆಸರು ಕೆಡಿಸಲಿಕ್ಕೆ ಸಿದ್ಧನಾದದ್ದು. ಅಂತೂ ತುಳಜಿಯು ಗತಿಗೇಡಾ
ಗಿದ್ದಳು. ಅದೊಂದು ಅನುಕೂಲ ಸಂಗತಿಯೆ ಎಂದುಕೊಂಡನು ನಾರಾ
ಯಣನು. ತನ್ನ ಮಧುಕರಿಯ joint stock company (ಜಾಯಿಂಟ್
ಸ್ಟಾಕ ಕಂಪನಿ) ಯಲ್ಲಿ ಅವಳಿಗೆ shares (ಶೇಅರ್ಸ) ಗಳನ್ನು ಕೊಟ್ಟನು.
ಕಂಪನಿಗೆ ತಾನು ಡಿರೆಕ್ಟರ್, ತುಳಜಿ ಶೇಅರ್-ಹೋಲ್ಡರ್, 'ಕೃಷ್ಣ'ನು
ಆಡಿಟರ, ಎಂದರೆ ಉಳಿದುದನ್ನು ಇಲ್ಲವೆ ಉಳಿಸಿದುದನ್ನು ತಿನ್ನುವವನು.
ಇದರಲ್ಲಿ ನಾರಾಯಣನ ಸ್ವಾರ್ಥಬುದ್ಧಿ ಎಳ್ಳಷ್ಟೂ ಇದ್ದಿಲ್ಲ. ಬೇಕಾ
ದಷ್ಟು ಪರಿಯಾಗಿ ಹೇಳಿದನು ತುಳಜಿಗೆ, ಅವಳು ಒಪ್ಪಲಿಲ್ಲ. ಆದುದ
ರಿಂದ ನಾರಾಯಣನಿಗೆ ತಾನೇ ಡಿರೆಕ್ಟರನಂತೆ ಮೊದಲು ತಿನ್ನಬೇಕಾ
ಯಿತು. ಮೊದಲಿನ ೩-೪ ದಿನಗಳು ಕಳೆದುವು. ತುಳಜಿಗೆ ಆಶ್ಚರ್ಯ.
ದಿನಾಲು ತಪ್ಪದೆ ಕುಲಕರ್ಣಿ ಮೊದಲ್ಗೊಂಡು ಊರ ಕೆಲ ಜನರು ಊಟ
ವನ್ನು ತಂದು ಕೊಡುತ್ತಿರುವರು, ಇದು ಆದುದಾದರೂ ಹೇಗೆ, ಇದರ
ಅರ್ಥವಾದರೂ ಏನು- ಎಂದು ತುಳಜಿಯ ತೊಡಕು. ತಿನ್ನುವಾಗ ಕೂಡ
ಇದೇ ವಿಚಾರವನ್ನು ಮಾಡುತ್ತ ಸಾವಕಾಶವಾಗಿ ಅತ್ಯಂತ ಸಾವಕಾಶ
ವಾಗಿ ಊಟಮಾಡುತ್ತಿದ್ದಳು. ಇದು 'ಕೃಷ್ಣ'ನಿಗೆ ಸಹನವಾಗುತ್ತಿದ್ದಿಲ್ಲ.
ಯಾಕೆಂದರೆ ಅವಳದು ಮುಗಿದ ಮೇಲೆ ತನ್ನದು. ಅವಳದು ಮುಗಿಯುವ
ವಾದರೂ ಯಾವಾಗ ? ಹಸಿದು ನಿತ್ರಾಣನಾದ ಬ್ರಾಹ್ಮಣನಂತೆ ಕಣ್ಣು

ಮುಚ್ಚಿ ಒಳಗಿಂದೊಳಗೆಯೆ ಹಲ್ಲು ತಿನ್ನುತ್ತಿದ್ದಿತು ನಾಯಿ. ಆ ನಾಯಿಗಾದರೂ ಆಶ್ಚರ್ಯ. ಮನೆಮನೆಗೆ ಹೋಗಿ ಹೊರಗೆ ಚೆಲ್ಲಿದುದನ್ನು ತಮಗೆ ಬೇಡವಾದುದನ್ನು ಯಾರಿಗೂ ತೊಂದರೆ ಇಲ್ಲದೆ ತಿನ್ನುವಾಗ ಕೂಡ ತನ್ನ ಹೊಡೆದೋಡಿಸಿದ್ದರು ಈ ಜನರು. ಈಗ ಅವರು ತಾವಾಗಿಯೆ ತಂದು ಕೊಡುವರಲ್ಲ! ನಾರಾಯಣನು ತಮ್ಮ ಜಾತಿಯವನೆಂದು ಅವನಿಗೆ ತಂದು ಕೊಡುತ್ತಿರಬಹುದೆ? ಸೋಮಾರಿಯಾದ ತನ್ನನ್ನು ಮನೆತನದ ನಾಯಿಗಳು ಪೀಡಿಸುತ್ತಿರುವುದು 'ಕೃಷ್ಣ'ನಿಗೆ ಚೆನ್ನಾಗಿ ಅನುಭವಕ್ಕೆ ಬಂದಿತ್ತು. ಆದರೆ ಮನುಷ್ಯಜಾತಿಯಲ್ಲಿ ಸೋಮಾರಿಯಾದ ಸಜಾತೀಯನನ್ನು ಪ್ರೋತ್ಸಾಹಿಸುವ ಕಲೆ ಇದೆ ಅಲ್ಲ–ಎಂದು 'ಕೃಷ್ಣ'ನ ಬಾಯಿಗೆ ಜೊಲ್ಲು ಸುರಿಯುತ್ತಿತ್ತು ಮಿಕ್ಕವರಿಬ್ಬರ ಊಟ ಮುಗಿಯುವ ವರೆಗೆ. ಹೀಗೆ ಸಜಾತೀಯತ್ವದ ಅಭಿಮಾನವಿದ್ದ ಎಚ್ಚರವಿದ್ದ ಮಾನವನು ಪ್ರಗತಿಯ ದಾರಿಯಲ್ಲಿ ತನಗಿಂತ ಎಷ್ಟೋ ಮೆಟ್ಟಿಲು ಮುಂದಿರುವುದರಲ್ಲಿ ಆಶ್ಚರ್ಯವೇನು—ಎಂದು ತನ್ನ ವಿಚಾರಕ್ಕೆ ಡೊಂಕಬಾಲದಿಂದ ಪ್ರಶ್ನಾರ್ಥಕ ಚಿಹ್ನವನ್ನಿಡುತ್ತಿದ್ದನು 'ಕೃಷ್ಣ'ನು. ಒಬ್ಬರೊಬ್ಬರನ್ನು ಕಂಡಾಕ್ಷಣ ಗುರ್ರೆನ್ನುವ ತನ್ನ ಜಾತಿಯವರಿಗಾಗಿ ತಿರಸ್ಕಾರ ಹುಟ್ಟಿ–ತಲೆ ಜಾಡಿಸುತ್ತ ಕಿವಿ ಬಡಿಯುತ್ತಿದ್ದನು 'ಕೃಷ್ಣ'ನು. 'ನರಜನ್ಮ ಬಲು ದೊಡ್ಡದು' ಎಂದು ಮುಂಗಾಲ್ಗಳನ್ನು ಮಡಚಿ ಜೋಡಿಸಿಕೊಂಡು ಹಾಡುತ್ತಿದ್ದನು 'ಕೃಷ್ಣ'ನು....ನಾರಾಯಣನೂ ಯಾವ ಆತಂಕವಿಲ್ಲದೆ, ಯಾವ ಹೆದರಿಕೆ ಇಲ್ಲದೆ, ಯಾವ ವಿಕಾರವನ್ನೂ ತೋರಿಸದೆ ತಿನ್ನುತ್ತಿರುವಾಗ 'ನರಜನ್ಮ ಬಹಳೇ ದೊಡ್ಡದು' ಎಂದುಕೊಳ್ಳುತ್ತಿದ್ದನು 'ಕೃಷ್ಣ'ನು. ಇಷ್ಟು ನಿರ್ಭಯವಾಗಿ, ನಿರಾತಂಕವಾಗಿ, ನಿರ್ವಿಕಾರವಾಗಿ ತಿನ್ನುವುದು, ಅದೂ ಇನ್ನೊಬ್ಬರು ಕೊಟ್ಟ ಅನ್ನವನ್ನು ತಿನ್ನುವುದು, 'ಕೃಷ್ಣ'ನ ಜಾತಿಯಲ್ಲಿ ಶಕ್ಯವೇ ಇದ್ದಿಲ್ಲ. ಅದಕಾಗಿ ಅವನಿಗೆ ಅಷ್ಟೊಂದು ಆಶ್ಚರ್ಯ....ನಾರಾಯಣನಿಗೂ ಆಶ್ಚರ್ಯವಾಯಿತು ೩–೪ ದಿವಸಗಳ ತರುವಾಯ. ಸಾಲೆ ಇಲ್ಲ– ಹುಡುಗರಿಲ್ಲ, ಹೋಗುವವರಿಲ್ಲ – ಬರುವವರಿಲ್ಲ, ಮಾಡುವುದಿಲ್ಲ– ಮಂಡಿಸುವುದಿಲ್ಲ, ಜನರಿಲ್ಲ – ಜಬಾಬ್ದಾರಿ ಇಲ್ಲ —— ಆದರೂ ದಿನಾಲು ಅನ್ನ ತಪ್ಪದೇ ಬರುತ್ತಲಿದೆ. ಸಮಾಜಸೇವೆ ಮಾಡಿ ಮಧುಕರಿಯ

ಸ್ನಾನ್ನ ಬೇಕೆಂದರೆ ಪುಕ್ಕಟೆಯಾಗಿ ಸುಗ್ರಾಸ ದೊರಕುತ್ತಲಿದೆ. ಇದರ ಅರ್ಥವೇನು – ಎಂದು ಅವನಿಗೂ ಆಶ್ಚರ್ಯ.

" ಬೇಡಿ ಬಂದವ್ರಿಗೆ ಬಾಡಿಗೆ ಕೇಳೋದಿಲ್ಲ ದೇವ್ರು " ಎಂದು ಕುಲಕರ್ಣಿಯು ಭಾವಗರ್ಭಿತವಾಗಿ ನಕ್ಕು ಬಿಟ್ಟನು.

"ನಾನೇನೂ ಬೇಡಿಲ್ಲಲ! " ಎಂದು ನಾರಾಯಣನು ಹುಡುಗನಂತೆ ಹಟ ತೊಟ್ಟನು.

" ಗ್ರಹ ಗಟ್ಟಿ ಇದ್ದವ್ನ್ಯಾಲೆ ನೀವಾಗೇ ಯಾಕ್ಬೇಡ್ತೇಕೂ-- ಅಂತೀನಿ " ಎಂದನು ಕುಲಕರ್ಣಿ.

ಗ್ರಹ ಗಟ್ಟಿ ! ಆಗ ತಿಳಿಯಿತು ನಾರಾಯಣನಿಗೆ ಫಲಜ್ಯೋತಿಷದ ಮಹಿಮೆ.

* * * *

ಕುಲಕರ್ಣಿಗೆ ಮಾತ್ರ ಈ ಮೊದಲೇ ತಿಳಿದಿತ್ತು ಆ ಮಹಿಮೆ. ನಾರಾಯಣನನ್ನು ತಂದು ತನ್ನ ತೋಟದಲ್ಲಿನ ಗುಡಿಸಲದಲ್ಲಿ ಇದ್ದು ಕೊಳ್ಳುವಂತೆ ವ್ಯವಸ್ಥೆ ಮಾಡಿದ ಮರುಗಳಿಗೆ ಹೊಳೆಯಿತು ಕುಲಕರ್ಣಿಗೆ ಆ ಮಹಿಮೆ. ಆ ದಿನ ಸಂಜೆಯ ' ಕಚೇರಿ 'ಯು ಕೂಡುವ ಸಮಯಕ್ಕಂತೂ ಕುಲಕರ್ಣಿಗೆ ' ಖಾತ್ರಿ ' ಯಾಗಿಬಿಟ್ಟಿತು.

" ಅದೇ ಹೇಳಿದೆನಲ್ರೊ, ಮಲ್ಲಣ್ಣೋ, ಮುಖಲಕ್ಷಣ ನೋಡಿದಾಗೇ ನನಗ ಸಂಶಯ ಬಂದಿತ್ತು.... ಏನೊ, ಮಲ್ಲಣ್ಣೋ—" ಮಲ್ಲಣ್ಣ ತಲೆ ತೂಗಿದನು. ಅವನಿಗೂ ಸಂಶಯ ಬಂದಿತ್ತು. " ಆ ಧಿನ ಬಸ್ನಿನಾಗ ಬರೋಆಗ ನನಗೂ ಅನಿಸ್ತಿರಿ, ಮಾರಿ ( ಮುಖ ) ನೋಡಿದರೆ ದೊಡ್ಡ ಮನಸ್ಯಾರ್ಹಾಂಗ ಕಾಣ್ತೈತಿ——— "

" ಮಾರಿ ಏನ್ನೋಡ್ತಿಯೊ ? " ಮಲ್ಲಣ್ಣನ ದಡ್ಡತನಕ್ಕಾಗಿ ಬೇಜಾರದಿಂದ ದನಿ ಎಳೆದನು ಕುಲಕರ್ಣಿ; " ಕೈ ನೋಡೀನಿ ಕೈ, ನಾನು. ಗೆರೆ ಎಂಥಾವು ಅಂತ ತಿಳಿದೀದಿ ಕಯ್ಯೊಳಗ ? ಅಂ – ಎಂಥಾವಂತ ತಿಳಿದೀದಿ ? ನಮ್ಮ ನಿಮ್ಹಾಂಗ ಕಯ್ಯೊಳಗಿನ ತುತ್ತು ಕೂತಾ ಕರಗಿಸಿ ಬಾಯಿಗೆ ಬರೇ ನೀರು ಬಸಿಯೋಹಾಂಗ ಮಾಡೋದಲ್ಲ .... ರಾಜಯೋಗದ ಲಕ್ಷಣ, **ರಾಜಯೋಗದ ಲಕ್ಷಣಾ** ಅಂದೆ. "

ಇಷ್ಟೊಂದು ಒತ್ತಿ ಹೇಳುವ ಕಾರಣವೆ ಇದ್ದಿಲ್ಲ ಮಲ್ಲಣ್ಣಗೆ. "ಇದ್ದಿರ್ಬೇಕ್ರಿ!" ಎಂದು ತಲೆ ತೂಗಿ, "ನನಗೂ ಹುಡುಗ್ರು ಹೇಳ್ತಿದ್ರಿ, 'ಭಾ' ದ ಅಂಗ್ಡೀವಳಗ ಇವರ ಕಯ್ಯಾಂದ ತಂದ್ಕೊಟ್ಟ 'ಭಾ' ದ ಶೆಂವಿ (ಸವಿ = ರುಚಿ) ಶೆಕ್ರೀ (ಸಕ್ಕರಿ) ಗೆ ಇರ್ತಿದ್ದಿಲ್ಲಂತ, ಶೆಕ್ರೀಗ. ಬೇಡಿ ಬಂದಿರ್ತ್ಯದರಿ. ಮಾದೇವ ಮೆಚ್ಚಿದ್ರ ಮಣ್ಣು ಬಂಗಾರ ಆಗ್ತೈತಿ .... ಬೇಡಿ ಬಂದಿರ್ಬೇಕ್ರಿ ಅದಕ, ಬೇಡಿ ಬಂದಿರ್ಬೇಕು!"

"ಆಹಾ! ಇದೇ ಯೋಗ್ಯ ಮಾತು, ಮಲ್ಲಣ್ಣೋ. ನಾವೂ ನೀವೂ ಹೊಲಾ ಅಂತೀವಿ, ಹಸನ ಅಂತೀವಿ, ಬೀಜ ಅಂತೀವಿ, ಬಿತ್ತೋದು ಅಂತೀವಿ. ಮುಂದಾತ್ರಡೋದೇನು? ಮಳೆ ಇದ್ದ ವರ್ಷ ಧಾರಣಿ ಇರೋದಿಲ್ಲ. ಧಾರಣಿ ಇದ್ದ ವರ್ಷ ಮಳೆ ಇರೋದಿಲ್ಲ. ಹೌದಂತೀಯೊ ಇಲ್ಲಂತೀಯೊ?"

"ಇಲ್ಲಂದ್ರೂ ಮಾತು ಮುಚ್ಚತ್ಯತೇನರಿ, ಅಣ್ಣಾ ಅವರ?"

"ಮಾತು ಮುಚ್ಚಿದ್ರೂ ಕೊಡೋಗೂ ಕೊಂಬೋದೂ ಮುಚ್ಚಬೇಕಲ್ಲ, ಮಲ್ಲಣ್ಣೋ?"

"ಆಹಾ!"

"ಆಽಹಾ!"

ಸಮಾನೋದ್ಗಾರಗಳಿಂದ ಸಮಾನಹೃದಯರಾಗಿ ಪರಸ್ಪರ ಐಕಮತ್ಯವನ್ನು ಸ್ಥಾಪಿಸಿಕೊಂಡು ಇಬ್ಬರೂ ಮಾತನ್ನು ಮುಂದುವರಿಸಿದರು.

"ಅದ್ಕ ಹೇಳ್ತೀನಿ, ಮಲ್ಲಣ್ಣೋ, ಯಾವದ್ಕೂ ದೇವರು – ಧರ್ಮ ಅಂಬೋ ವಿಶ್ವಾಸ ಬೇಕು."

"ಎಂಥಾ ಮಾತರಿ, ಅಣ್ಣಾ ಅವರ!" ಎಂದು ತುಟಿ 'ಲೊಚಕರಿಸಿ' ದನು ಮಲ್ಲಣ್ಣ.

"ಇಲ್ಲಾ ಅಂದ್ರ ದೇವರಾದ್ರೂ ನಮಗ ಕೊಡು ಅಂದ್ರ ಹ್ಯಾಂಗ ಕೊಟ್ಟಾನು? ಹೌದಂತೀಯೋ ಅಲ್ಲಂತೀಯೊ, ಮಲ್ಲಣ್ಣೋ"

"ಹೌದ್ರಿ, ಅಂವ ಆದ್ರೂ ಸುಮ್ಮಾಕ ಹ್ಯಾಂಗ ಕೊಟ್ಟಾನರಿ?"

"ಆಹಾ!"

" ಆಽಹಾ ! "

ಎರಡು ಗೊತ್ತುವಳಿಗಳು ಏಕಮತವಾಗಿ ಸ್ವೀಕೃತವಾದಂತಾದುವು. ಕುಲಕರ್ಣಿಯು ಮೂರನೆಯ ಗೊತ್ತುವಳಿಯನ್ನು ಮಂಡಿಸಿದನು. "ಅದ್ಕ ಹೇಳ್ತೀನಿ, ಮಲ್ಲಣ್ಣೋ, ಅವರ ಕೈ ನೋಡಿದ್ರ ರಾಜಯೋಗದ ಲಕ್ಷಣಾ! ಇನ್ನು ಈ ಪ್ರಸಂಗ ಬಿಟ್ಟು ಉಪಯೋಗ ಇಲ್ಲಾ ಅಂದುಕೊಂಡೆ. ಬಂಗಾರದ ಗಾಳಿ ಬಂದ್ಹಾಂಗ ಬಂದಾರ ಇವರು ಕಮ್ಮೂರಿಗೆ, ಇವರ್ನ ಬಿಟ್ಟು ಉಪಯೋಗ ಇಲ್ಲಾ ಅಂದುಕೊಂಡೆ."

ಮಲ್ಲಣ್ಣನ ಮುಖದಲ್ಲಿ ಮುಗುಳ್ನಗೆ ಮೂಡಿತು. " ಅಂತೂ ಗತ್ತು ಸಾಧಿಸಿ ಅವರ್ನ ತ್ವಾಟ ( ತೋಟ ) ದಾಗ ತಂದಿಟ್ಟರಿ ಕುಲಕರ್ಣೇರು. "

"ಏನಾದ್ರೂ ಅನ್ನು, ಮಲ್ಲಣ್ಣೋ " ಸ್ತುತಿಗಾಗಿ ಸಂಕೋಚಪಡುವವನಂತೆ ಎಳೆನಗೆ ನಗುತ್ತ ಮಾತನಾಡಿದನು ಕುಲಕರ್ಣಿ, "ಏನಾದ್ರೂ ಅನ್ನು. ಆದ್ರ ಈ ಊರಿನ ಕೆಟ್ಟ ದಿನಾ (ದಿನಗಳು) ಇನ್ನು ಹೋದುವೂಂತ ತಿಳಿ. "

" ಅಽಟ ( ಅಷ್ಟು ) ಯೆವಸ್ತಾ (ವ್ಯವಸ್ಥಾ) ಮಾಡೀರಿ ? " ಹೆದರಿದವನಂತೆ ಮಾತನಾಡಿದನು ಮಲ್ಲಣ್ಣ.

" ವ್ಯವಸ್ಥಾ ಮಾಡೋದಂದ್ರೇನು ? " ಕುಲಕರ್ಣಿಯೂ ದನಿ ಇಳಿಸಿದನು. " ನಾವೂ ನೀವೂ ನಾಕ್ಮಂದಿ ಮುಂದಾದರ —— ಅಲ್ಲ, ಇದ್ನೋಡು, ಮಲ್ಲಣ್ಣೋ, ಅವರಿಗೇನೂ ಬ್ಯಾಡ. ಏನೂ ಅಂದ್ರ ಏನೂ ಬ್ಯಾಡೊ, ಮಲ್ಲಣ್ಣ ! ಈಗ್ನೋಡು, ಮದಿವಿ ಆಗಿ ೧೫ ದಿವಸ ಆಗಿಲ್ಲ— ಹೆಂಡ್ತೀನ್ನ ಬಿಟ್ಟು ಹೊರಟಾರ ! "

" ಹೆಂಡ್ತೀನ್ನ ಬಿಟ್ಟು—— "

" ಬಿಟ್ಟೀ ಬಿಟ್ಟಾರೊ,ಮಲ್ಲಣ್ಣೋ,ಇಷ್ಟ್ಯಾಕ ತಿಳೀಲೊಲ್ಲದು ನಿನಗ, ಬಿಟ್ಟೀ ಬಿಟ್ಟಾರ! ಹೆಂಗಸರ ಮೋಹ, ಸಂಸಾರ ಮೋಹ ಬ್ಯಾಡಾ ಅಂತಾರ ———"

" ಬರಾಬರಿ ( ಯೋಗ್ಯ ) ಐತಿರಿ ಅವರು ಹೇಳೋದು " ಎಂದು ಗಾಂಭೀರ್ಯದಿಂದ ತಲೆ ತೂಗಿದನು ಮಲ್ಲಣ್ಣ.

" ಹೌದಂತೀಯೊ ಅಲ್ಲಂತೀಯೊ ? ಯೋಗ್ಯತಾ ಹೆಚ್ಚಿಸದು ಅವರ್‍ದು, ಮಲ್ಲಣ್ಣೋ; ಬ್ಯಾಡಾ ಅಂದ್ರು, ಬಿಟ್ಟು ಬಿಟ್ರು. "

" ಅದೇ ಹೇಳ್ತಿದ್ದಲ್ಲರಿ, ದೊಡ್ಡಮನಸ್ಯಾ ( ಮನುಷ್ಯ ) ನ ಲಗಣ ( ಲಕ್ಷಣ ) "

" ಅಹಾ! "

" ಅಹಾ ! "

" ಮತ್ತ ನೀ ಅಂತೀಯಲ್ಲ, ಮಲ್ಲಣ್ಣೋ " ಕುಲಕರ್ಣಿಯು ನಾಲ್ಕನೆಯ ಗೊತ್ತುವಳಿಯನ್ನು ಪ್ರಸ್ತಾಪಿಸಿದನು, " ಮತ್ತ ನೀ ಅಂತೀಯಲ್ಲ, ಅವರ್‍ಗೆ ಬ್ಯಾಡ ಅಂದ್ರ ಏನೂ ಬ್ಯಾಡ. ನಾನ್ಹೇಳ್ದೆ ಅವರ್‍ಗೆ, ದಿನಾಲು ಊಟ ತಂದ್ಕೊಡ್ತೀನಿ, ಅಂತ. ಅದ್ಕ — " ಕುಲಕರ್ಣಿಯು ನಗೆಯಿಂದ ಹೇಳಿದನು, " ಅದ್ಕ ಅವರು ಏನಂದ್ರೂ ಅಂತ ತಿಳಿದೀದಿ, ಮಲ್ಲಣ್ಣೋ ? ಅಂ ? "

ಮಲ್ಲಣ್ಣಗೂ ದನಿಯಲ್ಲಿ ಅಭಿಮಾನ ಬಂದಿತು. " ಕುಲ್ಕರ್ಣೇರ ದೊಡ್ಮನಸಿಗೆ —— "

" ಥೂ, ಹುಚ್ಚೊಡ್ಡಾ ! " ಎಂದು ಖೊಳ್ಳನೆ ನಕ್ಕು ಬಿಟ್ಟನು ಕುಲಕರ್ಣಿ. " ದೊಡ್ಮನಸು ಅಂತ ! ಹಸಿವೆ ಇಲ್ದವ್ರಿಗೆ ಬುತ್ತಿ ಕಟ್ಟಿಕೊಡೋದೇನು ದೊಡ್ಮನಸೊ ? 'ನಶ್ವರವಮಾತ್ರವಾದ ಈ ಬೌತಿಕ ದೇಹಕ್ಕೆ ದಿನನಿತ್ಯ ಕಾಮ–ಕ್ರೋಧಾದಿಗಳ ಪಿಂಡೀಭೂತವಾದ ಅನ್ನಕೊಟ್ಟು ನಮಗೇನು ಮಾಡೋದು ?' ಅಂದುಬಿಟ್ರು ! ತಿಳೀತೇನು, ಮಲ್ಲಣ್ಣೋ ? "

" ಎಂಥಾ ಮಾತರಿ ! " ಎಂದನು ಮಲ್ಲಣ್ಣ.

" ಆಗ ನಾನು ಹೇಳ್ದೆ ಯತಿಶ್ರೇಷ್ಠರಿಗೆ—— "

" ಅವರ್‍ಹೆಸರೇನಂದ್ರಿ ? "

" ಅವರಿಗ್ಯಾಕೊ ಹೆಸರು ? " ಎಂದು ಶಿಕ್ಷಕನು ವಿದ್ಯಾರ್ಥಿಗೆ ತಿಳುಹಿಸಿ ಹೇಳುವವನಂತೆ ಹೇಳಿದನು ಕುಲಕರ್ಣಿ. ಅವನಿಗೆ ಹುರುಪೂ ಬಂದಿತ್ತು. ಒಂದು ಸಾವಿರಸಲ ಹೇಳಿದ ಕತೆಯನ್ನು ಈಗ ಹೇಳುವವನಿದ್ದ ರಂಗಣ್ಣ. ಅವನು ಸಂಸಾರ ಹೂಡಿದ ಒಂದೆರಡು ವರ್ಷಗಳಲ್ಲಿ

ಒಂದು ಅನಾಹುತಕ್ಕೆ ಪ್ರಾರಂಭವಾಗಿತ್ತು. ಹುಟ್ಟಿದಾಕ್ಷಣ ಕೂಸು ಸತ್ತುಹೋಗುತ್ತಿತ್ತು. ಮೂರುವರ್ಷಗಳ ಕೊನೆಗೆ ಮೂರು ಕೂಸುಗಳು ಹುಟ್ಟಿ ಸತ್ತು ಹೋದುವು. ರಂಗಣ್ಣನು ಒಳ್ಳೇ ಪೇಚಿನಲ್ಲಿ ಸಿಕ್ಕಿಕೊಂಡನು. ಮಕ್ಕಳೇ ಹುಟ್ಟುತ್ತಿದ್ದಿಲ್ಲವೆಂದರೆ ಆ ಮಾತು ಬೇರೆ; ಹೆಂಡತಿಯನ್ನು ಬಿಟ್ಟುಬಿಡಬಹುದಾಗಿತ್ತು. ಮಕ್ಕಳು ಹುಟ್ಟುವುವು, ಕೂಡಲೆ ಸಾಯುವುವು; ಇಂತಹ ಅನಿಷ್ಟದ ಎಲ್ಲ ಜವಾಬ್ದಾರಿಯನ್ನು ಹೆಂಡತಿಯ ಮೇಲೆ ಹೊರಿಸುವಂತಿಲ್ಲ. ಮಾಡಬೇಕೇನು ? ಸುದೈವದಿಂದ ಬಾವಾಜಿಯೊಬ್ಬ ಬಂದಿದ್ದನು. ಅವನ ಕಡೆಯಿಂದ ' ತಾಯಿತ ' ನ್ನು ಮಾಡಿಸಿಕೊಂಡನು. ಹಣ ಬಹಳ ವೆಚ್ಚವಾಯಿತು. ಕನ್ನಡ ವರ್ತಮಾನ ಪತ್ರಗಳಲ್ಲಿ ತಪ್ಪದೆ ಬರುವ ಜಾಹೀರಾತಿನಲ್ಲಿಯ ' ತಾಯಿತು ' ಎಷ್ಟೋ ಸೋವಿಯಾಗುತ್ತಿತ್ತು. ಆದರೆ ಪತ್ರ ಬರೆಯಲು ನಾಚಿಕೆ; ತನ್ನ ಹೆಸರಿನಿಂದ 'ರವಾನಿಸಿ' ಬಂದಾಗ ಸ್ವೀಕರಿಸಲು ಧೈರ್ಯವಿಲ್ಲ. ಅಂತೂ, ತುಟ್ಟಿಯಾದರೂ ಅಡ್ಡಿ ಇಲ್ಲ, ಮತ್ತಾರಿಗೂ ತಿಳಿಯುವದಿಲ್ಲವಲ್ಲ ಎಂದು ಸಮಾಧಾನ ತಂದುಕೊಂಡಿದ್ದನು. ಅಷ್ಟರಲ್ಲಿ ಸಂಶಯ ಬಂದಿತ್ತು. ' ತಾಯಿತಿ ' ನಿಂದ ಗುಣಬರದಿದ್ದರೆ ? ಏನೆ ಇರಲಿ, ಬಾವಾಜಿಯ ಹೆಸರು – ವಿಳಾಸಗಳನ್ನು ತಿಳಿದುಕೊಳ್ಳೋಣ ಎಂದು ' ತಮ್ಮ ಹೆಸರೇನು ? ' ಎಂದು ಕೇಳಿದ್ದನು. ಸಂಸಾರಿಗರ ಅಜ್ಞಾನಕ್ಕಾಗಿ ಕರುಣಾಮಯ ನಗೆಯೊಂದನ್ನು ನಕ್ಕು " ಹೆಸರು ? ನಮಗೆ ಯಾಕೆ ? ಹೆಸರು ನಮ್ಮದು ಎನ್ನುವುದು ಹೇಗೆ ? ಜನ್ಮದಾತೃಗಳಾದ ತಂದೆ–ತಾಯಂದಿರು ಕೊಟ್ಟ ಹೆಸರು. ಆ ಹೆಸರು ನಮ್ಮದೂ ಎನ್ನೋದು, ಪರಮಾತ್ಮ ಕೊಟ್ಟ ದೇಹ ನಮ್ಮದು ಎನ್ನೋದು ಅಜ್ಞಾನ, ಮಾಯಾ " ಎಂದಿದ್ದನು ಬಾವಾಜಿ. ರಂಗಣ್ಣನಿಗೆ ಒಪ್ಪಿಗೆಯಾಯಿತಷ್ಟೆ ಅಲ್ಲ ಆ ಬಾವಾಜಿಯ ಒಂದೆರಡು ದಿನಗಳ ಸಹವಾಸದಿಂದ ವೈರಾಗ್ಯ ಭಾವವೂ ಬಂದಿತ್ತು. ಕೆಲವು ದಿವಸಗಳ ತರುವಾಯ ಬಾವಾಜಿಯ ಮೇಲಿನ ಶ್ರದ್ಧೆಯಿಂದ, ಅವನು ಕೊಟ್ಟ ' ತಾಯಿತಿ ' ಗೆ ತಾನೇಕೆ ಅಡ್ಡ ಬರಬೇಕೆಂಬ ಭಕ್ತಿಯಿಂದ ಮತ್ತೆ ಸಂಸಾರದ ಕಡೆ ಮನಸ್ಸನ್ನು ತಿರುಗಿಸಿದ್ದನು. ಹುಟ್ಟಿದ ಮಕ್ಕಳು ಸಾಯಲಿಲ್ಲ, ಇದುವರೆಗೂ ಸತ್ತಿದ್ದಿಲ್ಲ.

ಇನ್ನೊಬ್ಬ ಬಾವಾಜಿಯು ದಾರಿಯನ್ನು ನೋಡುತ್ತಿದ್ದನು ರಂಗಣ್ಣನು. ಅವನಿಗೀಗ ಪುತ್ರಸಂಪತ್ತಿ ಮೂರು ತಲೆಗಳವರೆಗೆ ಸಾಕಷ್ಟಿತ್ತು. ಆದಕಾಗಿ ರಂಗಣ್ಣನು ಸಮಯ ಸಿಕ್ಕಾಗ ತನ್ನಲ್ಲುದಯವಾಗುತ್ತಿದ್ದ ವಿರಕ್ತಿ ಭಾವವನ್ನು ಅಡಿತೋರಿಸುತ್ತಿದ್ದನು, ಬಾವಾಜಿಯು “ಆ ಹೆಸರು ನಮ್ಮದೂ ಎನ್ನೋದು, ಪರಮಾತ್ಮ ಕೊಟ್ಟ ದೇಹ ನಮ್ಮದು ಎನ್ನೋದು ಅಜ್ಞಾನ, ಮಾಯಾ” ಎಂಬ ಮಾತನ್ನು ಬೇಕಾದ ಬಾವಾಜಿಯು ಕತೆ ನಡೆದಾಗಲೂ ಹೇಳುತ್ತಿದ್ದನು. ಈಗಲೂ ಅದನ್ನು ಹೇಳಿ ‘ಅಂಥವ್ರಿಗ್ಯಾಕೊ ಹೆಸರು ? ಅದೆಲ್ಲಾ ನಮ್ಮ ಅಜ್ಞಾನ, ಮಾಯಾ’ ಎಂದು ಸುಗ್ಗರೆದನು.

“ಅಹಹಾ !”

“ಆಹಾ !”

“ಅದ್ಕ ನಾನ್ಹೇಳ್ದೆ, ಮಲ್ಲಣ್ಣೋ, ದೇವ್ರ ಒಲ್ಲೆ ಅಂದ್ರು ಭಕ್ತರು ತಂತಮ್ಮ ತೆಂಗು-ಕಾಯಿ ಅವನ ಮುಂದೆ ಒಡಿದೆ ಒಡೀತಾರ, ಅಂತ”

“ಎಲ! ಅಧ್ಯಾಂಗ ತಪ್ಪೀತ್ರಿ ?” ತಪ್ಪುವುದು ಯಾರಿಗೆ ?—ದೇವನಿಗೊ ? ಭಕ್ತರಿಗೊ ?—ಎಂಬುದನ್ನು ಮಾತ್ರ ಹೇಳಲಿಲ್ಲ ಮಲ್ಲಣ್ಣ.

“ಯಾಕಂದ್ರ, ನೋಡು, ಮಲ್ಲಣ್ಣೋ,” ಕುಲಕರ್ಣಿಯು ಗಾಂಭೀರ್ಯಯುಕ್ತವಾಗಿ ಹೇಳತೊಡಗಿದನು. “ಯಾಕಂದ್ರ ನೋಡು, ನಾಳೆ ನೀನೆ ಬಂದೆ ನನ್ನಕಡೆ ಅಂತ ತಿಳ್ಕೊ. ನನ್ನ ತೋಟದಾಗ ಇದ್ದಾರ ಯತಿಶ್ರೇಷ್ಠರು ಅಂತ ನನ್ನಕಡೆ ಬರ್‍ತೀ ನೀನು—” ಮಲ್ಲಣ್ಣ ತಲೆ ತೂಗತಕ್ಕ ಸಂನಿವೇಶ ಇದು ಎಂದು ಕುಲಕರ್ಣಿಯು ತಡೆದನು, ಕುಲಕರ್ಣಿಯು ಮುಂದೆ ಸಾಗಬಹುದು—ಎಂದು ಮಲ್ಲಣ್ಣಯು ತಲೆ ತೂಗಿದನು, ಮಲ್ಲಣ್ಣ ತಲೆತೂಗಿ ತನ್ನ ಮಾತನ್ನು ಒಪ್ಪಿಕೊಂಡನು— ಎಂದು ಕುಲಕರ್ಣಿಯು ಮುಂದೆ ಸಾಗಿದನು, “—ಅಂತ ನನ್ನಕಡೆ ಬರ್‍ತೀ ನೀನು. ಒಂದುಹೊತ್ತೊ ಒಂದುಗ್ಗಾಣ್ಯೋ, ಒನ್ನಮ್ಕಷ್ಟಿ ಕಾಳು-ಕಡಿ ತಂದು-ಇದನ್ನ ನಮ್ನೇವಾ ಅಂತ ಯತಿಗಳಿಗೆ ಮುಟ್ಟಿಸಬೇಕ್ರಿ ಅಂತ್ಹೇಳ್ತಿ. ಅಲ್ಲಪ, ಮಲ್ಲಣ್ಣೋ, ನಿನಗ ಯತಿ-ಯಾತ್ರಾ ಅಂದರ ಭಕ್ತಿ ಅದs, ಶ್ರದ್ಧಾ ಅದs, ನೀನು ಹೇಳ್ತಿ. ಆಗ ಯತಿಗಳಿಗೆ ಒಂದೂ ಬ್ಯಾಡಾ ಅಂತ ಹೇಳಿ ನಿನ್ನ ತಿರುಗಿ

ಕಳಿಸ್ತೀರ?–ಕಮತೂರ ಜನ ನನಗೊತ್ತಿಲ್ಲ? ನಾ ಮುಂದ ನೀ ಮುಂದ ಅನ್ನೋವ್ರು ಇಂಥಾ ಕೆಲ್ಸಕ——''

''ಎಂಥಾ ಮಾತರಿ! ಕುಂಟಗಾಲಿಗೆ ಅಗಸುದ್ದ (ಔಷಧ) ಅಂತ ಬರೋರಿಗೆ ರೊಕ್ಕ ಕೊಟ್ಟು ಹಾಳಾಗ್ತಾವ ಮುಚ್ಗೊಟ್ಗಳು! ಇನ್ನು 'ಆಗಲೆಪ!' ಅಂತ ಒನ್ಮಾತಿನಾಗ ಬೇಡಿಧಾಂಗ ಮಾಡೋ ಇಸ್ತ್ರಿ (ಯುತಿ) ಜನಕ್ಕ ಕೋಡೋದಿಲ್ಲಾ ಅಂದ್ರು?''

''ಯಾರಿಗೇನು ಜುಲುಮೆ ಮಾಡೋದೇನು, ಮಲ್ಲಣ್ಣೋ?'' ಎಂದು ಕುಲಕರ್ಣಿಯು ತತ್ವಜ್ಞಾನದ ಹಿರಿತನದ ದನಿಯಲ್ಲಿ ಮಾತನಾಡಿದನು. 'ನಾನಂತೂ ನನ್ನಷ್ಟಕ್ಕ ಏನಾ ಎರಡೂತ್ತು ಊಟ ಇದೇ ಕೈಯಿಂದ ಕೊಡ್ತೀನಿ. ನಮುಷ್ಟು ದಿವಸಕಾಲ ಮುಗೀತು. ಆದಷ್ಟು ಮಾಡ್ತೀವಿ, ಇದ್ದಷ್ಟು ಕೊಡ್ತೇವ——''

''ಎಲ! ಕುಲಕರ್ಣೇರ್ರೆ ಹೀಂಗ ಮಾತಾಡಿದ್ರ ಹ್ಯಾಂಗ್ರಿ ಅಂತೀನಿ'' ಅಸಮ್ಮತಿಯಿಂದ ತಲೆ ಅಲ್ಲಾಡಿಸಿದನು ಮಲ್ಲಣ್ಣ.

''ಏನಾದ್ರೂ ಹೋಗೋವಾಗ ನಮ್ಮ ಹಿಂದಿನಿಂದೇ ಬರೋದಿಲ್ಲಲ ಇದ್ದದ್ದು! ಅಂ?'' ಈ ಮಾತಿನಲ್ಲಿ ಕುಲಕರ್ಣಿಗೆ ಬಹಳ ವಿಶ್ವಾಸವಿದ್ದಿತು. ಆದಕ್ಕಾಗಿಯೆ ಸಾಲ ತೆಗೆಯಲು ಹಿಂದು ಮುಂದು ನೋಡುತ್ತಿದ್ದಿಲ್ಲ, ಸಾಲವನ್ನು ಮುಟ್ಟಿಸಲೂ ಹಿಂದುಮುಂದೆ ನೋಡುತ್ತಿದ್ದಿಲ್ಲ ''ನಮ್ಮ ಹಿಂದ್ನಿಂದ್ಲೇನು ಬರೋದಿಲ್ಲಲ ಇದ್ದದ್ದು?'' ಎಂದು ಹೆಂಡತಿಯು ಕೂಡ ಯಾವಾಗಲೂ ವಾದಿಸುತ್ತಿದ್ದನು. ಹಿಂದಿನಿಂದ ಬರದಿದ್ದರೂ ನಮ್ಮ ಕೂಡ ಯಾಕೆ ಬರಬಾರದು—ಎಂದು ರಂಗಣ್ಣನ ಹೆಂಡತಿಯ ವಿಚಾರ. ಆ ವಿಚಾರದಿಂದ ಅವಳೂ ಕೊಡುವುದರಲ್ಲಿ ಉಳಿಸಿಕೊಂಡು, ವರ್ಷಕ್ಕೊಮ್ಮೆ ಬರುವ ಮದುವೆಯದಾಗಲಿ ಮುಂಜಿಯದಾಗಲಿ ನಿಮಿತ್ತದಿಂದ ಹೆಚ್ಚಿನ ಹಣ ಸೇರಿಸಿಕೊಂಡು ಮನೆಯಲ್ಲಿ 'ಗೌರಿ'ಗೆಂದು ವಸ್ತ್ರ–ಒಡವೆಗಳನ್ನು ಮಾಡಿಸಿಟ್ಟಿದ್ದಳು. ಮನೆಯಲ್ಲಿ ಅವುಗಳನ್ನು ಯಾವಾಗಲೂ 'ಗೌರಿ'ಯೆ ಧರಿಸುವಳು, ಹೊರಗೆ ಹೋಗುವಾಗ ಮಾತ್ರ ಕುಲಕರ್ಣಿಯು 'ಗೌರಿ'ಯೆ ಧರಿಸುತ್ತಿದ್ದಳು. ಕಮತೂರಿನಲ್ಲಿ ಹಾಗ ಹೊರಗೆ ಹೋಗುವ ಪ್ರಸಂಗಗಳಾದರೂ ಎಷ್ಟು? ಆದುದರಿಂದ

ತೋಟದಲ್ಲಿನ 'ಯತಿಶ್ರೇಷ್ಠ'ರಿಗೆ ದಿನಾಲು ತಾನೇ ನೈವೇದ್ಯವನ್ನೊಯ್ದು ಕೊಡಬೇಕೆಂದು ಅವಳ ಹಟ. ಕುಲಕರ್ಣಿಗೆ ಪೇಚು. ಬೇಡವೆನ್ನಬೇಕೆ—'ಭಕ್ತಿ ಇಲ್ಲದವ, ಧರ್ಮ ಬಿಟ್ಟವ ತಾನು' ಎಂದೆನ್ನಿಸುವುದು ಹೆಂಡತಿಗೆ; ಆಗಲಿ ಎನ್ನಬೇಕೆ—ನಾರಾಯಣನ ಗುರುತು ಸಿಕ್ಕುವುದು ಅವಳಿಗೆ ಒಂದು, ನಾರಾಯಣನ ಮೇಲೆ ವಿಶ್ವಾಸವಿಲ್ಲ ತನಗೆ ಇನ್ನೊಂದು ಸಂಕಟ. "ನಮ್ಮದ್ದು ದಿವಸ ಕಾಲ ಮುಗೇಲಿಕ್ಕೆ ಬಂದ್ಹಾದ. ಆದಷ್ಟು ಮಾಡ್ಕೋಕಂತೇನಿ, ಇದ್ದಷ್ಟು ಕೊಡ್ಕೋಕಂತೇನಿ" ಎಂದು ಸುಗ್ಗರೆದಿದ್ದನು. ಹೆಂಡತಿಯೂ ಸುಮ್ಮನಾಗಿದ್ದಳು. ಆದರೂ ಈ ಮುಚ್ಚು-ಮರೆ ಎಷ್ಟು ದಿವಸ ನಡೆಯಬಹುದು? "ಮಾಡಿದ ಪುಣ್ಯಾ ನಮ್ಮ ಮುಂದೆ ಹೋಗ್ತದ ಹಾದಿ ತೋರಿಸ್ತಾ, ಅಂತ ನಮ್ಮನೀಯಾಕೆ ಹಟಾ ಹಿಡಿದ್ಬಿಟ್ಟಾಳೆ ನೋಡು, ಮಲ್ಲಣ್ಣೋ, ನವ್ರೊದರತು ಮುತ್ತಾಗ್ರರೂ ಊಟ ಕಳಿಸ್ಬಾರದ್ದು ಅಂತ" ಎಂದು ನಕ್ಕನು ಕುಲಕರ್ಣಿ. (ತನಗೆ ಸುಳ್ಳು ಸಾಧಿಸಿತು! ಸುಳ್ಳು ಹೇಳುವುದು ಪಾಪವಂತೆ. ಅದು ಹೋಗೋವಾಗ ನಮ್ಮ ಹಿಂದಿ ನಿಂದ ಬರೋದಿಲ್ಲಲ!)

"ಇನ್ನೂ ಎಷ್ಟಟ (ಎಷ್ಟು) ದಿನಾ ಇರೋರ್ರಿ ಇತ್ತಿ (ಯತಿ) ಜನ?" ಮಲ್ಲಣ್ಣಿಗೆ ಮುಂದಿನ ವ್ಯವಸ್ಥೆ ಮಾಡಿಕೊಳ್ಳಬೇಕೆನ್ನಿಸಿತು. ನಾ ಮುಂದೆ ನೀ ಮುಂದೆ ಎಂದು ಸೇವೆ ಮಾಡುವವರಲ್ಲಿ ತಾನೂ ಒಬ್ಬನಾಗಬೇಕಾಗುವ ಪ್ರಸಂಗ ತಪ್ಪಿದ್ದಲ್ಲ ಎಂದು ತಿಳಿಯಿತು ಆ ಅನುಭವಿಕನಿಗೆ.

"ಮನೀ ಮಾಳಿಗೆ ಸಹಿತ ರಾಶಿಯಿಂದ ತುಂಬ್ದ ಯತಿ ಶ್ರೇಷ್ಠರ್ನ ಕಮ್ತ್ರಾರ್ನಿಂದ ಬಿಡೋ ಹಾಗಿಲ್ಲ ನೋಡು."

"ಅಂದ್ರ, ಎರಗ (ಮೃಗ) ಹೂಡಿದ ಮಾಲ ತಪ್ಪ (ತೋ) ಟ ಬಿಟ್ಟು ನಿಮ್ಮನ್ಯಾಗೇ ಬಂದಿರ್ತಾರ, ಅನ್ನಿರಿ." ಈ ಸೇವೆ ತಪ್ಪಿಸಿಕೊಳ್ಳುವ ಪ್ರಸಂಗ ತನಗೆ ಸಿಕ್ಕಬಹುದೆ ಎಂದು ತಿಳಿದುಕೊಳ್ಳಲು ಮಲ್ಲಣ್ಣಿಯ ಹವಣಿಕೆ. ಕುಲಕರ್ಣಿಗೂ ಅದೇ ಹವಣಿಕೆ. ಮೃಗ ಹೂಡೋದು ಬಿಟ್ಟು ತನ್ನನ್ನು ಹರಿದುಕೊಂಡು ಹೋದರೂ ನಾರಾಯಣನನ್ನು ಮನೆಯೊಳಗೆ ತಂದಿಟ್ಟುಕೊಳ್ಳುವದಿಲ್ಲ ಎಂದು ಅವನ ನಿಶ್ಚಯ...... ಅಂತೂ, ಕಮತರಿಗೆ ಯತಿಶ್ರೇಷ್ಠರೊಬ್ಬರು ಬಂದವರೆನ್ನಲಿಕ್ಕೆ ಏನು ಅಡ್ಡಿ ಇದ್ದಿಲ್ಲ.

'ಕಚೇರಿ'ಯೆಂದೇಳುವುದರೊಳಗಾಗಿ ಅಷ್ಟು ವ್ಯವಸ್ಥೆಯನ್ನು ಮಾಡಿದ್ದನು ಕುಲಕರ್ಣಿ. ರಾತ್ರಿ ಒಂದು ತಾಸು ಕತ್ತಲೆಯಾಗುವುದರೊಳಗಾಗಿ ಊರ ತುಂಬ ಚೈತನ್ಯ. ಯತಿಶ್ರೇಷ್ಠರು ಬಂದಿದ್ದಾರೆ! ಈ ವರ್ಷ 'ಮಳಿಗ ಬ್ಯಾಗ ಹೊಡ್ತದ ಅಂತ ಹೇಳ್ಯಾರಂತ!' 'ಕಾಳು-ಕಡಿ ತುಂಬ ಲಕ್ಕಿ ಹಗೆ ಸಾಲೋದಿಲ್ಲ ಅಂತ!' "ಮಾರೀ (ಮುಖ) ನೋಡಿ ಮನಸಿನಾಗ ಇದ್ದದ್ದು ಹೇಳ್ತಾರಂತ!" "ಯಾರಿಲ್ಲದ್ದಾಗ ನಾಯೀನ್ನ ಮಾತಾಡಿಸ್ತಾರಂತ!"—ಹೀಗೆ ಅನೇಕ ತರದಿಂದ ನಾರಾಯಣನಿಗೆ ಹೊಸ ಆಶ್ರಮದ ದೀಕ್ಷೆಯನ್ನು ಕೊಟ್ಟರು ಕಮತೂರಿನವರು. ಅದಕ್ಕೆಂದೇ ಮರುದಿವಸದಿಂದ ಕುಳಿತಲ್ಲಿಯೇ ಸಾಕಾಗುವಷ್ಟು ಅನ್ನ ದೊರಕುತ್ತಿತ್ತು ನಾರಾಯಣನಿಗೆ.

* * * *

ಮರ್ಯಾದೆವಂತನಾದ 'ಕೃಷ್ಣ'ನಿಗೆ ಒಪ್ಪಿಗೆಯಾಗಿರಲಿಲ್ಲ; ಅವನ ವಿವೇಕಬುದ್ಧಿಗೂ ಇಂತಹ ರೀತಿ ನೀತಿಗಳು ಎಂದಿಗೂ ಒಪ್ಪಿಗೆಯಾಗಿದ್ದಿಲ್ಲ. ಕುಳಿತಲ್ಲಿಯೆ ಬಂದ ಅನ್ನ ತಿಂದ ಮನುಷ್ಯನ ಮೈಯಲ್ಲಿ ಆ ಅನ್ನ ರಕ್ತವಾದರೂ ಆಗುವುದು ಹೇಗೆ ಎಂದು ಅವನಿಗೆ ಯಾವಾಗಲೂ ಸಂದೇಹ. ಈ ಅವಗುಣ ಮನುಷ್ಯ ಜಾತಿಯಲ್ಲಿ ಮಾತ್ರ ಇದೆ ಎಂದು 'ಕೃಷ್ಣ'ನು ತನ್ನ ಸಂಚಾರಗಳಲ್ಲಿ ಅನುಭವದಿಂದ ಕಂಡಿದ್ದನು. ಆದರೆ ಅಂತಹ ಪರಿಸ್ಥಿತಿಗೆ ಕಾರಣವೇನು ಎಂಬುದು ಮಾತ್ರ ಅವನಿಗೆ ಇದುವರೆಗೆ ತಿಳಿದಿರಲಿಲ್ಲ, ಈಗ—ತಾನು ನಾರಾಯಣನೆಂಬ ಮನುಷ್ಯನ ಸಹವಾಸದಲ್ಲಿ ಸಿಕ್ಕಿಕೊಂಡ ಮೇಲೆ—ತಿಳಿಯದೆ ಇರಲಿಲ್ಲ, 'ಯಾತರ ಖಟಪಟಿ? । ಒಂದಿನ ಹೋಗೋದು ಲಟಪಿಟಿ।' ಎಂದು ಹುಚ್ಚೆದ್ದು ತಾಳ ಕಟೆಯುತ್ತ ಮೈತುಂಬ ಬೆವರು ಸುರಿಸುತ್ತ ಹಾಡುವ ಮನುಷ್ಯನೆ ಹಾಡು ಮುಗಿದ ಕೂಡಲೆ ಮನೆಗೆ ಹೋಗಿ ಬೆವರು ಒರೆಸಿಕೊಂಡು ಬಿಸಿನೀರಿನ ಸ್ನಾನಮಾಡಿ

ವಿಸ್ತರಿಸಿ ಮೃಷ್ಟಭೋಜನದ ನವಕುಸುಮ ಫಲ
ವಸ್ತುಗಳ ಕರ್ಪೂರ ವೀಟಿಕೆಯ ಚಂದನದ

ಕಸ್ತೂರಿ ಜವಾದಿಗಳ ಪರಿಮಳದ ಕರ್ಪೂರದ ವಸ್ತ್ರಭೂಷಣ
ವಿಸ್ತರದಾ ।

ವೈಭವದಿಂದ ಪಂಡಿತರು—ಮಕ್ಕಳ ಮಗ್ಗುಲಲ್ಲಿ ಸುಖಶಯ್ಯೆ ಮಾಡಿ ಕಾಲ ಕಳೆಯುವರು. ಮನುಷ್ಯನಿಗೆಯೆ ಶಕ್ಯವಿದೆ, ಅಥವಾ ಮನುಷ್ಯನ ಹಣೆಬರಹವೆ ಹೀಗೆ ಎನ್ನಬಹುದು. ಸಂಸಾರದ ತೊಡಕಿನಲ್ಲಿ ಸಿಕ್ಕಿಕೊಂಡು, ಸ್ವತಃದ ಸ್ಥಾನ-ಮಾನ-ಯೋಗ್ಯತೆಗಳನ್ನು ಬಿಟ್ಟುಕೊಟ್ಟು, ಸುತ್ತಲಿನ ಸೃಷ್ಟಿಯೊಡನಾಡಿ ಬೆಳೆಯದೆ, ಸುತ್ತಲು ನಾಲ್ಕು ಗೋಡೆಗಳನ್ನು ನಿಲ್ಲಿಸಿ, ಮೇಲೆ ಮಾಳಿಗೆಯನ್ನು ಮುಚ್ಚಿಸಿ, ಆತ್ಮದ ಗೋರಿ ಕಟ್ಟುವುದೆ ಮನುಷ್ಯನ ಹಣೆಬರಹ. ಯಾವಾಗಲಾದರೊಮ್ಮೆ 'ಕೃಷ್ಣ'ನು ತಾನೂ ತಗ್ಗು ತೋಡಿಕೊಂಡು ಅದರಲ್ಲಿ ಕಣ್ಣು ಮುಚ್ಚಿಕೊಂಡು ಕಾಲ ಕಳೆಯುತ್ತಿದ್ದನು. ಆದರೆ ಯಾ ವಾ ಗ ಲಾ ದ ರೊ ಮ್ಮೆ ಮಾತ್ರ. ಹೀಗೆ ಆಯುಷ್ಯವೆಲ್ಲ ಒಂದೆಡೆಯಲ್ಲಿ ಕೊಳೆಯುವುದು—. 'ಕೃಷ್ಣ'ನಿಗೆ ಒಂದು ದಿವಸದಲ್ಲಿ ಬೇಜಾರವಾಯಿತು. ಇನ್ನೊಬ್ಬರು ತಂದಿಟ್ಟ ಹೂಳಿಸಿಂದ ನಾಲಗೆಯ ರುಚಿಯು ಕಳೆದಂತಾಯಿತು. ಮೊದಲನೆಯ ದಿವಸದ ಸಾಯಂಕಾಲಕ್ಕೆಯೆ ಅವನು ಹೊರಗೆ ಹೋಗಿ ಬಂದಿದ್ದನು. ಕುಳಿತಲ್ಲಿ ಕುಳಿತ ಬೇಜಾರದಿಂದ ತಲೆಯಲ್ಲಿ ಸಿಡುಕು ಸುಡುತ್ತಿತ್ತು. ಗುರ್ರೆನ್ನುತಲಿದ್ದನು. ಅಡಿಗೆಯ ಮನೆಗಳಿಂದ ಹೊಡೆಸಿಕೊಂಡು ಹೊರಗೋಡಿ ಬಂದ ಬೆಕ್ಕುಗಳಿಗೆ ಇಕ್ಕಟ್ಟಿನ ಪ್ರಸಂಗ ಬಂದಿತು. ಎದುರು 'ಕೃಷ್ಣ', ಒಳಗೆ ಕಟ್ಟಿಗೆ. ಬಾಯಿಯೊಳಗಿನ ಬಕ್ಕರಿ (ರೊಟ್ಟಿ) ಯ ತುಣುಕುಗಳನ್ನು ಚೆಲ್ಲಿಕೊಟ್ಟು ಮತ್ತೆ ಒಳಗೆ ಓಡಬೇಕಾಯಿತು. 'ಕೃಷ್ಣ'ನಿಗೆ ಇನ್ನೂ ಕೆಣಕಿದಂತಾಯಿತು. ದಿಕ್ಕು ದಿಕ್ಕುಗಳಲ್ಲಿ ಬೆಕ್ಕು ಕಾಣಿಸಿಕೊಂಡಂತಾಗಿ ಕಕ್ಕಾಬಿಕ್ಕಿಯಾದವನಂತೆ ನುಗ್ಗಲು ಪ್ರಾರಂಭಿಸಿದ್ದನು. ಕ್ಷಣಮಾತ್ರದಲ್ಲಿ ಊರ ತುಂಬ ಬೊಬ್ಬಾಟ— 'ಯತಿಶ್ರೇಷ್ಠ'ರ ನಾಯಿ ಊರು ಸೇರಿಕೊಂಡಿದೆ ಎಂದು. ನಾ ಮುಂದೆ, ನೀ ಮುಂದೆ ಎನ್ನುತ್ತ ನೈವೇದ್ಯಗಳನ್ನರ್ಪಿಸಲು ಉಜ್ಜುಗಿಸಿದರು. ಬೆಕ್ಕಿನ ಎಂಜಲು ಆಗಿ ಉಳಿದ ರೊಟ್ಟಿಯ ದೊಡ್ಡ ದೊಡ್ಡ ತುಣುಕುಗಳನ್ನು ತಂದರು ಕೆಲರು, ಭಕ್ತಿಯಿಂದ ತನಗಾಗಿಯೆ ಬಹು ದಿವಸಗಳಿಂದ ಕಾದಿಟ್ಟಂತಿದ್ದ ತಂಗಳ ತಿನಿಸನ್ನು ತಂದರು ಕೆಲರು,

'ಹೊರಗೆ' ಇದ್ದಾಗ ತನ್ನ ಅತ್ತೆಯರು ಅತ್ಯಂತ ಪ್ರೇಮದಿಂದೊಗೆದ ಹಳಸಿದ ಅನ್ನವನ್ನು ಚೆಲ್ಲಿದರು ಕೆಲವು ತರುಣ ಸೊಸೆಯಂದಿರು. ಉಪ್ಪು ಹೆಚ್ಚಾಗಿ ತಿನ್ನಲು ಬಾರದೆ ತಮ್ಮ ಉಪ್ಪನ್ನುಂಡ ಹೊಲೆಯರಿಗೆ ಮಡಿವಂತರು ಬೀಸಿ ಸೀಡಿದ ಪಲ್ಲೆಯನ್ನು ಮುಟ್ಟಲಾರದ ಮಡಿಯಿಂದಲೆ ಬಾಚಿದರು ಕೆಲವು ಹೊಲೆಯ ಹೆಂಗಸರು—ಅಂತೂ ನಾನಾವಿಧವಾಗಿ 'ಕೃಷ್ಣ'ನಿಗೆ ಮತ್ತೆ ಮನುಷ್ಯನು ತಂದು ಕೊಡುವ ಅನ್ನವನ್ನೆ ತಿನ್ನಬೇಕಾಗಿ ಅತ್ಯಂತ ಜುಗುಪ್ಸೆಯಾಯಿತು ಈ ಮಾನವ ವರ್ಗಕ್ಕಾಗಿ. 'ದೇವಾ' ಯಾವ ಜನ್ಮವನ್ನು ಕೊಟ್ಟರೂ ಈ ಮಾನವ ಜನ್ಮವನ್ನು ಎಂದೆಂದಿಗೂ ಕೊಡಬೇಡ' ಎಂದು ಮೊರೆಯಿಡುವವನಂತೆ ಆಕಾಶಕ್ಕೆ ಮುಖವನೆತ್ತಿ 'ಹೋ' ಎಂದು ಅತ್ತುಬಿಟ್ಟನು. ಒಂದೇ ಸವನೆ ಓಡಿದನು ತೋಟದ ಕಡೆ. ಎದುರು ಕೆಲ ಊರ ನಾಯಿಗಳು ಕಂಡುವು, 'ಇವೂ ಮನುಷ್ಯನ ಸಹವಾಸದಲ್ಲಿ ಸೇರಿ ಕುಳಿತಲ್ಲಿಯೆ ತಿಂದು-ಕೊಳೆಯುವ ಕುಲಗೇಡಿಗಳು' ಎಂದು ಅವುಗಳನ್ನು ನೋಡಿ, ನೋಡಿದ್ದು ಅಪಶಕುನವಾಯ್ತೆಂದು ಭಾವಿಸಿ,———ಬದಿಯ ಬೀದಿಯಿಂದ ಪಾರಾಗಿ ಓಡಿದನು 'ಕೃಷ್ಣ'ನು. ತೋಟಕ್ಕೆ ಬಂದನು, ಗುಡಿಸಲದ ಹತ್ತಿರ ಬಂದು ನೋಡುವುದರಲ್ಲಿ ಸಂಜೆಯ ಊಟವೂ ಬಂದು ಬಿಟ್ಟಿದೆ. 'ಕೃಷ್ಣ'ನಿಗೆ ತಲೆ ಶೂಲಿ ಎದ್ದಿತೇನೊ! ಗುಡಿಸಲದ ಹಿಂಬದಿಗೆ ಹೋಗಿ ತಗ್ಗು ತೋಡಿ ಹೊಟ್ಟೆಯ ಕೆಳಗೆ ಮಡಚಿಕೊಂಡ ನಾಲ್ಕು ಕಾಲ್ಗಳ ತಲೆಗಿಂಬು ಮಾಡಿ ಮಲಗಿದನು. ರಾತ್ರಿಯೆಲ್ಲಾ ಸ್ವಪ್ನದಲ್ಲಿ ಆಗಾಗ ಜನರು ಬುತ್ತಿ ಕಟ್ಟಿಕೊಂಡು ಬಂದಂತಾಗಲು ಮೇಲಿಂದ ಮೇಲೆ ಮುಖವನೆತ್ತಿ ರಾತ್ರಿಯೆಲ್ಲಾ ಬೊಗಳಿದನು, ಹಂಬಲಿಸಿದನು........೨-೩ ದಿವಸಗಳಲ್ಲಿ 'ಕೃಷ್ಣ'ನಿಗೆ ರೂಢಿಯಾಯಿತು, ಒಂದ ಅನ್ನ ತಿಂದು ತೇಗುವುದು....ಮನುಷ್ಯ ಜಾತಿ ಎಂದರೆ ಅದೆಂತಹ ಸಾಂಸರ್ಗಿಕ ರೋಗ! ಅದೆಂತಹ ಪಿಡುಗು! ಕುಳಿತಲ್ಲಿಯೆ ಆಕಳಿಸುತ್ತಿದ್ದನು 'ಕೃಷ್ಣ'ನು.

× × × × ×

ನಾರಾಯಣನ ಪರಿವಾರದಲ್ಲಿ ಸೇರಿಕೊಂಡ ತುಳಜಿಗೂ ಒಪ್ಪಿಗೆಯಾಗಿರಲಿಲ್ಲ. ಕುಳಿತಲ್ಲಿಯೆ ಮಂದಿ ತಂದು ಕೊಟ್ಟ ಕೂಳನ್ನು ತಿನ್ನು

ವುದು ನಾಯಿ ಮಾಡುವ ಕೆಲಸ, ಮನುಷ್ಯನದಲ್ಲ ಎನ್ನಿಸಿತ್ತು ಅವಳಿಗೆ. ನಾರಾಯಣನಲ್ಲಿ ಅವಳ ವಿಶ್ವಾಸ. ಮನೆತನದವನಾದರೂ ಉಪ್ಪಿಟ್ಟಿನಂಗಡಿಯಲ್ಲಿ ದುಡಿದು ಹೊಟ್ಟೆ ತುಂಬಿಕೊಳ್ಳುತ್ತಿದ್ದವನು ಒಮ್ಮೆಲೆ ಕೈಯಿಂದೆತ್ತಿ ಕೊಟ್ಟ ಅನ್ನವನ್ನು ತಿನ್ನುವನು ಹೇಗೆ—ಎಂದು ಅವಳಿಗೆ ಸಂಶಯ. ಇದರಲ್ಲೇನಾದರೂ ಗೂಢವಿರಬಹುದೆ? ಅಥವಾ—? ತುಳಜಿಗೆ ಧೈರ್ಯವಾಗಲೊಲ್ಲದು ಮತ್ತೊಂದು ವಿಚಾರವನ್ನು ಮನಸ್ಸಿನಲ್ಲಿ ತರಲು..... ಅಥವಾ—**ಮನೆತನದವನೆಂದೇ** ನಾರಾಯಣನು ಹೀಗೆ ಅನಾಯಾಸವಾಗಿ ದೊರೆಯುವ ಅನ್ನವನ್ನು ನುಂಗಿಕೊಂಡು ನಡೆಯುತ್ತಿರಬಹುದೆ? ಬಡತನದಲ್ಲಿಯೆ ಹುಟ್ಟಿ ಬೆಳೆದ ತುಳಜಿಯ ತತ್ವಜ್ಞಾನವು 'ವಿಚಿತ್ರ'ವಾಗಿದ್ದಿತು. ದುಡಿಯದೆ ಹೊಟ್ಟೆ ತುಂಬುವುದಿಲ್ಲವೆಂದು ತತ್ವಜ್ಞಾನಿಯು ಹೇಳಬಹುದು, ಶಾಲೆಯ ಪಠ್ಯಪುಸ್ತಕವೂ ಹೇಳಬಹುದು. ಆದರೆ ಅವರಡಕ್ಕೂ ತುಳಜಿಗಿದ್ದಂತೆ ಜೀವನದ ಸಂಬಂಧವಿಲ್ಲ. ಚಿಕ್ಕವಳಿದ್ದಾಗಿನಿಂದ ತುಳಜಿಯು ನೋಡಿದ್ದಳು, ಕೇಳಿದ್ದಳು, ಅನುಭವಿಸಿದ್ದಳು. ದುಡಿಯುವವನ ಹೊಟ್ಟೆ ಎಂದಿಗೂ ತುಂಬುವುದಿಲ್ಲ, ದುಡಿದರೆ ಹೊಟ್ಟೆ ತುಂಬುವುದೆಂಬ ಮಾತೇ ಸುಳ್ಳು—ಎಂದು ಅವಳ ತತ್ವಜ್ಞಾನವು ಕೂಗಿ ಕೂಗಿ ಹೇಳುತ್ತಿತ್ತು. ಅವಳ ತಂದೆಯು ದುಡಿಯುತ್ತಿದ್ದನು ವರ್ಷಕ್ಕೆ ಆರು ತಿಂಗಳು; ಅವಳ ತಾಯಿಯೂ ದುಡಿಯುತ್ತಿದ್ದಳು ಸುಗ್ಗಿಯ ದಿವಸಗಳಲ್ಲಿ ಮಾತ್ರ. ತಾಯಿಗಾಗಿ ಮಾಡಿದ ಸಾಲವನ್ನು ಮುಟ್ಟಿಸಲು ತಂದೆ ಗಳಿಸಿದ ಕೂಲಿ, ತಂದೆ ಮಾಡಿದ ಸಾಲವನ್ನು ಮುಟ್ಟಿಸಲು ತಾಯಿ ತಂದ ಕೂಲಿ–ಸಾಲುತ್ತಿದ್ದಿಲ್ಲ. ವರ್ಷದಲ್ಲಿ ಹನ್ನೆರಡು ತಿಂಗಳು ಉಣ್ಣುವುದು, ಉಳಿದವರು ಚಲ್ಲಿದ ಚೂರುಗಳನ್ನು. ಅದೂ ಇಲಿಗೆ ರೊಟ್ಟಿ ಕೊಟ್ಟು ಬಲೆಯಲ್ಲಿ ಹಿಡಿಯುವಂತೆ- ಯಾರ ಕಡೆಯಿಂದ ತಂದು ತಿಂದಿರುವುದೊ ಅವರಿಗಾಗಿ ತಿನ್ನದೆಯೆ ದುಡಿಯುವುದು. ಅಂತೂ ದುಡಿಯುವುದಕ್ಕೂ ಹೊಟ್ಟೆ ತುಂಬುವುದಕ್ಕೂ ಯಾವ ಸಂಬಂಧವೂ ಇಲ್ಲವೆಂದು ಅವಳ ಅನುಭವ. ಅದಕ್ಕೆ ಸಾಕ್ಷಿಯಾಗಿ ದುಡಿಯದೆ, ಇಲ್ಲಿಯ ಕಡ್ಡಿಯನ್ನು ಅಲ್ಲಿಗೆ ಎತ್ತದೆ, ತಿಂದು ತೇಗುವ ಗೌಡ–ಕುಲಕರ್ಣಿ–ಸೆಟ್ಟಿಗಳ ಗೋತ್ರದವರು. ನಾರಾಯಣನೂ ಅದೇ ಗೋತ್ರದವನಿದ್ದಿರಬಹುದೆ- ಎಂದು ಹೆದರಿಕೆ

ಬೇಸರಾಯಿತು ಅವಳಿಗೆ. ಬೇಸರಿಕೆಗೆ ಕಾರಣವೂ ಇದ್ದಿತು. ತತ್ವಜ್ಞಾನ ಉತ್ಪತ್ತಿಗಿರಲಿ, ಪ್ರಪಂಚದ ಒಂದು ಅನುಭವದಿಂದಲೆ ಅವಳು ಕಂಡಿದ್ದಳು, ಬಡವರು—ವಿಶೇಷವಾಗಿ ಹೆಂಗಸರು—ಎರಡನೆಯವರು ಕೈಯಿಂದೆತ್ತಿ ಕೊಟ್ಟ ಕೂಳನ್ನು ತಿಂದು ದಕ್ಕಿಸಿಕೊಳ್ಳಲಾರರೆಂದು. ತನಗೂ ಅಂತಹ ಪ್ರಸಂಗ ಬಂದಿತ್ತು. ತನ್ನ ತಂದೆಯು ತನ್ನ ತಾಯಿಯನ್ನು (ಕೊಲ್ಲುವ ಮುಂಚಿತ) ಕೆಲದಿನ ಹೊರಗೆ ಹಾಕಿದ್ದನು. ತುಳಜೆಯೂ ತಾಯಿಯ ಕಷ್ಟವನ್ನು ವಹಿಸಿದಳು. ಆದರೆ ತಾಯಿಯು ಮೊಲೆಹಾಲಿನಿಂದ ಬೆಳೆದು ದೊಡ್ಡವರಾದ ಮೇಲೆ ಮಾತೃಪ್ರೇಮದಿಂದ ಹೊಟ್ಟೆ ತುಂಬುವುದಿಲ್ಲ, ಪಿತೃಪ್ರಾಪ್ತಿಯಿಂದಲೆ ಉಪಜೀವನ ಸಾಧ್ಯ ಎಂದು ಅವಳಿಗೆ ತಿಳಿದು ಬಂದಿತು. ತನ್ನ ತಾಯಿಯು ಕುಲಕರ್ಣಿಯವರ ಮನೆಯಲ್ಲಿ ಕೆಲಸ ಮಾಡುತ್ತಿದ್ದಳು. ಸಂಬಳವೆಂದರೆ—ಎರಡು ಹೊತ್ತು ಊಟ ಆಕೆಗೆ. ಆದರೆ ಕುಲಕರ್ಣಿಯು ತುಳಜೆಗೂ ಎರಡೂ ಹೊತ್ತು ಊಟ ಕೊಡಿಸುತ್ತಿದ್ದನು. ಕುಲಕರ್ಣಿಯ ಮನಸ್ಸು ಎಷ್ಟು ದೊಡ್ಡದಿದೆ!—ಎಂದು ಆಗ ತುಳಜೆಗೆ ಕುಲಕರ್ಣಿಯಲ್ಲಿ ಆದರ. ಯಾಕೆಂದರೆ, ತುಳಜೆಗೆ ಊಟ ಕೊಡುವುದು ಕುಲಕರ್ಣಿಯ ಹೆಂಡತಿಯ ಮನಸ್ಸಿಗೆ ಬಂದಿರಲಿಲ್ಲ. "ಶೂದ್ರ ಜಾತಿಯದು. ಏನು ಸಣ್ಣ ಹೊಟ್ಟೆಯೆ? ಕೆಲಸಿಲ್ಲ, ಬೊಗಸಿಲ್ಲ—ಯಾಕ ಕೂಳ ಕೊಡಬೇಕೊ ಈ ಹೆಣ್ಣ ಬಕಾಸುರಗ?" ಎಂದು ಕುಲಕರ್ಣಿಯ ಹೆಂಡತಿಯು ಗಂಡನೆದುರಿಗೆ ತಕರಾರು ಹೂಡಿದ್ದನ್ನು ತುಳಜೆಯು ಕೇಳಿದ್ದಳು. ಆದರೂ—ಕುಲಕರ್ಣಿಯು ಕೇಳಿದ್ದಿಲ್ಲ. ತನ್ನ ಹೆಂಡತಿಯ ಕೂಡ ಈ ವಿಷಯವಾಗಿ ನಡೆದ ಜಗಳವನ್ನು ಕುಲಕರ್ಣಿಯೆ ಆಗಾಗ ವಿನೋದವಾಗಿ ತುಳಜೆಗೆ ಹೇಳುತ್ತಿದ್ದನು. ಇಷ್ಟಾದ ಮೇಲೆ ತುಳಜೆಯು ಕುಲಕರ್ಣಿಯೆ ತನ್ನ ಪರಮೇಶ್ವರನೆಂದು ತಿಳಿದಲ್ಲಿ ಆಶ್ಚರ್ಯವೇನು? ಕುಲಕರ್ಣಿಗೂ ಗೊತ್ತು ತಾನೀಗ ತುಳಜೆಯ ಪರಮೇಶ್ವರನೆಂದು. ತನ್ನ ಅವತಾರವನ್ನೂ ಗೊತ್ತುಪಡಿಸಿದನು. ತಾನು ಕೃಷ್ಣ. ಆದುದರಿಂದ ತುಳಜೆ ರಾಧೆಯಾಗಬೇಕಲ್ಲವೆ? ಪರಮೇಶ್ವರನು ಒಂದು ದಿನ ಕೃಷ್ಣಾವತಾರವನ್ನು ಧರಿಸಿ ನಿರಾತಂಕವಾಗಿ ತುಳಜೆಯನ್ನು ಕೈಹಿಡಿದೆಳೆದನು. ಅವಳು ಚೀರಬೇಕೆಂದಳು. ಮನೆಯಲ್ಲಿ ಕುಲಕರ್ಣಿಯ ಹೆಂಡತಿ ಇದ್ದಾಳೆ.

ಮೊದಲೇ ತುಳಜೆಯನ್ನು ಕಂಡರೆ ಆಗದ ಆ ಹೆಣ್ಣು-ಮಗಳಿಗೆ ಪ್ರಸಂಗವು ತಿಳಿದುಬಂದರೆ ತನ್ನ ಸ್ಥಿತಿ ಏನಾಗುವುದೆಂಬುದನ್ನರಿತು ಹೆದರಿ ತುಳಜೆಗೆ ಬಾಯಿ ಮುಚ್ಚಬೇಕಾಯಿತು. ಕುಲಕರ್ಣಿಯು ಕೊಟ್ಟ ಅನ್ನದ ಆಣೆ ಇಟ್ಟನು, ಕೊಡಬೇಕಾದ ಅನ್ನದ ಹೆದರಿಕೆ ಹಾಕಿದನು; ಅಂತೂ, ಹೆದರಿಕೆಯಿಂದ ಎಚ್ಚರವಾಗುವುದರೊಳಗಾಗಿ ತುಳಜೆಯು ಅವನ ವಶವಾಗಿಬಿಟ್ಟಿದ್ದಳು. ನಡೆದ ಸಂಗತಿಯನ್ನು (ವಶವಾದುದೊಂದನ್ನು ಬಿಟ್ಟು) ತನ್ನ ತಾಯಿಗೆ ತಿಳಿಸಿದಳು....ಆಗ ಉದ್ದವಾದ ಉಸಿರೊಂದನ್ನೆಳೆದು ತಾಯಿಯು ಕೆಲಹೊತ್ತು ಬೆಪ್ಪು ಬಡಿದವಳಂತೆ ಕುಳಿತಿದ್ದಳು. ಕೊನೆಗೆ ತುಳಜೆಯು ಕುಲಕರ್ಣಿಯ ಮಗಳು—ಎಂಬುದನ್ನೂ ಹೇಳಿದ್ದಳು. . . . ತುಳಜೆಗೆ ಭಾವಿ ಹಾರಿಕೊಂಡು ಪ್ರಾಣ ಬಿಡಬೇಕೆನ್ನಿಸಿತು. ಆದರೆ ಆ ದಿನ ಸಂಜೆಯಾಗುವುದರೊಳಗಾಗಿ ತನ್ನ ತಾಯಿಯು 'ಖೂನಿ'ಯಾಯಿತು. ಅವಳ ವಿಕೃತದೇಹವನ್ನು ನೋಡಿ ಸಾವಿಗೆ ಹೆದರಿದಳು ತುಳಜೆ, ಎಂದಿಗೂ ಪ್ರಾಣಬಿಡಲಿಕ್ಕಿಲ್ಲ ಎಂದುಕೊಂಡಿದ್ದಳು, ನಡುಗಿದ್ದಳು, ಈಗ ಮತ್ತೆ ನಡುಗಿದಳು ಅದೇ ಕುಲಕರ್ಣಿಯ ಊಟವನ್ನು ಅದೇ ಸ್ಥಿತಿಯಲ್ಲಿ ತಿನ್ನುವ ಪ್ರಸಂಗ ಬಂದಿತಲ್ಲ—ಎಂದು. ನಾರಾಯಣನಿಗೆ ಹೇಳಿಬಿಡಬೇಕೆ ಹಿಂದಿನ ಈ ಸಂಗತಿಯನ್ನು ? ನಾರಾಯಣನೂ ಆ ಕುಲಕರ್ಣಿಯ ಅನ್ನವನ್ನೇ ತಿನ್ನುತ್ತಲಿದ್ದಾನೆ ! ನಾಯಿಗೆ ಯಾವ ಕೆಲಸ ಕೊಡಬೇಕೆಂದಿರುವನೊ ಕುಲಕರ್ಣಿ ! —

× × × ×

ಕುಲಕರ್ಣಿಯ ಸಹೃದಯತೆಯನ್ನೂ ಸಮಂಜಸಬುದ್ಧಿಯನ್ನೂ ನೋಡಿ ನಾರಾಯಣನಿಗೆ ಮೊದಲು ಆಶ್ಚರ್ಯವಾಗಿತ್ತು, ಈಗ ಆನಂದವಾಯಿತು. ಮುಂದಾಗುವವರು ಬೇಕು ನಮ್ಮ ಜನರಿಗೆ – ಎಂದುಕೊಂಡನು. ಮೊದಮೊದಲು ಕುಲಕರ್ಣಿಯು ಜೇಡುಬಲೆಗೋತ್ರದವನೆ ಎಂದು ಮನವರಿಕೆಯಾಗಿತ್ತು ನಾರಾಯಣನಿಗೆ. "ಜೇಡುಬಲೆಗೋತ್ರ ಎಂದರೇನು, ಮಹಾಸ್ವಾಮೀ ?" ಎಂದು 'ಮಹಾಸ್ವಾಮಿ' ತನದ ಆಳಿಕೆಯ ದಿನಗಳಲ್ಲಿ ಉಪ್ಪಿಟ್ಟಿನಂಗಡಿಯ ಮಾಲಕನು ನಾರಾಯಣನನ್ನು ಕೇಳಿದ್ದನು. "ಬಿಳಿಗಡ್ಡದ ಋಷಿಗಳ ಗೋತ್ರ !" ಎಂದು ನಕ್ಕಿದ್ದನು

ನಾರಾಯಣನು. ಬಾಲಕನ ಕುತೂಹಲ ಹೆಚ್ಚಾಗಿತ್ತು. "ಅದಕ್ಕೂ ಜೇಡಬಲೆಗೂ ಏನು ಸಂಬಂಧ, ಮಹಾಸ್ವಾಮೀ?" ಎಂದಿದ್ದನು. ನಾರಾಯಣನು ಒಳಿತಾದ ಸ್ಫೂರ್ತಿಯಿಂದ ರಸವತ್ತಾಗಿ ಬಣ್ಣಿಸಿದ್ದ, "ಅದಕ್ಕೂ ಇದಕ್ಕೂ ಸಂಬಂಧ ಈ ಪ್ರಕಾರ. ಋಷಿಗಳು ಬರೆದಿಟ್ಟ ಶಾಸ್ತ್ರಗಳಂತೆ ನಡೆಯುವ ಜನರದೊಂದು ಜಾತಿ ಇದೆ ನಮ್ಮಲ್ಲಿ. ಋಷಿಗಳು ಉದ್ದಗಡ್ಡದ ಊರ್ಧ್ವತಪಸ್ವಿಗಳು. ಅವರ ಮುಖದಿಂದ ಹೊರಸೂಸಿದ ವಚನ–ಸುಧಾ–ಧಾರೆಯು ಹೊರಬಿದ್ದು ವ್ಯವಹಾರದಲ್ಲಿ ಪ್ರವಾಹವಾಗಿ ಹರಿಯದೆ ಅವರ ಗಡ್ಡದ ತೊಡಕಿನಲ್ಲಿಯೆ ಸಿಕ್ಕಿಬಿಟ್ಟಿತು, ಜೇಡಬಲೆಯಲ್ಲಿ ಸಿಕ್ಕಿಕೊಂಡ ಹುಳುವಿನಂತೆ. ಹುಳುವಿನ ಸ್ಥಿತಿ ಏನಾಗುವುದು? ಅದೇ ಸ್ಥಿತಿಯಾಯಿತು ಆ ವಚನ–ಸುಧಾ–ಧಾರೆಯದು, ಅದರಲ್ಲಿ ಮಿಂದು ಮೆಯ್ಯುಬ್ಬ ಮೆರೆವವರದೂ ಅದೇ ಸ್ಥಿತಿ. ಅಂತಹರಿಗೆ ಜೇಡುಬಲೆ ಗೋತ್ರದವರೆನ್ನುವುದು." ಬಾಲಕನು ತಲೆದೂಗಿದ್ದನು; ಅಷ್ಟಕ್ಕೆಯೆ ಬಿಟ್ಟಿದರೆ ನಾರಾಯಣನಿಗೆ ಸಮಾಧಾನವಾಗುತ್ತಿತ್ತು; ಆದರೆ **ಮರುದಿವಸ** ಆ ಮಾತನ್ನು ನೆನೆ–ನೆನೆಸಿಕೊಂಡು ನಕ್ಕಿದ್ದನು. ಆಗ ನಾರಾಯಣನಿಗೆ ತನ್ನ ಹಾಸ್ಯಕ್ಕಾಗಿ ತನಗೆಯೆ ಅವಮಾನವಾದಂತಾಗಿತ್ತು. "ಇವನೂ ಅದೇ ಗೋತ್ರದವನೆ! ಈ ಜನರಿಗೆ ಹಾಸ್ಯವೆಂದರೆ ಗೊತ್ತಿಲ್ಲ. ಬಾಯ್ತೆರೆದು ನಗುವುದಕಿಂತ ಮನ ತೆರೆದು ಬುದ್ಧಿ ಕೆಣಕಿ ನಗುವುದೇ ಹೆಚ್ಚಿನದು ಎಂಬ ಕಲ್ಪನೆಯೆ ಇವರಿಗಿಲ್ಲ. ನಮ್ಮ ಜನರಿಗೆಯೆ ಗೊತ್ತಿಲ್ಲ ನಗುವ ವಿದ್ಯೆ, ನಮ್ಮ ಸಾಹಿತ್ಯಕ್ಕೆಯೆ ಗೊತ್ತಿಲ್ಲ ಹಾಸ್ಯ ಕಲೆ! ಶಿಕ್ಷಣದಲ್ಲಿ ಬುದ್ಧಿಗೆ ಇಂತಹ ಹಾಸ್ಯರಸವನ್ನನುಭವಿಸುವ ಸಂಸ್ಕಾರವನ್ನು ಕೊಡತಕ್ಕದ್ದು" ಎಂದು ಮುಂತಾಗಿ ರಗಳೆಯಾಗಿ ಅವಮಾನದ ಸಮಾಧಾನವನ್ನು ತಂದುಕೊಂಡಿದ್ದನು. ಈಗ ತಾನೆ ಹುಡುಗರಿಗೆ ಅಂತಹ ಶಿಕ್ಷಣವನ್ನು ಕೊಡಬೇಕು ಎಂದನು; ಕುಲಕರ್ಣಿಯು ತಲೆದೂಗಿದನು, ಸಹಾನುಭೂತಿ ತೋರಿಸಿದನು; ನಾರಾಯಣನ ಒಂದೆರಡು ವಿನೋದದ ಮಾತುಗಳಿಗೆ ನಕ್ಕನು ಕೂಡ! ಅದಕಾಗಿ ನಾರಾಯಣನು ಕುಲಕರ್ಣಿಯ ವಿಷಯ ತನ್ನ ಅಭಿಪ್ರಾಯವನ್ನು ಬದಲಾಯಿಸಬೇಕಾಯಿತು. ಕುಲಕರ್ಣಿಯು ಸಹೃದಯನೂ ಸಮಂಜ

–ಸಬುದ್ಧಿಯುವನೂ ಎಂದು ಒಪ್ಪಿಕೊಳ್ಳಬೇಕಾಯಿತು. ಇಲ್ಲವಾದರೆ ಹೊಸ ತೆರದ ವಿಚಾರಗಳಿಗೆ ಕುಲಕರ್ಣಿಯು ಒಪ್ಪುವುದು ಶಕ್ಯವಿದೆಯೆ? ಸಮಂಜಸಬುದ್ಧಿಯುವನಿರಲೇಬೇಕು. ಇಷ್ಟು ದಿವಸ ಹಳೆಯ ಆಚಾರ – ವಿಚಾರಗಳಲ್ಲಿಯೇ ಮುಳುಗಿದ್ದನಲ್ಲ ಕುಲಕರ್ಣಿ? ಸಹಜವಿದೆ. ಪಾಪ! ಧೈರ್ಯವಿದ್ದಿರಲಿಲ್ಲ, ಅವನಾದರೂ ಏನು ಮಾಡಿಯಾನು? ಬುದ್ಧಿ ಇದೆ, ಪ್ರಾಮಾಣಿಕತನವಿದೆ, ಧೈರ್ಯವಿಲ್ಲ. ನಮ್ಮ ಜನರಲ್ಲಿ ಸರ್ವಸಾಮಾನ್ಯವಾಗಿ ಕಂಡುಬರುವ ದೋಷವಿದು. ಧೈರ್ಯವನ್ನು ಹೃದಯದಲ್ಲಿ ನೆಲಗೊಳಿಸುವಂತಹ ಶಿಕ್ಷಣಕ್ರಮ ಬೇಕು. ತನ್ನಲ್ಲಿ ಬರುವ ಹುಡುಗರಲ್ಲಿ ಧೈರ್ಯವನ್ನು ಹುಟ್ಟಿಸಬೇಕು, ಧೈರ್ಯಬುದ್ಧಿಯನ್ನು ಸ್ಥಿರಪಡಿಸಬೇಕು. ನಾರಾಯಣನು ನಿಶ್ಚಯವನ್ನೆ ಮಾಡಿದನು. ಹುಡುಗರಿಗೆ ಇದೇ ಶಿಕ್ಷಣವನ್ನು —— ಆದರೆ ೩-೪ ದಿವಸಗಳಾದರೂ ಒಂದು ಪಿಳ್ಳೆಯೂ ಬಂದಿಲ್ಲವಲ್ಲ! ಶಾಲೆಯನ್ನು ಯಾವಾಗ—ಥೂ! –

× × × ×

ಶಾಲೆಯನ್ನು ಯಾವಾಗ ಮರೆಯುವನೊ ಈ ಪುಣ್ಯಾತ್ಮ! ಥೂ! ಎಂದು ಕುಲಕರ್ಣಿಯು ಹತ್ತಿಪ್ಪತ್ತು ಸಲ ತನ್ನಲ್ಲಿ ತಾನೇ ಕೋಪಿಸಿಕೊಂಡನು. ಈ ಹುಡುಗನಿಗೆ ಇಷ್ಟು ಕೂಡ ತಿಳಿಯಬಾರದೆ? ದುಡಿದರೂ ಹೊಟ್ಟೆ ತುಂಬದ ಈ ಕಾಲದಲ್ಲಿ ದುಡಿಯದೆ ಕೂಳು ದೊರೆಯುತ್ತಿದೆ ತನಗೆ. ತೃಪ್ತನಾಗಬಾರದೆ? ಇವನಿಗೆ ಶಾಲೆ ನಡೆಸಲು ಮಾಡಬೇಕಾಗಿದೆಯಂತೆ! ಅದಕ್ಕೆ ಹುಡುಗರು ಬೇಕೇ ಬೇಕು ಅಂತೆ! ಎಲ್ಲಿಂದ ತರುವುದು. 'ಇವನೊಬ್ಬ ಮಹಾಯೋಗಿ' ಎಂಬ ಸುಳ್ಳು ವಂಚನೆಯನ್ನು ಸಾಧಿಸಿ ಜನರಿಂದ ಇವನಿಗೆ ಹೊಟ್ಟೆ ತುಂಬುವ ವ್ಯವಸ್ಥೆ ಮಾಡಿಸಿದೆ. ಅದೂ ನನ್ನ ಚಾತುರ್ಯದಿಂದ, ಇವನ ಜಾಣತನಕ್ಕಾಗಿ ಅಲ್ಲ. ಇನ್ನು ಹುಡುಗರ ಮುಂದೆ ಇವನ ಸ್ವರೂಪ ಹೊರಬಿದ್ದಿತೆಂದರೆ ಆಗುವುದು ಇವನ ಸಮಾಧಿಯೋಗ! ಹುಡುಗರನ್ನಾದರೂ ಕೂಡಿಸುವುದು ಹೇಗೆ? ಅರಸನ ಹುಟ್ಟಿದ ದಿವಸ ಎಂದು ಹೇಳಲಿಯಾ? ಇನ್ನೂ ದೊಡ್ಡವರನ್ನು ನೆರೆಯಿಸುವುದೆಂದರೆ ಆ ಮಾತೇ —————"

× × × ×

ಬರಿಯ ಹುಡುಗರಿಗೆಯೆ ಶಿಕ್ಷಣಕೊಟ್ಟರೆ ಸಾಲದು ಎಂದು ನಾರಾಯಣನ ವಿಚಾರ. ದೊಡ್ಡವರಿಗೂ ಶಿಕ್ಷಣ ಬೇಕು ನಮ್ಮ ಸಮಾಜದಲ್ಲಿ. ಬುದ್ಧಿ ಬೆಳೆದರೆ, ಯೋಗ್ಯತೆ ಬೆಳೆದರೆ, ಜವಾಬ್ದಾರಿಕೆ ಬೆಳೆದರೆ ಮಾತ್ರ ದೊಡ್ಡವರು, ಬರಿಯ ದೇಹ ಬೆಳೆದರಲ್ಲ ಎಂದು ತಿಳುಹಿಸಿಕೊಡಬೇಕು ಇವರಿಗೆ. ಕಮತೂರಿನವರಿಗಂತೂ ಸ್ಪೆಶಲ್ ಶಿಕ್ಷಣ ಬೇಕೆಂದೆನ್ನಿಸಿತು. ' ಧಾರುಣಿಯ ಮೇಲೊಂದು ಅಂಗಡಿಯನಿಕ್ಕಿ ಹರದ ಕುಳ್ಳಿರ್ದ ನಮ್ಮ ಮಹಾದೇವ ಸೆಟ್ಟಿ ' ಎಂಬ ಬಸವೇಶನ ಅಲಂಕಾರೋಕ್ತಿಯು ವಿದ್ಯಾರ್ಥಿ ಇದ್ದಾಗಿನಿಂದ ನಾರಾಯಣನ ಮನಸ್ಸನ್ನು ಸೆಳೆದಿತ್ತು. ಆ ಮಾತು ಬರಿಯ ಅಲಂಕಾರವಲ್ಲ, ಸತ್ಯಾಂಶವಿದೆ ಅದರಲ್ಲಿ ಎಂದು ಈಗ ಅವನಿಗೆ ತೋರಿತು. ದೇವನು ಅಂಗಡಿಯನ್ನಿಟ್ಟಿರುವನಿಷ್ಟೆ ಅಲ್ಲ, ಕಮತೂರಿನವರು ಆ ಅಂಗಡಿಯಲ್ಲಿ ಮೊದಲಿನಿಂದಲೂ ' ಉದ್ದರಿ ' ವ್ಯಾಪಾರವನ್ನೆ ಮಾಡಿರಬಹುದು ಎಂದೆನ್ನಿಸಿತು. ' ಉದ್ದರಿ ' ಯ ಹಣವನ್ನು ಎಲ್ಲಿ ಕೇಳುವನೊ ಎಂಬ ಭೀತಿಯಿಂದ ದೇವನ ಕಣ್ಣುತಪ್ಪಿಸುತ್ತಿದ್ದಾರೆ ಈ ಜನ; ಸೆಟ್ಟಿಯ ಬೀದಿಯನ್ನು ತಪ್ಪಿಸಿ ದೂರದಲ್ಲಿ ಮತ್ತೊಂದು ಬೀದಿಯಲ್ಲಿ ಮನೆಮಾಡಿಕೊಂಡಿರುವವರಿಂತಿದ್ದಾರೆ. ಇವರಿಗೆ ಯೋಗ್ಯ ಶಿಕ್ಷಣ ಬೇಕು ! ಎಂದಿನಿಂದಲೂ ಸೃಷ್ಟಿಯಲ್ಲಿ ಇದ್ದುಕೊಂಡ ದೇವನು ಮನೆಯಲ್ಲಿ ಕೆಮ್ಮುತ್ತ ಕೆರೆಯುತ್ತ ಮೂಲೆ ಹಿಡಿದುಕೊಂಡ ಮುದುಕನಂತೆ; ಹೊರಗೆ ಬೆಳೆಯುವ ಜಗತ್ತಿನ, ಮನೆಯೊಳಗೆ ಬೆಳೆಯುವ ಮಕ್ಕಳ – ಮಾನವರ – ಅರಿವು ಅವನಿಗಿಲ್ಲ; ಹೀಗೆ ಮೊದಲಾಗಿ ಸುಲಭ ಶೈಲಿಯಲ್ಲಿ ಕತೆಗಳನ್ನು ಕಟ್ಟಿ ಇವರ ಬುದ್ಧಿಗೆ ಸಂಸ್ಕಾರವನ್ನೂ ಶಿಕ್ಷಣವನ್ನೂ ಕೊಡಬೇಕು. ನಾರಾಯಣನಿಗೆ ಯುಕ್ತಿ ತಿಳಿದಂತಾಯಿತು. ಹಳ್ಳಿಗರಿಗೆ ಶಿಕ್ಷಣವನ್ನು ಕೊಡುವ ಯುಕ್ತಿ ಸಾಧಿಸಿದಂತಾಯಿತು. ಹರಟೆ ಹೊಡೆದು ಕಾಲ ಕಳೆಯುವ ಜನರು ಇವರು; ನಾವೂ ಹರಟೆ ಹೊಡೆಯುವವರಂತೆಯೆ ನಟಿಸೋಣ, ಹರಟೆಯಲ್ಲಿ ಹೊಸ ವಿಚಾರಗಳ ಕತೆ ಕಟ್ಟಿ ಅವರನ್ನು ರಂಜಿಸೋಣ, ಒಲಿಸೋಣ, ಕಲಿಸೋಣ — ಎಂಬ ವಿಚಾರಾವೇಶದಿಂದ ಒಳಗಿಂದೊಳಗೆಯೆ ಬೆನ್ನು ಚಪ್ಪರಿಸಿಕೊಂಡನು; ಹೊರಗೂ ಬೆನ್ನು ( ನಿಜವಾಗಿಯೆ ) ಚಪ್ಪರಿಸಿಕೊಳ್ಳ

ಬೇಕಾಯಿತು ನಾರಾಯಣನಿಗೆ. ಹಾಳು ಸೊಳ್ಳೆಗಳು ! ಬೇಸಗೆಯ ಬಿಸಿಲಿನ ಹಗಲಿನಲ್ಲಿ ಊರ ಹೊರಗಿನ ತೋಟದಲ್ಲಿ ಸೊಳ್ಳೆಗಳು. ಊರೊಳಗಂತೂ -- ಕುಲಕರ್ಣಿಯ ಮನೆಯ ಸ್ಮರಣೆ ಬಂದಿತು ನಾರಾಯಣನಿಗೆ, ಮೈ ನಡುಗಿತು. ಎಂತಹ ಮನೆ ! ಎಂತಹ ಬೀದಿ ! ಎಂತಹ ಕೆರೆ !–ಇವರಿಗೆ ಆರೋಗ್ಯವಿಷಯಕ ಶಿಕ್ಷಣವನ್ನು ಕೊಡಬೇಕು ಮೊದಲು. ಮನುಷ್ಯನ ದೇಹವು ಸುಂದರವಾಗಿ ಸುಖರೂಪವಾಗಿ ಬೆಳೆಸಲು ಯೋಗ್ಯವಿದೆ ಎಂಬುದರ ಮನವರಿಕೆ ಮಾಡಿಕೊಡಬೇಕು ಇವರಿಗೆ .... ಏನಿಲ್ಲ, ಮೊದಲು ದೇವನನ್ನು ಪೂರ್ತಿಯಾಗಿ ಮರೆಯಿಸುವಂತಹ ಶಿಕ್ಷಣವನ್ನು ಕೊಡಬೇಕು. ಸ್ವರ್ಗದ ದೇವನು ಭೂಮಿಯ 'ಅಹಿತದೇವ' ನಾಗಿದ್ದಾನೆ. ಅವನ ಆರೈಕೆ ಮಾಡುವುದರಲ್ಲಿ ತನ್ನ ಆರೋಗ್ಯವನ್ನೇ ಮರೆತಿದ್ದಾನೆ ಮನುಷ್ಯ ! ಅಂತೂ ಗದೆ ಇಡಬೇಕು ಧರ್ಮದ ಮೇಲೆ, ಎಂದರೆ—

× × × ×

"'ಧರಮ ಹಾಳಾದ್ಕ ದೇಶ ಹಾಳಾಯ್ತು' ಅಂತ ಅವರೇ ಅಂದರಂತ! ಎಲ! ಹೀಂಗ್ಯಾಕ ನೋಡ್ತೀರಿ ನನ್ಕಡೆ! ಕುಲಕರ್ಣೇರು ಸಮಕ್ಷಮ ( ಸ್ವತಃ ) ಸುಳ್ಳು ಹೇಳ್ತಾರ?"

ಮಲ್ಲಣ್ಣಗೆ ಕೋಪ. ತಾನು ಹೇಳಿದುದಕ್ಕೆ ಮಿಕ್ಕವರೆಲ್ಲರೂ ನಗುವರಲ್ಲ! ಎಂತಹ ಹುಚ್ಚರು! ಮಳೆ–ಬೆಳೆ ಇಲ್ಲವೆಂದು ಗೋಳಿಡುವವರೂ ಇವರೆ, ಆದರ ಕಾರಣವನ್ನು ತಿಳುಹಿಸಿದಲ್ಲಿ ತಲೆ ತೂಗುವುದನ್ನು ಬಿಟ್ಟು ಹಲ್ಲು ಕಿರಿದು ನಗುವವರೂ ಇವರೆ! ಮಳೆ ಬೆಳೆ ಯಾಕೆ ಇಲ್ಲ! ಧರ್ಮ ಇಲ್ಲದುದಕ್ಕಾಗಿ. ಇದು ಮಲ್ಲಣ್ಣನಿಗೂ ಎಂದಿನಿಂದಲೂ ಗೊತ್ತಿದ್ದಿತು, ಆದರೆ ಈಗ ಕುಲಕರ್ಣಿಯೂ ಅದೇ ಮಾತನ್ನು ಹೇಳುತ್ತಾನೆ; ಅಷ್ಟೇಕೆ -- ಯತಿಶ್ರೇಷ್ಠರೂ ಅದೇ ಮಾತನ್ನು ಹೇಳಿದರೆಂದು ಕುಲಕರ್ಣಿ ತಾನಾಗಿಯೆ ಹೇಳಿದ್ದನ್ನು ತಾನು ಉಳಿದ ಒಕ್ಕಲಿಗರಿಗೆ ಹೇಳಿದರೆ ನಗುವರಲ್ಲ! "ಎಲೆ ನಿಮ್ಮ! ಸಮಕ್ಷಮ ಕುಲಕರ್ಣೇರು ಸುಳ್ಳು ಹೇಳ್ತಾರ?" ಎಂದು ಮಲ್ಲಣ್ಣನೂ ಕೆರಳಿದ ಸಿಂಹದಂತೆ ಸುತ್ತಲೂ ನೋಡುತ್ತ ಮತ್ತೊಮ್ಮೆ ಗದ್ದರಿಸಿದನು.

ಕುಲಕರ್ಣೇರು! ವಿಶ್ವಾಸ! ಕುಲಕರ್ಣಿಯ ವಿಷಯಕ್ಕೂ

ತಕರಾರು ಇಲ್ಲ ಯಾರದೂ, ವಿಶ್ವಾಸವಿಡುವುದಕ್ಕಾಗಿಯೂ ತಕರಾರು ಇಲ್ಲ. ಆದರೆ 'ಪರಸಂಗೀ ಗಮ್ಮತ ಬಂದೇತಿ' ಎಂದು ಮಿಕ್ಕವರ ತಕರಾರು. ೮-೧೦ ದಿವಸಗಳ ಮುಂಚಿತ ಇವರ ಸಲುವಾಗಿ ಒಂದೂ ಮಾತನ್ನಾಡಲಿಲ್ಲ, ಆದೇಕೆ – ನಾಲ್ಕು ಜನರಂತೆ 'ಸುಮ್ಮಕ ಸೆಟ್ಟಗಿದ್ದೀರಾ ಸೆಟ್ರಿ?' ಎನ್ನುವ ಹಾಗೂ ಇವರನ್ನು ಮಾತನಾಡಿಸಲಿಲ್ಲ. ಈಗ ಇವರೇ 'ಇರತಿ – ಶಿರೇಸ್ಟ (ಯತಿಶ್ರೇಷ್ಠ)' ಎಂದರೆ? ಮೊದಲು ಯಾಕೆ ತಿಳಿದಿರಲಿಲ್ಲ? ಈಗ ಯಾಕೆ ತಿಳಿಯಿತು? "ಅಲ್ಲ, ಮಾವಾ, ಈಽಟು (ಇಷ್ಟು) ಧಿನಾ ಬೇಕಾಯ್ತು ಕುಲಕರ್ಣೇರ್ಗೆ?"

ಮಲ್ಲಣ್ಣಗೂ ಬೇಜಾರವಾಯಿತು 'ಈ ಮುಡ್ಡ ತಲಿಗಳ್ಮಂದ ಮಾತಿನ ಸುಗಽಸ್ಮ (ಸೂಕ್ಷ್ಮ)' ಹೇಳಿ ಎಷ್ಟೆಂದು ತಿಳುಹಿಸಬೇಕು? ತನ್ನ ಮೇಲೆ ವಿಶ್ವಾಸವಿಲ್ಲ; ಹೋಗಲಿ, 'ನಿನ್ನ ಹುಟ್ಟಿ ಇಂದ್ಕನ್ತೆರೆದ ಕುನ್ನಿ' ಈ ಜನರು, ತನ್ನಂತಹ ಅನುಭವಿಕನ ಮಾತು ಬುದ್ಧಿಯೊಳಗಿನಿಂದ ಸೂಸಿ ಇಳಿದಿರಲಿಕ್ಕಿಲ್ಲ. ಆದರೆ ಕುಲಕರ್ಣಿ—? 'ಸಮುಕ್ಸ್ಮ ಕುಲಕರ್ಣೇರು ಸುಳ್ಳು ಹೇಳ್ತಾರ?' ಆದೂ ಹೋಗಲಿ, ಇದ್ದೂರ ಜನರ ಮಾತಿನೊಳಗೆ ವಿಶ್ವಾಸ ಕೂಡೋದಿಲ್ಲ, ಅನ್ನೋಣ. ಆದರೆ ಆ ಆಚಾರ್ಯರು? ಮೊನ್ನೆ ಕುಲಕರ್ಣಿಯ ಮನೆಗೆ ಬಂದಿದ್ದರಲ್ಲ? 'ಪರವೂರಿಂದ ಬಂದ ದೊಡ್ಮನಸ್ಯಾರು'. ಅವರು ಯಾಕೆ ಸುಳ್ಳು ಹೇಳುವರು? ಅವರದೇನು ಈ ಊರೊಳಗೆ ಹೊಲ—ಮನೆ ಮಾಡೋದಿಲ್ಲ, ಮಾಡಿಸೋದಿಲ್ಲ; ಅವರು ಯಾಕೆ——? "ಎಲ! ಮುನ್ನ ಬಂದಿದ್ರಲ್ಲ ಆಚಾರ್ರು?..ಹಂ.. ಅವ್ರು ಯಾಕ ಬಂದಿದ್ರು ಗೊತ್ತೈತಿಯೆ? ಅವರ್ಮನೇವಳ್ಗ ಯಾರಿಗೊ—" ಮಲ್ಲಣ್ಣಯು ಒಮ್ಮೆಲೇ ಸುತ್ತುಮುತ್ತು ನೋಡಿ ಗಾಂಭೀರ್ಯದ ಇಳಿದನಿಯಲ್ಲಿ ಹೇಳಿದನು, "ಯಾರಿಗೊ ಹೆಣ್ಮಗಳಿಗೆ ಹ್ಯಾಂಗ್‌ಹ್ಯಾಂಗೋ ಆಗ್ತಿತ್ತಂತ ಹ್ಯಾಂಗ್ ಹ್ಯಾಗೊ! ದೇಶಾದಾಗಿನ ಡಾಗದರ್ರು (dootor) ಲ್ಲಾ ಚಿತ್ತ* ಆದ್ರಂತ. ಕಡೀಗ ಇವರು——"

---

* ಸೋತು ಹಣ್ಣಾಗು

" ಇವರ್ಕಡಿಲಿಂದ ಅಗಸುದ್ದ (ಔಷಧ) ಒಯ್ಯಲಿಕ್ಕೆ ಬಂದಿಸ್ರೂ ಅಂತ ಹೇಳ್ತೇನು, ಮಾವಾ"

ಮಾತನಾಡಿದ ಮೂರ್ಖನನ್ನು ಒಳಗಣ್ಣಿನಿಂದ ನೋಡಿದಂತೆ ನೋಡಿದನು ಮಲ್ಲಣ್ಣ. "ಎಲ! ಮತ್ತ, ನನಗೇ ಅಂತಾನಲ್ಲೊ ಹೇಳ್ತೀನೂ ಅಂತ! ಕುಲಕರ್ಣೇರೇ ಹೇಳಿದರೂ ಅಂತ ಹೇಳ್ತೀನಿ. ನಮುಕ್ ನವು ಆ ಆಚಾರ್ರೇರೇ ಹೇಳ್ತಿದ್ರಂತ ಕುಲಕರ್ಣೇರ್ಗೆ——"

" ಏ-ನಂ-ತ ಅs"— ಯಾವನೊ- 'ಎಲೆ ಇದ್ರ ಕಿಸ್ಬಾಯಿ!' —ಹಂಗಿಸಿದನು.

" ಅದ್ನೆ ಹೇಳ್ಬೇಕೂಽಂತೀ'ನಿ," ಮಲ್ಲಣ್ಣಯು ಸಂತಪ್ತನಾಗಿ ಪನಿ ಪಿಸಿದನು, " ನುಮ್ಮಾಕs ನಡುಮದ್ದಿ ಮಾತಾಡಿಸ್ತಾನಲ್ಲೊ ನನ್ನ! ಆ-ಆ-ಚಾ-ರೀ-ನೇ- ಹೇ-ಳ್ತಿ-ದ್ರಂ-ತs- ಈ- ಇರ್ತಿ (ಯುತಿ)- ಹೇಳಿದ್——"

" ಯಾರಿಗೆ ಹೇಳಿದ್ರು ಇರ್ತಿ (ಇರುವೆ) ಅಂತ? "

"ಎಲ! ಇರ್ತಿ (ಇರುವೆ) ಅಂತ ಹೇಳಲಿಲ್ಲ. ಇ-ರ್-ತೀ ಇರ್ತೀ ಅಂತಾರ ಇಂಥಾ ಜನಕ್ಕ. ಮಾದೇವನ ಮನಸ್ಯಾ-ಅಂವ್ಗ ಇರ್ತಿ ಅಂತಾರ ಹಾರೋರು. ನಮ್ಮ ತ್ವಾ (ತೋ) ಟದ ಮನಸ್ಯಾನೆ ಈ ಇರ್ತಿ. ಅಂವ ಹೇಳ್ದಂತ —ಹೇಳ್ದೇನು? — ಸಕ್ಕುಬಿಟ್ಟಾsಂತ. ಆ ಮ್ಯಾಲೆ ಹೇಳ್ದಂತ 'ಅಲ್ಲಾ, ಹುಚ್ಗೊಟ್ಟಿ ಡಾಗದsರ ಏನ್ಮಾಡ್ತಾನ ಇದ್ಕ! ಇದು ಬಡಕೊಂಡೈತಿ— ಈ ಹೆಣ್ಮಗಳಿಗೆ ಸೌಂತಿ (ಸವತಿ) ಬಡಕೊಂಡಾಳ ಅಂತ ಹೇಳ್ದಾ ಅಂತ! "

ಮಲ್ಲಣ್ಣ ಸುತ್ತಲೂ ನೋಡಿದನು. ಸಭೆಯಲ್ಲಿ ಮಾತನಾಡುವ ವಕ್ತೃವಿನಂತೆ ಶ್ರೋತೃಗಣವನ್ನು ನಿರೀಕ್ಷಿಸಿದನು – ತನ್ನ ಮಾತಿನ ಪರಿಣಾಮವೇನಾಗಿದೆ ಎಂದು. ಯಾರಿಗೂ ಏನೂ ವಿಶೇಷವೆನ್ನಿಸಿದಂತಿದ್ದಿಲ್ಲ. ಮಲ್ಲಣ್ಣಗೆ ನಿರಾಶೆಯಾಯಿತು, ಬೇಜಾರವಾಯಿತು, ಕೋಪ ಬಂದಿತು. ಅಷ್ಟರೊಳಗೆ — ಅಪಮಾನ! ಯಾವನೊ ಒಬ್ಬ ಸಕ್ಕು ಬಿಟ್ಟನು – ತಿರಸ್ಕಾರದಿಂದ. ಇದೇನು ಅಂತಹ-"ಅದೇನು ದೊಡ್ಮಾತು, ಮಾವಾ? ನಮ್ಮ ಆ ಜಾಡರ ಸಿದ್ಧಪ್ಪನ ಮನೀ ಕಟ್ಟೀ ಮ್ಯಾಲಿನ ಕೌದಿ

ಮಟ್ಯಾವಾಯು ಆದಾಗ ಹೇಳಲಿಲ್ಲೇನು ಕುರುಬರ ಬೀಗ ಕಳವು ಮಾಡಿದವ್ರ ———"

" ಮೈಯಾಗ ದ್ಯಾವ್ರು ಹೊಕ್ಕಾಗ ಬೇಕ್ಬೇಕಾದ್ದು ಹೇಳ್ತಿತ್ತು ನೋಡು ಆ ಹುಡುಗ!" ಎಂದು ಅತ್ಯಂತ ಆದರಭಾವದಿಂದ ನುಡಿದನು ಇನ್ನೊಬ್ಬನಾವನೊ.

ಕುರುಬರ ಬೀರನಲ್ಲಿ ಆದರವೆಂದರೆ ತನಗಾಗಿ ಅನಾದರವೆಂಬ ಮಾತು ಮಲ್ಲಣ್ಣಗೆ ತಿಳಿಯದೆ ಹೋಗಲಿಲ್ಲ. ಸಿಟ್ಟಿನಿಂದಲೂ ಅತ್ಯಂತ ತಿರಸ್ಕಾರದಿಂದಲೂ ಉಸಿರೆಳೆಯುತ್ತ "ಮೈಯ್ಯಾಗ ದ್ಯಾವ್ರು ಬಂದಾ ಹಚ್——" ಎಂದಷ್ಟಕ್ಕೆ ತಡೆಯಬೇಕಾಯಿತು. ಸಿಟ್ಟಿನಿಂದ ಉಸಿರನ್ನೆಳೆಯುವಾಗ ತಾನು ಚಿಲುಮೆಯನ್ನು ಸೇದುತ್ತಿದ್ದನೆಂಬುದರ ಅರಿವು ಇದ್ದಿರಲಿಲ್ಲ, ಹೊಗೆಯು ಗಂಟಲಿಗೆ ತಾಕಿತು, ಕಂಠದಲ್ಲಿ ಕೋಲಾಹಲವೆದ್ದಿತು, ಮುರುಕು ಕಟ್ಟಿಗೆಯ ಪೆಟ್ಟಿಗೆಯ ಮೇಲೆ ಕೈಬಡೆದಂತೆ ಶಬ್ದವಾಗ ಹತ್ತಿತು ಕಂಠದಲ್ಲಿ, ಮುರುಕು ಪೆಟ್ಟಿಗೆಯಂತೆಯೆ ನಡುಗಹತ್ತಿತ್ತು ಮಲ್ಲಣ್ಣನ ದೇಹ,ಕೊನೆಗೆ ಪೆಟ್ಟಿಗೆಯು ಎರಡು ತುಂಡಾದಂತೆ—ಅದೇಕೆ? —ಸಿಡಿಲು ಬಡಿದಂತೆಯೆ ಎನ್ನೋಣ—'ಖಡಡ'ಎಂದಿತು,ಅಬ್ಬರಕ್ಕೆ ಮಳೆಯ ನೀರು ಹೆಪ್ಪುಗಟ್ಟಿತೇನೊ ಎನ್ನುವಂತೆ ಉಗುಳಿನ ಗುಂಡು, ಆ ಮೇಲೆ ಮತ್ತೆ ದಾರಿ ಸಿಕ್ಕಂತಾಗಿ ಬಂದಿತು ತಿರಸ್ಕಾರದ ತಿರಿ; ಬಂದ ಕೋಪವನ್ನೆಲ್ಲ ಕಾಲ್ಬೆರಳಿನಲ್ಲಿ ಶೇಖರೀಕರಿಸಿ ಮುಂದೆ ಬಿದ್ದ ಉಗುಳನ್ನು ಆ ಬೆರಳಿನಿಂದ ನೆಲಕೊರೆಸಿ ಮತ್ತೆ ಮಾತನಾಡಿದನು ಮಲ್ಲಣ್ಣ; "ದ್ಯಾವ್ರು ಹೊಕ್ಕಾಗಽಂತ! ಅಲ್ಲರೊ, ಹುಚ್ಗೊಟ್ಟೀ, ದ್ಯಾವ್ರು ಹೊಕ್ಕೋರು ಹೇಳ್ತಾರ ಹಬ್ಬಕೊಮ್ಮೆ ಹುಣಿವೀಗೊಮ್ಮೆ! ಆದರ ಕುಂತ (ಕುಳಿತ) ಮೆಟ್ಟಿಗೀ ಮ್ಯಾಲೆ ಹೇಳೂದೂ ಅಂದರ—! ರಾತರೋರಾತರಿ ಹೋಗಿ ಕೇಳಿದ್ರೂ ಹೇಳ್ತಾರಂತ ಈ ಇರ್ತ! ದ್ಯಾವ್ರು ಬಂದಾಗಂತ, ದ್ಯಾವ್ರು! ಮತ್ತಽ, ಗಮ್ಮತ ನೋಡು, ಆ ಹೆಣ್ಮಗಳಿಗೆ ಸೌಂತೀ (ಸವತಿ) ಇದ್ದಾಳಽಂತ ಈ ನಂ ತ್ವಾ (ತೋ) ಟದ ಇರ್ತೀಗೆ ಹ್ಯಾಂಗ ತಿಳೀತೂ ಉ?—ಮತ್——"

"ಸೌಂತಿ ಇದ್ದಾಳ!" ಯಾವನಿಗೋ ಸಂಶಯ ಬಂದಿತು; "ಇದ್ದರ ಒಡ್ಕೋತಾಳ ಹ್ಯಾಂಗಪ!"

"ಥೂ! ನಿನ್ನ ತಲಿ!" ತಿರಸ್ಕಾರವೂ ಆಯಿತು, ಕೆಮ್ಮೂ ಹೋಯಿತು ಎಂದು ಮತ್ತೆ ಉಗುಳಿದನು ಮಲ್ಲಣ್ಣ; "ಇದ್ದಾಳs ಅಂದ್ರ ಸತ್ತಾಳs ಅಂತ! ತಿಳೀತ? ಇರದೆ ಸಾಯ್ತಾರ್ಯಾರ ಯಾರಾದ್ರೂ?"

"ಸತ್ತಾಳ ಅs!" ಎಲ್ಲರಿಗೂ ನಿರಾಶೆಯಾದಂತಾಯಿತು.

"ಮತ್ತ ಅs!" ಎಂದು ಅಣಕಿಸ ಕಸಿಕರದಿಂದ ಮಲ್ಲಣ್ಣನೂ ದನಿ ಎಳೆದನು; "ಆ ಆಚಾರ್‍ನೇ ಹೇಳ್ಯಾನs ಅಂತ. ಸೌಂತಿ ಇದ್ದದ್ದೂ ಖರೆ (ನಿಜ), ಸತ್ತದ್ದೂ ಖರೆ, ಬಡಕೊಳ್ಳೋದೂ ಖರೇ—ಅಂತ"

"ಅಂದರ ಕಠಿಣ ಬಂತಪ ಪರಸಂಗ!"

ಮಲ್ಲಣ್ಣನೂ ನೋಡಿದನು, ಮಿಕ್ಕವರೂ ನೋಡಿದರು ಹೀಗೆ ಮಾತನಾಡಿದವನನ್ನು. ಎಲ್ಲರಿಗೂ ಆಶ್ಚರ್ಯ. ಮಲ್ಲಣ್ಣನಿಗೆ ಮಾತ್ರ ಈಗ 'ಪರಸಂಗ' ಸಾಧಿಸಿತು ಎನ್ನಿಸಿತು. ಮಾತನಾಡಿದವನಿಗೆ ತನ್ನ ದಡ್ಡತನಕ್ಕಾಗಿ ನಾಚಿಕೆ ಹುಟ್ಟುವಂತೆ ಮಾಡೋಣ, ನಾಲ್ಕು ಜನರಲ್ಲಿ ಅವನ ತಲೆ ತಗ್ಗಿಸುವಂತೆ ಮಾಡೋಣ—ಎಂದುಕೊಂಡು ಗಹಗಹಿಸಿ ನಗುತ್ತಲೆ ಮಾತನಾಡಿದನು, "ಇನ್ನೇನು ಬಂತೊ ಕಠಿಣ ಪರಸಂಗ! ಸೌಂತಿ ಸೌಂತಿಗೆ ಬಡಕೊಂಡರ ನಿನಗ್ಯಾಕ————"

"ಅದಲ್ಲ, ಮಾಮಾ, ಹೀಂಗ ಕುಂತ್ಮೆಟ್ಟಿಗೇ ವ್ಯಾಲಿ ಮಂದೀ ಮಾತ ಹೇಳೋವ್ರ ಮುಂದ ಕ ಟಿ ಣಾ ಅಂದೆ."

ಇದೂ ಒಂದು ವಿಚಾರಿಸತಕ್ಕ, ಲಕ್ಷ್ಯದಲ್ಲಿಡತಕ್ಕ ಮಾತು ಎಂದು ಹೊಳೆದು ಎಲ್ಲರ ಮುಖಗಳಲ್ಲಿಯು ನಗೆ ಅಡಗಿ ಗಾಂಭೀರ್ಯದ ಕಳೆ ಮೂಡಿತು. 'ಹೌದ್ನೋಡೊ, ಬಲೆ ಕಠಿಣ! ಒಂದ್ಮಾತೂ ಮುಚ್ಚಿಡೋ ಹಾಂಗಿಲ್ಲ. ಇದೆಂಥಾ ಪರಸಂಗ!' ಎಂದು ಎಲ್ಲರೂ ತಂತಮ್ಮ ಮನಸ್ಸಿನಲ್ಲಿಯೆ ಮಾತನಾಡಿಕೊಂಡವರಂತಹ ಮುಖಮುದ್ರೆಯನ್ನು ಎಲ್ಲರೂ ತಾಳಿದ್ದರು. ಮಲ್ಲಣ್ಣನಿಗೆ 'ಮಾಮಾ'ನ ಹಿರಿತನ ಸಾಧಿಸಿಕೊಳ್ಳುವ 'ಪರಸಂಗ' ಸಿಕ್ಕಿತು, ಅದರ ಕೂಡ ತನ್ನ ಕೆಲಸವನ್ನು ಸಾಧಿಸಿಕೊಳ್ಳುವ 'ಪರಸಂಗ'ವೂ ಸಿಕ್ಕಿತು. ಒಮ್ಮೆಲೆ ಮಾತನಾಡುವುದು ಹಿರಿತನದ ಲಕ್ಷಣವಲ್ಲ,

ಮೇಲೆ ಬಂದ ದುರ್ಧರ ಪ್ರಸಂಗದ ಕಟು ಅನುಭವದ ರೋಮಾಂಚಗಳಿಗಾಗಿ ಎಂಕ್ಕನವರು ಕೆಲಹೊತ್ತಾದರೂ ಮೈ ತುರಿಸಿಕೊಳ್ಳಲಿ, ಆ ಮೇಲೆ ಸ್ವರ್ಗದಿಂದ ತಟಕಿಕ್ಕುವ ಅಮೃತದ ಧಾರೆಯಂತೆ ಒಂದೊಂದೆ ಹಸಿಯಾಗಿ ಶಬ್ದಗಳನ್ನುದುರಿಸುತ್ತ ಮಾತನಾಡುವುದು. ಆಗ ತಿಳಿಯುವುದು ಎಂಕ್ಕ ಬಾಲಕರಿಗೆ ಹಿರಿಯರ ಮಾತಿನ ಮಹತ್ವ! ಇದೇನು ತನಗೆ ಗೊತ್ತಿಲ್ಲವೆ? 'ಪರಸಂಗ ಕಟಿಣೀ ಐತಿ' ಎಂದು ಮೊದಲು ಮನಸಿನಲ್ಲಿ ಮಾತಾಡಿಕೊಳ್ಳುವವನಂತೆ ಒಂದೆರಡು ಸಲ ಉಗುಳ್ನುಂಗಿ, ಹಿರಿತನದ ರಾಜೈಶ್ವರ್ಯದ ಛತ್ರದಂಡದಂತೆ ಗಂಟಲಿನ ಎಲಬು ಕೆಳ ಮೇಲೆ ಮಾಡಿ, ಆ ಮೇಲೆ ಮಾತನಾಡಿದನು ಮಲ್ಲಣ್ಣ—ಮಾಮಾಃ

"ಅದೇ ಮತ್ತ! ಅದಕೇ ಅಲ್ಲೇನು ಕುಲಕರ್ಣೇರು ನನ್ನ ಕರೆಸಿ ಹೇಳಿದ್ದು? 'ಮಲ್ಲಣ್ಣೋ, ಹೀಂಗ ಅವೆ ನೋಡು. ಅವರು (ಅಂದರ ನಮ್ಮ ತ್ವಾಟದಾಗಿನ ಇರ್‍ರಿ) ಈ ಊರಾಗ ಇರೋತನಕ ಯಾರಾದರೂ ಅವರ್ನ ಕೆಣಕೋ ಗೋಜಿಗೆ ಹೋದಗೀದಾರು, ಅಂ? ಕಣ್ಣಿಟ್ಟಿರು, ಮಲ್ಲಣ್ಣೋ, ಹುಡುಗರ ಮ್ಯಾಲೆ ಕಣ್ಣಿಡು'—ಅಂತ'. ನಾನೂ ಹೇಳ್ದೆ 'ಮಾದೇವರ ಮನಸ್ಸ್ಯಾ ಸಮರ್ತ್ರಿಗೆ ಬರೋದೇ ಹೆಚ್ಚಿನ ಮಾತು. ನೀವ್ಹೇಳಿಧಾಂಗ ಮಾಡ್ತೀನ್ರಿ, ಅಣ್ಣಾ ಅವರ. ಹುಡುಗ್ರು ಏನ್ಮಾಡಿದ್ರೂ ಈ ಮುದುಕ ಮಲ್ಲಣ್ಣೋ ಮ್ಯಾಲ ಇರಲ್ರಿ ನಿಮ್ಮ ವಿಶ್ವಾಸ' ಅಂತ."

ಸಭೆ ತುಂಬಿ ನಿಶ್ಶಬ್ದತೆ! ಸಭೆ ತುಂಬಿ 'ಇರ್‍ತಿತನ'ದ ಶಾಂತತೆ!

"ಮಾಟಾ ಮಾಡಿ ಮಳೆ ತರಿಸ್ತಾರಂತ ಅವ್ರು! ಕರೇ (ನಿಜ) ವೇನು, ಮಾಮಾ?" ಮೆಲುದನಿಯಲ್ಲಿ ಯಾರೊ ಕೇಳಿದರು.

"ಕರೇನಂದ್ರ?" ಮಲ್ಲಣ್ಣ ಗಟ್ಟಿಸಿಯೆ ಮಾತನಾಡಿದನು; ಅವನಿಗೇನು ಹೆದರಿಕೆ ಈ ಹುಚ್ಚ ಹುಡುಗರ ಮುಂದೆ? "ಕರೇವಂದ್ರು? ನಾಯೋನ್ನೋಡೀನೆ? ಕುಲಕರ್ಣೇರೇ ಹೇಳಿದ್ರು ನಮುಕ್ಸಮ ಆ ಆಚಾರ್ರು ಹೇಳಿದ್ರಂತ—"

"ಆ ತುಳಜಿಗೂ ಮಾಟಾ ಮಾಡ್ಯಾನಂತ——"

ಯಾರೂ ಮುಗಿಸಗೊಡಲಿಲ್ಲ ಈ ಮಾತನಾಡುವ ಹುಡುಗನನ್ನು. 'ಎಲ!' 'ಛೆ!' 'ಏನ್!' 'ಆಶ್ಚರ್ಯೈತ್ರ್ಯಾ!' ಮುಂತಾಗಿ ಸಭೆ ತುಂಬ

ಹಾಹಾಕಾರವೆದ್ದಂತಾಯಿತು. ಯತಿಶ್ರೇಷ್ಠರ ನಿಂದೆಗಾಗಿ ಅವರ ಕೈಫಿಯತ್ತನ್ನು ವಹಿಸಿದ ಮಲ್ಲಣ್ಣಗೆ ಕೂಡ ಶಾಪಕೊಡಬಹುದೆಂಬಂತೆ ಹೆದರಿ ಎಲ್ಲರೂ ಎದ್ದು ಬಿಟ್ಟಿದ್ದರು. ಮಲ್ಲಣ್ಣನಿಗೆ ಶಾಪವೂ ಸಿಡಿದು ಹೊರ ಬಿದ್ದಿತು, "ಏ! ತುಡುಗ ಮುಮ್ಮಾಟೀ! ಹುಳ ಬಿದ್ದಗಿದ್ದೀತು ಬಾಯಿ ವಳ——" ಎಲ್ಲರೂ ಹೆದರಿ ಹೋಗಿದ್ದರು, ಮಲ್ಲಣ್ಣ ತಡೆದನು, 'ಗೊಂಗಡಿ' (ಕಂಬಳಿ) ಯನ್ನು ಸವರಿಕೊಂಡೆದ್ದನು. "ದೊಡ್ಡವರ ಯೆವಾರ (ವ್ಯವಹಾರ)" ಎಂದು ಗೊಣಗುಟ್ಟಲು ಪ್ರಾರಂಭಿಸಿದನು: "ಹುಡುಗ ಅಂದ್ರಾಂಗ ತುಳಜೇದೂ ಒಂದು ಫರಸನೆ (ಪ್ರಶ್ನೆ) R.I.P."

* * * * *

ತುಳಜೆಗೂ ಒಂದೆರಡು 'ಫರಸನೆ'ಗಳಿದ್ದುವು; ಮೊದಲನೆಯದು; ಇಂದಿಗೆ ಒಂದು ತಿಂಗಳಾಯಿತು, ಇನ್ನೂ 'ಕಾರೇವು (ಕಾರ್ಯ=ಉತ್ತರ ಕ್ರಿಯೆ)'ದ ಊಟ ನಡೆದಂತೆ ನಡೆದಿದೆಯಲ್ಲ! ಈಗ ಬರಿಯ ಕುಲಕರ್ಣಿಯೊಬ್ಬನೆ ಅಲ್ಲ, ಊರೊಳಗಿನ ಮಿಕ್ಕವರೂ ಕೂಡ ಭೋಜನವನ್ನೊದಗಿಸಿ ಕೊಡಹತ್ತಿದ್ದಾರೆ! ಅಷ್ಟೇಕೆ, ದಿನೇ ದಿನೇ ಕುಲಕರ್ಣಿಯ ಮನೆಯ ಅನ್ನ ಬರುವುದು ಕಡಿಮೆಯಾಗಹತ್ತಿದೆ. ತುಳಜೆಗೆ ಬಹಳೇ ವಿಷಾದವಾಗಿತ್ತು. ಕುಲಕರ್ಣಿಯ ಮನೆಯಿಂದ ಬರುವುದು ಅಡಿಗೆ, ತಂದೊಡನೆಯೆ ತಿನ್ನುವುದಕ್ಕೆ ಸಿದ್ಧ; ಮಿಕ್ಕವರು ತಂದು ಕೊಡುವುದು ಅಡಿಗೆಯಲ್ಲ. 'ಶೀದಾ', ಅಡಿಗೆಯ ಸಾಮಾನು, ಅದನ್ನು ತುಳಜೆಯೆ ಅಡಿಗೆ ಮಾಡಬೇಕು. ಈ ಗೋಳಿನ ಜೊತೆಗೆ ತುಳಜೆಯ ಎರಡನೆಯ 'ಫರಸನೆ'; ಅದೆಂದರೆ ನಾರಾಯಣನ ಹಟ—ತುಳಜೆಗೆ ಓದು—ಬರೆ ಕಲಿಸಬೇಕೆಂದು. ಮೊದಲನೆಯ ಸಲ ನಾರಾಯಣನು ತನ್ನ ವಿಚಾರವನ್ನು ಆಡಿ ತೋರಿಸಿದಾಗ ತುಳಜೆಯು ದಿಗ್ಭ್ರಾಂತಳಾದಂತಾಗಿದ್ದಳು, 'ನನಗೇನ್ಮಾಡೋದ್ರಿ ಹಳ್ಳಿಯೂರ ಹೊಯ್ಮಾಲಿಗೆ?' ಎಂದಿದ್ದಳು. ಹಳ್ಳಿಯವರಿಗೆ ಕಲಿಸಬೇಕೆನ್ನುವುದೆ ತನ್ನ ಜೀವನದ ಧ್ಯೇಯ, ತನ್ನ ಚಳವಳಿಯ ಧೋರಣ ಎಂದು ನಾರಾಯಣನು ಪರಿಪರಿಯಿಂದ ತಿಳುಹಿಸಲೆತ್ನಿಸಿದನು. ಕೊನೆಗೆ ತುಳಜೆಯು ಹೇಳಿ ಬಿಟ್ಟಳು, 'ಶೀದಾ' ಬಂದ ಸಾಮಾನುಗಳ ವ್ಯವಸ್ಥೆಮಾಡಿ ಅಡಿಗೆ ಮಾಡುವ ತೊಂದರೆಯಲ್ಲಿ ತನಗೆ ಕಲಿಯಲು ವೇಳೆ ದೊರಕಲಿಕ್ಕಿಲ್ಲ

ಎಂದು. ನಾರಾಯಣನಿಗೆ ತಿಳಿಯದಾಯಿತು. 'ಮೊದಲು ಶಿಕ್ಷಣವನ್ನು ನಡೆಸೋಣ, ಆ ಮೇಲೆ ಉಳಿದ ವೇಳೆಯಲ್ಲಿ ಅಡಿಗೆ ಮಾಡೋಣ' ಎಂದನು. ಶಿಕ್ಷಣ ಮೊದಲು, ಸುಧಾರಣೆ ಮೊದಲು, ಯಾಕೆಂದರೆ——

× × × × ×

ತನ್ನ ಯಜಮಾನನಿಗೆ ಹುಚ್ಚು ಹಿಡಿದಿರಬಹುದೆ—ಎಂದು 'ಕೃಷ್ಣ' ನಿಗೆ ಶಂಕೆ. ಇಲ್ಲವಾದರೆ ಕುಲಕರ್ಣಿಯ ಮನೆಯಿಂದ ಅನ್ನವೇಕೆ ಬರು ವುದಿಲ್ಲ—ಎಂಬುದರ ವಿಚಾರವನ್ನೇಕೆ ಮಾಡುವುದಿಲ್ಲ? ದಿನದಿನಕ್ಕೆ ತುಳ ಜಿಯ ಬೇಜಾರ ಹೆಚ್ಚಿದಂತೆ ಅವಳಿಗೆ ಅಡಿಗೆಯಲ್ಲಿ ಆಸಕ್ತಿ ಉಳಿಯಲಿಲ್ಲ, 'ಕೃಷ್ಣ'ನಿಗೆ ಊಟದಲ್ಲಿ ರುಚಿ ಉಳಿಯಲಿಲ್ಲ. ಮನುಷ್ಯಜಾತಿಯ ಹಣೆ ಬರಹವೇ ಹೀಗೆ,ಎಂದುಕೊಂಡನು 'ಕೃಷ್ಣ'ನು. ಅಡಿಗೆ ಮಾಡಲು ಜನ್ಮ ತಾಳಿದ ಹೆಂಗಸಿಗೆ ಓದು–ಬರೆ ಕಲಿಸುವುದೆಂದರೆ? ಚಿಕ್ಕವರಿದ್ದಾಗ ಮೊಲೆ ಹಾಲು ಉಣ್ಣಿಸುವುದು, ಬೆಳೆದವರನ್ನು ಬೇಳೆ ಬೆಯ್ಯಿಸಿ ಉಣ್ಣಿಸುವುದು ಹೆಂಗಸರ ಕೆಲಸ—ಅದನ್ನೆಲ್ಲ ಬಿಟ್ಟುಕೊಟ್ಟು ತುಳಜಿಗೆ——

* * * * *

ತುಳಜಿಯ ಕೂಡ ಊಟ, ತುಳಜಿಯ ಅಡಿಗೆ ನಡೆದಂದಿನಿಂದ ಕುಲಕರ್ಣಿಗೆ 'ಯತಿಶ್ರೇಷ್ಠ'ರಿಂದ ಆದಷ್ಟು ದೂರದಲ್ಲಿಯೆ ಇರಬೇಕೆಂದೆ ನ್ನಿಸಿತು. ಶೂದ್ರರಾಕೆ! ಅವಳೊಡನೆ—ಆದರೂ ನಾರಾಯಣನಿಗೆ ಹೇಳು ವಂತಿಲ್ಲ, ಯಾಕೆಂದರೆ ತುಳಜಿಯು ಬ್ರಾಹ್ಮಣನ ಮಗಳು ಎಂದು ಆ 'ಯೋಗೀಶ್ವರ'ಸಿದ್ಧ ಮಾಡಿ ತೋರಿಸಬಹುದು. ಮಿಕ್ಕವರ ಮುಂದೆಯೂ ಮಾತನಾಡುವಂತಿಲ್ಲ. ತಾನೇ ಒದಗಿಸಿಕೊಟ್ಟ 'ಯತಿಶ್ರೇಷ್ಠ'ನನ್ನು ತಾನೇ ನಿಂದಿಸಿದಂತಾಗಿ ಅನರ್ಥವಾಗುವುದು. ಇತ್ತ, ಈ ಹಾಳು ಶೂದ್ರ ರೊಡನೆ ಜಾತಿಸಂಕರವೆ ಬೇಡ ಎಂದು ತಾನು ಹೋಗುವುದನ್ನು ತನ್ನ ಮನೆಯಿಂದ ಅನ್ನ ಕಳಿಸುವುದನ್ನೂ ಬಿಡುವಂತಿಲ್ಲ. ಮನೆಯಲ್ಲಿ ಹೆಂಡ ತಿಯ ಹೆದರಿಕೆ. ಈಗಾಗಲೆ ಅವಳಿಗೆ ಏನು ಸಂಶಯ ಬಂದಿತ್ತೊ ಏನೊ!— 'ನಿಮಗ ಹೋಗೋದಾಗ್ದಿದ್ರ ನಾ ಹೋಗಿ ಕೊಟ್ಟ ಬರ್‍ತೇನಿ, ದಿನಾಲು' ಎಂದು ಹಟ ಹಿಡಿದಿದ್ದಳು. ಹೆಂಗಸರಿಂದ ಸಮಾಜಕ್ಕೆ ಎಷ್ಟು ಹಾನಿ ಇದೆ!— ಎಂದು ಕುಲಕರ್ಣಿಯು ಹಳಹಳಿಸತೊಡಗಿದನು. ಹೆಂಗಸರ

ಹುಚ್ಚು ತಪದಿಂದಲೆ 'ಯತಿ'ಗಳ ರಾಜ್ಯ ನಡೆದಿದೆ. ಕೊನೆಗೆ ಕುಲಕರ್ಣಿ ತಾನೇ ಧೈರ್ಯವಮಾಡಿ 'ಈ ಯತಿಗಳು ಸ್ತ್ರೀಮುಖ ದರ್ಶನ ಮಾಡೋದಿಲ್ಲ' ಎಂದು ಹೇಳಿದ್ದನು. ಹೆಂಡತಿಗೆ ಮತ್ತಿಷ್ಟು ಸಂಶಯ ಬಂದಿತು. ದಿನಾಲು ಕೆರೆಗೆ ಹೋದಾಗ ಆಕೆ ಕೇಳಿದ್ದಳು, ಮುಕ್ಕ ಹೆಂಗಸರೆಲ್ಲ ಯತಿಗಳ ದರ್ಶನ ತೆಗೆದುಕೊಂಡು ಬರುವುದನ್ನು. ತುಳಜಿಯು ಸಂದರ್ಭವೂ ತಿಳಿದಿತ್ತು, "ಎಷ್ಟಿಂದಿನ ಜಲ್ಮದ ಪುಣ್ಯಾನೊ ಆ ಹುಡುಗೇದು? ಶೂದ್ರರಾಕೆ ಆಗಿ ಹುಟ್ಟಿದ್ರೂ ಪುಣ್ಯಾವಂತರ ಸೇವಾ ಮಾಡೋ ಭಾಗ್ಯ ಸಿಕ್ಕಿತು ಆಕೆಗೆ, ಬ್ರಾಹ್ಮಣರ ಹೆಂಗಸರಿಗೆ ಸಿಗಲೊಲ್ಲದು ಆ ಭಾಗ್ಯ" ಎಂದು ಚುಚ್ಚಿ ಮಾತನಾಡಿದಳು.

* * * *

ಎರಡು ತಿಂಗಳುಗಳ ಕೊನೆಗೆ ನಾರಾಯಣನ ಸಮಾಜಸುಧಾರಣಾ ಹಟವು ಸಹನೆ ಮೀರಿ ಬೆಳೆಯಿತು. ಕುಲಕರ್ಣಿಯ ವಿಷಯವಾಗಿ ಸಂಶಯವೂ ಬೆಳೆಯಿತು. ಅವನ ಮನೆಯಿಂದ ಅನ್ನವಿಲ್ಲ, ತುಳಜಿಗೆ ಅಡಿಗೆ ಮಾಡಲು ವೇಳೆ ಇಲ್ಲ. ಇತ್ತ ಕುಲಕರ್ಣಿಯ ಮನೆಯ ಹುಡುಗರೂ ಇಲ್ಲ, ಮುಕ್ಕವರ ಹುಡುಗರೂ ಇಲ್ಲ. ಶಾಲೆ ಪ್ರಾರಂಭವಾಗುವುದು ಹೇಗೆ? 'ಹುಡುಗರನ್ನು ಕೂಡಿಸಿ ಕೊಡೋದಾಗೋದಿಲ್ಲ ಈ ಕುಲಕರ್ಣಿಗೆ? ಕಡೆಗೆ ತನ್ನ ಮನೇ ಹುಡುಗ್ರನ್ನ ಕಳಿಸಿಕೊಡ್ಬೇಕು?' ಎಂದು ಅಬ್ಬರಿಸಿದನು. 'ಅವರ್ಯಾಕ ಕಳಿಸಿಕೊಡ್ತಾರ್ರಿ ತಮ್ಮ ಹುಡುಗ್ರನ್ನ? ಇಲ್ಲಿ ಬಂದ್ರ ಮೈಲಿಗೆ ಆಯಿತು, ಮೈ ಯಾಕ ತೊಳಕೋಳಿಲ್ಲಾಂತ ಮೊನ್ನೆ ತಮ್ಮ ಹುಡುಗರ್ನ ಹೊಡೀತಿದ್ದರು ಅವರು!' ಎಂದು ತುಳಜಿಯು ಸಾಕ್ಷಿ–ಪುರಾವೆಯಾಗಿ ಹೇಳಿದಳು. ನಾರಾಯಣನಿಗೆ ಹೇಸಿಕೆಯಾಯಿತು. ಮಡಿ– ಮೈಲಿಗೆ! ಜಾತಿ--ಜಾತಿ! ಇದನ್ನು ನಿರ್ಮೂಲ ಮಾಡದ ಹೊರತು——

\+ \+ \+ \+

'ಕೃಷ್ಣ'ನಿಗೂ ಮನುಷ್ಯರಲ್ಲಿಯ ಈ ಜಾತಿ–ಜಾತಿಗಳ ನಿರ್ಬಂಧದಿಂದ ಬೇಜಾರವಾಗಿ ಹೋಗಿತ್ತು. ಒಮ್ಮೆ ಈ ಜಾತಿಯ ಪ್ರಶ್ನೆ ಬಿಟ್ಟಿತೆಂದರೆ 'ಶೀದಾ' ಕಳುಹಿಸುವವರಿಗೆ 'ಅಡಿಗೆಯನ್ನೆ ಕಳುಹಿಸಿಕೊಡಿರಿ

ಎಂದು ಹೇಳಲು ಬರುವುದು. ಬೇರೆ ಬೇರೆಯವರ ಅಡಿಗೆಯನ್ನು ಉಣ್ಣುವ ರುಚಿ ಒಂದು ನಾಯಿಗೆ ಗೊತ್ತು, ಒಂದು ಬ್ರಾಹ್ಮಣನಿಗೆ ಗೊತ್ತು. ಅದಕ್ಕಾಗಿಯೆ ತುಳಜೆಯ ಅಡಿಗೆ ಸೇರುತ್ತಿದ್ದಿಲ್ಲ 'ಕೃಷ್ಣ'ನಿಗೆ. ಈಗ ಎಷ್ಟೋ ಅನುಕೂಲವಾಯಿತು. ಎಲ್ಲರೂ ಜಾತಿ ನಿರ್ಬಂಧವಿಲ್ಲದೆ ತಂತಮ್ಮಲ್ಲಿಯ ಅಡಿಗೆಯನ್ನು ತಂದು——

\+ + + +

ಮಲ್ಲಣ್ಣಗೆ ಹೆದರಿಕೆ, ಈ 'ಇದ್ರೀ'ಗೆ ಅಡಿಗೆ ಮಾಡಿ ಉಣ್ಣಿಸಬೇಕಂತೆ. ಎಷ್ಟು ದಿವಸ? ' ಆ ಹುಡುಗ ಅಂದಾಗ ತುಳಜೇದೂ ಒಂದು ಘರಸನೆ ಏತಿ, ಆಕೀಗ ತರಾಸ (ತ್ರಾಸ) ಆಗ್ತಾರ್ದು ಅಂತ ಆಯ್ತಾ (ಆಯತವಾಗಿ) ಬೆಯ್ಸಿಸಿದ ಅಡಿಗೀನೇ ಬೇಡ್ತಾನೊ ಏನೊ ಇದ್ರಿ !' ಕುಲಕರ್ಣಿಗೆ ಕೇಳಿಬಿಡಬೇಕು, ಇಷ್ಟಾದರೂ ಈ ವರ್ಷ ಮಳೆ–ಬೆಳೆ ತರಿಸುವುದರ 'ಖಾತ್ರಿ'ಯಾದರೂ ಕೊಡುವನೇನು ಈ ಯತಿ ಎಂಬುದನ್ನು. ಅಡಿಗೆ ಬೆಯ್ಸಲಿಕ್ಕೆ ಕಿಚ್ಚು, ಕಟ್ಟಿಗೆ ಎಲ್ಲಿಂದ ತರುವುದು? 'ಭ್ಯಾಸ್ಗಿ ದಿನಾನ್ಸಂತ ಕಟ್ಟಿಗೆ ಉರುವಲ ಅಡವಿ ಅಡವಿ ತಿರುಗಿ ಆರಿಸಿ ಕಟ್ಟಿಕೊಂಡು ತಲೆಮ್ಯಾಲ ಹೇರಿಕೊಂಡು ಮನೆಮನೆ ಹೋಗಿ ಮಾರಿಕೊಂಡು ಹೊಟ್ಟಿ ತುಂಬ್ಕೋತಾವ ಎಷ್ಟೊ (ಎಷ್ಟು) ಹೆಂಗಸ್ರು? ಉದ್ರಿ ತಂದು 'ಶೀದಾ' ಕೊಟ್ಟೀತು ಅನ್ನು. ಮಳೆಗಾಲ ಸನೇಕ (ಸನೀಯ=ಸಮೀಪ) ಬಂತು, ಇನ್ನ ಶೀದಾಕಚ್ಕ——————''

* * * *

ಹಸಿವೆಯ ಬಾಧೆ! ಅನ್ನವಿಲ್ಲ. 'ಶೀದಾ' ಇಲ್ಲ. ತಾನು ಮೋಸ ಹೋದನೆಂಬ ಅರಿವು ಬಂದಿತು ನಾರಾಯಣನಿಗೆ. ಮಾಡುವುದೇನು? ಕುಲಕರ್ಣಿಯ ಇತಿಹಾಸವನ್ನು ಬೈಲಿಗೆಳೆದರೆ ––? ತಾನು ಸುಮಾರು ನಾಲ್ಕು ತಿಂಗಳುಗಳ ವರೆಗೆ ಕೆಲಸವಿಲ್ಲದೆ ಬಡವರ ಅನ್ನ ತಿಂದುದರ ಗತಿ ಏನು? ಕುಲಕರ್ಣಿಯು ಆ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವೇನು? ತುಳಜೆಗೆ ಓದು–ಬರೆ ಸಾಕಷ್ಟು ಬರುತ್ತಿದೆ. ಮುಂದೆ? ' ಹಣೆ ಮ್ಯಾಲ ಏತಿರಿ. ಅಲ್ಲಿ ಏನು ಬರೆದಿದ್ದ್ಯಾ ಯಾರೀಗೆ ತಂತಾನೇ ಓದಲಿಕ್ಕೆ ಬರತೈತಿರಿ?' ಎಂದಿದ್ದಳು ತುಳಜೆ. ನಾರಾಯಣನು ಹಣೆ ಗಟ್ಟಿಸಿಕೊಂಡನು. ಎಂತಹ ಹುಚ್ಚನು ತಾನು! ಕುಲಕರ್ಣಿಗಿಂತ

ಮಿಕ್ಕವರೇ ತನಗೆ ಹೆಚ್ಚಾಗಿ ಅನ್ನದಾನ ಮಾಡಿವ್ದಾರೆ. ಎಲ್ಲರೂ ಬಡವರು. ಬಡವರಿಗೆ ಇಷ್ಟೊಂದು ವಿಶ್ವಾಸ ತನ್ನ ಮೇಲೆ. ಹೀಗಿದ್ದು ತಾನು ಊರೊಳಗೆ ಕಾಲಿಡಲಿಲ್ಲವಲ್ಲ! ಬಡವರ ಮನೆ–ಮನೆಗೆ ಹೋಗಿ ಅವರನ್ನು ಮಾತನಾಡಿಸಲಿಲ್ಲವಲ್ಲ! ಈಗಲಾದರೂ —— ಈಗೇನಿದೆ? ಮತ್ತೆ ಹಣದ ತೊಂದರೆ, ಹಸಿವೆಯ ಬಾಧೆ! ಬಡವರನ್ನು ಕೂಡಿಸಬೇಕು, ಸಂಘ ಶಕ್ತಿಯಿಂದ ದುಡಿಸಬೇಕು, ಬೀದಿಗಳನ್ನೂ ಮನೆಗಳನ್ನೂ ಕಟ್ಟಿಸುವಂತೆ ——— ಹಾಳಾಯಿತು, ಮಳೆಗಾಲ ಬಂದಿತು. ಇಷ್ಟಾಗಿಯೂ ಹಣವಿಲ್ಲ. ಸಾಲ ತೆಗೆಯಬೇಕೆಂದರೆ ——— ಯುಕ್ತಿ ಹೊಳೆಯಿತು ನಾರಾಯಣನಿಗೆ. ಊರೊಳಗೆ ಹಗೆಗಳಿವೆ, ಹೆಂಗಸರಿದ್ದಾರೆ. ಹಗೆಗಳಲ್ಲಿ ಕಾಳು, ಹೆಂಗಸರ ಮೈಮೇಲಿನ ಬಂಗಾರದ ಸಣ್ಣ–ದೊಡ್ಡ ಒಡವೆ! ಇವುಗಳನ್ನು ಒತ್ತೆ (ಓಲು) ಎಂದಿಟ್ಟು ಗ್ರಾಮಸುಧಾರಣಾಸಂಘಕ್ಕಾಗಿ ಸಾಲು ತೆಗೆಯೋಣ. ಮಾದರಿಯ ಹಳ್ಳಿಯನ್ನು ಮಾಡಿಕೊಳ್ಳೋಣ. ಮನುಷ್ಯನ ಸ್ವರ್ಗವನ್ನು ಹುಟ್ಟಿಸೋಣ. ಆ ಮೇಲೆ ಸ್ವರ್ಗದ ದೇವನು——————

*　　*　　*　　*

ಮಳೆಗಾಲ. ಮಳೆ ಇಲ್ಲ ಎಂದಿನಂತೆ. ಮೋಡಗಳು ಕವಿದಿವೆ, ಆದರೂ ಮಳೆ ಇಲ್ಲ. ಸುತ್ತಮುತ್ತಲಿನ ಮಳೆಯ ಮಾದರಿ ಎಂದು ಹನಿಗಳನ್ನು ತರುತ್ತಲಿದೆ ಗಾಳಿ, ಆದರೂ ಕಮತೂರಿನಲ್ಲಿ ಮಳೆ ಇಲ್ಲ. 'ಇರ್ತೀಗೆ ಶೀದಾ ಕೊಡೋದೂ ತಪ್ಪಿಸ್ದೀವಿ ಅಂತ ಈ ಗೋಳು. ಇಲ್ಲಾಂದ್ರೆ ಈ ಲಗಸಣ (ಲಕ್ಷಣ) ಇದ್ದು ಮಳೆ ಆಗ್ತಾರದಂದ್ರ? ಇದೇ ಹೊತ್ತಿಗೆ ಕುಲಕರ್ಣೇರು ಕಚೇರಿ ಕೆಲಸಕ್ಹೋಗಬೇಕಂದ್ರ? ಮಾವಾ, ನಾವೇ ಹೋಗಿ ಅಡ್ಡಬೀಳೋಣ "ಇರ್ತ" ಮುಂದ. ತಪ್ಪಾಯ್ತು ಅಂತ ————'

×　　×　　×　　×

ನಾರಾಯಣನು ಭರದಿಂದ ಹೆಜ್ಜೆಗಳನ್ನಿಡಹತ್ತಿದ್ದಾನೆ. ಮೇಲೆ ಗುಡುಗು, ಮಳೆ ಇಲ್ಲ. 'ಮತ್ತ ಈ ವರಸ್ನೂ ಬರಾನೇ ಬೀಳ್ತೈತ್ಯೋ ಏನೋ! ಕೂಲಿ ಕೆಲಸ ಆದ್ರೂ ಸಿಗತೈತ್ಯೋ ಇಲ್ಲೋ!' ಎನ್ನುತ್ತ

ತುಳಜಿಯು ಬೆನ್ನು ಹಿಂದೆಯೆ ಇದ್ದಾಳೆ; 'ಶಿವಾ ಮಾದೇವ ಎಂದು ಕಣ್ಣಾ ತೆರೀತಾನೊ!' ಎಂದಳು. ನಾರಾಯಣನು ಓಡಹತ್ತಿದನು; 'ಕೃಷ್ಣ' ನು ಮುಂದೆ, ತುಳಜಿಯು ಹಿಂದೆ. 'ಮಾದೇವನ ಮಳೆಯು ಮೇಲೆ ವಿಶ್ವಾಸಿಟ್ಟು ಮಾದೇವನ ಸ್ಮಶಾನಾಗೇದ ಸಮ್ದೇಶ' ಎಂದು ನಾರಾಯಣನ ವಿಚಾರ.

* * * *

'ಮಾದೇವರ ಮನಸ್ಸ್ಯಾ ಏನಾದ್ರೂ,ಆವನ ಸಿಟ್ಟು ಹ್ಯಾಂಗ ದಕ್ಕೀತರೊ?' ಎಂದು ಧ್ವಜದಂತೆ ನಾಲಗೆ ಚಾಚುತ್ತ ಮಲ್ಲಣ್ಣಿ ತೋಟದ ಕಡೆ ನಡೆದಿದ್ದಾನೆ – ಅವನ ಹಿಂದಿನಿಂದ 'ಮಾವಾ' ನ ಬಳಗ ನಡೆದಿದೆ.

* * * *

ಮನುಷ್ಯನೆ ಮಾದೇವ ಅಂತ ಮನವರಿಕೆ ಮಾಡಿಕೊಡ್ತೀನಿ ಈ ಬಡವರಿಗೆ ಎಂದು ಆತುರದಿಂದ ವೇಗದಿಂದ ಓಡಹತ್ತಿದನು ನಾರಾಯಣನು.

* * * *

'ಮನುಷ್ಯನಂತಹ ಹಿಂದು ಬೀಳೋ ಜಾತಿಯನ್ನ ಎಲ್ಲಿಯೂ ನೋಡಲಿಲ್ಲ' ಎಂದು ಮುಂದೆ ಹೋದ 'ಕೃಷ್ಣ' ನು ತಡೆದು ತನ್ನ ಯಜಮಾನನನ್ನು ಕೂಗಿ ಕರೆಯುವಂತೆ ಆಕಾಶಕ್ಕೆ ಮುಖವೆನೆತ್ತಿ ಬೊಗಳಿದನು.

| | | |
|---|---|---|
| ನಾರಾಯಣನೂ ಮುಖವನೆತ್ತಿ ನೋಡಿದನು<br>ಮಲ್ಲಣ್ಣಿಯೂ ಅವನ ಹುಡುಗರೂ<br>ಮುಖವೆತ್ತಿ ನೋಡಿದರು | ಎದುರು | ಹಳ್ಳಿಯ ರೈತರು !<br>'ತ್ಪಾಟದ ಇರ್ತಿ' ! |

* * * *

"ದ್ಯಾವ್ರ, ಮನಸ್ಸ್ಯಾ ನೀನು. ಬಡವ್ರ ತೆಪ್ಪ (ತಪ್ಪ) ಹೊಟ್ಟೀವಳ್ಗ ಹಾಕಿಕೋ.... ಏ, ಸಿದ್ದಪ್ಪಾ, ಕಾಯಿ ತಾ ಇಲ್ಲಿ" ಎಂದು ಮಲ್ಲಣ್ಣಿಯು ತೆಂಗನೊಂದನ್ನು ಎತ್ತಿದನು.

'ಕೃಷ್ಣ' ನ ಬಾಯಿಯಿಂದ ಜೊಲ್ಲು ಸುರಿಯುತ್ತಲಿದೆ.

ತುಳಜಿಯ ಕಣ್ಣೊಳಗಿಂದ ನೀರು ಸುರಿಯುತ್ತಲಿದೆ.

ನಾರಾಯಣನ ಹಣೆಗಂಟಿನಿಂದ ಬೆವರು ಸುರಿಯುತ್ತಲಿದೆ.

" ಮಾಮಾ, ಕಲ್ಲು ಹಿಡಿ ಕಾಯಿ ಒಡೀಲಿಕ್ಕೆ " ಎಂದು ತರುಣನೊಬ್ಬನು ಮುಂದೆ ಬಂದನು.

"ಇದೊ ! ಇಲ್ಲಿದೆ ಕಲ್ಲು !" ಎಂದವನೆ ನಾರಾಯಣನು ತೆಂಗನ್ನು ಕಸಿದುಕೊಂಡು ತನ್ನ ತಲೆಗೆ ಬಲವಾಗಿ ಅಪ್ಪಳಿಸಿಕೊಂಡನು. ಒಮ್ಮೆಲೆ ಸಿಡಿಲು ಆಕಾಶದಲ್ಲಿ. ' ಧೋ ಧೋ ' ಎಂದು ಮಳೆ ಸುರಿಯಿತು !

# ಸಾ ಕ ಲ್ಲ ಸ! ಇಲ್ಲವೆ ಸಾಕ್ಷಾತ್ಕಾರ

ವರ್ಗದಲ್ಲಿ ಕುಳಿತ ಹುಡುಗರು ಭಾವಾವೇಶದಿಂದ ತನ್ಮಯರಾಗಿದ್ದು ಒಂದು ನಿಮಿಷ ಸ್ತಂಭಿತರಾಗಿ ಕುಳಿತರು. ಕೂಡಲೆ ಎಲ್ಲರೂ ಏಕಕಾಲಕ್ಕೆ ಏಕಸ್ವರದಿಂದ ಮುಕ್ತಕಂಠರಾಗಿ ಗಹಗಹಿಸಿ ನಕ್ಕರು. ಶಿಕ್ಷಕನ ಮುಖದಲ್ಲೂ ಮುಗುಳ್ನಗೆ ಮೂಡಿತು. ಹಣ್ಣಾದ ಮಾವಿನಂತೆ ಸೊಗಸಾಗಿ ಎದುವಾದ ಆ ಮುಖದಲ್ಲಿ, ಬಿಳಿಮೀಸೆಗಳ ನೆರಳಿನಲ್ಲಿ,ತುಟಿಗಳೆರಳಿ ಶುಭ್ರದಂತಗಳು ಕಾಣುವಾಗ ಬಿಳಿಮೋಡಗಳ ಹಿಂದಿನಿಂದ ಮರೆಯಿಂದ ತಿಳಿಯಾಗಿ ಹೊರಬೀಳುವ ಅಷ್ಟಮೀಚಂದ್ರನಂತೆ ಕಂಡಿತು ಆ ಶಿಕ್ಷಕನ ಬಾಯಿ. ಶಿಕ್ಷಕನ ಮುಗುಳ್ನಗೆಯನ್ನು ನೋಡಿ ಹುಡುಗರಿಗೆ ಮತ್ತಿಷ್ಟು ಧೈರ್ಯವಾಗಿ ಬಿದ್ದು ಬಿದ್ದು ನಗುವಂತಾಯಿತು. ತನ್ನ ವಿದ್ಯಾರ್ಥಿಗಳು ಇಷ್ಟೊಂದು ಅಕೃತ್ರಿಮವಾದ ಆನಂದ ರಸವನ್ನುಣ್ಣುವುದಾದರೆ ಅವರಿಗೆ ಕತೆಯ ಸೊಗಸು ತಿಳಿದಿರಲೇಬೇಕು—ಎಂದು ಅವರ ಬುದ್ಧಿಮತ್ತೆಗಾಗಿಯೂ ತನ್ನ ಕತೆಗಾರಿಕೆಯ ಚಾತುರ್ಯಕ್ಕಾಗಿಯೂ ಅಭಿಮಾನವಾಯಿತು ಶಿಕ್ಷಕನಿಗೆ. ಆ ಅಭಿಮಾನದಿಂದ ಒಬ್ಬೊಬ್ಬರನ್ನೆ ನೋಡಿದನು ತಾಯ್ತನದ ಕಳಕಳಿಯ ದೃಷ್ಟಿಯಿಂದ. ಕ್ರಮೇಣ ನಗೆಯ ಅಬ್ಬರವು ಸಡಿಲಾಗಹತ್ತಿತು. ಶಿಕ್ಷಕನು ಮತ್ತೆ ತನ್ನ ಪಾಠವನ್ನು ಪ್ರಾರಂಭಿಸಲುಜ್ಜುಗಿಸಿದನು. ಪೌರಾಣಿಕರ ರೀತಿಯಲ್ಲಿ ಪೂರ್ವ ಕಥಾ ಸುಸಂಗವನ್ನು ಹೇಳುವವನಂತೆ ಮತ್ತೆ ತನ್ನ ತಿಳಿದನಿಯಲ್ಲಿ ಓದಿದನು ಮುಂದಿದ್ದ ಪುಸ್ತಕವನ್ನು."ಒಮ್ಮೆಲೆ ಸಿಡಿಲು ಆಕಾಶದಲ್ಲಿ,'ಧೋ ಧೋ' ಎಂದು ಮಳೆ ಸುರಿಯಿತು."ಮತ್ತೊಮ್ಮೆ ಗಹಗಹಿಸಿತು ವರ್ಗವೆಲ್ಲ. ಪುಸ್ತಕವನ್ನು ಬದಿಗಿಟ್ಟು, ನಗೆ ತಡೆದು, ಗಾಂಭೀರ್ಯ ತಾಳಿ ಶಿಕ್ಷಕನು ತನ್ನ

ದೃಷ್ಟಿಯನ್ನು ಸುತ್ತಲೂ ತಿರುಗಿಸಿದನು, ಕೊನೆಗೆ ಒಬ್ಬ ವಿದ್ಯಾರ್ಥಿಯನ್ನು ದಿಟ್ಟಿಸಿ ತಡೆದನು; ಶಿಕ್ಷಕನ ದೃಷ್ಟಿಯಿಂದಲೆ ಅವನ ಅಭಿಪ್ರಾಯ ತಿಳಿದಿತ್ತು ಆ ವಿದ್ಯಾರ್ಥಿಗೆ. 'ಇದರೊಳಗಿನ ಹಾಸ್ಯವೇನು, ಮರ್ಮವೇನು?' ಎಂಬುದೇ ಶಿಕ್ಷಕನ ಅಭಿಪ್ರಾಯ ಎಂದು ತಿಳಿದುಕೊಂಡು ಆ ವಿದ್ಯಾರ್ಥಿಯು ಎದ್ದು ನಿಂತು ಹೇಳತೊಡಗಿದನು. "ದೇವರ ಸಲುವಾಗಿ, ಧರ್ಮದ ಸಲುವಾಗಿ, ಆಚಾರದ ಸಲುವಾಗಿ ತಿರಸ್ಕಾರ ಇದ್ದಿತಿರಿ ಆ ನಾರಾಯಣಗ. ಆ ತಿರಸ್ಕಾರದಿಂದಲೆ ತೆಂಗು ಒಡೆದ ಅವ, ಆದರೂ ತೆಂಗು ಒಡೆಯೋದೊಂದೇ ತಡ ಮಳೆ ಆಯ್ತು—" ಇಷ್ಟರೊಳಗೆ ಎಲ್ಲ ಹುಡುಗರೆಲ್ಲ ದನಿಗೂಡಿಸಿ "ಮತ್ತೂ ನಾರಾಯಣನ ಫಜೀತಿ ಆಯ್ತುರಿ" ಎಂದು ಮತ್ತೆ ಗಹಗಹಿಸಲಾರಂಭಿಸಿದರು. ಶಿಕ್ಷಕನು ಪುಸ್ತಕವನ್ನು ಮುಚ್ಚಿ ಬದಿಗಿಟ್ಟನು. ತತ್‌ಕ್ಷಣವೆ 'ಮುಂದೇನಾಯ್ತುರಿ? ಮುಂದೇನಾಯ್ತುರಿ?' ಎಂದು ಅತ್ಯಂತ ಆತುರದ ದನಿಯಲ್ಲಿ ಕೇಳಿದರು ಹುಡುಗರೆಲ್ಲ. ಶಿಕ್ಷಕನು ಪುಸ್ತಕವನ್ನು ಗಂಟಿನಲ್ಲಿ ಕಟ್ಟಿಡುತ್ತ "ಇಲ್ಲಿಗೇ ಮುಗೀತು ಕತೆ" ಎಂದನು. ಒಬ್ಬ ಹುಡುಗನಿಗೂ ವಿಶ್ವಾಸವಾಗಲಿಲ್ಲ. "ಮುಂದೇನಾಯ್ತುರಿ? ಮುಂದೇನಾಯ್ತುರಿ?" ಎಂದು ಹಟದ ಆತುರದ ದನಿಯಲ್ಲಿ ಕೇಳಿಕೊಂಡರು. "ಕತೆ ಮುಗೀತು" ಎಂದನು ಶಿಕ್ಷಕ. "ಅಂತೂ ತೆಂಗು ಒಡೆದದ್ದಕ್ಕೆ ದೇವರು ಮಳೆ ಕೊಟ್ಟ" ಎಂದನು ಒಬ್ಬ ವಿದ್ಯಾರ್ಥಿ. ಶಿಕ್ಷಕನು ತಟ್ಟನೆ ಮುಖವನೆತ್ತಿದನು, "ದೇವರು ಮಳೆ ಕೊಟ್ಟ ಅಂತ ಎಲ್ಲಿ ಹೇಳಿದೆ?" ಎಂದನು ಸಂಶಯದ ದನಿಯಿಂದ. "ಮತ್ತ—'ಧೋ ಧೋ' ಅಂತ———," ಶಿಕ್ಷಕನು ಖೊಳ್ಳನೆ ನಕ್ಕುದಕ್ಕಾಗಿ ಚಕಿತನಾಗಿ ವಿದ್ಯಾರ್ಥಿಯು ತನ್ನ ಮಾತನ್ನು ತಡೆದನು, 'ತನಗೆಯೆ ಕತೆ ತಿಳಿದಿರಲಿಕ್ಕಿಲ್ಲವೆ?' ಎಂದು ನೊಂದ ದೃಷ್ಟಿಯಿಂದ ಶಿಕ್ಷಕನನ್ನು ನೋಡಿದನು. ಅದನ್ನು ನೋಡಿ ಶಿಕ್ಷಕನೂ ನಗೆ ತಡೆದನು, 'ಹಾಗಲ್ಲ', ಎಂದನು; ವಿದ್ಯಾರ್ಥಿಗಳ ಕುತೂಹಲ ಹೆಚ್ಚಿದಂತೆ ಕಂಡು ಬರಲು ಮಾತನ್ನು ಮುಂದುವರಿಸಿದನು, "ಹಾಗಲ್ಲ, ನಾರಾಯಣ ತೆಂಗು ಒಡೆದದ್ದು ತನ್ನ ತಲೆಯ ಮೇಲೆ, ಅದಕಾಗಿ ಅವನ ಕಣ್ಣಿಗೆ ಕತ್ತಲೆ ಕವಿದು ಬಿದ್ದು ಬಿಟ್ಟ, ಅದನ್ನು ನೋಡಿ ಉಳಿದ ಜನರು ಗಾಬರಿಯಾಗಿ

ಓಡತಾ ಹೋಗಿ ನೀರು ತಂದು ಸುರುವಿದರು ಅವನ ತಲೆಯ ಮೇಲೆ, ಕನಸು ಕಂಡವರಂತೆ ಎಚ್ಚೆತ್ತ ಮೇಲೆ ನಾರಾಯಣನಿಗೆ ಅನ್ನಿಸಿತು—''

''ನಿಮಗ ಹ್ಯಾಗ ತಿಳೀತರಿ ?''

''ಕತೆ ಮುಗೀತೂ ಅಂತ ಹೇಳಿದಿರಲ್ಲ ?''

''ಮುಗಿದರ ಮುಂದಿನ ಕತೆ ಎಲ್ಲಿಂದ ಬಂದಿತು ?''

ವಿದ್ಯಾರ್ಥಿಗಳು ಸುರಿಮಳೆಯಂತೆ ಒಂದೇ ಸಮನೆ ಕೇಳುವ ಪ್ರಶ್ನೆಗಳಿಂದ ಶಿಕ್ಷಕನು ಗಾಬರಿಗೊಂಡಂತಾದನು. ಈ ಹುಡುಗರಿಗೆ ಯಾವ ಸಮಾಧಾನವನ್ನು ಕೊಡಬೇಕು, ಎಂತಹ ಉತ್ತರವನ್ನು ಕೊಡಬೇಕು ಎಂಬ ಪೇಚಿನಲ್ಲಿ ಸಿಕ್ಕಿಕೊಂಡನು. ಕತೆ ಮುಗಿದಿಲ್ಲ ಎನ್ನಬೇಕೆ- ಮುಂದೆ ಕತೆಯೇ ಇಲ್ಲ. ಕತೆ ಮುಗಿದಿದೆ ಎನ್ನಬೇಕೆ—''ನಿಮಗೆ ಹ್ಯಾಗ ತಿಳೀತು?'' ಎಂದು ಕೇಳುವರು. ಮಾಡಬೇಕೇನು ? ಕತೆ ತನ್ನದೆ ಎಂದು ಹೇಳಿಬಿಡಬೇಕೆ—ಅದೂ ಕಷ್ಟ ಸಾಧ್ಯ. ಮುಂದೆ ಅವರು ಕೇಳಬಹುದಾದ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಅತ್ಯಂತ ಮನೋವ್ಯಥೆಯಾಗುವಂತಿದೆ. ಮಾಡಬೇಕೇನು ? ಮೂವತ್ತು ವರ್ಷಗಳ ಮನೋದೌರ್ಬಲ್ಯದ ಕತೆ. ಎಷ್ಟು ತಪಸ್ಸು ಮಾಡಿದರೂ ಕೊನೆಗೆ ಬ್ರಹ್ಮರ್ಷಿಯಾಗದ ಆಧುನಿಕ ವಿಶ್ವಾಮಿತ್ರನ ಕತೆ. ಶಿಕ್ಷಕನಿಗೆ ಬಹಳೇ ವ್ಯಥೆಯಾಯಿತು. ಹಿಂದಿನದನ್ನೆಲ್ಲ ಮರೆಯಬೇಕೆಂಬ ಉದ್ದೇಶದಿಂದ ತಾನು ಮತ್ತೊಂದು ಹೆಸರನ್ನಿಟ್ಟುಕೊಂಡಿದ್ದನು. ಆ ಹೆಸರಿನಿಂದ ತನ್ನ ಆತ್ಮಚರಿತ್ರೆಯನ್ನು ಬರೆದಿದ್ದನು, ಯಾರಿಗೂ ಹೇಳಿದ್ದಿಲ್ಲ ಮಾತ್ರ. ಮೂವತ್ತು ವರ್ಷಗಳ ಹಿಂದಿನ ಸಮಾಜದ ಚಿತ್ರವನ್ನು ಕೊಡುವ ಒಂದು ಗ್ರಂಥದ ಹಸ್ತಪ್ರತಿ ತನಗೆ ದೊರೆತಿದೆ ಎಂದು ಮಿಕ್ಕ ಶಿಕ್ಷಕರಿಗೆ ಹೇಳಿದ್ದನು, ಓದಿಯೂ ತೋರಿಸಿದ್ದನು. ''ಸಮಾಜ ಪಾಠಕ್ಕಾಗಿ ಇದೇ ಪುಸ್ತಕವನ್ನು ಓದಬೇಕು'' ಎಂದು ಅವರೆಲ್ಲರೂ ಹಟತೊಟ್ಟಿದ್ದರು. ಆಗ ತಾನೇ ಆ ಕತೆಯಲ್ಲಿಯ ನಾರಾಯಣ ಎಂದು ಹೇಳುವ ಧೈರ್ಯವಾಗಿದ್ದಿಲ್ಲ. ಇಂದು ತನ್ನ ವಿದ್ಯಾರ್ಥಿಗಳು ಕುತೂಹಲಬುದ್ಧಿಯಿಂದ ಹಟ ತೊಡುವಾಗ 'ತಾನೇ ಆ ಕತೆಯಲ್ಲಿಯ ನಾರಾಯಣ' ಎಂಬುದನ್ನು ಮುಚ್ಚಿಡುವ ಧೈರ್ಯವಾಗಲೊಲ್ಲದು. ''ಹುಡುಗರ ಕುತೂಹಲಬುದ್ಧಿಯನ್ನು ಯಾವಾಗಲೂ ತೃಪ್ತಿಗೊಳಿ

ಮತ್ತ ಸಂವರ್ಧಿಸಬೇಕು'' ಎಂದು ತನ್ನ ಶಾಲೆಯ ಶಿಕ್ಷಣಕ್ರಮದ ಧ್ಯೇಯಗಳಲ್ಲಿ ಬರೆದಿಟ್ಟಿದ್ದನು ನಾರಾಯಣನು, ಶಿಕ್ಷಕನಾಗಿ ತಾನು ಶಾಲೆಯನ್ನು ಪ್ರಾರಂಭಿಸುವಾಗ. ತನ್ನ ಶಿಕ್ಷಣಕ್ರಮದ ಧ್ಯೇಯಗಳ ವಿಷಯವಾಗಿ ನಾರಾಯಣನಿಗೆ ಬಹಳೇ ಅಭಿಮಾನವಿದ್ದಿತು. ಆ ಕ್ರಮಕ್ಕನುಗುಣವಾಗಿಯೆ ನಡೆಸಿದ ತನ್ನ ಶಾಲೆಯ ವಿಷಯವಾಗಿಯೂ ಅವನಿಗೆ ಬಹಳೇ ಅಭಿಮಾನವಿದ್ದಿತು. ಇಂದು ತನ್ನ ವಿದ್ಯಾರ್ಥಿಗಳ ಕುತೂಹಲಬುದ್ಧಿಯ ಹಟವನ್ನು ನೋಡಿ ಮೊದಲು ಬೆದರಿಕೆಯಾದಂತಾಗಿದ್ದರೂ ಒಂದೆರಡು ನಿಮಿಷಗಳಲ್ಲಿ ಅಭಿಮಾನ ಉಕ್ಕೇರಿ ಬಂದಿತು. ಸುತ್ತಲೂ ನೋಡಿದನು. ಎಷ್ಟು ವಿಶಾಲವಾಗಿದೆ!....ಮೇಲೆ ನೋಡಿದನು. ಎಷ್ಟು ಉನ್ನತವಾಗಿದೆ!....ಸುತ್ತಲು ಗೋಡೆಗಳಿಲ್ಲ, ಮೇಲೆ ಮಾಳಿಗೆ ಇಲ್ಲ; ವಿಶ್ವದಂತೆ ವಿಶಾಲವಾಗಿದೆ, ಗಗನ ಮುಟ್ಟಿ ಗೌರವದಿಂದ ನಿಂತಿದೆ ತನ್ನ ಶಾಲೆ! ಮನುಷ್ಯನಿಗೆ ವಿಶಾಲ ದೃಷ್ಟಿ ಬೇಕು, ವಿಶಾಲ ದೃಷ್ಟಿ ಬರಬೇಕಾದರೆ ಮನಸಿಗೆ ಆರೋಗ್ಯವಿರಬೇಕು,ಮನಸಿಗೆ ಆರೋಗ್ಯವಿರಬೇಕು, ಮನಸಿಗೆ ಆರೋಗ್ಯ ಬೇಕಾದರೆ ಸುತ್ತಲೂ ಸಹಜ ಸುಂದರವಾದ ಸೃಷ್ಟಿ ಬೇಕು—ಎಂದು ನಾರಾಯಣನು ಬಯಲಿನಲ್ಲಿಯೆ ಶಾಲೆಯನ್ನು ನಡೆಸುತ್ತಿದ್ದನು. ಅದರಂತೆಯೆ ಕಲಿಸತಕ್ಕ ವಿಷಯಗಳೂ ಹೊಸ ಮಾದರಿಯವೆ. ಅಕ್ಷರಗಳ ಒಳಿಕೆಯಾದನಂತರ ಶಿಕ್ಷಣಕ್ಕೆ ಪ್ರಾರಂಭ—ಎಂದು ಸಾಮಾನ್ಯ ರೂಢಿ. ಆದರೆ ಅಕ್ಷರಗಳ ಒಳಿಕೆಗಾಗಿಯೂ ಹುಡುಗರಲ್ಲಿ ಕುತೂಹಲ ಹುಟ್ಟಬೇಕು ಎಂದು ನಾರಾಯಣನ ತತ್ವ. ಅದಕಾಗಿ ಮೊದಲು ಸರಸವಾದ ಕತೆಗಳನ್ನು ಹೇಳುವುದು, ಆ ಮೇಲೆ ಸರಸವಾದ ಕತೆಗಳನ್ನು ಶಿಕ್ಷಕನೆ ಓದುವುದು—ಹೀಗೆ ಪ್ರಾರಂಭ. ಸರಸ ಕತೆಗಳ ಸವಿಯನುಣ್ಣಬೇಕಾದರೆ ಓದುವುದನ್ನು ಕಲಿಯಬೇಕು ಎಂಬ ಕುತೂಹಲವು ಬಾಲಕರಲ್ಲಿ ಬಂದೊಡನೆ ಅವರಿಗೆ ಅಕ್ಷರಗಳ ಒಳಿಕೆ ಮಾಡಿಕೊಟ್ಟು ಓದು-ಬರೆ ಕಲಿಸುವುದು. ಆ ಮೇಲೆ 'ಈ ಜಗತ್ತನ್ನು ಹುಟ್ಟಿಸಿದವನು ದೇವನು' ಎಂಬ ಹಳೆಯ ಕಾಲದ ರೂಢಿಯ ಪಾಠಕ್ಕೆ 'ಆದರೆ ಅದನ್ನು ಉಳಿಸಿದವನು ಮನುಷ್ಯನು, ಬೆಳೆಸುವವನೂ ಮನುಷ್ಯನೆ' ಎಂದು ಜೋಡಿಸಿ ಮುಂದಿನ ಶಿಕ್ಷಣವನ್ನು ನಡೆಸುವುದು. ಇದಕ್ಕೆಯೆ

'ಸಮಾಜಪಾಠ' ಎಂಬ ಹೆಸರು ನಾರಾಯಣನ ಶಾಲೆಯಲ್ಲಿ. 'ವ್ಯವಹಾರಕ್ಕೆ ಉಪಯುಕ್ತವಾಗುವಂತೆ ಶಿಕ್ಷಣ ಕೊಡಬೇಕು' ಎಂದು ಪಂಡಿತರು ಬೊಬ್ಬೆ ಇಡುತ್ತಿರುವಾಗ 'ವ್ಯವಹಾರವನ್ನು ಕಲಿಸುವುದೆ ಶಿಕ್ಷಣ' ಎಂಬ ತತ್ವವನ್ನು ಶೋಧಿಸಿದ್ದನು ನಾರಾಯಣನು. ಮಾತೃಭೂಮಿಯ ನಡೆ, ಮಾತೃಭಾಷೆಯ ನುಡಿ–ಎಂಬ ಸೂತ್ರವನ್ನು ಮಾಡಿಕೊಂಡಿದ್ದನು. ತನಗೊಂದು ಹಸ್ತಪ್ರತಿ ಸಿಕ್ಕಿದೆ ಎಂದಾಗ ಮಿಕ್ಕ ಶಿಕ್ಷಕರೆಲ್ಲ ಕೂಡಿ, 'ನಿಮ್ಮ ಸೂತ್ರಕ್ಕೆ ಸಮರ್ಪಕವಾಗುವ ಗ್ರಂಥವೆಂದರೆ ಇದೇ ಮೊದಲನೆಯದು. ಇಂತಹದನ್ನೆ ಓದಬೇಕು ನಮ್ಮ ಶಾಲೆಯಲ್ಲಿ' ಎಂದಿದ್ದರು. ನಾರಾಯಣನೆ ಕಲಿಸುವವ, ಅವನ ಆತ್ಮಚರಿತ್ರೆಯಾದ 'ವಿಶ್ವಾಮಿತ್ರನ ಸೃಷ್ಟಿ' ಎಂಬ ಹಸ್ತಪ್ರತಿಯೆ ಪಠ್ಯಪುಸ್ತಕ; ಹೀಗಿರುವಾಗ ಅವನ ವಿದ್ಯಾರ್ಥಿಗಳು ಭಾವಾವೇಶದಿಂದ ತನ್ಮಯರಾದುದರಲ್ಲಿ ಆಶ್ಚರ್ಯವೇನು? ಶಿಕ್ಷಕನು ಕತೆಯಲ್ಲಿ ಸಮರಸನಾಗಿದ್ದಾನೆ, ವಿದ್ಯಾರ್ಥಿಗಳು ಶಿಕ್ಷಕನಲ್ಲಿ ತನ್ಮಯರಾಗಿದ್ದಾರೆ. ಅದಕ್ಕೆಂದೇ ಕತೆಯ ಮರ್ಮ ಅವರಿಗೆ ತಿಳಿದು ಬಂದಿತು, ಅದಕ್ಕೆಂದೇ ಶಿಕ್ಷಕನಿಗೆ ಅಭಿಮಾನ ಹುಟ್ಟುವಂತೆ ಸಮಂಜಸವಾದ ಸಮಯೋಚಿತವಾದ ಪ್ರಶ್ನೆಯನ್ನು ಕೇಳಿದ್ದು. ಅದಕಾಗಿಯೆ ನಾರಾಯಣನೂ ಪೇಚಿನಲ್ಲಿ ಸಿಕ್ಕಿಕೊಂಡುದು. "ನಿಮಗ ಹ್ಯಾಗೆ ತಿಳೀತು?" ಎಂದು ಹುಡುಗರ ಹಟವೂ ಹೆಚ್ಚಿತು. ಶಿಕ್ಷಕನು–ನಾರಾಯಣನು–ಮತ್ತೊಮ್ಮೆ ಮುಗುಳ್ನಗೆ ನಕ್ಕನು, 'ಇಲ್ಲಿ ಮತ್ತೊಂದು ಕಡೆ ಬರೆದಿದೆ' ಎಂದು ಗಂಟು ತೋರಿಸಿದನು. "ಕತೆ ಮುಗಿಯಿತು ಅಂದಿರಲ್ಲ?" ಎಂದು ಕೆಣಕಿದನು ಇನ್ನೊಬ್ಬ ವಿದ್ಯಾರ್ಥಿ. "ಕತೆ–ಪುಸ್ತಕದೊಳಗಿನ ಕತೆ ಮುಗಿಯಿತು, ಅದಕ್ಕೆ ಪುಸ್ತಕ ಮುಚ್ಚಿಟ್ಟೆ" ಎಂಬ ಮಾತಿನೊಳಗೆ ಗೆದ್ದುದಕ್ಕಾಗಿ ಗಹಗಹಿಸಿ ನಕ್ಕನು ನಾರಾಯಣನು. ನಗೆ ತಡೆಯದೆ ಕಣ್ಣೊಳಗೆ ನೀರು ತುಂಬಿತು,ಮೈ ನಡುಗಿತು. ಪಾಪ! ೫೩ ವರ್ಷಗಳಲ್ಲಿ ಮುಪ್ಪೇರಿ ಹಣ್ಣಾಗಿದ್ದಾನೆ ನಾರಾಯಣ! ಆದರೂ ನಗುವಾಗ ಅದೆಂತಹ ಹುಡುಗತನದ ಎಳೆಕಳೆ ಅವನ ಮುಖದಲ್ಲಿ! ಹುಡುಗರ ಜತೆಯಲ್ಲಿ ಆಡುವಾಗ, ನಗುವಾಗ, ನಲಿವಾಗ ತಾನು ವಯಸ್ಸಾದವನು, ಶಕ್ತಿ ಇಲ್ಲದವನು ಎಂಬುದರ ಅರಿವೇ ಇರುತ್ತಿದ್ದಿಲ್ಲ ನಾರಾಯಣನಿಗೆ.

ಜಗತ್ತೆಲ್ಲ ಸೊಗಸಿನಿಂದ ತುಂಬಿ ತುಳುಕುವುದಲ್ಲ ಎಂಬ ಹುಡುಗತನದ ಹುರುಪಿನ ಭಾವನೆಯು ಕುಣಿಯುತ್ತಿತ್ತು ಅವನ ಹೃದಯದಲ್ಲಿ. ಅದಕ್ಕಂದೇ ಅವನಿಗೆ ಹುಡುಗರ ಸಹವಾಸ ಹೆಚ್ಚಾಗಿ ಸೇರುತ್ತಿತ್ತು. ಸಮಾಜದಲ್ಲಿಯ ಕೆಡಕನ್ನು, ಕಪಟವನ್ನು, ಹೊಲಸನ್ನು, ಮೋಡಿತನವನ್ನು ನೋಡಿನೋಡಿದಂತೆ ನಿರ್ಮಲಾಂತಃಕರಣದ ಹುಡುಗರಿಗಾಗಿ ಹಂಬಲಿಸುತ್ತಿತ್ತು ಅವನ ಹೃದಯ. ಎಂತಹ ಹುಡುಗ ಬುದ್ಧಿ! ತನ್ನ ಮನಸ್ಸಿನ ಶಾಂತಿಯ ವರ್ಷದಲ್ಲಿ ಸಣ್ಣಾಯಿಗೆ ಹೋದನು. ೨ ವರ್ಷಕ್ಕೊಮ್ಮೆ ಪಿಡುಗು, ಪ್ರತಿವರ್ಷ (ಕೆಳ್ಕುಪೆಮ್ಮ) ಬರ. "ದುಡ್ಡಿದ್ದವ್ರು ಊರ ಬಿಟ್ಟರ್ರಿ, ದುಡ್ಡಿಲ್ದವ್ರು ಜೋಂಪಾ ಬಿಟ್ಟರ್ರಿ" ಎಂದು ಹೇಳಿದರು. ಅತ್ಯಂತ ವ್ಯಥೆಯಾಯಿತು. ವ್ಯವಹಾರದ ಹೇಸಿತನದ ಸಂಪರ್ಕವಿಲ್ಲದುದರಿಂದ ಶಿಕ್ಷಣವಿಲ್ಲದಾಗೂ ಸರಳಸ್ವಭಾವದವಳಾಗಿರುವುದಾದ ಹೆಂಡತಿಯೊಡನೆ ಸಂಸಾರ ಮಾಡಿ ಮಕ್ಕಳನ್ನು ಪಡೆದಿದ್ದರೆ ಈಗ ಹುಡುಗರೊಡನೆ ಆಡುತ್ತ ನೋಡುತ್ತ ಕಾಲ ಕಳೆಯುತ್ತಿದ್ದೆನಲ್ಲ! ಸಮಾಜ ಹಾಳಾಗಲಿ, ಮನೆಯನ್ನಾದರೂ ಸುಧಾರಿಸಿಕೊಳ್ಳಬಹುದಾಗಿತ್ತಲ್ಲ! ಎಂದು ಹಳಹಳಿಸಿದನು. ಕೊನೆಗೆ ಒಂದೆಡೆ ನದಿಯ ದಡದಲ್ಲಿ ಹುಡುಗರಿಗಾಗಿ ಶಾಲೆಯನ್ನು ಸುರುವು ಮಾಡಬೇಕೆಂದೆಣಿಸಿದನು. ನಾರಾಯಣನಿಗೆ ಶಾಲೆಯನ್ನು ಹೂಡಲು ಯಾವ ತೊಂದರೆಯೂ ಇದ್ದಿಲ್ಲ. ಅವನು ಇಟ್ಟುಕೊಂಡಿದ್ದ ಹೆಸರು ಕರ್ನಾಟಕದಲ್ಲಿ ಎಲ್ಲ ಕಡೆಯೂ ಪ್ರಸಿದ್ಧವಾದುದಿತ್ತು. ಕರ್ನಾಟಕದ ಮುಖ್ಯವಾದ ಮುಖಪತ್ರಿಕೆಯಾದ "ಹುಂಬಹುಕ್ಕ"ದಲ್ಲಿ ಅವನ ಹೆಸರು ಬಹಳೇ ಢಾಳವಾಗಿ ಮುಂದೆ ಬಂದಿತ್ತು. "ನಗರಸಭೆಯ ಅಧ್ಯಕ್ಷರಾದ ಶ್ರೀ. **ತೆಂಗಿನ ಒಡೆಯರ್** ಇವರ ಹತ್ಯಾವಾದಿತ್ವ" ಎಂದು ಒಂದುಮುಂಜಾವಿನಲ್ಲಿ ಓದಿ ಎಷ್ಟೋ ಕನ್ನಡಿಗರು ತಮಗೆ ಎಚ್ಚರಿಕೆಯಾಗಿದೆಯೋ ಇಲ್ಲವೋ ಎಂಬ ಸಂಶಯದಿಂದ ಮತ್ತೊಮ್ಮೆ ಕಣ್ಣೊರೆಸಿಕೊಂಡಿದ್ದರು. ಶ್ರೀ. ತೆಂಗಿನ ಒಡೆಯರ್ ಇವರು ಆದರ್ಶ ನಗರಾಧ್ಯಕ್ಷರೆಂದು ಕನ್ನಡಿಗರಿಗೆಲ್ಲ ಪ್ರಿಯರಾಗಿದ್ದರು. ಇವರು ಹತ್ಯಾ—ವಾದಿಗಳಾದರೆ? ಇವರ ಪೂರ್ವೇತಿಹಾಸವೂ ಗೊತ್ತಿಲ್ಲ. ಇದೇನು ರಹಸ್ಯವೋ !—ಎಂದು "ಹುಂಬ ಹುಕ್ಕ"ದ ಓದುಗರು ಬೆರಗುವಡೆದಿದ್ದರು. ಇತ್ತ ತೆಂಗಿನ ಒಡೆ

ಯರ್ ಎಂಬ ಬಿರುದಾಂಕಿತನಾದ ನಾರಾಯಣನು ವೃತ್ತಪತ್ರದ ಸಂಪಾದಕರಿಂದ ಕ್ಷಮಾಪಣೆಯನ್ನು ಬೇಡಿದನು. "ಅಚ್ಚಿನ ದೋಷ. 'ಸತ್ಯವಾದಿತ್ವ'ದ ಬದಲು 'ಹತ್ಯ-ವಾದಿತ್ವ' ಎಂದು ಅಚ್ಚಾಗಿತ್ತು. ಶ್ರೀ. ಒಡೆಯರ್ ಇವರಿಗೆ ಕ್ಷಮಾಪಣೆಯನ್ನು ಬೇಡಿಕೊಂಡಿದ್ದೇವೆ. ನಮ್ಮ ಓದುಗರೂ ಕ್ಷಮಿಸಬೇಕೆಂದು ಬೇಡುತ್ತೇವೆ" ಎಂದು ಸಂಪಾದಕರು ಮೂರನೆಯ ದಿನ 'ಅಂಜಿಕೆ'ಯನ್ನು ಬರೆದುಕೊಂಡಿದ್ದರು. ನಾಲ್ಕನೆಯ ದಿನ "ನಿನ್ನೆ ಅಚ್ಚಿನ ದೋಷದಿಂದ 'ಅರಿಕೆ' ಎಂಬಲ್ಲಿ 'ಅಂಜಿಕೆ' ಎಂದು ಬಿದ್ದಿದೆ. ಅದಕಾಗಿ——" ಈ ಪ್ರಕಾರವಾಗಿ ನಡೆದ ಅಚ್ಚಿನ ದೋಷಗಳ ಪ್ರಾಯಶ್ಚಿತ್ತವೆಂದು "ಹುಂಬಹುಕ್ಕ"ದ ಸಂಪಾದಕರು ಶ್ರೀ. ತೆಂಗಿನ ಒಡೆಯರ್ ಇವರ ಸಾರ್ವಜನಿಕ ಸೇವೆಯನ್ನುದ್ದೇಶಿಸಿ ಲೇಖಾಂಕಗಳನ್ನು ಪ್ರಕಟಿಸಿದ್ದರು. ಅವನ್ನೆಲ್ಲ ಗಂಟುಕಟ್ಟಿಕೊಂಡಿದ್ದನು ನಾರಾಯಣನು. ಅದೇ ಗಂಟನ್ನುದ್ದೇಶಿಸಿ ಇಂದು ವಿದ್ಯಾರ್ಥಿಗಳಿಗೆ ಹೇಳಿದನು; 'ಕತೆ-ಪುಸ್ತಕದೊಳಗಿನ ಕತೆ ಮುಗಿಯಿತು, ಅದಕ್ಕೆ ಪುಸ್ತಕ ಮುಚ್ಚಿಟ್ಟೆ' ಎಂದು ನಗುತ್ತ 'ಆದರೆ ಅದೇ ಕತೆ ಇಲ್ಲಿ ಇನ್ನೊಂದು ಕಡೆ ಬರೆದಿದೆ' ಎಂದನು. ದಿನಾಲು ಹಗಲು-ರಾತ್ರಿ, ಹೋದಲ್ಲಿ-ಬಂದಲ್ಲಿ ಶಿಕ್ಷಕನ ಮಗ್ಗುಲಲ್ಲಿಯೆ ಇರುತ್ತಲಿದ್ದ ಆ ಗಂಟಿನಲ್ಲಿ ಇದೂ ಒಂದು ರಹಸ್ಯವಿದೆಯೆ-ಎಂದು ಹುಡುಗರ ಕುತೂಹಲವು ಮತ್ತಿಷ್ಟು ಹೆಚ್ಚಿತು. ಅದನ್ನು ನೋಡಿ'ಮಧ್ಯಾಹ್ನಕೆ ಹೇಳ್ತೇನಿ ನಿಮಗೆ ಮುಂದಿನ ಕತೆ' ಎಂದು ಗಂಟನ್ನು ಬಗಲಿನಲ್ಲಿಟ್ಟುಕೊಂಡು ಎದ್ದನು ನಾರಾಯಣನು. "ಊಟ ಮುಗಿದ್ಕೂಡಲೆ——" ಎಂದು ತಮ್ಮತಮ್ಮೊಳಗೆ ಹೇಳಿಕೊಳ್ಳುತ್ತ ಆಡುತ್ತ ಓಡುತ್ತ ಹೋದರು ಹುಡುಗರು.

*　　*　　*　　*

ದಿನದಂತೆ ಮಧ್ಯಾಹ್ನದ ಫಲಗಳನ್ನು ಮುಂದಿಟ್ಟುಕೊಂಡು ಕುಳಿತನು ನಾರಾಯಣನು. ಶಾಲೆಯನ್ನು ಪ್ರಾರಂಭಿಸಿದಾಗಿನಿಂದ ಇದೊಂದು ನಾರಾಯಣನ ಕಾರ್ಯಕ್ರಮವಾಗಿತ್ತು. (ಅದಕ್ಕೆ ಯಾರಾದರೂ 'ವ್ರತ' ಎಂದರೆ ಅವನಿಗೆ ಬಹಳ ಸಿಟ್ಟು ಬರುತ್ತಿತ್ತು.) ಊಟವನ್ನು ಮಾಡುವಂತಿಲ್ಲ, ಎಂದರೆ ಅಟ್ಟ ಅಡಿಗೆಯನ್ನು ಉಣ್ಣುವಂತಿಲ್ಲ. ಫಲಗಳನ್ನು

ತಿನ್ನುವುದು, 'ಮುತ್ತಾತಂದಿರ ಕಾಲದಿಂದ ನಡೆವು ಬಂದ ಪದ್ಧತಿ' ಎಂದು ನಗೆಯಿಂದ ಹೇಳುತ್ತಿದ್ದನು. 'ನೀವು ಹಳೆಯ ರೂಢಿ-ಆಚಾರಗಳನ್ನು ನಡೆಸುವವರು ಅಂದರೆ — ಅಶಕ್ಯ'ವೆಂದು ಎಷ್ಟೋ ಜನರು - ಸರಿಯಾದ ಉಪಮೆ ಸಿಕ್ಕದಂತಾಗಿ-ತಲೆ ಅಲ್ಲಾಡಿಸುತ್ತಿದ್ದರು.'ಮುತ್ತಾತಂದಿರು ಅಂದರೆ ಶ್ರೀಮದ್‌ಹನುಮ — ಭೀಮ —— ಮುತ್ತಾಂತರ್ಗತ ಮಂಗಪ್ಪರಣ್ಣಂದಿರು' ಎಂದು ಗಹಗಹಿಸಿ ನಗುತ್ತಿದ್ದನು. ಗೋರಿಲ್ಲಾ (gorilla), ಶಿಂಪಾನ್ಸೀಝು ( chimpanceze ) ಮುಂತಾದವುಗಳಿಗೆ 'ಮಂಗಪ್ಪರ ಅಣ್ಣ'ಎಂದು ನಾರಾಯಣನು ಇಟ್ಟ ಹೆಸರು. 'ಕಲಿಯುಗದ ಶಾಸ್ತ್ರದ ಪ್ರಕಾರ ಅವರು ನಮಗೆ ಮುತ್ತಾತಂದಿರು'ಎಂದು ಹೇಳುತ್ತಿದ್ದನು. ಈ ಶಾಸ್ತ್ರ ಬೇಕು, ರಾಯರ್ರ, ಶಾಸ್ತ್ರಬೇಕು ಸಮಾಜದ ಸಂಸ್ಕೃತ ವ್ಯವಸ್ಥಿತವಾಗಿ ಬೆಳೆಯಬೇಕಾದರೆ. ಆದರೆ ನಮ್ಮ ಹಟ ಇಷ್ಟೆ, ಬಟಾಟೆಗೆ ಭಾರತದ ಆಧಾರ ಕೊಡಬೇಡಿರಿ, ಬಿಲಾಯತೀ ಆಧಾರ ಕೊಡಿರಿ ಅಂತ.'' ಇಳಿವಯಸ್ಸಿನಲ್ಲಿ ತತ್ವಜ್ಞಾನಿಯ ತಿಳುವು ಬಂದಿತ್ತು ನಾರಾಯಣನ ದನಿಯಲ್ಲಿ. ಶಾಸ್ತ್ರದ ಆಧಾರದಿಂದಲೆ ಶಾಲೆಗೆ ಬೆಳಿಗ್ಗೆ ಬಂದ ಕೂಡಲೆ ಹುಡುಗರಿಗೆಲ್ಲ ಒಂದೊಂದು ಬಟ್ಟಲು ಹಾಲು ಕೊಡಿಸುವ ವ್ಯವಸ್ಥೆಯನ್ನು ಮಾಡಿಸಿದ್ದನು. ''ಹುಡುಗರು ಅಂದರೆ ಬಾಲಗೋಪಾಲನ ಅವತಾರ ಇದ್ದ ಹಾಗೆ,'' ಎನ್ನುತ್ತಿದ್ದನು. ಹುಡುಗರಿಗಾಗಿ ಕೊಡತಕ್ಕ ಫೀ (fee = ವೇತನ ಹಣ) ದ ಬದಲು ತಂದೆತಾಯಿಂದಿರು ಅವರಿಗೆ ಹಾಲು- ಹಣ್ಣು ಕೊಡಿಸಬೇಕು, ಆದರ ಜಬಾಬ್ದಾರಿ ಶಿಕ್ಷಕರದು ಎಂಬುದೂ ಅವನದೊಂದು ತತ್ವ. ಅದಕಾಗಿ ರಾಜಕಾರಣದಲ್ಲಿ ಆಸಕ್ತಿ ಇಲ್ಲದಾಗೂ ಗೋವಧ ನಿಲ್ಲಿಸುವ ಯತ್ನದಲ್ಲಿ ನೆರವಾಗಿದ್ದನು. ಮುಸಲ್ಮಾನ ಬಂಧುಗಳಿಗೂ ತಿಳುಹಿಸಿದ್ದನು—ಎಷ್ಟೋ ಮುಂದಾಳುಗಳಿಗೆ ಮನವರಿಕೆಯೂ ಗಿತ್ತು ಆ ಮಾತು—ಯಾವ ಜಾತಿಯ ಮಗುವಾದರೂ ಹಾಲು ಅದಕ್ಕೆ ಹಿತಕರವಾದುದು ಎಂದು. ಶಾಸ್ತ್ರೀಯ ಆಧಾರವಿದೆ ಎಂದು ಹೇಳುತ್ತಿದ್ದನು. ಆದರೆ ಇಂದು ಶಾಸ್ತ್ರೀಯ ಆಧಾರಕ್ಕಿಂತಲೂ ಮನಸ್ಸಿನ ಆಕಾಂಕ್ಷೆಯೆ ಹೆಚ್ಚಿನದು ಎಂದುಕೊಳ್ಳುವ ಪ್ರಸಂಗ ಬಂದಿತು ನಾರಾಯಣನಿಗೆ. ಹಣ್ಣುಗಳನ್ನು ಮುಂದಿಟ್ಟುಕೊಂಡಿದ್ದಾನೆ, ಕಣ್ಣುಗಳನ್ನು

ಮತ್ತೆಲ್ಲೊ ಇಟ್ಟಿದ್ದಾನೆ. "ಮುಂದಿನ ಕತೆ ಮಧ್ಯಾಹ್ನಕ್ಕೆ ಹೇಳ್ತೀನಿ" ಎಂದು ತನ್ನ ವಿದ್ಯಾರ್ಥಿಗಳಿಗೆ ಕೊಟ್ಟ ವಚನದಿಂದ ಅವನ ಹೃದಯದಲ್ಲಿ ಕಳವಳವೆದ್ದಿತ್ತು. ಮುಂದಿನ ಕತೆ! ಎಲ್ಲಿಂದ ಮುಂದೆ? ತಾಟಕಾವಧದಿಂದಲೆ? ತನ್ನ ಹೆಂಡತಿಯು ಸತ್ತು ಹೋದ ಸಂನಿವೇಶಕ್ಕೆ 'ತಾಟಕಾವಧ' ಎಂದುಕೊಳ್ಳುತ್ತಿದ್ದನು ನಾರಾಯಣನು. ತಾನು ರಾಮ, ಅವಳು ತಾಟಕೆ. ಅವಳನ್ನು ಕೊಂದವನು ತಾನು, ತನ್ನನ್ನು ಪ್ರೋತ್ಸಾಹಿಸಿದವರು ಹಿರಿಯರು. ತನ್ನ ಹೆಂಡತಿಯು ಯಾವುದಾದರೊಂದು ಪಿಡುಗಿನಲ್ಲಿ ಸತ್ತು ಹೋಗಿದ್ದರೆ ಅಷ್ಟು ವ್ಯಥೆಯಾಗುತ್ತಿದ್ದಿಲ್ಲ ನಾರಾಯಣನಿಗೆ. ಭರತವರ್ಷದ ಪುಣ್ಯಭೂಮಿಯಲ್ಲಿ ಪಿಡುಗಿನಿಂದ ಸಾಯುವುದು ನಿಸರ್ಗದ ನಿಯಮವಿದ್ದಂತಿದೆ. ಆದರೆ "ನಿನ್ನ ನಿಶ್ಚಯವನ್ನು ಕೇಳಿ ನೊಂದುಕೊಂಡೇ ಆಕೆ ಭಾವಿ ಬಿದ್ದು ಸತ್ತುಹೋದಳೆಂಬುದರಲ್ಲಿ ಸಂಶಯವಿಲ್ಲ; ನಾವೇನೊ. ಪರಿಪರಿಯಾಗಿ ಹೇಳಿ – ಹಣ – ಬುದ್ಧಿ ವೆಚ್ಚ ಮಾಡಿ ಅವಳು ಕಾಲು ಜಾರಿ ಬಿದ್ದಳೆಂದು 'ಪಂಚನಾಮಾ' ಮಾಡಿದೆವು" ಎಂದು ತನ್ನ ತಂದೆ ಬರೆದುದರ ಅರ್ಥವಾಗಿತ್ತು ನಾರಾಯಣನಿಗೆ. ಕಾಲು ಜಾರಿ! ನಿಜ, ಕಾಲು ಜಾರಿತು – ಭಾವಿಯಲ್ಲಿ ಅಲ್ಲ, ಜೀವನದಲ್ಲಿ –– ಸಂಸಾರದಲ್ಲಿ! ತನ್ನ ತಾರುಣ್ಯದ ಮರುಳಿಗೆ ಅವಳನ್ನು ತಾನೇ ಆಹುತಿ ಮಾಡಿದನೆಂದು ನಾರಾಯಣನ ಮನಸಿನ ಹಟ. ಅವಳದಾದರೂ ದೋಷವಿದ್ದಿತೆ? 'ಇಲ್ಲ' ಎಂದು ಈಗ ಹೇಳುತ್ತಿದ್ದನು ನಾರಾಯಣನು, ಆಗ ಹೊಳೆದಿರಲಿಲ್ಲ. ಅವಳನ್ನು ಕೊಂದವನು ತಾನೆ.... ಆದರೂ ಅವಳು ತಾಟಕೆಯಂತೆ! ಅವಳೇಕೆ? ಸಾಮಾನ್ಯವಾಗಿ ನಮ್ಮ ಸಮಾಜದಲ್ಲಿ ಕಂಡುಬರುವ ಅಶಿಕ್ಷಿತ ಹೆಂಗಸರೆಲ್ಲ ತಾಟಕೆಯರು. ಗಂಡಸನ ಜ್ಞಾನಯಜ್ಞಕ್ಕೆ ಭಂಗ ತರುವವರು! ಈ ವಿಚಾರದಿಂದ ನಾರಾಯಣನಿಗೆ ಎಷ್ಟೋ ಸಮಾಧಾನವಾಗುತ್ತಿತ್ತು, ತನ್ನ 'ತಾಟಕಾವಧ' ವನ್ನು ಮರೆಯಲು ಎಷ್ಟೋ ಸುಲಭವಾಗುತ್ತಿತ್ತು. ಇಂದು ಮತ್ತೆ ಅದೆಲ್ಲ ಕಣ್ಣು ಕಟ್ಟಿದಂತಾಯಿತು — ಕಾಳಿದಾಸನೂ ಹೀಗೆಯೆ ಸಮಾಧಾನ ತಂದುಕೊಂಡಿದ್ದನೊ ಏನೊ? ಇಲ್ಲವಾದರೆ, 'ರಾಮ – ಮನ್ಮಥ – ಶರೇಣ ತಾಡಿತಾ ದುಃಸಹೇನ ಹೃದಯೇ ನಿಶಾಚರೀ' ಮುಂತಾಗಿ

ತಾಟಕಾವಧವನ್ನು ಶೃಂಗಾರರೂಪಕದಿಂದ ಯಾಕೆ ಬಣ್ಣಿಸಬೇಕು? ಕಣ್ಣೊರಸಿಕೊಂಡನು, ಕೆಳಗಿಟ್ಟ ಹಣ್ಣುಗಳ ಮೇಲೆ ಒಂದೆರಡು ಹನಿಗಳುದುರಿದುವು. ಹಣ್ಣುಗಳನ್ನು ಬದಿಗೆ ಸರಿಸಿಟ್ಟನು....ಮಧ್ಯಾಹ್ನ ಬರುವುದು; ಮುಂದಿನ ಕತೆ — ?.... ನಾರಾಯಣನಿಗೆ ಒಮ್ಮೆಲೆ ನಗೆ ಬಂದಿತು, ಹುಡುಗರು ನಕ್ಕುದರ ಸ್ಮರಣೆಯಾಗಿ. ತನ್ನ ತಲೆಗೆ ತೆಂಗು ಅಪ್ಪಳಿಸಿಕೊಂಡುದಕ್ಕೆ ಅಷ್ಟು ನಕ್ಕರು ಹುಡುಗರು! ಇನ್ನೂ 'ಆ ನಾರಾಯಣನೆ ಈಗ ತಮ್ಮ ಶಿಕ್ಷಕನಾಗಿರುವನೆಂ' ದು ಗೊತ್ತಾದರೆ ಮತ್ತೆಷ್ಟು ನಗುವರೊ? ತನ್ನ ಕತೆಯನ್ನೆ ಕೇಳಿ ಎಷ್ಟು ಜನರು ನಗುವರೋ! ಆದರೂ — ಈ ಹುಡುಗರಂತೆ ಕತೆಯ ಮರ್ಮ ತಿಳಿದುಕೊಂಡು ನಗುವರೆಷ್ಟು ಜನರೊ!....ತನಗೇನು ಮಾಡುವುದು ಜನರಿಗೆ ತಿಳಿಯುವುದೊ ಇಲ್ಲವೊ ಎಂದು....ತನ್ನ ವಿಚಾರ, ತಾನು ಬರೆದಿಟ್ಟುದು. ಸ್ವತಃದ ವಿಚಾರಗಳನ್ನೆ ತಿಳಿದುಕೊಳ್ಳುವ ಶಕ್ತಿ ಇಲ್ಲದವರು ಇನ್ನೊಬ್ಬರ ವಿಚಾರಗಳನ್ನು ತಿಳಿದುಕೊಳ್ಳುವರೆಂದರೆ—? ನಾರಾಯಣನು ಉಸುರ್ಗರೆದೆದ್ದನು. ಇನ್ನು ಜನರ ನಲುವಾಗಿ ಎಂದಿಗೂ ವಿಚಾರ ಮಾಡಲಿಕ್ಕಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿ ಮುಳ್ಳೂರಿನ ನಗರಾಧ್ಯಕ್ಷತೆಯನ್ನು ಬಿಟ್ಟುಕೊಟ್ಟು ಸಾಮಾಜಿಕ ಸಂನ್ಯಾಸವನ್ನು ಕೈಕೊಂಡಿದ್ದನು. ಮತ್ತೇಕೆ ಅವರ ವಿಚಾರ? ಕಟ್ಟಿದ ಮನೆಯ ರಿಪೆಯರ (repair) ಮಾಡುವುದೂ, ಸಮಾಜವನ್ನು ಸುಧಾರಿಸಬೇಕೆನ್ನುವುದೂ ಅಷ್ಟೆ ಮೂರ್ಖತನ. ಚಿರಕಾಲ ಬಾಳಬೇಕೆಂದರೆ ಹೊಸ ಮನೆಯನ್ನೆ ಕಟ್ಟಿಸಬೇಕು, ಹೊಸ ಸಮಾಜವನ್ನೆ ಸಿದ್ಧಪಡಿಸಬೇಕು. ಆದಕಾಗಿ ಹುಡುಗರ ಪ್ರಾಥಮಿಕ ಶಿಕ್ಷಣವನ್ನೆ ಧ್ಯೇಯವನ್ನಾಗಿಟ್ಟುಕೊಂಡಿದ್ದನು. ತಾನು ಕಟ್ಟಿದ ಮನೆಗೆ ಆ ಹುಡುಗರೂ ಹಾಗೆಯೆ ಹೆಸರಿಡಬಹುದಲ್ಲ? ಮುಂದಿನ ಮಾತು ಈಗೇಕೆ? ಎಂದಾದರೊಂದು ದಿನ ಸಾಯುವುದೆ ಖಂಡಿತವೆಂದು ಯಾವ ತಂದೆ – ತಾಯಂದಿರೂ ಮಕ್ಕಳ ಲಾಲನೆ – ಪಾಲನೆಗಳನ್ನು ಬಿಟ್ಟುಕೊಡುವುದಿಲ್ಲ. ಅದರಂತೆಯೆ ತಾನೂ. ಆ ಹುಡುಗರು ತನ್ನ ಮಕ್ಕಳಂತೆ. ಹೊಟ್ಟೆಯ ಮಕ್ಕಳು ಮನೆತನವನ್ನು ನಡೆಸಬಹುದೆಂಬ ಆಸೆ ಇದ್ದರೆ, ಈ ಹುಡುಗರು ತನ್ನ ವಿಚಾರ ಪ್ರಪಂಚವನ್ನು ನಡೆ

ಸಬಹುದು. ಅದಕಾಗಿಯೆ ತನ್ನ ವಿಚಾರಗಳನ್ನು ಅವರ ಮುಂದೆ ಬಿಚ್ಚಿಡ ಬೇಕೆಂದಿರುವನು. ಅದಕಾಗಿಯೆ 'ಮುಂದಿನ ಕತೆ'ಯನ್ನು ಅವರಿಗೆ ಹೇಳಿಯೆ ತೀರಬೇಕೆನ್ನುವನು. 'ಹೇಳೋಣ, ಹೇಳೋಣ; ಹುಡುಗರ ಸರಳ ಸ್ವಭಾವದಿಂದ ಹಿರಿಯರಲ್ಲಿ ಸತ್ಯಕ್ಕಾಗಿ ಧೈರ್ಯ ಬರುವಂತಿದ್ದರೆ–'' ನಾರಾಯಣನು ತಡೆದನು. ತನ್ನನ್ನು 'ಹಿರಿಯ'ರಲ್ಲಿ ಎಣಿಸಿಕೊಂಡುದ ಕ್ಕಾಗಿ ಮುಗುಳ್ನಗೆ ನಕ್ಕನು. ಹಿರಿತನ! ಹಾಗೆಂದರೇನು? ದೇಹದಲ್ಲಿ ಜೀವವಿರುವವರೆಗೆ ಕಾಲ ಕಳೆದಂತೆ ಮನುಷ್ಯನಲ್ಲಿ ಮಾರ್ಪಾಟುಗಳಾದರೆ ಅದಕ್ಕೊಂದು 'ಹಿರಿತನ' ಎಂಬ ಗೌರವದ ಹೆಸರೇಕೊ? ಹಾಗೆ ನೋಡಿ ದಲ್ಲಿ ಹಿಂದುಸ್ಥಾನದಲ್ಲಿ–ಅದೇಕೆ ಜಗತ್ತಿನಲ್ಲಿ–ಎಲ್ಲಕ್ಕೂ ಹಿರಿಯ ಹಿಮಾ ಲಯ. ಅದರ ತಲೆಗೂದಲೂ ಬಿಳಿದಾಗಿವೆ. ಮುಂದೇನು ?. . 'ಮುಂದಿನ ಕತೆ' ಸಾಗಿಯೆ ಸಾಗುವುದು, ಹಿರಿತನವಿಲ್ಲ ಕಿರಿತನವಿಲ್ಲ. ಆಗಲಿ, ತಾನೂ ತನ್ನ 'ಮುಂದಿನ ಕತೆ'ಯನ್ನು ಸಾಗಿಸಿದರಾಯಿತು .... ಬದಿಯಲ್ಲಿಯ ಗಂಟನ್ನು ಬಿಚ್ಚಿದನು....ಕಾಗದದ ಚೂರುಗಳನ್ನು ಒಂದೊಂದಾಗಿ ತೆಗೆ ದನು....ಮುಂದಿನ ಕತೆಯ ಸಾರಾಂಶವೆಂದರೆ, ಸ್ವರೂಪವೆಂದರೆ ಈ ಚೂರುಗಳು! ಜೀವನದ, ಧ್ಯೇಯದ ಚೂರು–ಚಿಪ್ಪಾಡಿ! ನಾರಾಯಣ ನಿಗೆ ಓದಬೇಕೆನ್ನುವ ಕಣ್ಣುಗಳಲ್ಲಿ ನೀರು ತುಂಬಿತು, ಕೈಗಳು ನಡುಗಿ ದುವು. 'ವಯಸ್ಸಾದ ಲಕ್ಷಣ!' ಎಂದುಕೊಂಡನು....ಬೆನ್ನು ನೋಯು ತ್ತಲಿದೆ....ಅಡ್ಡಾಗೋಣ—ಎಂದು ಕುಳಿತಲ್ಲಿಯೆ ಕಾಲು ಚಾಚಿದನು. . ಗಂಟಿನ ಮೇಲೆ ಕಯ್ಯನಿಟ್ಟು ಅದನ್ನು ತಲೆಗಿಂಬು ಮಾಡಿಕೊಂಡು ಮಗ್ಗು ಲಾಗಿ ಮಲಗಿದನು....ಗಂಟು ಕಟ್ಟಿರಲಿಲ್ಲ,ಕೈ ಜಾರಿತು, ಮುಂದೆ ಮಗ್ಗ ರಿಸಿದನು, ಕಣ್ಣಿಗೆ ಕತ್ತಲೆ ಕಟ್ಟಿತು, ಜಾರಿದ ಬಲಗೈಯ ಮೇಲೆ ತಲೆಯ ನಿಟ್ಟು ಎಡಗೈಯಿಂದ ಹಣೆ ಹಿಡಿದುಕೊಂಡನು....ಬೆವರು ಸುರಿಯುತ್ತ ಲಿದೆ, ಗಾಬರಿಗೊಂಡು ನೋಡಿದನು, ಮಧ್ಯಾಹ್ನದ ಬಿಸಿಲು ಉರಿಯು ತ್ತಲಿದೆ!....ತನಗೆ ನಿದ್ರೆ ಹತ್ತಿತ್ತೆಂಬ ವಿಚಾರದಿಂದ ಎಷ್ಟೋ ಸಮಾಧಾನ ತಂದುಕೊಂಡು ಗಂಟನ್ನು ಕಟ್ಟಿಕೊಂಡು ನಡೆದನು 'ಮುಂದಿನ ಕತೆ'ಗೆ.

× × × ×

ವಿದ್ಯಾರ್ಥಿಗಳಿಗೊಂದು ತೊಡಕು. ಕುತೂಹಲಬುದ್ಧಿಯೇನೊ

ಸಹಸೆಮೀರಿ ಬೆಳೆದಿದೆ. ಆದರೂ ಕೇಳಬೇಕೆಂದರೆ ಮನಸ್ಸಿಗೆ ಸಂಕೋಚ. ಶಿಕ್ಷಕನ ಮುಖದಲ್ಲಿ ದಣಿವಿನ ಕಳೆ ಇದೆ. ಮಾತನಾಡುವಾಗ ಆಯಾಸ ವಾಗುತ್ತಲಿದೆ. ಗಂಟಿನ ಮೇಲಿಟ್ಟ ಕೈ ನಡುಗುತ್ತಲೆ ಇದೆ. ಕಣ್ಣು ಗಳಲ್ಲಿ ನಿದ್ರೆ ತುಂಬಿದಂತಿದೆ. ನಗುವಾಗ ದನಿಗಿಂತಲೂ ಬಾಯಿಯನ್ನೆ ಹೆಚ್ಚಾಗಿ ತೆರೆಯುತ್ತಲಿದ್ದಾನೆ. ಇಂತಹ ಸ್ಥಿತಿಯಲ್ಲಿ 'ಕತೆ ಹೇಳಿರಿ' ಎನ್ನ ಬೇಕೊ ಹೇಗೆ—ಎಂಬ ಪ್ರಶ್ನೆಯು ಪ್ರತಿಯೊಬ್ಬ ವಿದ್ಯಾರ್ಥಿಯ ಹುಬ್ಬು ಗಳಲ್ಲಿ ಹಾರುತ್ತಲಿದೆ. ಸಾಭಿಪ್ರಾಯವಾಗಿ ಒಬ್ಬರನ್ನೊಬ್ಬರು ನೋಡು ತ್ತಲಿದ್ದಾರೆ. ವರ್ಗದಲ್ಲಿ ಒಮ್ಮೆಲೆ ಶಾಂತತೆ ತುಂಬಿ ನಗುವ ತನ್ನದನಿ ತನಗೆಯೆ ಕೇಳಿಸಲು ಬೆದರಿದನು ನಾರಾಯಣನು....ತನಗೆ ಆಯಾಸ ವಾಗಿದೆ....'ವಯಸ್ಸಾದ ಲಕ್ಷಣ' ಎಂದುಕೊಂಡನು. ತನ್ನ ದನಿಯು ಸ್ವರಃಪವಾದರೂ ಎಂತಹದು ! ಅದರಲ್ಲಿ ಬಿಗುವಿಲ್ಲ, ತಿಳಿಯಿಲ್ಲ; ನಡೆ ಯುವಾಗ ದೋತರದಲ್ಲಿ ಸಿಕ್ಕಿಕೊಂಡ ಸೊಪ್ಪೆಯಂತೆ 'ಪರಪರ' ಕೆದರಿ ದಂತಾಗುತ್ತದೆ..'ವಯಸ್ಸಾದ ಲಕ್ಷಣ!'....ಮುಂಜಾವಿನಲ್ಲಿ ಹುಡು ಗರು ನಕ್ಕುದು ಸ್ಮರಣೆಗೆ ಬಂದಿತು. ಅದೆಂತಹ ದನಿ! ಕೇಳಿದರೆ ಮತ್ತೊಮ್ಮೆ ಕೇಳಬೇಕೆನ್ನಿಸುವುದು. ತನ್ನ ದನಿಯೊ ? ಸುತ್ತಲೂ ಶಾಂತತೆ ಹಬ್ಬಿದಾಗ ಸ್ಮಶಾನದಲ್ಲಿ ಉರಿಯುವ ಬೆಂಕಿಯ ಸಪ್ಪಳದಂತೆ. ಸತ್ತಮೇಲೆ ತನ್ನನ್ನು ಸುಡಬಾರದೆಂದು ಬರೆದಿಡುವುದನ್ನು ನಿಶ್ಚಯಿಸಿ ದನು. ಅದಿಷ್ಟೆ ಉಳಿದಿದೆ. ಅದೊಂದು ವಾಕ್ಯವನ್ನು ಬರೆದಿಟ್ಟರೆ ಮುಗಿ ದಂತಾಯಿತು ಮುಂದಿನ ತನ್ನ ಕತೆ....ನಾರಾಯಣನು ಒಮ್ಮೆಲೆ ಎಚ್ಚೆ ತ್ತವನಂತೆ ಹುಡುಗರನ್ನು ನೋಡಿದನು, 'ಮುಂದಿನ ಕತೆ ಬೇಕಲ್ಲವೆ ನಿಮಗೆ ?' ಎಂದು ಗಂಟನ್ನು ಮುಂದಿಟ್ಟುಕೊಂಡು ಬಿಚ್ಚಲುಜ್ಜುಗಿಸಿ ದನು.

" ನಿಮಗೆ ತ್ರಾಸ ಆಗ್ತಿದ್ದರೆ ———— "

' ಛೆ ! ' ಎಂಬುದೊಂದೇ ಅಕ್ಷರದಿಂದ ವಿದ್ಯಾರ್ಥಿಯ ಮಾತನ್ನು ತಡೆದನು ನಾರಾಯಣನು. ಆದರೆ ಅದೊಂದೇ ಅಕ್ಷರವನ್ನು ನುಡಿಯು ವಾಗ ಕಲ್ಪನೆ ಮೀರಿ ತ್ರಾಸವಾಯಿತು ನಾರಾಯಣನಿಗೆ; ಶರೀರದ ಆಯಾಸದಿಂದಲ್ಲ, ಮನಸ್ಸಿನ ಯಾತನೆಯಿಂದ. ತನಗೆ ವಯಸ್ಸಾಗಿದೆ,

ಶಕ್ತಿಸಾಲದು ಎಂಬುದು ಹುಡುಗರಿಗೂ ತಿಳಿಯಿತಲ್ಲ – ಎಂಬ ಅವನ ಯಾತನೆ. ಒಮ್ಮೆ ತನ್ನನ್ನು 'ಮುದುಕ' ನೆಂದು ಗೊತ್ತು ಮಾಡಿದ ಮೇಲೆ ತನ್ನ ವಿಷಯ ಹುಡುಗರಿಗೆ ಯಾವ ಅಭಿಪ್ರಾಯವಾಗುವುದೆಂಬುದರ ಸಂಶಯವೆ ಇದ್ದಿಲ್ಲ ಅವನಿಗೆ. ಇನ್ನು ತನ್ನಿಂದ ಯಾವ ಕೆಲಸವೂ ಆಗುವುದಿಲ್ಲ ಎಂದು ಎಲ್ಲರೂ ತಿಳಿದುಕೊಳ್ಳುವರು. ತಾನೂ ಹುಡುಗನಿದ್ದಾಗ 'ಮುದುಕ' ರನ್ನು ನೋಡಿ ಹಾಗೆಯೆ ತಿಳಿಯುತ್ತಿದ್ದನು, 'ಮುದುಕ' ನೆಂದರೆ ಅದೊಂದು ನೋಡತಕ್ಕ ಮಾದರಿ ಮಾತ್ರ ಎಂದು ನಗುತ್ತಿದ್ದನು. ಮಾಡುವುದು ಹುಡುಗರ ಕೆಲಸ, ಮಾತನಾಡುವುದು ಮುದುಕರ ಕೆಲಸ ಎಂದು ಹಂಗಿಸುತ್ತಿದ್ದನು. ಇನ್ನು ಈ ಹುಡುಗರೂ ತನ್ನನ್ನು ನೋಡಿ ಹಾಗೆಯೆ ಹೇಳಬಹುದಲ್ಲವೆ ? 'ಕತೆ ಹೇಳಿರಿ' ಎಂದರೆ ಅಷ್ಟರಮಟ್ಟಿಗೆ ನಿಮ್ಮ ಉಪಯುಕ್ತತೆ ಎಂದಂತೆಯೆ ಅಲ್ಲವೆ ? ಈಗ ತನಗೆ ಅಷ್ಟಕ್ಕೆ ಕೂಡ ಶಕ್ತಿ ಇಲ್ಲ ! 'ಛೆ ! ' ಎಂದನು.

ಎರಡುಸಲ ತಿರಸ್ಕಾರದ ದನಿಯಿಂದ 'ಛೆ ! ' ಎಂದುದರಿಂದ ಶಿಕ್ಷಕನು ಕೋಪಿಸಿಕೊಂಡಿರಬಹುದೆಂದು ಹುಡುಗರ ಭಾವನೆಯಾಯಿತು. ಹೆದರಿಕೆಯಾಗಲಿಲ್ಲ, ವಿಷಾದವೆನ್ನಿಸಿತು. ಮೊದಲೆ ತ್ರಾಸವಾಗಿದೆ, ಈಗ ಅವರನ್ನು ಸಿಟ್ಟಿಗೆಬ್ಬಿಸುವುದೆಂದರೆ ಅವರಿಗೆ ಮತ್ತಿಷ್ಟು ತ್ರಾಸ, ಆದುದರಿಂದ ಅವರನ್ನು ಉಪಾಯದಿಂದ ಸಮಾಧಾನಗೊಳಿಸಬೇಕು ಎಂದು ಎಲ್ಲರ ಆಲೋಚನೆ .... "ಮುಂದಿನ ಕತೆ ಹೇಳಿರಿ" ಎಂದನು ಒಬ್ಬ ವಿದ್ಯಾರ್ಥಿ.

ಆ ಹುಡುಗನ ದನಿಯಲ್ಲಿ ಕುತೂಹಲಬುದ್ಧಿಗಿಂತಲೂ ಕರುಣಾಬುದ್ಧಿಯೆ ಇದ್ದಿತೆಂಬುದು ನಾರಾಯಣನ ಲಕ್ಷ್ಯಕ್ಕೆ ಬಾರದೆ ಹೋಗಲಿಲ್ಲ. 'ಹೇಳಬೇಡ ಎಂದರೆ ಮುದುಕನಿಗೆ ಸಿಟ್ಟು ಬರುವುದು. ಹೇಳಲೊಲ್ಲನೇಕೆ – ತನ್ನ ಸಮಾಧಾನಕ್ಕಾಗಿ ' ಎಂದು ಈ ಹುಡುಗರ ಅಭಿಪ್ರಾಯವಲ್ಲವೆ ? ಮುದುಕನಿಗೆ ಕರುಣೆ ತೋರಿಸುವುದು ! ನಾರಾಯಣನಿಗೆ ಒಮ್ಮೆಲೆ ಆವೇಶ ಬಂದಂತಾಯಿತು. ಇಂದು ಮುದುಕನೆಂದು ತನಗೆ ಕರುಣೆ ತೋರಿಸುವ ಹುಡುಗರೇ ಮುಂದೆ ಹಳೆದಾದುದಕ್ಕೆಲ್ಲ ಕರುಣೆ ತೋರಿಸಬಹುದು. ಇಂತಹ ಮನಃಪ್ರವೃತ್ತಿಯಿಂದಲೆ ನಮ್ಮ ಸಮಾಜ

ಹಾಳಾದುದು, ಸಿಂತ ನೀರಿನಂತೆ ಕೊಳೆತುದು, ಎಂದಿನಿಂದ ನಡೆದು ಬಂದು ಹುಳ ತಿಂದುದು. ಹುಡುಗರಲ್ಲಿಯು ಈ ಮನಃಪ್ರವೃತ್ತಿಯನ್ನು ತೆಗೆದೊಗೆಯಲೇ ಬೇಕು. ಇದು ಎಳ್ಳಷ್ಟೂ ಉಪಯೋಗದ್ದಲ್ಲ.... 'ಛೆ!' ಎಂದನು ಮತ್ತೆ.

ವಿದ್ಯಾರ್ಥಿಗಳೆಲ್ಲರೂ ಸ್ತಬ್ಧರಾದರು. ಶಿಕ್ಷಕನ ಕೋಪ ಮಿತಿ ಮೀರುವ ಹನಣಿಕೆಯಲ್ಲಿದೆ ಎಂಬುದು ತಿಳಿಯಿತು ಅವರಿಗೆ. ನಾರಾಯಣನು ಗಂಟನ್ನು ಬಿಚ್ಚಿದನು, ಹುಡುಗರಿಗೆ ಸಂತೋಷವಾಯಿತು—ಕತೆಯಂತೂ ಮುಂದೆ ಸಾಗುವುದೆಂದು. ನಡುಗುವ ಕೈಗಳಿಂದ ಕೆಲವೊಂದು ಕಾಗದಗಳನ್ನು ಕಡೆಗೆ (ಹೊರಗೆ) ತೆಗೆದಿರಿಸಿದನು; ಹುಡುಗರ ಮುಖದಲ್ಲಿ ಉತ್ಸುಕತೆಯು, ಉತ್ಕಂಠತೆಯು ಕಳೆ. ಶಿಕ್ಷಕನು ಸಿಟ್ಟಿಗೆದ್ದಾಗಲೆಲ್ಲ ಬಹಳೇ ಅಂದವಾಗಿ ಕತೆಯನ್ನು ಹೇಳುತ್ತಿದ್ದನೆಂಬುದು ವಿದ್ಯಾರ್ಥಿಗಳೆಲ್ಲರಿಗೂ ಗೊತ್ತಿದ್ದಿತು. ಯಾರ ಮೇಲೆ ಸಿಟ್ಟು ಬಂದರೂ ನಾರಾಯಣನು ಸಮಾಜದ ವಿಷಯವಾಗಿ ಮಾತಾಡುತ್ತಿದ್ದನು. ಹಾವುಗಳ ಬಾಧೆ ತಪ್ಪುವುದಕ್ಕೆ 'ಆಸ್ತಿಕ, ಆಸ್ತಿಕ' ಎಂಬ ಮಂತ್ರವಿದ್ದಂತೆ ತನ್ನ ಕೋಪದ ಬಾಧೆ ತನಗೆ ತಪ್ಪಿಸಲು ನಾರಾಯಣನು 'ಸಮಾಜದ ಸಮಸ್ಯೆ' ಗಳ ವಿಷಯವಾಗಿ ಮಾತನಾಡುತ್ತಿದ್ದನು. ಇದಲ್ಲದೆ ಕೋಪ ಬಂದಾಗ ನಾರಾಯಣನ ಭಾಷೆ ರಸವತ್ತಾಗಿ, ಶೈಲಿ ಸ್ಫೂರ್ತಿವತ್ತಾಗಿ ಇರುತ್ತಿದ್ದಿತು. ಅವನ ಜೀವನದ ಪರಿಪಾಠವೆ ಹಾಗೆ ಬಿದ್ದು ಬಿಟ್ಟಿತ್ತು. ತಾರುಣ್ಯದ ತನ್ನ ಜೀವನದ ದಾರಿಯಲ್ಲಿ ಸಮಾಜದ ಕುಂದುಗಳನ್ನು ಕೆಣಕಿ ಕಂಡು ಕಾಲ್ಕೆಳಗೆ ತುಳಿದೊಗೆದು ಸಾಗಿದವನು ಅವನು. ಆದೇನೊ ಮಲಗಿದಾಗ ಅಭ್ಯಾಸವನ್ನು ಮಾಡಿದವನ ಕತೆ ಹೇಳುವರಲ್ಲ! ರಾಜನ ಸಭೆಯಲ್ಲಿ ಎದ್ದುನಿಂತು ತನ್ನ ವಿದ್ಯಾಪಾಂಡಿತ್ಯವನ್ನು ತೋರಿಸ ಬೇಕೆಂದರೆ ಒಂದಿದ್ದ ತುಟಿ ಎರಡಾಗಲಿಲ್ಲವಂತೆ. 'ಎಷ್ಟು ಪರಿಶ್ರಮ ಬಟ್ಟು ಕಲಿಸಿದ್ದೆ ನಿನಗೆ. ನನ್ನ ಮನೆಗೆ ಕಲಂಕ ತಂದೆ!' ಎಂದು ಅಬ್ಬರಿಸಿ ಆ ಸಭೆಯಲ್ಲಿಯೆ (ಕತೆ ಹಾಗಿದೆ) ಆ ಹುಡುಗನಿಗೆ ಬಲವಾಗಿ ಏಟು ಕೊಟ್ಟನಂತೆ ಅವನ ತಂದೆ! ಪೆಟ್ಟಿನ ನೋವಿನಿಂದ ನೆಲದ ಮೇಲೆ ಹೊರಳಾಡಿದನು ಆ ಹುಡುಗ. ಹೊರಳಾಡುವಾಗ — ಅದೊ — ಒಮ್ಮೆಲೆ

ಸ್ಮರಣೆಗೆ ಬಂದಿತಂತೆ ಅವನ ವಿದ್ಯೆ. ಹಾಗೆ ನಾರಾಯಣ ಸ್ಥಿತಿ. 'ಸಮಾಜ' ಎಂದೊಡನೆಯೆ ಸಿಟ್ಟು ಅವನಿಗೆ. ಆದಕಾಗಿ ಇನ್ನೊಬ್ಬರ ಮೇಲೆ ಸಿಟ್ಟು ಬಂದಾಗ ಕೂಡ ಸಮಾಜದ ಹರಟೆಯನ್ನೆ ಹೊಡೆಯು ತ್ತಿದ್ದನು ನಾರಾಯಣನು. ಹೀಗೆ ತಾಮಸದಿಂದ ರಾಜಸಪದವಿಗೆ 'ಬಡ್ತಿ' ಯಾಗಿತ್ತು ನಾರಾಯಣನ ಸಿಟ್ಟು. 'ಏನೆ ಇರಲಿ, ಸೊಗ ಸಾಗಿ ಹೇಳುವರಲ್ಲ ಶಿಕ್ಷಕರು' ಎಂದು ಕೊಳ್ಳುತ್ತಿದ್ದರು ಹುಡುಗರು. ಈಗಲೂ ಸೊಗಸಾಗಿಯೆ ಹೇಳುವ ಸಂಭವವಿದೆಯೆಂಬ ಉತ್ಕಂಠೆಯಿಂದ ವಿದ್ಯಾರ್ಥಿಗಳೆಲ್ಲರೂ ಸ್ತಬ್ಧರಾದರು.

ಹೊರಗೆ ತೆಗೆದಿರಿಸಿದ ಕಾಗದಗಳನ್ನು ಒಂದೊಂದಾಗಿ ನೋಡಿ ಬದಿಗಿಟ್ಟು ಉಳಿದ ಕಾಗದಗಳನ್ನು ಗಂಟಿಸಲ್ಲಿಟ್ಟು ಕಟ್ಟಿದನು ನಾರಾ ಯಣನು. ಬದಿಯಲ್ಲಿಯ ಒಂದು ಕಾಗದವನ್ನೆತ್ತಿ ಹಿಡಿದನು. "ಹುರಿಬ ಹುಕ್ಕ" ದ ಪ್ರತಿ! ವೀರ ಕನ್ನಡ ಪತ್ರಿಕೆಯ ಒಂದು ಪ್ರತಿ! ತಾ. ೧–೪–೧೯೭ – ನೆಯ ದಿನದ ಪ್ರತಿ! ನಾರಾಯಣನು ಸಮಾಜದ ಮುಂದಾಳುತನದಲ್ಲಿ ಮೊದಲನೆಯ ಹೆಜ್ಜೆಯನ್ನಿಟ್ಟ ದಿನದ ಪ್ರತಿ! ಕಾಗ ದವನ್ನು ದಿಟ್ಟಿಸಿದಂತೆ ಮುಂದೆ ಕುಳಿತ ವಿದ್ಯಾರ್ಥಿಗಳ ಎಚ್ಚರವೆ ಅಳಿ ಯಿತು. ಶಿಕ್ಷಕನೂ ಸ್ತಬ್ಧನಾಗಿ ಕುಳಿತುದರಿಂದ ವಿದ್ಯಾರ್ಥಿಗಳಿಗೆ ಉಸಿರಾಡಿಸಲೂ ಕೂಡ ಹೆದರಿಕೆ, ಶಿಕ್ಷಕನು ಏನು ಮಾಡುವನೊ ಎಂದು. ಏನು ಮಾಡಿದರೂ ತಮಗೆ ಹೊಡೆ-ಬಡಿಯುವ ಹೆದರಿಕೆ ಇಲ್ಲ ಎಂಬುದು ಅವರಿಗೆ ಗೊತ್ತು. ಹುಡುಗರಿಗೆ ದೇಹದಂಡನೆ ಮಾಡಲೇಕೂಡದೆಂಬ ಮತದವನಿದ್ದನು ನಾರಾಯಣನು. ಹುಡುಗರನ್ನು ಹೊಡೆಯುವ ಅಧಿ ಕಾರ ಹಿರಿಯರಿಗಿದೆ ಎಂದು ಯಾರಾದರೂ ಹೇಳಿದರೆ ಹಿರಿಯರನ್ನು ಹೊಡೆ ಯುವ ಅಧಿಕಾರ ಸಮಾಜಕ್ಕಿದೆ ಎಂದು ನಾರಾಯಣನು ಹೇಳುತ್ತಿ ದ್ದನು. ಹಿರಿಯರಾಗಲಿ ಹೆರವರಾಗಲಿ ಹುಡುಗರನ್ನು ಹೊಡೆಯುವು ದಕ್ಕೆ ಎರಡು ಕಾರಣಗಳನ್ನು ತೋರಿಸುತ್ತಿದ್ದನು ನಾರಾಯಣನು. ಒಂದು, ಮನೆಯಲ್ಲಿ ಸುಖವಿಲ್ಲದುದಕ್ಕಾಗಿ; ಇನ್ನೊಂದು, ಹೊರಗೆ ಯೋಗ್ಯತೆ ಇಲ್ಲದುದಕ್ಕಾಗಿ. ಆದುದರಿಂದ ಯಾವನಾದರೊಬ್ಬ ಶಿಕ್ಷ ಕನು ಹುಡುಗರನ್ನು ಹೊಡೆಯುತ್ತಿದ್ದರೆ ಅವನಿಗೆ ಒಳಗೆ ಸುಖವಾದರೂ

ಇಲ್ಲ, ಹೊರಗೆ ಯೋಗ್ಯತೆಯಾದರೂ ಇಲ್ಲ ಎಂದು ಕಂಡು ಹಿಡಿಯ ಬೇಕು; ಆ ಮೇಲೆ ಆ ಕಾರಣಗಳನ್ನು ಇಲ್ಲದಂತೆ ಮಾಡಬೇಕು ಎಂದು ಅಭಿಪ್ರಾಯ ಪಟ್ಟಿದ್ದನು. ಆ ಅಭಿಪ್ರಾಯದ ಮೇರೆಗೆ ಅವನು ಎರಡು ಸಿದ್ಧಾಂತಗಳನ್ನೂ ಮಾಡಿಕೊಂಡಿದ್ದನು. ಒಂದು, ಶಿಕ್ಷಕರಿಗೆ ಹೊಟ್ಟೆಗೆ ಪ್ರಪಂಚಕ್ಕೆ ಸಾಲುವಷ್ಟು ಸಂಬಳಕೊಟ್ಟು, ವ್ಯವಹಾರದಲ್ಲಿ ಅವರಿಗೆ ಯೋಗ್ಯತೆ ದೊರಕುವಂತೆ ಮೇಲಿನಧಿಕಾರಿಗಳೂ ಕೂಡ ಅವರೊಡನೆ ಸಭ್ಯತನದಿಂದ ವರ್ತಿಸಬೇಕು ( ಈ ಸಿದ್ಧಾಂತಕ್ಕೆ ಟಿಪ್ಪಣಿಯೊಂದನ್ನು ಬರೆದಿಟ್ಟಿದ್ದನು: ಸಮಾಜದ ಆರ್ಥಿಕ ಸ್ಥಿತಿಯು ಅವನತಿಗಿಳಿದುದಾದರೆ ಮದುವೆಯಾಗದವರನ್ನೇ ಶಿಕ್ಷಕರನ್ನಾಗಿ ನಿಯಮಿಸಬೇಕು, ಇಲ್ಲವೆ ಶಿಕ್ಷಕರಿಗೆ ಒತ್ತಾಯದ ಸಂತತಿ — ನಿಯಮನವನ್ನು ಗೊತ್ತುಪಡಿಸ ಬೇಕು. ಅಂತೂ ಶಿಕ್ಷಕನ ಉದರ–ನಿರ್ವಾಹಕ್ಕೆ ತೊಂದರೆ ಬಾರದಂತೆ ನೋಡಿಕೊಳ್ಳುವುದೆ ಮುಖ್ಯ ಧ್ಯೇಯವಾಗಿರಬೇಕು ). ಎರಡನೆಯ ಸಿದ್ಧಾಂತ:— ಪ್ರಾಥಮಿಕ ಶಿಕ್ಷಣದಲ್ಲಿ ಯಾವಾಗಲೂ ಶಿಕ್ಷಕಿಯರನ್ನೇ ನಿಯಮಿಸಬೇಕು.... ಈ ಅಭಿಪ್ರಾಯಗಳೆಲ್ಲ ಬರಿಯ ಕನಸಿನ ತತ್ವಗಳು ಎಂದು ನಾರಾಯಣನಿಗೆ ತೋರಿದ್ದಿಲ್ಲ. ಸಮಯ ಸಿಕ್ಕಾಗ ಅವುಗಳನ್ನು ರೂಢಿಯಲ್ಲಿ ತಂದು ಅವುಗಳ ಸಮಂಜಸತೆಯನ್ನು ಸಮಾಜದ ಪ್ರತೀತಿಗೆ ಸಿದ್ಧಪಡಿಸಿ ತೋರಿಸಬೇಕೆಂಬ ಹಟವನ್ನು ತೊಟ್ಟಿದ್ದನು. ಕಮತೂರಿ ನಿಂದ ಓಡಿಹೋದಾಗ ಆ ಸಮಯ ಎಂದು ಸಿಕ್ಕೀತೆಂಬುದರ ಕಲ್ಪನೆ ಇದ್ದಿರಲಿಲ್ಲ ಅವನಿಗೆ; ಮುಂದೆ ಕೆಲವು ಕಾಲದ ತರುವಾಯ ಅಂತಹ ಸಮಯ ತನಗೆ ಸಿಕ್ಕೀತೆಂಬುದರ ಭರವಸೆ ಕೂಡ ಅವನಿಗೆ ಉಳಿಯಲಿಲ್ಲ. ಒಂದು ಕಡೆ ಸಮಾಜವನ್ನು ಸುಧಾರಿಸಬೇಕೆಂಬ ಆತುರ, ಇನ್ನೊಂದು ಕಡೆ ಸಮಾಜವನ್ನು ಅರಿತುಕೊಳ್ಳಬೇಕೆಂಬ ಆಸೆ, ಎರಡೂ ಅಷ್ಟೇ ಮಹತ್ವ ವುಳ್ಳವು ಎಂಬುದೊಂದು ತೊಡಕು. ಕೊನೆಗೆ ಸಮಾಜವನ್ನು ಅರಿತು ಕೊಳ್ಳಬೇಕೆಂಬ ಆಸೆಯೆ ಬಲವಾಗಿ ಒಮ್ಮೆ ಕರ್ನಾಟಕವನ್ನೆಲ್ಲ ಮೊದಲು ಸುತ್ತಾಡಿ ಬರಬೇಕೆಂದು ನಿಶ್ಚಯಿಸಿದ್ದನು. ಹೇಗೆ ? ಕಾಲ್ಗಳಿವೆ, ನಡೆಯ ಬಹುದು; ಕಣ್ಣುಗಳಿವೆ, ನೋಡಬಹುದು; ಕಿವಿಗಳಿವೆ, ಕೇಳಿಕೊಳ್ಳ ಬಹುದು; ಕೈಗಳಿವೆ, ಬರೆದುಕೊಳ್ಳಬಹುದು; ತಲೆಯಿದೆ, ವಿಚಾರವನ್ನೂ

ಮಾಡಬಹುದು . . ಆದರೆ—? ಆದರೆ, ಇವೆಲ್ಲವುಗಳ ಜೊತೆಗೆ ಹೊಟ್ಟೆಯೂ ಇದೆಯಲ್ಲ ! ಎಲ್ಲ ಅವಯವಗಳೂ ಅಲ್ಲಿಯೆ ಬಂದು ಸೇರುವುವು; ಎಲ್ಲ ಅವಯವಗಳೂ ಅಲ್ಲಿಂದಲೆ ಟಿಸಿಲೊಡೆಯುವುವು ಎನ್ನಬಹುದು. ಹೀಗೆ ಎಲ್ಲದರ ಮೂಲವಾದ ಹೊಟ್ಟೆಯಿಂದ 'ಊರ್ಧ್ವಮೂಲಂ ಅಧಃಶಾಖಂ ಅಶ್ವತ್ಥಂ' ಎಂಬಂತೆ ನಿಂತಿದೆ ಮನುಷ್ಯನ ದೇಹ! ಇದಕ್ಕೆ ಉಪಾಯ ವೇನು ?.... ತಟ್ಟನೆ ಹೊಳೆದಿತ್ತು ನಾರಾಯಣನಿಗೆ. ಒಂದೆ ಬಾಣದಿಂದ ಎರಡು ಗುರಿಗಳನ್ನು ಹೊಡೆಯುವಂತಹ ಉಪಾಯ ಸೂಚಿಸಿತ್ತು ನಾರಾಯಣನಿಗೆ....ನಾಟಕ ಕಂಪನಿಯನ್ನು ಸೇರಿಬಿಡೋಣ – ಎಂದುಕೊಂಡನು. ಉದರ ನಿರ್ವಾಹವಾಯಿತು, ದೇಶಸಂಚಾರವಾಯಿತು; ಇಹ–ಪರಗಳೆರಡನ್ನೂ ಸಾಧಿಸಿದಂತಾಗುವುದು ಎಂದು ಹಂಚಿಕೆ ಹಾಕಿ ಒಂದು ಕಂಪನಿಯನ್ನು ಸೇರಿಕೊಂಡಿದ್ದನು. ಮೊದಲನೆಯ ತಿಂಗಳಿನ ಸಂಬಳವನ್ನೆಲ್ಲ ವೆಚ್ಚಮಾಡಿ ಒಂದು ಪೆನ್ಸಿಲ್ ಕೊಂಡುಕೊಂಡನು; ಎರಡನೆಯ ತಿಂಗಳಿನಿಂದ ಪ್ರಾರಂಭಿಸಿ ಬರುವ ಸಂಬಳವೆಲ್ಲ ಕಾಗದಗಳನ್ನು ಕೊಂಡುಕೊಳ್ಳುವುದರಲ್ಲಿ ವೆಚ್ಚವಾಯಿತು. ಅಂತೂ ಕಂಪನಿಯ ಕೂಡ ಕುಂಟುತ್ತ ಮುಗ್ಗುತ್ತ ಕರ್ನಾಟಕದ ಸಂಚಾರವನ್ನು ನಡೆಸಿದನು. ಕಂಪನಿಯಲ್ಲಿಯ ಜನ್ಮವೆಂದರೆ ಮಾನವ ಜನ್ಮದ ರಂಗತಾಲೀಮು ಎಂದೆನ್ನಿಸಿತು. ಎಂಭತ್ತು ಲಕ್ಷ ಯೋನಿಗಳಲ್ಲಿ ಹುಟ್ಟಿ ಬರುವಂತೆ ಆಗಾಗ ಹುಟ್ಟಿ ಸಾಯುತ್ತಲಿರುವ ಕಂಪನಿಗಳಲ್ಲಿ ಜನ್ಮವನ್ನು ತಾಳಬೇಕಾಯಿತು. ಉಪಾಯವಿಲ್ಲ....ಉದ್ದೇಶವನ್ನು ಸಾಧಿಸಿಕೊಳ್ಳಲೇಬೇಕೆಂಬ ಹಟವಿದ್ದಿತು ಅವನಿಗೆ; ಅದಕಾಗಿ ಕಲಾವೇಶ್ಯೆಯ ಮನೆಯಲ್ಲಿದ್ದುಕೊಳ್ಳಬೇಕಾಯಿತು; ಸಂಗಡಿಗರು ಅಸಭ್ಯ, ಸಹವಾಸ ಅಸಹ್ಯ, ಅಶ್ಲೀಲ ನಾಟಕ, ಯಾವ ಕಂಪನಿಯಲ್ಲೂ ತಾನೊಬ್ಬನೆ ಸುಶಿಕ್ಷಿತನಾದುದರಿಂದ ಎಂದಿಗೂ ತನಗೆ ತಪ್ಪದ ಒಪ್ಪದ ಕಂಪನಿಯ ಸೂಳೆಯರ ಕಾಟ, ಅದಕಾಗಿ ಒಮ್ಮೊಮ್ಮೆ ಮಾಲಕರು ತನ್ನನ್ನು ಹೊರದೂಡಲು ಅನಿವಾರ್ಯದ ಉಪವಾಸ — ಹೀಗೆ ಅನೇಕ ಕಷ್ಟಗಳನ್ನನುಭವಿಸಲೇಬೇಕಾಯಿತು. ಚಿಕ್ಕಂದಿನಲ್ಲಿ ಕಲಿಯಲಾಗದ ಸಂಗೀತವನ್ನು ಈಗ ಕಲಿತುಕೊಳ್ಳಬೇಕಾಯಿತು. ಒಮ್ಮೆ 'ಒನಸ್ಮೋರ' (once more) ಎಂದು ಚಪ್ಪಾಳೆ ತಟ್ಟಿ ಕೂಗಿಕೊಂ

ಡಿತು ಜನ. ನಾರಾಯಣನಿಗೆ ಕಂಪನಿಗಳ ಅನುಭವವು ಸಾಕಷ್ಟಿದ್ದಿತು. ಜನರು ' ಒನಸ್ಮೋರ್ ' ಎಂದಕೂಡಲೆ ಒಳಗೆ ಹೋದನು; ಹೋದವನೆ ಮಾಲಕನನ್ನು ಎದುರಿಸಿದನು.

"ಇನ್ನೊನ್ಸ್ತ ಒದರಿ ಬಂದ್ಬಿಡ್ರೆಪ ಬ್ಯಾಗ" ಎಂದನು ಮಾಲಕನು.

ನಾರಾಯಣನಿಗೆ ಸಮಯ ಸಾಧಿಸಿತು. ಮುಂದಿನ ದೃಶ್ಯದಲ್ಲಿಯ ಮಾಲಕನ ಪಾತ್ರವು ಬಹಳೇ ಹಾಸ್ಯಕಾರಕವಾದುದೆಂದು ಹೆಸರಾಗಿತ್ತು. ಹೆಂಗಸರು ಕಲಿತರೆ ಎಷ್ಟು ಅನರ್ಥವಾಗುವುದೆಂಬಾಶಯದ ಒಂದು ಲಾವಣಿ ಇದ್ದಿತು. ಕಲಿತ ಹೆಂಗಸಿನ ವೇಷ (ಎಂದರೆ ಯಾವ ಅವಯವಗಳು ಎಷ್ಟರ ಮಟ್ಟಿಗೆ ಕಾಣಿಸುವುವು ಎಂಬುದನ್ನು ವರ್ಣಿಸಿ ವ್ಯಂಗ್ಯವಾಗಿ ಸೂಚಿಸಿತ್ತು,) ಅವಳ ನಡೆ (ಮಾಲಕನು ನಡೆದೇ ತೋರಿಸುತ್ತಿದ್ದುದರಿಂದ ಅದನ್ನು ವರ್ಣಿಸುವ ಕಾರಣವಿಲ್ಲ, ವರ್ಣಿಸಬೇಕೆಂದರೂ ಅಚ್ಚಿನ ಕಾಯಿದೆಯೊಂದಿದೆ, ಮನಸಿನ ನಾಚಿಕೆಯೊಂದಿದೆ!), ಅವಳ ನುಡಿ (ಮಾಲಕನು ಕಸರತ್ತಿನಿಂದ ಗೋಣು ಅಲ್ಲಾಡಿಸುತ್ತಿದ್ದನು)—ಇಂತಹ ಸೊಗಸಾದ ಸಂನಿವೇಶದ ಲಾವಣಿ. ಅದೊಂದಕ್ಕೇ 'ಒನಸ್ಮೋರ್'ದ ಮಾನವಿದ್ದಿತು ಇದುವರೆಗೆ. ಅದಕಾಗಿ ನಾರಾಯಣನ 'ಒನಸ್ಮೋ'ರಿಗೆ ಮಾಲಕನ ಹೊಟ್ಟೆಯುರಿಯುತ್ತಿದ್ದಿತ್ತು. ಹೊರಗೆ ಚಪ್ಪಾಳೆಯ ಕಡಕಡಾಟ ಗುಡುಗಿನಂತೆ ಕೇಳಿಸತೊಡಗಿತು.

"ಹೋಗಿ ಒದರಿ ಬರ್ರ್ಯಾರ್ದ **ಬ್ಯಾಗ** (ಬೇಗ)" ಎಂದು ಕೆರಳಿದನು ಮಾಲಕನು. ಏನಾದರೂ ಮಾಡಲಿ, ಆದರೆ ಅದನ್ನು ಬೇಗ ಮುಗಿಸಲಿ, ತನ್ನ ಲಾವಣಿಗೆ ವಿಲಂಬ ಬೇಡ ಎಂದು ಮಾಲಕನ ಆಸೆ. ಆದರೆ ನಾರಾಯಣನು ಕದಲಲಿಲ್ಲ. "ಈ ತಿಂಗಳಿನಿಂದ ನನ್ನ ಸಂಬಳ ಹೆಚ್ಚಾಗ್ಬೇಕು, ಮೂರು ತಿಂಗಳ ಸಂಬಳ ಕಾಂಟ್ರ್ಯಾಕ್ಟ (contract) ದ ಪ್ರಕಾರ ಡಿಪೊಜಿಟ್ (deposit) ಇಡ್ಬೇಕು. ಅಂದರೆ 'ಒನ್ಸಮೋರ್', ಇಲ್ಲಾದರ **ನೋ ಮೋರ್** (no more)" ಎಂದನು. ಹೊರಗಿನ ಚಪ್ಪಾಳೆಯ ಗುಡುಗೂ ಒಳಗಿನ ಎದೆಯ ಗುಡುಗೂ ಒಂದೇ ಆಗಿ ಬಿಟ್ಟಿತು ಮಾಲಕನಿಗೆ. ಕೊನೆಗೆ ನಾರಾಯಣನೆ ಗೆದ್ದಿದ್ದನು. ಆ ಲಾವಣಿಯ ಪ್ರಭಾವದಿಂದ. ಅಂದಿನಿಂದ ನಾರಾಯಣನ ಬೆಲೆ ಹೆಚ್ಚಿತು. ನೋದ ಹೋದಲ್ಲಿ

ಹೆಚ್ಚು ಸಂಬಳವನ್ನು ಬೇಡುತ್ತಿದ್ದನು. ಪ್ರೇಕ್ಷಕರು ನಾರಾಯಣನನ್ನು ಬೇಡುತ್ತಿದ್ದರು. ಎಷ್ಟೋ ಕಂಪನಿಗಳು ಇವನಿಗೊಂದು ತಿಂಗಳಿನ ಸಂಬಳ ಕೊಡುವುದಕ್ಕಾಗಿ ನಿರ್ನಾಮವಾಗಿದ್ದುವು. ಈ ರೀತಿಯಿಂದಲಾದರೂ ಕರ್ನಾಟಕದ ರಂಗಭೂಮಿಯು ಏಳ್ಗೆಗಾಗಿ ದುಡಿಯೋಣ—ಎಂದುಕೊಳ್ಳು ತ್ತಿದ್ದನು. .ಕೊನೆಗೆ ಹಿಂದಣಕಾಲದ ಕಾಶೀಯಾತ್ರೆಗಿಂತ ಹೆಚ್ಚಾಗಿ ವಿಲಂಬಿಸಿತ್ತು ಇವನ ಕರ್ನಾಟಕದ ಯಾತ್ರೆ. ಕಮತೂರು ಬಿಟ್ಟಂದಿ ನಿಂದ ಹದಿನಾರು ವರ್ಷಗಳಾಗಿವೆ! ಮೇಲೆ ಹಣವನ್ನು ಗಳಿಸಿದ್ದಾನೆ.... ನಾರಾಯಣನಿಗೆ ಬಹಳೇ ವಿಷಾದವಾಯಿತು. ಸ್ವಾರ್ಥಮದ ಲೋಲುಪಾಂಧನಾಗಿ ಕರ್ತವ್ಯಪರಾಙಮುಖ್ಯಪರಿವೃತನಾಗಿ ವ್ಯರ್ಥ ವಾಗಿ ಕಾಲಹರಣಮಂ ಗೆಯ್ದನಲ್ಲ! ಎಂದು ರೂಢಿಯಾದ ನಾಟಕದ ಶೈಲಿಯಲ್ಲಿ ಹಳಹಳಿಸಿ ಹೊರಹೊರಡುವಂಥಾತ್ತನಾದನು. "ಯಾರಲ್ಲಿ ?" ಎಂದನು ದರ್ಬಾರ ಸೀನು ಸ್ಮರಣೆಯಾಗಿ. "ಯಾರಲ್ಲಿ ಇದ್ದುಕೊಳ್ಳೋಣ" ಎಂಬುದು ಅವರ ಅರ್ಥ. ಇದುವರೆಗಿನ ತನ್ನ ಬುದ್ಧಿಯ ಆಲಸ್ಯವು ಅಪ ರಾಧವೆಂದು ನೊಂದು ಸಮಾಜ ಸುಧಾರಣೆಗೆ ಅತ್ಯಂತ ಆತುರನಾದನು. ಹಿಂದಿನ ತತ್ವಗಳೆಲ್ಲ ಮತ್ತೆ ತಲೆ ಎತ್ತಿದವು....ನಾರಾಯಣನಿಗೆ ದಿಕ್ಕು ಕಾಣದಂತಾಯಿತು, ತಲೆಯು ಭಾರವಾದಂತಾಯಿತು, ಎರಡೂ ಕೈಗ ಳಿಂದ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಕಣ್ಣು ಮುಚ್ಚಿದನು. ಕೈಯೊಳಗಿನ ಕಾಗದ ಜಾರಿತು, ಜೆಚ್ಚಾಗಿ ದಣಿದು ಬಾಡಿದ ಶಿಕ್ಷಕನ ಮುಖವನ್ನು ನೋಡಿ ವಿದ್ಯಾರ್ಥಿಗಳಿಗೆ ಬಹಳೇ ವ್ಯಥೆಯಾಯಿತು. ಕರು ಣಾಯುಕ್ತ ದೃಷ್ಟಿಯಿಂದ ಎದ್ದು ಬಿದ್ದ ಕಾಗದವನ್ನು ಎತ್ತಿಕೊಟ್ಟನೊ ಬ್ಬನು....ನಾರಾಯಣನು 'ಆಂ' ಎಂದನು ಬೆದರಿದವನಂತೆ....ಕೂಡಲೆ ಸಂನಿವೇಶ ತಿಳಿದುಬಂದು "ಹಹ! ಮುಂದಿನ ಕತೆ ಹೇಳ್ಬೇಕಲ್ಲ ನಿಮಗೆ?" ಎಂದು ನಗಲು ಯತ್ನಿಸಿದನು. ಶಿಕ್ಷಕನ ಕರುಣಾಜನಕ ಸ್ಥಿತಿಯನ್ನು ನೋಡಿ ತಡೆಯದಂತಾಗಿ ಒಬ್ಬನು ಧೈರ್ಯದಿಂದ ಎದ್ದು ನಿಂತನು, "ನಿಮಗ ಶ್ರಮ ಬಹಳ ಆಗ್——"

ನಾರಾಯಣನು ಆ ವಿದ್ಯಾರ್ಥಿಯ ಮಾತನ್ನು ಮುಗಿಯಗೊಡಲಿಲ್ಲ. "ಅಹುದಹುದು, ಅಕ್ಷರ ಒಂದಿಷ್ಟು ಸಣ್ಣವು ಇವೆ....ನೀನೇ ಓದು—

ಗಟ್ಟಿಯಾಗಿ ಓದು–ಅದನ್ನು ಎಲ್ಲರೂ ಕೂಡಿ ತಿಳಿದುಕೊಳ್ಳೋಣ'' ಎಂದು ಅವಸರಪಸರವಾಗಿ ಕಾಗದವನ್ನು ಆ ಹುಡುಗನ ಕಡೆ ಚೆಲ್ಲಿದನು, ಅಷ್ಟು ಅವಸರ ನಾರಾಯಣನಿಗೆ ಆ ಕಾಗದ ತನ್ನೆದುರಿನಲ್ಲಿ ಬೇಡ ಎಂದು. ತನ್ನ ತತ್ವಗಳೆಲ್ಲ ಕನಸೆಂದು ಕಂಡುಬಂದ ಮೊದಲನೆಯ ಅನುಭವದ ಸಾಕ್ಷಿಯಾಗಿದೆ ಆ " ಹುಂಬ ಹುಕ್ಕ''ದ ಪ್ರತಿ! ತಾ. ೧–೪–೧೯೭–.! ತನ್ನನ್ನು ಮರುಳುಗೊಳಿಸಿದ ದಿನ! ಎಂತಹ ಹುಚ್ಚ ತಾನು! ತಾ. ೧–೪–೧೯೭–ನೆಯ ದಿನ ಸಮಾಜದ ಮುಂದಾಳುತನದಲ್ಲಿ ತಾನು ಮೊದಲನೆಯ ಹೆಜ್ಜೆಯನ್ನಿಟ್ಟನೆಂದು ತಿಳಿದಿದ್ದನಲ್ಲವೆ? ಜಗನ ಪ್ರಸಂಗವೆ ಹಾಗಿದ್ದಿತೇನೊ ನಿಜ. ಸಮಾಜಸುಧಾರಣೆಗೆ ಶಿಕ್ಷಣದ –ಸರಿಯಾದ ಶಿಕ್ಷಣದ– ಪ್ರಸಾರವೆ ಅವಶ್ಯ ಎಂದು ಅಭಿಪ್ರಾಯಪಡುವ ತಾನು ಆದಿನ ಶಿಕ್ಷಣದ ಸೂತ್ರಧಾರಿಯಾಗಿದ್ದನಲ್ಲವೆ? ಎಂತೆಂತಹರಿಗೂ ಆಶೆಯಿದ್ದ ಅಶಕ್ಯವೆನ್ನಿಸಿದ ಅಧಿಕಾರಸೂತ್ರವು ತನಗೆ ಲಭಿಸಿತ್ತು ಅಂದು. ತಾನು ಲೋಕಲ್‌ಬೋರ್ಡಿನಲ್ಲಿ ಸ್ಕೂಲಬೋರ್ಡ ಚೇರಮನ್! (ವಿದ್ಯಾಶಾಖೆಯ ಮುಖ್ಯ ಸೂತ್ರಧಾರಿ!). ಒಂದು ವರ್ಷದಲ್ಲಿ ಶಿಕ್ಷಣಕ್ರಮವನ್ನೆ ಆಮೂಲಾಗ್ರ ತಿದ್ದುಪಡಿಸೋಣ ಎಂದುಕೊಂಡಿದ್ದನು. ವಿದ್ಯಾವಂತರ ಸಹಾನುಭೂತಿಯಂತೂ ಇದ್ದೇ ಇದೆ ತನಗೆ. ಇಲ್ಲವಾದರೆ ಈಗಾಗಲೇ ಮುಂದಾಳುಗಳೆನ್ನಿಸಿಕೊಂಡವರನ್ನು ಕೆಳಗೊತ್ತಿ ತಾನು ಆರಿಸಿ (ಚುನಾಯಿಸಿ) ಬರಬಹುದಾಗಿತ್ತೆ? ತನಗೆ ಸಹಾನುಭೂತಿಯನ್ನು ತೋರಿಸಿದವರು ತನ್ನ ತತ್ವಗಳನ್ನೆಲ್ಲ ಮನ್ನಿಸಿದವರು....ಅಂತೂ, ಮೊದಲು ಕಾರ್ಯವನ್ನು ಪ್ರಾರಂಭಿಸಬೇಕು. ಶಿಕ್ಷಕರ ಸಂಬಳವನ್ನು—

"ಇಲ್ಲಿಯ ಬ್ರಾಹ್ಮಣ ಶಿಕ್ಷಕರದಂತೂ ಗೋಳು ಕೇಳಲಾಸಲ್ಲ ನೋಡಿರಿ! ಇಷ್ಟು ದಿವಸ ಬೇರೆ ಜಾತಿಯವರೆ ಚೆಯರಮನ್ ಇದ್ದರು. ತಂ ಜಾತಿಯವರಿಗೆ ತಾವು—'' ಎಂದು ತನ್ನ ಸಹಾನುಭೂತಿಕನೊಬ್ಬನು ಹೇಳಿದನು.

"ಶಿಕ್ಷಣಕ್ಕೆ ಜಾತಿ ಇಲ್ಲರಿ'' ಎಂದು ನಕ್ಕಿದ್ದನು ನಾರಾಯಣನು.

ಆದರೂ, ದಿನದಿನಕ್ಕೆ ಈ ಜಾತಿ–ಜಾತಿ–ಭೇದದ ಉಪಟಳ ಹೆಚ್ಚಾಗಿತ್ತು. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕಿಯರ ಸಂಖ್ಯೆ ಹೆಚ್ಚಿಸೋಣ–

ಎಂದನು. ತನ್ನ ಸಹಾನುಭೂತಿಕರೆಲ್ಲರೂ ಆತುರತೆಯಿಂದ ತಲೆ ದೂಗಿದರು. ಸಹಾನುಭೂತಿಕನೊಬ್ಬನ ಹೆಂಡತಿ ಒಂದಳು ಒಂದು ದಿವಸ ನಾರಾಯಣನ ಕಡೆಗೆ. ಅವನಿಗೆ ಬಹಳೇ ಸಂತೋಷವಾಯಿತು, ಹೆಣ್ಣುಮಕ್ಕಳು ತಾವಾಗಿಯೆ ಶಿಕ್ಷಣದಲ್ಲಿ ಆಸಕ್ತಿಯನ್ನು ತೋರಿ ಸುವರಲ್ಲ, ಎಂದು. ಆದರೆ ಆವಳ ಆಸಕ್ತಿಯು ಶಿಕ್ಷಣದಲ್ಲಿದ್ದಿರಲಿಲ್ಲ. ಶಿಕ್ಷಕೆಯರಲ್ಲಿದ್ದಿತು."ನಮ್ಮ ಸಂಸಾರ ಹಾಳಾಗೂ ಪ್ರಸಂಗ ಬಂದsದ' ಎಂದು ಕಣ್ಣೀರು ಸುರಿಸಿದಳು. ಶಿಕ್ಷಕೆಯರ ನಿಮಿತ್ತವಾಗಿ ತನ್ನ ಗಂಡನಿಗೆ ಶಿಕ್ಷಣದಲ್ಲಿ ಆಸಕ್ತಿ ಎಷ್ಟು ಹೆಚ್ಚಿದೆ! ಎಂಬುದನ್ನೂ ಹೇಳಿ ದಳು....ಆ ಸತಿಯು ಸಪತಿಮತ್ಸರಪುರಾಣವನ್ನು ಕೇಳಿ ನಾರಾಯ ಣನ ಮೈಯಲ್ಲ ಬೆವರೊಡೆಯಿತು..ಶಿಕ್ಷಕರಿಗೆ ಅತ್ಯಾಯ ಮಾಡ ಬೇಕೆಂದ ಸಂತತಿ-ನಿಯಮನವು ಶಿ ಕ್ಷ ಕೆ ಯ ರ ಲ್ಲಿ ಪ್ರಸಾರಗೊಂಡು ಅವನ ತತ್ವಗಳು ಒಂದೊಂದಾಗಿ ಕೆಳ-ಮೇಲಾಗಹತ್ತಿದುವು....ಶಿಕ್ಷಕರ ಸಂಬಳವನ್ನು ಕೆಲಮಟ್ಟಿಗೆ ಹೆಚ್ಚಿಸಿದ್ದನು, ಆದರೆ ಇನ್ನೂ ೫-೬ ವರ್ಷಗಳ ವರೆಗೆ ಆ ಹೆಚ್ಚಿನ ಹಣವು ತನ್ನ ಸಹಾನುಭೂತಿಕರಿಗೆ ಮುಡಿಪು ಎಂದು ಮುಟ್ಟುವುದು-ಎಂದು ತಿಳಿಯಬಂದಿತು ಅವನಿಗೆ. ಶಿಕ್ಷಕರೆ ಪತ್ರಬರೆದು ತಿಳಿಸುತ್ತಿದ್ದರು ತಮ್ಮ ಗೋಳನ್ನು. "ಕಲಿಯುವ ಯುಗದ ವ ಹಿಮೆ ಕಾಣ ಒಂತೀಗ" ಎಂದು ದಾಸಯ್ಯನಂತೆ ಹಾಡು ಹೇಳಿಕೊಂಡನು. ಮತ್ತೆ "ದಾಸಯ್ಯತನ '' ವೆ ತಲೆದೋರಹತ್ತಿತು ನಾರಾಯಣನಿಗೆ. "ಕೂಳಿಗೆ ಬಿದ್ದಿರುವ ಬೋಳ-ಬೋಳಿಗಳು" ಈ ಜನರು ಎಂದು ಹೇಸಿದನು, ಅಬ್ಬರಿಸಿದನು. ಬೊಬ್ಬಾಟ ಬೆಳೆಯಿತು. ಬಿಟ್ಟುಕೊಡಲಿಕ್ಕೂ ಹೆದರಿಕೆ ನಾರಾಯಣನಿಗೆ. ಇಷ್ಟರಲ್ಲಿ ಸುದೈವದ ಸಂಗತಿ! ಆಹುದು-**ಸು ದೈ ವ.** ರಾಜಮಾರ್ಗಗಳನ್ನು ಸುಧಾರಿಸಲಿಕ್ಕೆ ತೆಗೆದಿಟ್ಟ ಹಣವನ್ನು ರಾಜ ಮಾರ್ಗಗಳ ಸೌಕರ್ಯ ತೋರಿಸಿ ಕೊಡುವ ಉದ್ದೇಶದಿಂದ 'ಕಾರು' (ಮೋಟಾರು = cra) ಗಳನ್ನು ಕೊಂಡುಕೊಳ್ಳುವದರಲ್ಲಿ ವೆಚ್ಚಮಾಡಿ ದ್ದರು ಬೋರ್ಡಿನವರು! ಸು ದೈ ವ—ಬೋರ್ಡಿಗೆ ಬೀಗ ಹಾಕಿದರು ಸರಕಾರದವರು: suspended (ಸಸ್ಪೆಂಡೆಡ್) ಎಂದು. 'ರಾಮ-ರಾಮಾ ಅಂತಹ ಅನುಭವ ಇನ್ನೆಂದಿಗೂ ಬೇಡ. ಆದರ ಕತೆ ನನ್ನ ಕಣ್ಣೆದುರು

ಬೇಡ' ಎಂಬ ೧-೪-೧೯೭೭—ರ "ಹುಂಬ-ಹುಕ್ಕ"ದ ಪ್ರತಿಯನ್ನು ಚೆಲ್ಲಿದನು ನಾರಾಯಣನು.

ವಿದ್ಯಾರ್ಥಿಯು ಕಯ್ಯೊಳಗಿನ ಕಾಗದವನ್ನು ಸರಿಯಾಗಿ ಎದುರು ಹಿಡಿದುಕೊಂಡನು. ಅವನಿಗೆ ಆನಂದ, ಶಿಕ್ಷಕನಿಗೆ ತೊಂದರೆ ಕಡಿಮೆಯಾಯಿತಲ್ಲ, ಎಂದು; ಅವನಿಗೆ ಅಭಿಮಾನ, ತನಗೆಯೆ ಓದಲು ಹೇಳಿದರಲ್ಲ, ಎಂದು. ಮುಂಜಾವಿನಿಂದ ತನಗೂ ತನ್ನ ಗೆಳೆಯರಿಗೂ ಕುತೂಹಲವನ್ನು ಕೆಣಕಿದ ಕತೆಯನ್ನು ಈಗ ತಾನೇ ಓದುವವ! ಎಲ್ಲರಿಗಾಗಿ, ಉಳಿದವರಿಗಾಗಿ ತಾನು ಓದುವವ! ಮೊದಲು ತನಗೆ ಆನಂದ, ಆ ಮೇಲೆ ಮಿಕ್ಕವರಿಗೆ....ಎಲ! ಇದೇನು?....ಕತೆ ಎಲ್ಲಿದೆ?....ಈ ಕಾಗದದಲ್ಲಿ ಇದೆಯಾದರೂ ಏನು?....ಮರೆತು ಬೇರೆ ಯಾವುದಾದರೊಂದು ಕಾಗದವನ್ನು ಕೊಟ್ಟಿರಬಹುದೆ ತನ್ನ ಶಿಕ್ಷಕರು?....ವಿದ್ಯಾರ್ಥಿಯು ಕಯ್ಯಲ್ಲಿ ತಿರುತಿರುವಿ ನೋಡಿದನು ಆ ಕಾಗದವನ್ನು. ಅದರಲ್ಲಿ——

ಅದರಲ್ಲೇನಿದೆ ಎಂದು ತಾನದನ್ನು ಕಾಯ್ದುಕೊಂಡಿಟ್ಟಿದ್ದನೊ— ಎಂದು ನಾರಾಯಣನಿಗೆ ಸೋಜಿಗ ತನ್ನದೆ ಅಪಮಾನವಿದೆ ಅದರಲ್ಲಿ ಅಥವಾ———ಅಪಮಾನ ತನ್ನದೇಕೆ? ತನ್ನ ಮನೋವೃತ್ತಿಯು ಯಾವಾಗಲೂ ಶುದ್ಧವಾದುದೆ ಇದ್ದಿತಲ್ಲ? ಧ್ಯೇಯ ಸಾಧಿಸಲಿಲ್ಲವೆಂದರೆ ಅಪಮಾನವೆ? ಸಮಾಜವನ್ನು ಸುಧಾರಿಸಬೇಕೆಂಬಾಸೆ ತನಗೆ....ಅದನ್ನು ಯತ್ನಿಸುವಲ್ಲಿ ಅನ್ಯನಿಮಿತ್ತಗಳಿಂದ ಅನರ್ಥಗಳು ಸಂಭವಿಸಿದರೆ ತನ್ನದೇನು ದೋಷ? ಅಥವಾ, ಜನರೆಲ್ಲ ಜನ್ಮದಿಂದ ಸ್ವಭಾವದಿಂದ ಸಾಧುಪ್ರವೃತ್ತಿಯವರೆಂದು ತಿಳಿಯುವುದು ತಪ್ಪೆ? ಹಿಂದುಧರ್ಮದ ದೇವನಂತೆ 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂದು ಬೊಬ್ಬಿರಿದು 'ಇವರು ಸಾಧು' 'ಇವರು ದುಷ್ಟ' ಎಂದು ಮೊದಲಿನಿಂದಲೆ ಭೇದದ ಗ್ರಹಿಕೆ ಮಾಡಿಕೊಂಡು ನಡೆಯಬೇಕೆ? ತನ್ನ ಸೃಷ್ಟಿಯಲ್ಲಿ ಪ್ರತಿಯೊಂದು ಯುಗದಲ್ಲಿ ಸಾಧುಗಳಿದ್ದಾರೆ, ದುಷ್ಟರೂ ಇದ್ದಾರೆ ಎಂದು ಜಂಬ ಕೊಚ್ಚಿಕೊಳ್ಳುವ ದೇವನನ್ನು ಮೂರ್ಖನೆನ್ನಬೇಕೊ, ಮದಾಂಧನೆನ್ನಬೇಕೊ? ಪ್ರತಿಯೊಂದು ಯುಗದಲ್ಲಿ 'ಯಥಾಪೂರ್ವಮಕಲ್ಪಯತ್'

ಅಂತೆ! ಈ ದೇವನದೇನು ದೊಡ್ಡಿಸ್ತನ? ಅಥವಾ, ಆ ದೇವನನ್ನೆ ತಪ್ಪು ತಿಳಿದುಕೊಂಡಿರಬೇಕು ಈ ಹಳೆಯ ಹದ್ದುಗಳು! ಅಂತೂ, ಮನುಷ್ಯನು ಇದ್ದುದನ್ನು ತಿದ್ದಿಕೊಂಡು ಸುಧಾರಿಸಬಲ್ಲನೆಂಬ ಕಲ್ಪನೆಗೆಯೆ ಆಸ್ಪದ ವಿಲ್ಲ ನಮ್ಮ ಧರ್ಮದಲ್ಲಿ. ಇಂತಹ ಪರಿಸ್ಥಿತಿಯಲ್ಲಿ ತನ್ನ ಧ್ಯೇಯ ಸಾಧಿ ಸಲಿಲ್ಲವಾದರೆ ತಪ್ಪು ತನ್ನದೊ? ಬೆಳೆಯುವ ಶಕ್ತಿಯೆ ಇಲ್ಲದ ಸಮಾಜ ಬಂಧುಗಳದೊ? ಹತವೀರ್ಯ! ಹತವೀರ್ಯರಾಗಿದ್ದಾರೆ ತನ್ನ ಸಮಾಜ ದವರು! ಹತವೀರ್ಯವಾಗಿದೆ ಅವರ ಧರ್ಮ! ಅವರ ದೇವನೂ—

"ವೀರ್ಯವರ್ಧಕ ಪಾಕ!"

ಆಕಾಶವಾಣಿ ಕೇಳಿಸಿತೆ? ಇದೆಂತಹ ಅದ್ಭುತ! ಎಂದು ಕಣ್ಣು ಅರಳಿಸಿ ಎದುರು ನೋಡಿದನು ನಾರಾಯಣನು. ಏನೂ ತಿಳಿಯದೆ, ಬೆಪ್ಪಾಗಿ, ಹುಚ್ಚು ಕಳೆಯಿಂದ ತನ್ನನ್ನೆ ನೋಡುತ್ತಲಿದ್ದಾನೆ ವಿದ್ಯಾರ್ಥಿ. ಆ ಹುಡುಗನ ತೊಡಕು ತಟ್ಟನೆ ತಿಳಿಯಿತು ನಾರಾಯಣನಿಗೆ. ನನು ನಕ್ಕನು. ಹುಡುಗನಿಗೆ ಅವಮಾನವಾದಂತಾಯಿತು. ಕತೆಯನ್ನು ಓದುವ ಅಭಿಮಾನದಿಂದ ತೆಗೆದುಕೊಂಡ ಕಾಗದದಲ್ಲಿ ಕತೆಯ ಸುಳಿವೇ ಇಲ್ಲವಲ್ಲ! ಏನು ತನಗೆಯೆ ತಿಳಿದಿರಲಿಲ್ಲವೊ? ಗಂಟಲು ತುಂಬಿದಂತಾ ಯಿತು, ಕಣ್ಣುಗಳಲ್ಲಿ ನೀರು ಒಡೆಯಿತು. "ಇದರಲ್ಲಿ ಏನ್–ಏನ್–" ಏನಿದೆ ಎಂದು ಕೇಳುವುದನ್ನು ಬಿಟ್ಟು "—ಏನೂ ಇಲ್ಲ" ಎಂದನು ಅಳುಮೋರೆಯಿಂದ.

ನಾರಾಯಣನು ಈ ಸಲ ಗಟ್ಟಿಯಾಗಿಯೆ ನಕ್ಕನು. ತನ್ನ ವಿಚಾ ರವನ್ನೆ ಈ ಹುಡುಗನು ಪ್ರತಿಧ್ವನಿಸಿದನಲ್ಲ! "ಈಗ ಏನನ್ನೊ ಓದಿದೆ ಯಲ್ಲ?" ಎಂದು ನಗುತ್ತಲೇ ಕೇಳಿದನು.

"ಅಲ್ಲ, ಕತೆ – ನೀವು ಹೇಳಿದ ಕತೆ ಇಲ್ಲ. ಇದೇನೋ – 'ವೀರ್ಯ ವರ್ಧಕ ಪಾಕ' ಎಂದಿದೆ ದೊಡ್ಡ ಅಕ್ಷರಗಳಲ್ಲಿ."

"ಅದೂ ಒಂದು ಕತೆ" ಎಂದನು ನಾರಾಯಣನು. ವಿದ್ಯಾರ್ಥಿ ಗಳಿಗೆ ಮತ್ತೆ ಉತ್ಸಾಹ ಮೂಡಿತು. ಅಳುಮೋರೆಯ ವಿದ್ಯಾರ್ಥಿಯೂ ಅರಳುವ ಮುಖದಿಂದ ನೋಡಿದನು ಶಿಕ್ಷಕನನ್ನು. ನಾರಾಯಣನಿಗೆ ದಿಗಿಲು ಬಿದ್ದಿತು. 'ಆ ಕತೆಯನ್ನು ಹೇಳಿರಿ' ಎಂದು ಹುಡುಗರು ಹಟ

ಹಿಡಿಸರೆ — ? ಏನೆಂದು ಹೇಳುವುದು ? ತನಗೆ ಗೊತ್ತಿದೆ ಅದೊಂದು ಜಾಹೀರಾತು ಎಂದು, ಇಷ್ಟೆ ಅಲ್ಲ – ಹಿಂದುಸ್ತಾನದ ಹತವೀರ್ಯತ್ವದ ಜಾಹೀರಾತು – ಎಂದು. ಎಂದಿನಿಂದಲೂ ನಡೆದು ಬಂದಿದೆ ಈ ಧಂದೆ. ತಾನು ಚಿಕ್ಕವನಿದ್ದಾಗೊಮ್ಮೆ ನೋಡಿದ್ದ "ಸಾವಿರ ರೂಪಾಯಿಗಳ ಇನಾಮು" ಎಂದು ದೊಡ್ಡಕ್ಷರಗಳಲ್ಲಿ ಬರೆದುದನ್ನು. 'ಸಾವಿರ' ಎಂದರೆ ಎಷ್ಟು ಎಂಬುದರ ಕಲ್ಪನೆ ಇಲ್ಲದಿದ್ದರೂ 'ರೂಪಾಯಿಗಳ ಇನಾಮು'ನ ಆಸೆ ಹುಟ್ಟಿತ್ತು ಮನಸ್ಸಿನಲ್ಲಿ. ಅದಕಾಗಿ ಜಾಹೀರಾತನ್ನು ಓದಿಕೊಂಡಿದ್ದನು, ಅರ್ಥವಾಗಲಿಲ್ಲ; ತಾಯಿಗೆ ಕೇಳಿದನು, ಅನರ್ಥವಾಯಿತು; ತಂದೆಗೆ ಕೇಳಿದನು, ಬೆನ್ನೆಲುಬು ಮುರಿದಂತಾಯಿತು; ಒಬ್ಬನೆ ಮುಸುಕಿನಲ್ಲಿ ಮತ್ತೆ ಓದಿಕೊಂಡಿದ್ದನು, 'ಎಲ್ಲ ಬಾಧೆಗಳಿಗೆ ಒಂದೇ ಔಷಧ' ಎಂದು ಬರೆದಿತ್ತು, ಹಾಗಾದರೆ ಮುರಿದಂತಿದ್ದ ತನ್ನ ಬೆನ್ನೆಲುಬಿಗೂ ಇದನ್ನೆ ಉಪಯೋಗಿಸಬೇಕು ಎಂದುಕೊಂಡಿದ್ದನು. ಇದು ಎರಡನೆಯ ಸಲ ತನ್ನ ತಂದೆಯು ತನ್ನ ಬೆನ್ನೆಲುಬಿನ ಆಪರೇಶನ (operation) ಮಾಡಿದ್ದು. ಮೊದಲನೆಯ ಸಲ ನಾಟಕಕ್ಕೆ ಹೋದುದಕ್ಕಾಗಿ. "ಗೊತ್ತಿಲ್ದೆ ಒಂದ್ನಾಟ್ಕಾ ನೋಡಿದ್ರ ಏನಾಯ್ತು – ಹುಡುಗನ್ನ ಯಾಕ ಹೊಡ್ತೀರಿ ?" ಎಂದಿದ್ದಳು ತನ್ನ ತಾಯಿ. "ಒಂದ್ನಾಟ್ಕ ? ಒಂದು ನಾಟಕಅs ? ಹಲಕಟ ರಂಡೇರಿದ್ದ ನಾಟ್ಕಾ ನೋಡಿದರ —" ಎಂದು ಹಲ್ಲು ಕಟಿಯುತ್ತ ಹೆಚ್ಚು ಜೋರಾಗಿ ಹೊಡೆದಿದ್ದನು ತನ್ನ ತಂದೆ. ರಂಡೇರ ಹಲಕಟತನವೆಂಬುದೊಂದು ವಿಶಿಷ್ಟಗುಣವಲ್ಲ, ಅದು ನೋಡಿದವರ ಮೇಲೆ ಅವಲಂಬಿಸಿರುತ್ತದೆ – ಎಂದು ಸ್ವಲ್ಪಾವಧಿಯಲ್ಲಿಯೆ ನಾರಾಯಣನಿಗೆ ತಿಳಿದುಬಂದಿತು. ಯಾಕಂದರೆ, ಒಂದು ದಿವಸ ಯಾವನೊ ಒಬ್ಬ 'ಸಾಹೇಬ' (' ಸ್ವದೇಶಿ ಹಮಾಲ' ಎಂದು ತಾವೆಲ್ಲಿ ಹುಡುಗರು ತಿರಸ್ಕಾರದಿಂದ ಹೆಸರು ಕೊಟ್ಟಿದ್ದರು ಅವನಿಗೆ) ಪಾರ್ಟಿ ಇದ್ದಿತು, ಆ ರಾತ್ರಿ ತನ್ನ ತಂದೆಯೂ ಮಿಕ್ಕವರೊಡನೆ ಅದೇ ನಾಟಕಕ್ಕೆ ಹೋಗಿದ್ದನು. ಅಂತೂ, ವಯಸ್ಸಾದ ಮೇಲೆ 'ಹಲಕಟ ರಂಡೇರ'ನ್ನು ನೋಡಲು ಯಾವ ಅಡ್ಡಿಯೂ ಇಲ್ಲವೆಂಬ ಸಿದ್ಧಾಂತವನ್ನು ನಿರ್ಣಯಿಸಿಕೊಂಡನು ನಾರಾಯಣನು. ಮತ್ತು ಆ ಜಾಹೀ

ರಾತಿಗೂ 'ಹಲಕಟ ರಂಡೇರಿ' ಗೂ ಸಂಬಂಧವಿರಲೇ ಬೇಕು ಎಂದು ತರ್ಕದಿಂದ ಗೊತ್ತುಪಡಿಸಿದನು. ಆ ಜಾತಿಗೇಗ ಸಲಪತ್ತು ವರುಷ ಗಳಾಗಿರಬಹುದು, ತಾನೀಗ ಮುದುಕ, ಆದರೂ ಆ ಜಾಹೀರಾತು ಉಷಃಕಾಲದಂತೆ ದಿನದಿನಕ್ಕೆ – ಪ್ರತಿದಿವಸ – ನವೋನವವಾಗಿಯೇ ಕಂಗೊಳಿಸುತ್ತದೆ! ತಾನೆಷ್ಟೋ ರೀತಿ ಯತ್ನಿಸಿದ್ದನು ಅದನ್ನು ತೆಗೆದೊಗೆ ಯಿಸಬೇಕೆಂದು. ಒಂದಾನೊಂದು ಕಾಲದಲ್ಲಿ ವಿದೇಶಿ ಸರಕುಗಳಿಗೆ ಬಹಿಷ್ಕಾರ, ಅವುಗಳ ಜಾಹೀರಾತುಗಳಿಗೂ ಬಹಿಷ್ಕಾರ ಎಂಬ ಕೂಗು ಎದ್ದಿತ್ತು. ಆಗಂತೂ ವೃತ್ತಪತ್ರಗಳೆಲ್ಲ ವೀರ್ಯ – ವರ್ಧಕ–ರಾಮ– ಬಾಣಗಳಿಂದ ತುಂಬಿ ಸೂಸುತ್ತಿದ್ದುವು. 'ಸ್ವದೇಶೀ ಕಲಾಸ್ವವಸಾಯು ಗಳೆಂದರೆ ಇವಿಷ್ಟೆ ಏನೊ!' ಎಂದುಕೊಂಡಿದ್ದನು. ಶಸ್ತ್ರಸಂನ್ಯಾಸ ಪರಿಷತ್ತು (disarmament conference) ನಲ್ಲಿ 'ರಾಮಬಾಣ' ಗಳ ನಿರ್ಮಾಣಕ್ಕೆ ನಿರ್ಬಂಧ ಹಾಕಿಸಬಹುದೊ ಹೇಗೆ — ಎಂಬ ವಿಚಾರವೂ ಆವನ ತಲೆಯಲ್ಲಿ ಸುಳಿದಾಡಿತ್ತು ಒಮ್ಮೆ. ಕೊನೆಗೆ ಮುಳಖ್ಯಾರಿನ ನಗ ರಾಧ್ಯಕ್ಷನಾದಾಗ ಒಂದು ಪ್ರಯೋಗವನ್ನು ಮಾಡಿ ನೋಡಿದನು. ಈ ಜಾಹೀರಾತುಗಳಿಂದಲೆ ತಮಗೆ ಧನದ ಸಹಾಯ್ಯವಿದೆ ಎಂದು ಒಪ್ಪಿಬ್ಬ ಸಂಪಾದಕರು ತನಗೆ ಹೇಳಿದರು. ಆಗ ನಾರಾಯಣನಿಗೆ "ಈ ಜಾಹೀರಾತಿಗೂ ಹಲಕಟ ರಂಡೇರಿಗೂ ಸಂಬಂಧ" ಎಂಬ ತನ್ನ ಬಾಲ್ಯದ ತರ್ಕ –– ಸಿದ್ಧಾಂತ ಸ್ಮರಣೆಗೆ ಬಂದಿತು. ಕೂಡಲೆ ಒಂದು ಹಂಚಿಕೆಯನ್ನು ಸೂಚಿಸಿದನು ಸಂಪಾದಕರಿಗೆ: ಈ ಜಾಹೀರಾತುಗಳನ್ನು ವೃತ್ತಪತ್ರಗಳಲ್ಲಿ ಪ್ರಕಟಿಸದೆ ವೇಶ್ಯೆಯರ ಬೀದಿಗಳಲ್ಲಿ ದೊಡ್ಡ ಅಕ್ಷರ ಗಳಿಂದ ಗೋಡೆಗೆ ಅಂಟಿಸಬೇಕು, ಎಂದು. ಒಂದೆರಡು ದಿವಸಗಳ ತರು ವಾಯ ಊರೊಳಗೆ ತಿರುಗಾಡಿ ನೋಡಿದನು, ಪ್ರತಿಯೊಂದು ಬೀದಿಗೆ ಒಂದೆರಡು ಜಾಹೀರಾತುಗಳು! ಸಂಪಾದಕರ ಮೇಲೆ ಸಿಟ್ಟಿಗೆದ್ದನು. ಪಾಪ! ಅವರೇನು ಮಾಡುವರು ಬೀದಿಬೀದಿಗೆ ವೇಶ್ಯೆಯರ ಮನೆಗಳಿದ್ದರೆ? ನಗರಾಧ್ಯಕ್ಷನಾದ ನಾರಾಯಣನು ಅದಕಾಗಿಯೂ ಬೇರೊಂದು ವ್ಯವ ಸ್ಥೆಯನ್ನು ಮಾಡಿಸಿದನು. ಆರು ತಿಂಗಳುಗಳಲ್ಲಿ ಹೆಸರು 'ನೋಂದಿಸಿದ' ಊರ ವೇಶ್ಯೆಯರನ್ನೆಲ್ಲ ಒಂದೇ ಬೀದಿಯಲ್ಲಿರಿಸುವ ಒತ್ತಾಯದ ಗೊತ್ತು

ವಳಿಯೊಂದನ್ನು ಮಾಡಿಕೊಂಡನು. ಇನ್ನಾದರೂ ೮ ಜಾಹೀರಾತು ಗಳು ಒಂದೇ ಕಡೆ ಹಚ್ಚಬಹುದಲ್ಲ? ಅಷ್ಟರಲ್ಲಿ ಒಬ್ಬ ಸಂಪಾದಕನ ಬುದ್ಧಿಗೆ ಚುರುಕು ಬಂದಿತ್ತು, ಅವನು ಹೊಸತೊಂದು ತತ್ವವನ್ನ ಶೋಧಿಸಿದನು—"ಇಂತಹ ಜಾಹೀರಾತುಗಳಿಗೂ ವೇಶ್ಯೆಯರಿಗೂ ಏನೂ ಸಂಬಂಧವಿಲ್ಲ, ಹಣಕೊಟ್ಟು ಪತ್ರಿಕೆ ಪತ್ರಗಳನ್ನೋದುವ ಸಹೃದಯ ವಾಚಕವೃಂದಕ್ಕೂ ಈ ಜಾಹೀರಾತುಗಳಿಗೂ ಸಂಬಂಧ" ಎಂದು .... "ಅದೂ ಒಂದು ಕತೆಯೆ — ಆಯಿತು" ಎಂದುಕೊಂಡು ವಿದ್ಯಾರ್ಥಿಗ ಳನ್ನು ಮತ್ತೊಮ್ಮೆ ನೋಡಿದನು. ಇದನ್ನು ಹೇಳಬೇಕೆ ಹುಡುಗರಿಗೆ? ಸಮಾಜಸುಧಾರಣೆಯ ಯತ್ನದಲ್ಲಿ ತನಗಾದ ಇನ್ನೊಂದು ಅವಮಾನ ವನ್ನು —— ಮತ್ತೆ ಯಾಕೆ 'ತನ್ನ ಅವಮಾನ' ವೆಂಬ ವಿಚಾರ? ತನ್ನ ಸಮಾಜದ ಜನರೆ————

"ಬೋರ್ಕಲ್ ಬೋರ್ಡ್"

'ಆಂ!' ಎಂದು ಚಕಿತನಾಗಿ ಮೇಲೆ ನೋಡಿದನು ನಾರಾಯಣನು. ವಿದ್ಯಾರ್ಥಿಯು ಮತ್ತೊಂದು ಪುಟವನ್ನು ಓದುತ್ತಿದ್ದಾನೆ. ಅವನಿಗೆ ಉತ್ಸಾಹ, ಇನ್ನೂ ಎಷ್ಟು ಕತೆಗಳಿವೆಯೊ ಈ ಕಾಗದದಲ್ಲಿ, ಎಂದು. ಮೊದಲ ನೆಯ ಸಲ ಅರ್ಥವಾಗದ್ದರಿಂದ ಮತ್ತೊಮ್ಮೆ ಓದಿದನು 'ಬೋರ್ಕಲ್ — ಬೋರ್ಡ್' ಎಂದು. ನಾರಾಯಣನು ಒಮ್ಮೆಲೆ ಗಟ್ಟಿಯಾಗಿ ನಕ್ಕನು. ಹುಡುಗರೆಲ್ಲರೂ ತನ್ನನ್ನು ಸಂಶಯದಿಂದಲೂ ಹೆದರಿಕೆಯಿಂದಲೂ ನೋಡಲು ನಗೆಯನ್ನು ತಡೆಯುತ್ತಲೆ ಹೇಳತೊಡಗಿದನು, "ಬೋರ್ಕಲ್— ಹಹ! — ಬೋರ್ಕಲ್ ಬೋರ್ಡ್ ಅಲ್ಲ, ಅಚ್ಚಿನ ದೋಷ – ಹಹ!— ಲೋಕಲ್ ಬೋರ್ಡ್ ಎಂದಿರಬೇಕು. ಹಹ!" ನಗೆಯಿಂದ ಕಣ್ಣುಗಳಲ್ಲಿ ನೀರು ತುಂಬಿತು; ಒರೆಸಿಕೊಳ್ಳುತ್ತ ತನ್ನಷ್ಟಕ್ಕೆ ನಗುತ್ತಿದನು, "ಬೋರ್ಕಲ್! ಹಹ! ನಿಜವಾಗಿಯೂ ಬೋರ್ಕಲ್! 'ಮಳೆಗರೆದರಾ ಕಲ್ಲು ನೀರ್ಕರಡಿಯಬಹುದೇ?' ಹಹ!"...."ಲೋಕಲ್ ಬೋರ್ಡ್— ಲೋಕಲ್ ಬೋರ್ಡ್ ಎಂದು ಇರಬೇಕು" ಎಂದನು ಮತ್ತೆ ಗಟ್ಟಿಯಾಗಿ.

"ಲೋಕಲ್ ಬೋರ್ಡ್ ಅಂದರೇನ್ರಿ?' ೮–೧೦ ಹುಡುಗರು

ಒಮ್ಮೆಲೆ ಕೇಳಿದರು. ಶಿಕ್ಷಕನೆ ಇಷ್ಟೊಂದು ನಗುವಂತಿದ್ದರೆ ಆ ಮಾತಿನಲ್ಲಿ ಬಹಳೇ ಮೋಜು ಇದ್ದಿರಬೇಕು ಎಂದು ಅವರ ಆಸೆ.

"ಲೋಕಲ್ ಬೋರ್ಡ ಎಂದರೆ **ಸಂಸ್ಥಾನಿಕ** ಸ್ವರಾಜ್ಯ" ಎಂದು ತಟ್ಟನೆ ಉತ್ತರ ಕೊಟ್ಟನು ನಾರಾಯಣನು.

"ಅದರಲ್ಲೂ ಒಂದು ಕತೆ ಇದೆ ಏನ್ರಿ ?" ಎಂದು ಅಷ್ಟೆ ತವಕದಿಂದ ಕೇಳಿದರು ಹುಡುಗರು.

"ಓ !" ಎಂದನು ನಾರಾಯಣನು ಬಾಯಿ ತುಂಬುವಂತೆ, "ಆದರೆ ಆ ಕತೆ ದೊಡ್ಡದು."

"ಹಾಗಿದ್ದರೆ ಮೊದಲಿನ ಕತೆಯನ್ನೆ ಮುಗಿಸಿರಿ."

"ಮೊದಲಿನ ಕತೆ ! ಯಾವುದು ?"

"ಆ ನಾರಾಯಣನ ಕತೆ,—ಮುಂಜಾನೆ ಹೇಳಿದ್ದು ?"

"ಹಾಂ ಹಾಂ" ಎಂದು ಒಮ್ಮೆಲೆ ಸ್ಮರಣೆಯನ್ನು ಕೆಣಕಿದನು ನಾರಾಯಣನು. ಒಳಗಿಂದೊಳಗೆ 'ನಾರಾಯಣನ ಕತೆ ಎಂದಿಗೂ ಮುಗಿದು ಹೋದಂತಾಯಿತು, ಎಂದುಕೊಂಡನು. ಅವನ ಮುಖದಲ್ಲಿ ಮತ್ತೆ ವಿಷಾದದ ಛಾಯೆ ಮೂಡಿತು. ಇದುವರೆಗೆ ವಯಸ್ಸಿನಿಂದ ತನ್ನ ಇಂದ್ರಿಯ ಶಕ್ತಿಯೆ ಕಡಿಮೆಯಾಗುವುದೆಂದು ತಿಳಿದಿದ್ದು ಈಗ ಬುದ್ಧಿಶಕ್ತಿ - ಸ್ಮರಣ ಶಕ್ತಿಗಳೂ ಕುಂದುತ್ತಲಿವೆ ಎಂಬ ಅನುಭವ ಬಂದಿತು. ತಾನೀಗ ಮುದುಕ !....ಹುಡುಗರು ಒಳಗೊಳಗೆಯೆ ನಗುತ್ತಿರಬಹುದಲ್ಲವೆ ತನ್ನ ಬುದ್ಧಿಯ ಮಸುಕಿಗಾಗಿ ? ನಗುತ್ತಿರಲೇ ಬೇಕು ಎಂದು ದೃಢವಾಗಿ ನಂಬಿದನು. ಹುಡುಗನಿದ್ದಾಗ ತಾನೂ ನಕ್ಕಿದ್ದನು ಮುದುಕರ ಮರೆವಿನ ಮೋಜಿಗಾಗಿ. ಇವರೂ ಹುಡುಗರು. ಇಂದಿಲ್ಲ ನಾಳೆ ಇವರು ಮುದುಕರಾಗುವರು, ಆಗ ಇವರ ಮಕ್ಕಳು ಮೊಮ್ಮಕ್ಕಳು ನಗುವರು ಇವರನ್ನು ನೋಡಿ. ಮುಂದೆ ಅವರೂ ಮುದುಕರಾಗುವರು ಆಗ ಅವರ ಮಕ್ಕಳು ಮೊಮ್ಮಕ್ಕಳು———ಅಂತೂ ಇದೇ ಗಾಲಿಯು ಮತ್ತೆ ಮತ್ತೆ ಮೊದಲಿನಂತೆ,ಎಂದಿನಂತೆ ತಿರುಗುತ್ತ ನಡೆಯುವುದು. ನಗುವುದು, ನಗಿಸಿಕೊಳ್ಳುವುದು;ನಗುವುದು,ನಗಿಸಿಕೊಳ್ಳುವುದು.ತನ್ನಂತೆ ಇವರು,ಎಲ್ಲರಂತೆ ತಾನು, ಇವರೂ ಎಲ್ಲರಂತೆಯೆ ! ಆ ಮೇಲೆ—ಸಮಾಜವೂ ಎಂದಿನಂತೆಯೆ !

ಅಂದರೆ – ಅಂದರೆ – ಮನುಷ್ಯನು ಬೆಳೆಯುವುದೇ ಇಲ್ಲವೆ? ಸಮಾಜವು ಸುಧಾರಿಸುವುದೇ ಇಲ್ಲವೆ? ಅಥವಾ, ಮನುಷ್ಯನು ಬೆಳೆದು ಮುದುಕನಾದ ಮೇಲೆ ಅವನ ಸ್ಮರಣ ಶಕ್ತಿಯು ಅಳಿದು ತಾನು ಬೆಳೆದುದರ ಜ್ಞಾನವು ತನಗೆಯೆ ಉಳಿಯದಂತಾಗುವುದೆ? ದೇಹ ಬೆಳೆಯುವುದು ದೇವನ ಮಹಿಮೆ, ಬುದ್ಧಿ ಬೆಳೆಯುವುದು ಮನುಷ್ಯನ ಮಹಿಮೆ, ಬುದ್ಧಿ ಉಳಿಯುವುದು ಕಾಲನ ಮಹಿಮೆ. 'ಹಾಂಹಾಂ' ಎಂದನು ನಾರಾಯಣನು ಮತ್ತೆ ಏನೊ ಸ್ಮರಣೆಗೆ ಬಂದಂತಾಗಿ. 'ಹಾಂಹಾಂ' ಎಂದರು ಹುಡುಗರು ಮನಸ್ಸಿನೊಳಗೆ, ಶಿಕ್ಷಕನ ವಿಚಿತ್ರ ವರ್ತನವನ್ನು ನೋಡಿ

* * * * *

ಎರಡನೆಯ ಸಲ 'ಹಾಂಹಾಂ' ಎಂದು ನಾರಾಯಣನು ಕಣ್ಣು ಮುಚ್ಚಿದನು. ಹುಡುಗರು 'ಹಾಂ ಹಾಂ!' ಎಂದಾಗ ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡಿದ್ದನು. ಹುಡುಗರ 'ಹಾಂಹಾಂ ಅವನಿಗೆ ಕೇಳಿಸಲಿಲ್ಲ. ಕ್ರಮೇಣ ತನ್ನೆದುರು ಹುಡುಗರಿದ್ದ ಎಚ್ಚರವೆ ಅವನಿಗೆ ಉಳಿಯಲಿಲ್ಲ. ಅವನಿಗೀಗ ಸಾಕ್ಷಾತ್ಕಾರವಾಗಿದೆ, ಬಂಧನ ಬಿಟ್ಟಿದೆ. ಸುತ್ತಮುತ್ತಲಿನ ಸಂಸಾರದಿಂದ ಸಿಡಿದು ಮೇಲಕ್ಕೆ ಮೇಲಕ್ಕೆ ನೆಗೆಯುತ್ತಲಿದೆ ಅವನ ಆತ್ಮಾ. ಆಕಾಶದಲ್ಲಿ ಹಾರಿಬಿಟ್ಟ ಹೂವಿನ ಮದ್ದು ಬಾಣದಂತೆ ಏರುತ್ತಲಿದೆ, ಏರುವಾಗಲೂ ಕೆಳಗೆ ಹೂವಿನ ಚಿಕ್ಕೆಗಳನ್ನು ಬಾಣವು ಚೆಲ್ಲುವಂತೆ ಅರಳುವ ದೃಷ್ಟಿಯನ್ನು ಕೆಳಗೆ ಚಲ್ಲುತ್ತಲಿದೆ. ಅದೊಂದು ದಿವ್ಯದೃಷ್ಟಿ! ಹಿಂದು–ಇಂದು–ಮುಂದುಗಳನ್ನು ಏಕಧಾರೆಯಾಗಿ ಕಾಣುತ್ತಲಿದೆ ಆ ದೃಷ್ಟಿ. ಕಾಲನ ಮಹಿಮೆ! ಬೆಳೆಯುವ ದೇಹ ಕಾಣುತ್ತಲಿದೆ. ಅಡವಿಯ ಗಿಡ–ಬಳ್ಳಿ–ಹುಲ್ಲು – ಕಂಟಿಗಳಲ್ಲಿ; ಕಲ್ಲು–ಮಣ್ಣುಗಳ ಸಂದುಗಳೊಳಗಿಂದ, ತರು – ಲತೆಗಳ ಕೊಂಬು–ಕೊನರುಗಳಿಂದ, ಕಸ–ಮುಸುರೆಗಳ ಕಣಕಣಗಳಿಂದ ಲಕ್ಷೋಪಲಕ್ಷವಾಗಿ ಹುಟ್ಟಿ ಹೊರಬೀಳಲೆತ್ನಿಸುವ ಹುಳು–ಹುಪ್ಪಡಿಗಳಲ್ಲಿ; ಕೊಂದು ಕೊಬ್ಬುವ ಕಾಡ ಮೃಗಗಳಲ್ಲಿ; ಹಾಡುವ ಹಕ್ಕಿಗಳಲ್ಲಿ; ಆಡುವ ಮಕ್ಕಳಲ್ಲಿ—ಎಲ್ಲೆಲ್ಲೂ ಕಾಣುತ್ತಲಿದೆ ಬೆಳೆಯುವ ದೇಹ! ತಿಳಿಯದೆ ಬೆಳೆಯುವುದು, ತಿಳಿದು

ಕೊಳ್ಳಲಾರದಲ್ಲೂ ಬೆಳೆಯುವುದು, ಬೇಡದೆ ಬೆಳೆಯುವುದು, ಬೇಡೆಂದರೂ ಬೆಳೆಯುವುದು. ಹುಟ್ಟಿದರೆ ಬೆಳೆಯುವುದು, ಬೆಳೆದು ಸಾಯುವುದು, ದೇವನ ಮಹಿಮೆ! ಪ್ರಾಣಿಮಾತ್ರಕ್ಕೆ ಮೀರಿದ ಘಟನೆ........ಮನುಷ್ಯ ಮಹಿಮೆ! ಬೆಳೆಯುವ ಬುದ್ಧಿ ಕಾಣುತ್ತಲಿದೆ. ಹಕ್ಕಿಗಳ ಗೂಡುಗಳಲ್ಲಿ, ಕಾಡ ಮೃಗಗಳ ಗುಹೆಗಳಲ್ಲಿ, ಜೇನುರೆಗಳ ಹಿಂಡುಗಳಲ್ಲಿ, ಇರುವೆಗಳ ಸಾಲುಗಳಲ್ಲಿ, ನಾಯಿಗಳ ನಾಗರೀಕತೆಯಲ್ಲಿ, ಮಾನವನ ಮನೆ–ಮಹಡಿಗಳಲ್ಲಿ, ಹೊಲಗಳ ಸಾಗುವಳಿಯಲ್ಲಿ, ಗೆಳತನದ ಗುಂಪುಗಳಲ್ಲಿ, ಮನೆತನದ ಮಾದರಿಗಳಲ್ಲಿ — ಎಲ್ಲ ಕಡೆಯಲ್ಲೂ ಕಾಣುತ್ತಲಿದೆ ಬೆಳೆಯುವ ಬುದ್ಧಿ! ಮಾತುವುದರ ಮಹಿಮೆ! ಮನುಷ್ಯನ ಮಹಿಮೆ! ಪ್ರಾಣಿಮಾತ್ರಗಳ ಮನೀಷೆಯ ಘಟನೆ!..ಕಾಲನ ಮಹಿಮೆ! ಸುಟ್ಟಗಿಡ ಇದ್ದಲಿಯಾಗಿ ಸಾವಿರಾರು ವರ್ಷಗಳಲ್ಲಿ ವಜ್ರವಾಗುವುದು ಕಾಲನ ಮಹಿಮೆ! ನೀರಿನ ಹನಿಗಳನ್ನು ಸಿಂಪೆಯಲ್ಲಿ ಒತ್ತಿಟ್ಟು ಮುತ್ತು ಮಾಡುವುದು ಕಾಲನ ಮಹಿಮೆ! ಬೆಳೆದ ಕಾಳನ್ನು ಬೆಳೆಯುವ ಬೀಜವನ್ನಾಗಿ ಮಾಡುವುದು ಕಾಲನ ಮಹಿಮೆ! ಅಳಿದುದರಲ್ಲಿ ಬೆಳೆಯುವ ಶಕ್ತಿಯನ್ನು ತುಂಬುವುದು ಕಾಲನ ಮಹಿಮೆ! ಅಳಿದ ದೇಹದಲ್ಲಿ ಬೆಳೆದ ಬುದ್ಧಿಯನ್ನು ತುಂಬುವುದು ಕಾಲನ ಮಹಿಮೆ!.... ಅದೇ ಗಾಲಿ ಮತ್ತೆ ಮತ್ತೆ ತಿರುಗುತ್ತ ನಡೆದಿಲ್ಲ ಎಂದು ತೋರಿಸುವುದು ಕಾಲನ ಮಹಿಮೆ! ವಜ್ರಕ್ಕೆ ಇದ್ದಲಿಯ ಸ್ಮರಣೆಯಿಲ್ಲ, ಮುತ್ತಿಗೆ ನೀರಿನ ಸ್ಮರಣೆಯಿಲ್ಲ, ಬೀಜದ ಕಾಳಿಗೆ ತೆನೆಕಟ್ಟಿದ ಬೆಳೆಯ ಸ್ಮರಣೆಯಿಲ್ಲ, ಬೆಳೆದುದಕ್ಕೆ ಅಳಿದುದರ ಸ್ಮರಣೆ ಇಲ್ಲ, ಹೊಸತಾದುದಕ್ಕೆ ಹಳೆಯದರ ಸ್ಮರಣೆಯಿಲ್ಲ. ಆದರೂ ಹಳೆದು ಬೆಳೆಯುವುದು, ಹೊಸತಾಗಿ ಉಳಿಯುವುದು.

ನಾನು ಮುದುಕ, ದೇವನ ಮಹಿಮೆಯಿಂದ ನನ್ನ ದೇಹ ಬೆಳೆಯಿತು; ನಾನು ಹಳಬ, ಮನುಷ್ಯನ – ನನ್ನ ಮಹಿಮೆಯಿಂದ–ಬುದ್ಧಿ ಬೆಳೆಯಿತು. ನಾನು ಉಳಿಯುವೆ, ಕಾಲನ ಮಹಿಮೆಯಿಂದ ಉಳಿಯುವೆ; ನನ್ನ ಹುಡುಗರನ್ನು, ನನ್ನ ವಿದ್ಯಾರ್ಥಿಗಳನ್ನು ಬೆಳೆಸುವ ಕಾಲನ ಮಹಿಮೆಯಿಂದ ಉಳಿಯುವೆ; ನನ್ನ ಹುಡುಗರಿಗಾಗಿ, ನನ್ನ ವಿದ್ಯಾರ್ಥಿಗಳಿಗಾಗಿ ನನ್ನ ಅನುಭವಗಳನ್ನು ಕಾದಿಡುವ ಕಾಲನ ಮಹಿಮೆಯಿಂದ

ಉಳಿಯುವೆ. ನನ್ನ ಸ್ಮರಣೆ ಅವರಿಗುಳಿಯುವುದಿಲ್ಲ. ಆದರೂ ನಾನು ಉಳಿಯುವೆ. ನನ್ನ ಸ್ಮರಣೆ ಅವರಿಗುಳಿಯುವುದಿಲ್ಲ. ಯಾಕೆಂದರೆ ನಾನು ಅವರೊಳಗೆಯೆ ಸೇರಿಕೊಂಡಿರುವೆ. ಅವರೂ ಬೆಳೆಯುವರು ನನ್ನಂತೆ ನಳಿಬರಾದರೆ, ಅವರೂ ಉಳಿಯುವವರು ನನ್ನಂತೆ ತನ್ನವರಲ್ಲಿ ತನ್ಮಯರಾದರೆ.

ನನ್ನ ಸಮಾಜವೂ ಬೆಳೆಯುವುದು, ಮನುಷ್ಯರ ಮಹಿಮೆಯಿಂದ
ನನ್ನ ಸಮಾಜವೂ ಉಳಿಯುವುದು, ತತ್ಕಾಲದ ಮಹಿಮೆಯಿಂದ
ಹಿಂದಿನದರಲ್ಲಿ ಇಂದಿನದನ್ನು ಬೆಳೆಯಿಸುವುದರಿಂದ
ಇಂದಿನದರಲ್ಲಿ ಮುಂದಿನದನ್ನು ಮೊಳೆಯಿಸುವುದರಿಂದ.

× × × ×

# ಸಮಾಧಿ

## ಕರ್ನಾಟಕ ಮಾತೆಯ ಕಂಬನಿ

( ನಮ್ಮ ಸ್ವಂತ ಪ್ರತಿನಿಧಿಯಿಂದ )

ನಿನ್ನೆ ತಾ. ೨೪-೯-೧೯೬೮—. ನೆಯ ದಿವಸದ ಉಷಃಕಾಲದ ಶಾಂತವಾತಾವರಣದಲ್ಲಿ ನಮ್ಮೆಲ್ಲರಿಗೆ ಚಿರಪರಿಚಿತರೂ ಚಿರಪ್ರಿಯರೂ, ಕರ್ನಾಟಕದಲ್ಲಿ ಚಿರಯಶಸ್ವಿಗಳೂ ಆದ ಶ್ರೀ. ತೆಂಗಿನ ಒಡೆಯರ್ ಇವರು ಸ್ವರ್ಗಸ್ಥರಾದರೆಂದು ತಿಳುಹಿಸಲು ಅತ್ಯಂತ ವಿಷಾದಿಸುತ್ತೇವೆ.

ಶ್ರೀ. ತೆಂಗಿನ ಒಡಿಯರ್ ಇವರು ಕರ್ನಾಟಕದ ಹಿತಚಿಂತಕರಲ್ಲಿ ಸಮಾಜಸುಧಾರಕರಲ್ಲಿ ಅಗ್ರಗಣ್ಯರಾಗಿದ್ದರೆಂಬುದು ನಮ್ಮ ವಾಚಕರಿಗೆ ವಿದಿತವೆ ಇದೆ. ಇವರ ಪರಿಶ್ರಮದಿಂದ ಕರ್ನಾಟಕದಲ್ಲಿ ಶಿಕ್ಷಣ, ಸ್ತ್ರೀ ಸುಧಾರಣೆ, ಜಾತಿ-ಮತೈಕ್ಯ, ಭಾಷಾಪ್ರಗತಿ ಮುಂತಾದ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಸಮರ್ಪಕವಾದ ಉತ್ತರವೂ ಉಪಾಯವೂ ಲಭಿಸಿವೆ ಎಂಬುದು "ಹುಂಬ - ಹುಕ್ಕ" ದಲ್ಲಿ ಆಗಾಗ ಪ್ರಕಟವಾದ ಮಹತ್ವದ ಲೇಖಾಂಕಗಳಿಂದ ಕನ್ನಡಿಗರೆಲ್ಲರಿಗೆ ತಿಳಿದಿರಲು ಸಾಕು. ಆದರೆ ಇದೀಗ "ಹುಂಬ ಹುಕ್ಕ" ನು ಶ್ರೀ. ತೆಂಗಿನ ಒಡೆಯರ್ ಇವರ ಜೀವನದ ಸಮಸ್ಯೆಯನ್ನ ಬಿಡಿಸಿದ್ದಾನೆ ಎಂದು ಹೇಳಬಹುದು.

ಶ್ರೀ. ತೆಂಗಿನ ಒಡೆಯರ್ ಇವರು ಶಿಕ್ಷಣಪ್ರಿಯರು ಎಷ್ಟಿದ್ದರೆಂಬುದು ಅವರ ಕೊನೆಯ ಪ್ರಸಂಗದಿಂದಲೆ ತಿಳಿದು ಬರುವುದು. ದೇಹದಲ್ಲಿ ಆರೋಗ್ಯವಿಲ್ಲ, ವಯಸ್ಸಾಗಿ ತ್ರಾಣವಿಲ್ಲ, ಆದರೂ ವಿದ್ಯಾರ್ಥಿಗಳಿಗೆ ತಪ್ಪದೆ ಎಂದಿನಂತೆಯೆ ಮುಗುಳ್ನಗೆಯಿಂದ ಮನೋರಂಜಕವಾಗಿ ಪಾಠವನ್ನು ಹೇಳುತ್ತಿದ್ದರು. ಆಗ ಅವರು ಶಿಕ್ಷಣ ಪಾಠದಲ್ಲಿ ಮೈಮರೆತಿರಲು ಸಾಕು ಎಂದು ಡಾಕ್ಟರರು ಅಭಿಪ್ರಾಯಪಟ್ಟಿದ್ದಾರೆ. ಸುಮಾರು ೧೨—೧೩ ತಾಸುಗಳ ತರುವಾಯ ಅವರಿಗೆ ಸ್ಮೃತಿ ಬಂದಿತು; ಅಷ್ಟರಲ್ಲಿ ಕರ್ನಾಟಕದ ಎಷ್ಟೋ ಮುಂದಾಳುಗಳ ಸಂದೇಶಗಳು ಬಂದಿದ್ದುವು, ಎಷ್ಟೋ ಪ್ರಮುಖ ನಾಗರಿಕರು 'ವಿಶ್ವಾಮಿತ್ರ ವಿದ್ಯಾನಿಲಯಕ್ಕೆ'

ಬಂದಿದ್ದರು. ಶ್ರೀ. ಒಡೆಯರ್ ಇವರಿಗೆ ಗುಣವಾಗಲಿ ಎಂದು ಎಲ್ಲರೂ ಪ್ರಾರ್ಥಿಸಿದರು. ಅವರು ವೈಮುರಿತಾಗ ಅವರ ಬದಿಯಲ್ಲಿ ಕೆಲವು ಕಾಗದಗಳಿದ್ದುವು. ಅಭಿಮಾನದ ಸಂಗತಿ ಎಂದರೆ "ಹುಂಬ ಹುಕ್ಕ"ನ ಎಷ್ಟೋ ಹಳೆಯ ಸಂಚಿಕೆಗಳಿದ್ದುವು. ಇದಲ್ಲದೆ ಅವರ ಆತ್ಮಚರಿತ್ರೆಯ ಟಿಪ್ಪಣೆಗಳಿದ್ದುವು. ಅವೆಲ್ಲವುಗಳನ್ನೂ ಅವರು ತಾವಾಗಿಯೆ "ಹುಂಬ ಹುಕ್ಕ" ನ ಸ್ವಾಧೀನಕ್ಕೆ ಕೊಟ್ಟಿದ್ದಾರೆ. ಇದಲ್ಲದೆ ಅವರ ದಿನಂಪ್ರತಿ ಡಾಯರಿ ( diary ) ಗಳೂ ಇದ್ದುವು. ಪ್ರತಿಯೊಂದು ಪುಟವು ಅವರ ಪ್ರಗಲ್ಭ ವಿಚಾರಗಳಿಂದ ಮನಸ್ಸನ್ನು ಪುಟಿಸುವಂತಿದೆ.

ಅವರ ಆತ್ಮಚರಿತ್ರೆಯನ್ನು ಪ್ರಕಟಿಸಬೇಕೆಂದು "ಹುಂಬ ಹುಕ್ಕ"ನ ಆಕಾಂಕ್ಷೆ. ಪ್ರತಿಯೊಬ್ಬ ಕನ್ನಡ ತರುಣನಿಗೆ ಸ್ಫೂರ್ತಿಯನ್ನು ಕೊಡುವಂತಹ ಚರಿತ್ರೆ ಅದು. ಸ್ವತಃದ ಯೋಗ್ಯತೆಯಿಂದ ಘನತೆಗೇರಿದ ನಾಯಕನ ಚರಿತ್ರೆಯದು. ಅನುಪಮೇಯವಾದ ಅವರ ತಿಳಿ ಪ್ರವಾಹದ ಶೈಲಿಯಿಂದ ಓದುಗರ ಮನಸ್ಸನ್ನು ಸೆಳೆಯುವಂತಿದೆ. 'ತ್ರಿಶಂಕು ಕನ್ನಡಿಗ' ಎಂದು ಹೆಸರು ಆ ಕತೆಗೆ. ಅದಕ್ಕೇನೊ 'ವಿಶ್ವಾಮಿತ್ರನ ಸೃಷ್ಟಿ' ಎಂಬ ಹೆಸರಿನಿಂದ ಪ್ರಕಟಿಸುವ ಯೋಚನೆ ಇದ್ದಿತು ಅವರದು. "ಹುಂಬ ಹುಕ್ಕ" ನು ಯಾವಾಗಲೂ ಕರ್ನಾಟಕ ಮಾತೆಯ ಸೇವಾಬುದ್ಧಿಯಿಂದಲೆ ಪ್ರೇರಿತನಾದವನು, ಭಾಷಾಭಿವೃದ್ಧಿಗೆ ಹೆಣಗುವವನು ಎಂದು ಬೇರೆ ಹೇಳುವ ಆವಶ್ಯಕತೆ ಇಲ್ಲ. ಆದಕಾಗಿ "ಹುಂಬ ಹುಕ್ಕ" ನು ಶ್ರೀ. ಒಡೆಯರ್ ಇವರ ಆಜ್ಞೆ ಎಂದು, ಇಚ್ಛೆ ಎಂದು ಅವರ ಆತ್ಮಚರಿತ್ರೆಯನ್ನು ಪ್ರಕಟಿಸಲು ಮುಂದುವರಿದನು. ಕರ್ನಾಟಕದ ಭಾಗ್ಯದ ಬಾಗಿಲು ಇನ್ನೂ ತೆರೆದಿಲ್ಲವೆಂದೆ ಹೇಳಬಹುದು. ಶ್ರೀ. ತೆಂಗಿನ ಒಡೆಯರ್ ಇವರು ತಲೆ ಅಲ್ಲಾಡಿಸಿ ಅಸಮ್ಮತಿಯನ್ನು ತೋರಿಸಿದರು. ಕರ್ನಾಟಕದ ಮುಂದಾಳು ಆಗುವ ಪುಂಚಿತ ಅವರು ಸಣ್ಣೂರಿನ ನಾಯಕರ ಮನೆತನದವರು. ಅವರ ಹೆಸರು ನಾರಾಯಣ. ಅವರ ಅನೇಕ ಅನುಭವಗಳು ಎದೆ ಝಲ್ಲೆನ್ನಿಸುವಂತಿವೆ. ಅವು ಅನ್ಯರಿಗೆ ತಿಳಿಯಬಾರದೆಂದು ಅವರ ಇಚ್ಛೆ ಇದ್ದಲ್ಲಿ ಆ ರೀತಿಯಾಗಿಯೆ ಪ್ರಕಟಿಸಲು "ಹುಂಬ ಹುಕ್ಕ" ನು ಸಿದ್ಧನಾದನು. ಆದರೂ ಅವರ ಸಮ್ಮತಿ

ಕೊಡಲಿಲ್ಲ. ಶಕ್ತಿ ಕುಗ್ಗುತ್ತಲಿದೆ, ಆಯಾಸವಾಗುತ್ತಲಿದೆ, ಆದರೂ ಎಂದಿನಂತೆ ಮುಗುಳ್ನಗೆಯ ಮುಖದಿಂದ ತಲೆ ಅಲ್ಲಾಡಿಸುತ್ತ 'ಬೇಡಿರಿ' ಬೇಡಿರಿ' ಎಂದರು. ನಿಮ್ಮ ಪ್ರತಿನಿಧಿಗೆ ಇಂತಹ ಲೋಕೋಪಕಾರಕ ಕಾರ್ಯದ ಸಂಧಿಯನ್ನು ಕಳೆದುಕೊಳ್ಳಬಾರದೆಂದು ಆಸೆ; ಅದಕಾಗಿ ಮತ್ತೂ ಹಟತೊಟ್ಟನು. ಕೊನೆಗೆ ನಾರಾಯಣ ನಾಯಕರು, ತೆಂಗಿನ ಒಡೆಯರ್ ಇವರು, ತಮ್ಮ ಕ್ಷೀಣದನಿಯಲ್ಲಿ ಹೇಳಿದರು, 'ಬೇಡ' ಎಂದು.

"ನಮ್ಮ ವಾಚಕರಿಗೆ ಬಹಳೇ ವಿಷಾದವಾಗುವುದು" ಎಂದನು ನಿಮ್ಮ ಪ್ರತಿನಿಧಿ.

"ನಿಮ್ಮ ವಾಚಕರಿಗಾಗಿ ಪ್ರಕಟಿಸುವವರ ನೀವು?"

"ಅದೇ ನಮ್ಮ ಸಂತೋ[illegible]ಕರ್ತವ್ಯ"

"ಹಾಗಾದರೆ ಬೇಡವೆ ಬೇಡ" ಎಂದು ಆಯಾಸದಿಂದ ನಕ್ಕರು.

"ಯಾಕೆ?" ಎಂದು ನಿಮ್ಮ ಪ್ರತಿ-ನಿಧಿಯೂ ಹಟದಿಂದಲೆ ಕೇಳಿದನು.

"ಯಾಕೆ?" ಎಂದಿನಂತೆ ವಿನೋದದ ದನಿ ಮೂಡಿತು "ಯಾಕೆಂದರೆ,

ತಂ ಸಂತಃ ಶ್ರೋತುಮರ್ಹಂತಿ ಸದಸದ್ ವ್ಯಕ್ತಿಹೇತವಃ
ಹೇಮ್ನಃ ಸಂಲಕ್ಷ್ಯತೇ ಅಗ್ನೌ ವಿಶುದ್ಧಿಃ ಶ್ಯಾಮಿಕಾಪಿ ವಾ.

ನಿಮ್ಮ ವಾಚಕರಿಗಾಗಿ ಅಲ್ಲ" ಎಂದು ಬಾಯ್ದೆರೆದು ——— ಹಾಯ್! ಹಾಯ್! ಆ ತೆರೆದ ಬಾಯಿಯಿಂದ ನಗುತ್ತಲೆ ಹಾರಿತು ಜೀವವಿಹಂಗವು.

ದೇವರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ!

(ವಿ. ಸೂ. ನಾಳಿನಿಂದ "ಹುಂಬ ಹುಕ್ಕ"ನ ಸಂಚಿಕೆಗಳನ್ನು ಎದುರು ನೋಡಿರಿ. ಆತ್ಮಚರಿತ್ರೆಯು ಪ್ರಕಟವಾಗುವುದಿಲ್ಲೆಂದು ನಮ್ಮ ವಾಚಕರು ವಿಷಾದಿಸುವ ಕಾರಣವಿಲ್ಲ. ಯಾಕೆಂದರೆ ಆ ಡಾಯರಿ (diary) ಯಲ್ಲಿಯ ಟಿಪ್ಪಣಿಗಳನ್ನು ಪ್ರಕಟಿಸಲು ಸಮ್ಮತಿಯನ್ನೂ ಸರ್ವಾಧಿಕಾರಿಗಳನ್ನೂ ಪಡೆದುಕೊಂಡಿದ್ದಾನೆ "ಹುಂಬ ಹುಕ್ಕ"
ನಾಳಿನಿಂದ ಎದುರು ನೋಡಿರಿ ನಮ್ಮ ಸಂಚಿಕೆಗಳನ್ನು.

ಸಂಪಾದಕ, "ಹುಂ. ಹು.")

## ಸಹಾಯಕರು ಮತ್ತು ಪೋಷಕರು

೧) ಶ್ರೀ. ಎನ್. ಎಸ್. ರಾಮಚಂದ್ರರಾಯರು ನಾಪೊಕ್ಲು
ಕೊಡಗು ೬–೦–೦
೨) ಎಸ್. ಎಸ್. ಸಕ್ರಿ ಬಿ. ಎ. ಮುಂಬಯಿ ೫–೦–೦
೩) ,, ಜೋರಾಪುರ ಗುರುರಾಯರು ಎ. ಎ. ಎಲ್ ಎಲ್. ಬಿ.
ಬಾಗಿಲುಕೋಟೆ ೫–೦–೦
೪) ,, ಪ್ರದ್ಯುಮ್ನಾಚಾರ್ಯ ಬಾಳಾಚಾರ್ಯ ಗುಡಿ ಗದಗ ೫–೦–೦
೫) ಶ್ರೀಮಂತ ಸರದಾರ ಬಾಳಾಸಾಹೇಬ ದೇಸಾಯಿ
ಕೌಜಲಗಿ ೫–೦–೦
೬) ಶ್ರೀ. ಎಂ. ಪಿ. ವಾಲಿ. ಎಂ. ಎ. ಬೆಳಗಾಂವ ೫–೦–೦
೭) ,, ಅಪ್ಪಣ್ಣಾ ರಿತ್ತಿ. ಕುಲಕರ್ಣಿ ನಾಗಸಮುದ್ರ ೫–೦–೦

ಆನಂದ ಪಡೆಯಿರಿ! ಪ್ರೋತ್ಸಾಹಿಸಿರಿ! ಲಾಭ ಹೊಂದಿರಿ!

## ಸಾಹಿತ್ಯ ಪ್ರೇಮಿಗಳಿಗಾಗಿ ಗ್ರಂಥಭಾಂಡಾರ

ಮನೋಹರ ಗ್ರಂಥ ಪ್ರಕಾಶನ ಸಮಿತಿಯಿಂದ ಗ್ರಂಥ ಮಾಲೆಯನ್ನು ಹೊರಡಿಸುವುದಲ್ಲದೆ ಈ ವರ್ಷದಿಂದ ಒಂದು ಗ್ರಂಥ ಭಾಂಡಾರವನ್ನೂ ತೆರೆದಿದ್ದೇವೆ. ಎಲ್ಲ ಕನ್ನಡಿಗರೂ ತಮಗೆ ಯಾವ ಕನ್ನಡ ಪುಸ್ತಕವನ್ನು ತರಿಸಿಕೊಳ್ಳಬೇಕಾದರೂ

## ಮನೋಹರ ಗ್ರಂಥ ಭಾಂಡಾರಕ್ಕೇ

**[ಸಾಧನಕೇರಿ—ಧಾರವಾಡ]**

## ಬರೆಯಿರಿ

ಪುಸ್ತಕಗಳ ಕೈಪಿಡಿಯು ಸಿದ್ಧವಾಗುತ್ತಲಿದೆ. ಪತ್ರವ್ಯವಹಾರದಿಂದ ಉಚಿತವಾಗಿ ತರಿಸಿಕೊಳ್ಳಬಹುದು.

## ನಮ್ಮ ಮಾಲೆಯ ಕುಸುಮಗಳು

# ೧ ಸುದರ್ಶನ

ಕ್ರಾ. ಅ. ೧೯೫ ಪುಟಗಳು ಬೆಲೆ ಹನ್ನೆರಡು ಆಣೆ

ಲೇಖಕರು:- **ಆನಂದಕಂದ**

ಈ ಸಾಮಾಜಿಕ ಕಾದಂಬರಿಯ ವಿಷಯದಲ್ಲಿ ಮೈಸೂರಿನ ಪ್ರಬುದ್ಧ ಕರ್ಣಾಟಕವು ಹೀಗೆ ಹೇಳುವುದು:-

" ಪುಸ್ತಕದಲ್ಲಿ ಎಲ್ಲಿಯೇ ಆಗಲಿ, ದುರ್ಬಲವಾದ, ನೀರಸವಾದ ಅಥವಾ ಮಂಕಾದ ಒಂದು ಪ್ರಕರಣವಿಲ್ಲವೆಂದರೆ ಅತಿಶಯೋಕ್ತಿಯಲ್ಲವೆಂದು ಈ ಅವಲೋಕನ ಕಾರನ ಭಾವನೆಯು "

ಬೆಂಗಳೂರಿನ ಕ. ಸಾ. ಪರಿಷತ್ ಪತ್ರಿಕೆಯು ಹೀಗೆ ಅಭಿಪ್ರಾಯ ಪಡುವುದು.

" ಲೇಖಕರು ನಿಜವಾದ ಕವಿಯೆಂಬುದನ್ನು ಅವರ ವರ್ಣನೆಗಳು ತಪ್ಪದೆ ತೋರಿಸುತ್ತವೆ. ಭಾಷೆಯು ಲಲಿತವಾಗಿಯೂ ಮನೋಹರವಾಗಿಯೂ ಇದೆ. ಮುದ್ರಣವು ಅಂದವಾಗಿದೆ. "

# ೨ ನವಿಲುಗರಿ

ಕ್ರಾ. ಅ. ೧೫೦ ಪುಟಗಳು ಬೆಲೆಹನ್ನೆರಡು ಆಣೆ

ಲೇಖಕರು:- ಬೇರೆ ಬೇರೆ ಕತೆಗಾರರು

ಹತ್ತು ಕತೆಗಳಿಂದ ಕೂಡಿದ ಈ ಪುಸ್ತಕದ ಬಗೆಗೆ ಬೆಂಗಳೂರಿನ ಕ. ಸಾ. ಪರಿಷತ್ ಪತ್ರಿಕೆಯು ಹೀಗೆ ಹೇಳುತ್ತದೆ:-

' ಸಂಪಾದಕರು ಕರ್ಣಾಟಕದ ನಾನಾಪ್ರಾಂತಗಳ ಪ್ರಸಿದ್ಧ ಪಂಡಿತರನ್ನು ಕಲೆಹಾಕಿ, ಅವರವರಿಗೆ ಸ್ವಭಾವಜನ್ಯವಾದ ರೀತಿಯಲ್ಲಿ ಅವರಿಂದ ಕತೆಗಳನ್ನು ಬರೆಯಿಸಿ, ಅವೆಲ್ಲವನ್ನೂ ಒಂದೇ ಕಡೆಯಲ್ಲಿ ಕೊಟ್ಟಿರುವುದು ಕನ್ನಡಭಾಷೆಗೆ ಬಹಳ ಉಪಕಾರ ಮಾಡಿದಂತಾಯಿತೆಂದು ಭಾವಿಸುತ್ತೇವೆ. ಏಕೆಂದರೆ ಕರ್ಣಾಟಕದ ನಾನಾಪ್ರಾಂತಗಳ ಕನ್ನಡಭಾಷೆಯ ಸ್ವರೂಪವನ್ನು ಹೋಲಿಸಿ ಗ್ರಂಥಸ್ಥಭಾಷೆಯ ಏಕೀಕರಣವು ನಡೆಯಬೇಕೆಂಬುದನ್ನು ಆಲೋಚಿಸಲು ಇಂತಹ ಗ್ರಂಥಗಳಿಂದ ಅವಕಾಶ ದೊರೆತಂತಾಗುವುದು'

ಬಳ್ಳಾರಿಯ **'ನವಸಂದೇಶ'ವು** ಅನ್ನುವುದೇನೆಂದರೆ:-

' ವಿವಿಧಬಣ್ಣಗಳ ಹಲವೊಂದು ಭಾಗಗಳು ಒಟ್ಟಾಗಿ ಸೇರಿ ನವಿಲುಗರಿಗೆ ಒಂದು ಹೊಸ ಸೊಗಸನ್ನು ಕೊಡುವಂತೆ, ಈ ಕಥೆಗಳು ಒಂದೊಂದು ಗುಣದಿಂದ ಕೂಡಿದ್ದು, ಒಟ್ಟಿನಲ್ಲಿ ಸಮಾಜದ ಒಂದೊಂದು ಚಿತ್ರವನ್ನು ಹೃದಯಂಗಮವಾಗಿ ತೋರಿಸುತ್ತವೆ. '

**ವಿ. ಸೂ:-** ಮದ್ರಾಸ್ ಸ್ಕೂಲ್‌ಬುಕ್ಸ್ ಲಿಟರೇಚರ್ ಸೊಸೈಟಿಯಿಂದ **'ಸುದರ್ಶನ' 'ನವಿಲುಗರಿ'**ಗಳು ಬಹುಮಾನವನ್ನು ಪಡೆದಿವೆ.

## ೩ ತ್ರಿಪುರದಹನ

ಕ್ರಾ. ಅ. ೧೫೦ ಪುಟಗಳು — ಬೆಲೆ ಹನ್ನೆರಡು ಆಣೆ

ಲೇಖಕರು:– **ಶ್ರೀ. ಎಂ. ಎ. ದೊರೆಸ್ವಾಮಿ ಅಯ್ಯಂಗಾರ್**

M. A. B. L.

ಬೆಂಗಳೂರಿನ ಸುಬೋಧ ಪತ್ರಿಕೆಯು ಈ ಗ್ರಂಥದ ವಿಷಯದಲ್ಲಿ ಅಭಿಪ್ರಾಯ ಪಡುವುದೇನೆಂದರೆ:–

'ಈ ಬಗೆಯ ಕಥಾರಚನೆಯು ನಮ್ಮಲ್ಲಿ ಹೊಸದು. ವಿಚಾರವಂತರು ನಮ್ಮ ಪೌರಾಣಿಕ ಸಮಸ್ಯೆಗಳನ್ನು ಈ ದೃಷ್ಟಿಯಿಂದ ತೆಗೆದುಕೊಂಡು, ಗುಣಗಳ ಉತ್ಕರ್ಷಾಪಕರ್ಷಗಳು ಜಗತ್ತಿನ ಸುಖದುಃಖಗಳಿಗೆ ಹೇಗೆ ಕಾರಣವಾಗುವುವೆಂಬುದನ್ನು ವಿಮರ್ಶಿಸುತ್ತ ಹೋದರೆ, ಅದರಿಂದ ಹೆಚ್ಚು ಪ್ರಯೋಜನವಾಗುವುದು.'

''— ನಮ್ಮ ಸಂಸ್ಕೃತಿಯ ಸರ್ವಮತಗಳ ಮೂಲತತ್ವಗಳೆಲ್ಲವೂ ಒಂದಲ್ಲ ಒಂದು ರೂಪದಲ್ಲಿ ಇಲ್ಲಿ ಪ್ರತಿಬಿಂಬಿತವಾಗಿವೆ. ಇದು ಹಲವು ಸಾರಿ ಓದಿ ಮನನ ಮಾಡುವುದಕ್ಕೆ ಯೋಗ್ಯವಾದ ಗ್ರಂಥ. ಇದನ್ನು ಇಂಗ್ಲೀಷಿಗೆ ರೂಪಾಂತರ ಮಾಡಿದರೆ, ನಮ್ಮವರ ಸಾತ್ವಿಕಜ್ಞಾನ ಸಂಪತ್ತಿಯು ಹೊಸ ಸಮಾಜ ದುರ್ಘಟನೆಗಳನ್ನು ಹೇಗೆ ಎದುರಿಸಬಲ್ಲುದು ಎಂಬುದನ್ನು ಹೊರಗಿನ ಪ್ರಪಂಚಕ್ಕೆ ತಿಳಿಸುವುದರಲ್ಲಿ ಸಂದೇಹವಿಲ್ಲ ''

— ಪ್ರಬುದ್ಧ ಕರ್ಣಾಟಕ

**ಮೈಸೂರು ಸರಕಾರದ ವಿದ್ಯಾಭ್ಯಾಸದ ಇಲಾಖೆಯುವರು ಈ ಗ್ರಂಥವನ್ನು ಎಲ್ಲ ಪಾಠಶಾಲೆಗಳ ವಾಚನಾಲಯಗಳಿಗಾಗಿ 'ಮಂಜೂರ್' ಮಾಡಿದ್ದಾರೆ.**

## ೪ ಬಾಳುರಿ ಅಥವಾ ಜೀವನಜ್ವಾಲೆ

ಕ್ರಾ. ಅ. ೧೫೫ ಪುಟಗಳು — ಬೆಲೆ ಹನ್ನೆರಡು ಆಣೆ

ಲೇಖಕರು:– **ಪ್ರೊ. ರಂ. ಶ್ರೀ. ಮುಗುಳಿ** M. A. B. T.

'' ಮನೋಹರವಾದ ಮಾರ್ಮಿಕವಾದ ಸಾಹಿತ್ಯವನ್ನು ಕನ್ನಡಿಗರ ಕೈಸೇರಿಸಲು ಸಾಹಸಪಡುತ್ತಲಿರುವ ಪ್ರಕಾಶಕರು ಈ ಕಾದಂಬರಿಯನ್ನು ಪ್ರಕಟಿಸಿ ತಮ್ಮ ಹೊಣೆಯನ್ನು ಬಹುಮಟ್ಟಿಗೆ ನೆರವೇರಿಸಿದ್ದಾರೆನ್ನಬಹುದು. ಕಥೆಯ ಸನ್ನಿವೇಶಗಳು ಈಗಿನ ಸಮಾಜಕ್ಕೆ ಸಂಬಂಧಿಸಿದುವು; ಶೈಲಿಯು ಸರ್ವಸಾಮಾನ್ಯರಿಗೆ ಸುಲಭವೆನ್ನಿಸುವಂತಹ, ಸಾಹಿತ್ಯದ ಮಟ್ಟಿಗೆ ಸಂಸ್ಕಾರ ಹೊಂದಿದಂತಹ ರೂಢಿಯ, ಉತ್ತರ ಕರ್ನಾಟಕದ್ದೆಂದು ಬೇರೆ ಹೇಳಬೇಕಾಗಿಲ್ಲ. ಆದುದರಿಂದ ತಡೆಯಿಲ್ಲದೆ ಓದಿ, ಅನುಭವಿಸಿ ಸಮಾಧಾನವನ್ನು ಪಡೆದುಕೊಳ್ಳುವ ಕಾದಂಬರಿ ಇದು.

'ಪ್ರೇಮ' ದಲ್ಲಿ R. V. J.

'' ಕನ್ನಡದಲ್ಲಿ ಸಾಮಾಜಿಕ ಕಾದಂಬರಿಗಳು ವಿರಳ. ನೀರಡಿಸಿದವರಿಗೆ ಗಂಗೋದಕವು ದೊರೆತಂತೆ ನಮ್ಮ ಸಾಹಿತ್ಯಕ್ಕೆ 'ಬಾಳುರಿಯು ದೊರೆತಿದೆ— ಕಥೆಯು ಸ್ವಾರಸ್ಯವಾಗಿಯೂ ಸ್ವೈಜವಾಗಿಯೂ ಇದೆ. ಶ್ರೀ. ಮುಗುಳಿಯವರು ಬಾಳುರಿಯ ಬೇಗೆಯನ್ನು ಚಿತ್ರಿಸುವುದರಲ್ಲಿ ಕೃತಕೃತ್ಯರಾಗಿದ್ದಾರೆ. ಅವರ ಕೆಲಸವು ಶ್ಲಾಘ್ಯವಾದುದು ''

—ಕತೆಗಾರ

## ೫ ಬ್ರಾಹ್ಮಣರ ಹುಡುಗಿ

ಶ್ರೀ. ಆರ್. ವ್ಯಾಸರಾವ್ ಬೆಂಗಳೂರು

ಆಧುನಿಕ ಬಂಗಾಲಿಸಾಹಿತ್ಯದಲ್ಲಿ, ಕಾದಂಬರಿಯ ಪ್ರಪಂಚದಲ್ಲಿ ಹೆಚ್ಚು ಪ್ರಚಾರ್ಲಾಗಿ ಕೇಳಬರುವ ಹೆಸರೆಂದರೆ ಶ್ರೀ. ಶರಚ್ಚಂದ್ರ ಚಟ್ಟೋಪಾಧ್ಯಾಯರವರದು. ಅವರು ಬರೆದ 'ಬಾಮುನೇರ ಮೇಯೇ' ಎಂಬ ಕಾದಂಬರಿಯನ್ನು ಅನುಸರಿಸಿ ಬರೆದುದಿದು. ಇದರಲ್ಲಿಯ ಪಾತ್ರಗಳ ಸ್ವಭಾವಪರಿಪುಷ್ಟಿಯನ್ನು ಕಂಡು ಅನುಭವಿಸಿದ ವಾಚಕರು ಮೆಚ್ಚಿ ತಲೆದೂಗದಿರಲಾರರು.

''— ಗ್ರಂಥಕರ್ತರು ಸಮಾಜದ ಹುಳುಕನ್ನು ಆದಷ್ಟು ಮಟ್ಟಿಗೆ ಬಿಚ್ಚಿ ಹೋರಗಿಡಲು ಪ್ರಯತ್ನಿಸಿದ್ದಾರೆ.... ಇಂತಹ ಸಮಯದಲ್ಲಿ ಅನುವಾದಕರು ಈ ಗ್ರಂಥವನ್ನು ಕನ್ನಡಿಸಿರುವುದು ಸಮಾಜದ ಏಳಿಗೆಗೆಂದೇ ನನ್ನ ಭಾವನೆ ''

—ಕತೆಗಾರ

## ೬ ವಿಶ್ವಾಮಿತ್ರನ ಸೃಷ್ಟಿ

### (ಒಂದನೆಯ ಭಾಗ)

ಲೇಖಕರು:— 'ಶ್ರೀರಂಗ'

ಕ್ರಾ. ೮. ೧೫೦ ಪುಟಗಳು

ವೈದ್ಯರಾಜ, ಉದರವೈರಾಗ್ಯ, ಮೊದಲಾದ ನಾಟಕಗಳನ್ನು ಬರೆದು ಕನ್ನಡಿಗರಿಗೆ ಚಿರಪರಿಚಿತರಾದ ಶ್ರೀರಂಗರು ಬರೆದ ಸ್ವತಂತ್ರ ಸಾಮಾಜಿಕ ಕಾದಂಬರಿ.

## ೭ ವಿಶ್ವಾಮಿತ್ರನ ಸೃಷ್ಟಿ

### (ಎರಡನೆಯ ಭಾಗ)

ಕ್ರಾ. ೮. ೧೯೦ ಪುಟಗಳು—— ಬೆಲೆ ೧—೦—೦

'ವಿಶ್ವಾಮಿತ್ರನಸೃಷ್ಟಿ'ಯ ಎರಡೂ ಭಾಗಗಳನ್ನು

ಕೂಡಿಸಿದುದೂ ಮಾರಲಿಕ್ಕೆ ದೊರೆಯುತ್ತವೆ.

ಅದರ ಬೆಲೆ— ೧—೧೨—೦

## ೮. ಜೀವನ

(ಸರಸ ಸಣ್ಣ ಕತೆಗಳ ಸಂಗ್ರಹ)

ಕತೆಗಾರರು:

**ಕೃಷ್ಣಕುಮಾರ**

(ಅಚ್ಚಿನಲ್ಲಿದೆ)

## ನಮ್ಮ ಬಿಡಿಮುತ್ತುಗಳು

೧

# ಕಣ್ಮರೆಯಾದ ಕನ್ನಡ

ಕ್ರಾ. ಅ. ೧೩೫ ಪುಟಗಳು — ಬೆಲೆ ಹನ್ನೆರಡು ಆಣೆ

ಲೇಖಕರು:— **ಶ್ರೀ. ಶಂ. ಬಾ. ಜೋಶಿ**

ಎಲ್ಲರೂ ಓದಿ ವಿಚಾರ ಮಾಡಬೇಕಾದ ಗ್ರಂಥ. 'ಮೂಲ ಕರ್ಣಾಟಕವು ಎಲ್ಲಿ ?' ಎಂಬುದನ್ನು ಬೇರೆ ಬೇರೆ ದೃಷ್ಟಿಗಳಿಂದ ಸಪ್ರಮಾಣವಾಗಿ ವಿವೇಚಿಸಲಾಗಿದೆ. ಸಂಶೋಧನಾ ಪ್ರಪಂಚದಲ್ಲಿ ಒಂದು ನೂತನ ಕ್ರಾಂತಿಯನ್ನೇ ಉಂಟುಮಾಡುವ ಪುಸ್ತಕ.

ಇದರ ವಿಷಯದಲ್ಲಿ ಬೆಂಗಳೂರಿನ ಸುಪ್ರಸಿದ್ಧ ವಿದ್ವನ್ಮಣಿಗಳಾದ **ಶ್ರೀಮಾನ್ ಡಿ. ವಿ. ಗುಂಡಪ್ಪನವರು** ಗ್ರಂಥಕರ್ತರಿಗೆ ಬರೆದಿರುವುದೇನೆಂದರೆ:—

'ತಾವು ಮಾಡಿರುವ ಕೆಲಸವು ಬಹು ಬೆಲೆಯುಳ್ಳದೆಂದು ನನಗೆ ತೋರುತ್ತದೆ. ತಮ್ಮ ಸಿದ್ಧಾಂತಗಳು ನನ್ನ ಬುದ್ಧಿಗೆ ತೋಚಿದ ಮಟ್ಟಿಗೆ ಸಾಧುವಾಗಿರುವಂತೆ ಕಾಣುತ್ತವೆ. ಅದಕ್ಕೆ ತಾವು ಕೊಟ್ಟಿರುವ ಪ್ರಮಾಣಗಳು ಬಲವಾಗಿವೆ.'